ಮಾನವಿಕ ಕರ್ಣಾಟಕ

ಸಂಪುಟ ೨೦, ಸಂಚಿಕೆ ೩-೪

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೯೦

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨೦; ಸಂಚಿಕೆ ೩, ೪
(ಸಂಯುಕ್ತ ಸಂಚಿಕೆ)

೭೯-೮೦

ಜುಲೈ-ಅಕ್ಟೋಬರ್ ೧೯೯೦ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೦

MANAVIKA KARNATAKA, Kannada Quarterly of the University of Mysore, Volume 20, Number 3-4, July-October 1990, Edited by M. N. Nanjundaraje Urs and Dr. K. Kempe Gowda.

ಪ್ರಧಾನ ಸಂಪಾದಕರು

ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು

ಎಂ. ಎನ್. ನಂಜುಂಡರಾಜೇ ಅರಸ್

ಡಾ. ಕೆ. ಕೆಂಪೇಗೌಡ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೫೭೦ ೦೦೬

ಮುದ್ರಕರು

ಬಿ. ಎಸ್. ಸಿದ್ದೇಗೌಡ

ಕಾರ್ಯಭಾರಿ ನಿರ್ದೇಶಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ವಿಷಯಸೂಚಿ

ಲೇಖಕರ ಸೂಚಿ

೧	ಎಂ. ಆರ್. ಸತೀಶ್	ಪ್ರವಾಚಕರು, ಸಮಾಜಶಾಸ್ತ್ರ ವಿಭಾಗ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
೨	ಕೆ. ಮೊಹಮ್ಮದ್ ಶರೀಫ್	ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
೩	ಡಾ. ಅರವಿಂದ ಮಾಲಗತ್ತಿ	ಪ್ರವಾಚಕರು, ಕನ್ನಡ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು
೪	ಡಾ. ಒಡೆಯರ್ ಡಿ. ಹೆಗ್ಗಡೆ	ಪ್ರವಾಚಕರು, ಅರ್ಥಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು
೫	ಡಾ. ಜಿ. ಪುರುಷೋತ್ತಮ	ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೬	ವೈ. ಸಿ. ಭಾನುಮತಿ	ಸಂಶೋಧನ ಸಹಾಯಕಿ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
೭	ಡಾ. ಕೆ. ಕೆಂಪೇಗೌಡ	ಪ್ರಾಧ್ಯಾಪಕರು, ಭಾಷಾ ವಿಜ್ಞಾನ ವಿಭಾಗ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
೮	ಡಾ. ಪುರುಷೋತ್ತಮ ಬಿಳಿಮಲೆ	ಕನ್ನಡ ಉಪನ್ಯಾಸಕರು ಮಂಗಳಗಂಗೋತ್ರಿ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು–೫೭೪ ೧೯೯
೯	ಆರ್. ರಾಜಣ್ಣ	ಸಂಶೋಧಕ, ಇತಿಹಾಸ ವಿಭಾಗ ಮಾನಸಗಂಗೋತ್ರಿ, ಮೈಸೂರು
೧೦	ಡಾ. ಹು. ಲ. ಚಂದ್ರಶೇಖರ	೧೬೦/೧, ನಾರಾಯಣಶಾಸ್ತ್ರಿ ರಸ್ತೆ ಕೃಷ್ಣರಾಜ ಮೊಹಲ್ಲಾ ಮೈಸೂರು–೫೭೦ ೦೨೪

೧೧	ಡಾ. ಮಾಲತಿ ತಂಡನ್	ಪ್ರವಾಚಕರು, ಹಿಂದಿ ವಿಭಾಗ ಮಾನಸಗಂಗೋತ್ರಿ ಮೈಸೂರು–೫೭೦ ೦೦೬
೧೨	ಎಫ್. ಟಿ. ಹಳ್ಳಿಕೇರಿ	ಸಂಶೋಧನ ವಿದ್ಯಾರ್ಥಿ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ–೫೮೦ ೦೦೩
೧೩.	ಟಿ. ಶಂಭುಲಿಂಗಪ್ಪ	ಪ್ರವಾಚಕರು, ಎಸ್.ಟಿ.ಜೆ. ಕಾಲೇಜು ತರೀಕೆರೆ, ಚಿಕ್ಕಮಗಳೂರು ಜಿಲ್ಲೆ
೧೪	ಶಿವಸ್ವಾಮಿ	ಅಧ್ಯಾಪಕರು ಇತಿಹಾಸ ಮತ್ತು ಪ್ರಾಕ್ತನ ವಿಭಾಗ ಕುವೆಂಪು ವಿಶ್ವವಿದ್ಯಾನಿಲಯ ಬಿ. ಆರ್. ಪ್ರಾಜೆಕ್ಟ್ ಶಿವಮೊಗ್ಗ ಜಿಲ್ಲೆ–೫೭೭ ೧೧೫
೧೫	ಹೆಚ್. ಎಸ್. ರಾಜಗೋಪಾಲ್	೧೦೬೮, ಚಾಮರಾಜಪುರಂ ಮೈಸೂರು–೪

ಎಂ. ಆರ್. ಸತೀಶ್

ವಿವಾಹ ವಿಚ್ಛೇದನ

(ಒಂದು ಸಾಮಾಜಿಕ ವಿಶ್ಲೇಷಣೆ)

ಭಾರತದಲ್ಲಿ "ವಿವಾಹ" ಕಲ್ಪನೆಯ ಸ್ವರೂಪ ಮತ್ತು ವಿಕಾಸವನ್ನು ವಿವರಿಸುವುದು ಸುಲಭವಲ್ಲ. ಹಿಂದೂ ಪುರಾಣಗಳ ಪ್ರಕಾರ ವಿವಾಹವು ಒಂದು ಪವಿತ್ರಬಂಧನ. ಇದು ಕೇವಲ ಸಂಯೋಗ ಮಾತ್ರವಲ್ಲ, ಇದನ್ನೊಂದು ''ಶರೀರ ಸಂಸ್ಕಾರ''ವೆಂದು ಪರಿಗಣಿಸಲಾಗಿದೆ. ಶರೀರ ಸಂಸ್ಕಾರವೆಂದರೆ ಮಾನವ ದೇಹವನ್ನು ಪವಿತ್ರಗೊಳಿಸುವ ಪರಿಪೂರ್ಣ ಸಾಧನವೆಂದು ಅರ್ಥೈಸಲಾಗುತ್ತದೆ. ಹಿಂದೂಧರ್ಮ ಚಿಂತಕನಾದ ಮನು, ಪ್ರತಿಯೊಬ್ಬ ವ್ಯಕ್ತಿ ಗಂಡಾಗಲಿ, ಹೆಣ್ಣಾಗಲೀ, ಜೀವನದಲ್ಲಿ ಕಡ್ಡಾಯವಾಗಿ ಪೂರೈಸಲೇಬೇಕಾದ ಕ್ರಿಯೆ ಎಂದು ಇದರ ಬಗ್ಗೆ ಅಭಿಪ್ರಾಯಪಟ್ಟಿದ್ದಾನೆ. ಹಿಂದೂ ವಿವಾಹದ ಮುಖ್ಯ ಗುರಿ ಧರ್ಮಪರಿಪಾಲನೆಯಾಗಿರುವುದರ ಜೊತೆಗೆ, ''ಪ್ರಜಾ'' ಅಥವಾ ''ಸಂತಾನ'', ಮತ್ತು ''ರತೀ'' ಅಥವ ಸುಖಸಾಧನವಾಗಿರುತ್ತದೆ. ಹಿಂದೂ ಚಿಂತನೆಯಲ್ಲಿ ಲೈಂಗಿಕತೆಯು ವಿವಾಹದ ಒಂದು ಅವಶ್ಯಕಾರ್ಯವಾದರೂ ಇದೊಂದೆ ಮುಖ್ಯ ಕಾರ್ಯವಲ್ಲ. ಹಿಂದೂ ವಿವಾಹವು ಒಂದು ಧಾರ್ಮಿಕ ಕಾರ್ಯ; ಮೋಕ್ಷಸಾಧನೆ ಇದರ ಪರಮಗುರಿ. ಈ ಕಾರಣದಿಂದಾಗಿಯೆ ಹಿಂದೂ ವಿವಾಹವನ್ನು ಒಂದು ಪವಿತ್ರಬಂಧನವೆಂದು ಪರಿಗಣಿಸಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಹಿಂದೂ ಸಮಾಜದ ಸಾಮಾನ್ಯ ವೈವಾಹಿಕ ಸಂಬಂಧ ಮತ್ತು ಬಂಧನಗಳಲ್ಲಿ ಹಲವಾರು ಬದಲಾವಣೆಗಳನ್ನು ನಾವು ಕಾಣಬಹುದು. ಈ ಬದಲಾವಣೆಗಳು ಸ್ತ್ರೀ–ಪುರುಷರ ಸಮೂಹ ಸಂಬಂಧಗಳ ಸ್ವರೂಪದ ಮೇಲೆ ನೇರ ಪ್ರಭಾವ ಬೀರುವುದಲ್ಲದೆ ಮುಖ್ಯವಾಗಿ ಕುಟುಂಬ ನಡವಳಿಕೆಯ ಮೇಲೆಯೂ ಪ್ರಭಾವಗಳನ್ನು ಬೀರುತ್ತಲಿವೆ.

ಇಂದಿನ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನವು ಹಿಂದಿಗಿಂತಲೂ ಉತ್ತಮವಾಗಿದೆ. ಶೈಕ್ಷಣಿಕ ಹಾಗೂ ಸಾಮಾಜಿಕ ಜೀವನಕ್ಕೆ ಹೊಸತಿರುವನ್ನು ನೀಡಿದೆ. ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಉಂಟಾಗುತ್ತಿರುವ ಮಹತ್ತರ

ಬದಲಾವಣೆಗಳ ಜೊತೆಗೆ ಕಾನೂನುಗಳಿಗೆ ಹೊಸ ಆಯಾಮ ದೊರೆತಿದೆ. ಕಾಲದಿಂದ ಕಾಲಕ್ಕೆ ಕಾನೂನಿಗೆ ಹೊಸ ವಿಧಗಳ ಸೇರ್ಪಡೆಯಾಗುತ್ತಿರುವುದು ಹಿಂದೂ ಸಮಾಜದಲ್ಲಿ ವೈವಾಹಿಕ ಜೀವನಕ್ಕೆ ಆಧುನಿಕ ಸ್ವರೂಪವನ್ನು ನೀಡಿದೆ.

ಭಾರತದಲ್ಲಿ ಕೌಟುಂಬಿಕ ನಡವಳಿಕೆಗಳ ಅಧ್ಯಯನ ಮಾಡುವ ಸಮಾಜ ವಿಜ್ಞಾನಿಗಳಿಗೆ "ವಿವಾಹ"ವು ಹಲವಾರು ವಿವಾದಗಳಿಗೆ ಸಿಲುಕಿಕೊಂಡಿರುವುದೂ ವಿವಾಹಸಂದರ್ಭದಲ್ಲಿ ಆಯ್ಕೆಯ ಅವಕಾಶಗಳು, ಅಂತಸ್ತು ಬದಲಾವಣೆಗಳನ್ನು ಒಳಗೊಂಡಿರುವುದೂ ಸಾಂಪ್ರದಾಯಿಕ ವೈವಾಹಿಕ ನಡವಳಿಕೆಗಳಲ್ಲಿ ಪರಿವರ್ತನೆಗಳು ಉಂಟಾಗುತ್ತಿರುವುದೂ ಗೋಚರವಾಗಿದೆ.

ಇಂದು ಭಾರತದಲ್ಲಿ ವಿವಾಹ ವಿಧಿಯು ಹಲವಾರು ಸ್ಪರ್ಧೆಗಳನ್ನು ಎದುರಿಸುತ್ತಿರುವುದರ ಜೊತೆಗೆ, ವೈವಾಹಿಕ ನಡವಳಿಕೆಗಳಲ್ಲಿ ಉಂಟಾಗುತ್ತಿರುವ ನಿರಂತರ ಬದಲಾವಣೆಯ ವಾಸ್ತವಾಂಶಗಳನ್ನು ಸಮಾಜಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ಬದಲಾವಣೆಗಳು ಹೆಚ್ಚಾಗಿ ಸಂಪ್ರದಾಯಿಕ ನಂಬಿಕೆಗಳು ಮತ್ತು ಆಚರಣೆಗಳಲ್ಲಿ ಕಂಡುಬರುತ್ತಿವೆ.

ಪ್ರಪಂಚದಾದ್ಯಂತ ಸಮಾಜಶಾಸ್ತ್ರಜ್ಞರು ಇಂದಿನ ವೈವಾಹಿಕ ಜೀವನದ ಸ್ವರೂಪ ಮತ್ತಿತರ ಸಂಬಂಧಿತ ಮಹತ್ತರ ಅಂಶಗಳ ಅನುಭವಾತ್ಮಕ ಅಧ್ಯಯನಗಳಲ್ಲಿ ನಿರತರಾಗಿದ್ದಾರೆ. ಈ ಚಿಂತಕರ ಅಧ್ಯಯನಗಳಲ್ಲಿ ಗಮನಸೆಳೆದಿರುವ ಮುಖ್ಯ ಅಂಶಗಳೆಂದರೆ ಸ್ವಪ್ರೇರಿತ ವಿವಾಹದ ಅಂತ್ಯಗೊಳ್ಳುವಿಕೆ ಮತ್ತು ಪುನರ್ ವಿವಾಹಗಳು. ವಿವಾಹ ವಿಚ್ಛೇದನ, ಗಂಡ–ಹೆಂಡಿರಲ್ಲೊಬ್ಬರ ಬೇರ್ಪಡಿಕೆ, ತ್ಯಜಿಸುವಿಕೆ, ವಿವಾಹ ರದ್ದಾಗುವಿಕೆ ಇವೇ ಮುಂತಾದ ಅಂಶಗಳನ್ನು ಸ್ವಪ್ರೇರಿತ ವಿವಾಹ ಅಂತ್ಯಗೊಳ್ಳುವಿಕೆಯು ಒಳಗೊಂಡಿರುತ್ತದೆ. ಸಾಂಪ್ರದಾಯಿಕ ಹಿಂದೂ ಸಮಾಜದಲ್ಲಿ ಸ್ವಯಂ ಪ್ರೇರಿತ ವಿವಾಹ ವಿಚ್ಛೇದನ ಬಹು ಅಪರೂಪವಾಗಿದ್ದಿತು. ಆದರೆ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಇದು ಹೆಚ್ಚಾಗಿ ನಿರಾಶೆಗೊಂಡ ವಿವಾಹಿತ ದಂಪತಿಗಳ ಗಮನವನ್ನು ಈಚೆಗೆ ಸೆಳೆಯಲಾರಂಬಿಸಿದೆ.

ಈ ರೀತಿಯ ವಿವಾಹ ವಿಚ್ಛೇದನ ಪ್ರವೃತ್ತಿಯು ಹಿಂದೂ ಸಾಂಪ್ರದಾಯಿಕ ಪವಿತ್ರ ವಿವಾಹ ನಡವಳಿಕೆಗಳಿಗೆ ವಿರುದ್ಧವಾಗಿದ್ದರೂ, ಇಂದು ವೈವಾಹಿಕ ಜೀವನದಲ್ಲಿ ನಿರಾಶೆಗೊಂಡ ಮತ್ತು ಸಂಗಾತಿಯ ನಿರೀಕ್ಷೆಗೆ ನಿಲ್ಲದ ದಂಪತಿಗಳು ವಿವಾಹ ವಿಚ್ಛೇದನವೇ ಯೋಗ್ಯ ಮಾರ್ಗವೆಂದು ಭಾವಿಸಲಾರಂಭಿಸಿದ್ದಾರೆ. ಭಾರತದಲ್ಲಿ ದಂಪತಿಗಳು ತಮ್ಮ ವೈವಾಹಿಕ ಜೀವನದ ಅಸಫಲತೆಯಿಂದಾಗಿ ವಿವಾಹ ವಿಚ್ಛೇದನ ಕ್ರಿಯೆಗೆ ಒಳಗಾಗುವರಲ್ಲದೆ ಮತ್ತೆ ಕೆಲವರು ಜೀವನದ ಒಂದಲ್ಲ ಒಂದು ಘಟ್ಟದಲ್ಲಿ ವಿವಾಹ ವಿಚ್ಛೇದನದ ಬಗೆಗೆ ಚಿಂತಿಸುತ್ತಿರುತ್ತಾರೆ. ಆದರೂ ಸಾಂಪ್ರದಾಯಿಕ ಧಾರ್ಮಿಕ ನಂಬಿಕೆ ಆಧಾರಿತ ದಂಪತಿಗಳು ವಿವಾಹವು ಪ್ರಸ್ತುತ ತೊಡಕಿನಿಂದ

ಕೂಡಿದ್ದರೂ ಮುಂದೆ ಸರಿಹೊಂದಬಹುದೆಂಬ ಆಶಾಭಾವನೆಯಿಂದ ವಿಚ್ಛೇದನದಿಂದ ದೂರವಿರಲು ಇಚ್ಛಿಸುತ್ತಾರೆ. ಕೆಲವೊಂದು ಸಮಾಜಗಳಲ್ಲಿ ಸಂಗಾತಿ ಆಯ್ಕೆಯ ಸ್ವಾತಂತ್ರ್ಯ, ಸುಖ–ಸಂತೋಷಗಳೇ ವಿವಾಹದ ಮುಖ್ಯಗುರಿಯೆಂಬ ಕಲ್ಪನೆ ಉಳ್ಳ ಜನರು ಅಸಂತುಷ್ಟ ವೈವಾಹಿಕ ಜೀವನಕ್ಕೆ ವಿವಾಹ ವಿಚ್ಛೇದನವೇ ಪರಿಹಾರವೆಂಬ ಅಭಿಪ್ರಾಯವನ್ನು ಪ್ರಧಾನವಾಗಿ ಉಳ್ಳವರಾಗಿರುತ್ತಾರೆ.

ಭಾರತೀಯ ಸಮಾಜದಲ್ಲಿ ವಿವಾಹ ವಿಚ್ಛೇದನಕ್ಕೆ ಒಳಗಾಗುವ ದಂಪತಿಗಳು ಬಹಳಷ್ಟು ಸಂದರ್ಭಗಳಲ್ಲಿ ಆತುರದ ನಿರ್ಧಾರ ತೆಗೆದುಕೊಳ್ಳುವರಲ್ಲದೆ, ಭವಿಷ್ಯದಲ್ಲಿ ಅವರ ಈ ನಿರ್ಧಾರ ತಮ್ಮ ಮತ್ತು ತಮ್ಮ ಕುಟುಂಬದ ಮೇಲೆ ಬೀರಬಹುದಾದ ಪರಿಣಾಮದ ಕಲ್ಪನೆ ಬಗ್ಗೆ ಚಿಂತಿಸಿರುವುದಿಲ್ಲ. ದಂಪತಿಗಳು ವಿವಾಹಕ್ಕೆ ಮೊದಲು ವೈವಾಹಿಕ ಜೀವನದ ಬಗೆಗೆ ಇಟ್ಟುಕೊಳ್ಳಬಹುದಾದ ವಿಶೇಷ ನಿರೀಕ್ಷೆಗಳು ನಂತರ ವಾಸ್ತವತೆಯಿಂದ ದೂರವಾದಾಗ ನಿರಾಶರಾಗುತ್ತಾರೆ. ಈ ಕಾರಣದಿಂದಾಗಿ ವೈವಾಹಿಕ ಜೀವನದ ಸಮಸ್ಯೆಗೆ ವಿಚ್ಛೇದನ ಪರಿಹಾರವೆಂದು ಭಾವಿಸುತ್ತಾರೆ. ಆದರೆ ಅವರ ಈ ನಿರ್ಧಾರವೇ ನಂತರದ ಜೀವನದ ಸಮಸ್ಯೆಗೆ ಪ್ರೇರಕವೂ ಆಗಬಹುದು. ವೈವಾಹಿಕ ಜೀವನದಲ್ಲಿ ದಂಪತಿಗಳು ಅನುಭವಿಸುವ ವಿಚಿತ್ರ ಅನುಭವಗಳು, ಅವರ ನಿರೀಕ್ಷೆಗಳಲ್ಲಿ ಉಂಟಾಗುವ ಕೊರತೆಗಳೂ ಇದಕ್ಕೆ ಕಾರಣವಾಗುತ್ತವೆ. ಆಧುನಿಕ ವೈವಾಹಿಕ ಸಂಬಂಧಗಳ ಹೊಸ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ದಂಪತಿಗಳ ಮಧ್ಯೆ ಉಂಟಾಗಬಹುದಾದ ವಿರಸ ಮತ್ತು ಅಸಮಾಧಾನಗಳೂ ವಿಚ್ಛೇದನಕ್ಕೆ ಕಾರಣವಾಗ ಬಹುದು. ಸಮಕಾಲೀನ ಸಮಾಜದಲ್ಲಿ ಮನಸ್ಸಿಲ್ಲದ ಮನಸ್ಸಿನಿಂದ, ವಿಷಾದದೊಡನೆ ವೈವಾಹಿಕ ಜೀವನವನ್ನು ಅಂತ್ಯಗೊಳಿಸಲೂಬಹುದು. ಈ ಕಾರಣಗಳಿಂದಾಗಿಯೇ ವಿಚ್ಛೇದನಕ್ಕೆ ಒಳಗಾಗುವ ದಂಪತಿಗಳಲ್ಲಿ ಮಿಶ್ರಭಾವೋದ್ರೇಕ ಅಂಶಗಳಾದ ಪ್ರೀತಿ, ದ್ವೇಷ, ಕಳಂಕ, ಅವಮಾನ ಇವೇ ಮುಂತಾದವುಗಳ ಜೊತೆಗೆ ಯಾತನೆಯ ನಿರ್ಭರತೆ ಇರುತ್ತದೆ.

ಇಂದಿನ ಭಾರತದಲ್ಲಿ ಜನರು ವಿವಾಹ ವಿಚ್ಛೇದನಕ್ಕೆ ಮಾನ್ಯತೆ ನೀಡಿದ್ದು, ಈ ಹಿಂದೆ ಇದಕ್ಕೆ ಇದ್ದ ಕಳಂಕ ಮಾಯವಾಗಿದ್ದರೂ ಕೂಡ ವಿವಾಹ ವಿಚ್ಛೇದನ ಒಂದು ಚಿಂತೆಯ ಸಂಗತಿಯಾಗಿದೆ. ವೈವಾಹಿಕ ಜೀವನದಲ್ಲಿ ಭ್ರಮೆಗೆ ಒಳಗಾಗಿದ್ದರೂ, ವೈವಾಹಿಕ ಜೀವನವನ್ನು ಅಂತ್ಯಗೊಳಿಸುವಲ್ಲಿ ಇರಬಹುದಾದ ಸಾಧಕ–ಬಾಧಕಗಳ ಅರಿವಿದ್ದರೂ ಕೂಡ, ಸಮಾಜದಲ್ಲಿ ವ್ಯಕ್ತಿಗಳು ಅವಿವಾಹಿತರಾಗಿ ಉಳಿಯಲು ಇಚ್ಛಿಸದೇ ವಿವಾಹಬಂಧನಕ್ಕೆ ಒಳಗಾಗಲು ಇಚ್ಛಿಸುತ್ತಾರೆ.

ಡಾ. ಜಿ. ಎನ್. ಚೌಧರಿಯವರ ಅಭಿಪ್ರಾಯದಂತೆ, ಹಿಂದೂ ಸಮಾಜದಲ್ಲಿ ವಿವಾಹ ವಿಚ್ಛೇದನಕ್ಕೆ ಎರಡು ಮುಖ್ಯ ಕಾರಣಗಳಿವೆ: ಅವೆಂದರೆ, (1) ಪರಿಸರ (2) ಜೈವಿಕ–ಸಾಮಾಜಿಕ ಅಂಶಗಳು. ವ್ಯಕ್ತಿಯ ವ್ಯಕ್ತಿತ್ವಕ್ಕಿಂತಲೂ ಪರಿಸರ ಆಧಾರಿತ ಅಂಶಗಳು ವಿವಾಹ ವಿಚ್ಛೇದನಕ್ಕೆ ಕಾರಣವೆಂದು ತಿಳಿಸುತ್ತಾರೆ ಹಾಗೆಯೇ

ಜೈವಿಕ–ಸಾಮಾಜಿಕ ಅಂಶಗಳು, ಮಾನಸಿಕ ಆರ್ಥಿಕಅಂಶಗಳಿಗಿಂತ ಹೆಚ್ಚು ಪ್ರಭಾವ ಬೀರಬಲ್ಲವೆಂಬುದು ಗೋಚರವಾಗುತ್ತದೆ.

ಸಾಮಾನ್ಯವಾಗಿ ವಿವಾಹ ವಿಚ್ಛೇದನಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಲಾಗುತ್ತದೆ. ದಂಪತಿಗಳಲ್ಲಿ ಕಂಡುಬರುವ ವಿಶೇಷ ನಡವಳಿಕೆಗಳಿಗೆ ಬದಲಾಗಿ ಇವರ ಸಂಬಂಧದ ಗುಣಲಕ್ಷಣಗಳು ಮುಖ್ಯ ಕಾರಣವಾಗಿರುತ್ತದೆ. ಉದಾಹರಣೆಗೆ, ಅತ್ತೆ–ಮಾವಂದಿರೊಡನೆ ಸೊಸೆಯ ಹೊಂದಾಣಿಕೆ, ಹೆಂಡತಿಗೆ ಗಂಡ ತೋರುವ ಪ್ರೀತಿಯನ್ನು ಅವಲಂಬಿಸಿರುತ್ತದೆ. ವಿವಾಹ ವಿಚ್ಛೇದನಕ್ಕೆ ಹೆಂಡತಿಯ ಸಿಡುಕಿನ ಸ್ವಭಾವವಾಗಲಿ ಅಥವ ಗಂಡನ ಅಧಿಕಾರ ಮನೋಭಾವವಾಗಲಿ ಕಾರಣವೆಂದು ಹೇಳಲು ಆಗುವುದಿಲ್ಲ. ವಿಚ್ಛೇದನ ಪ್ರಮಾಣದ ಮೇಲೆ ಪ್ರಭಾವ ಬೀರುವ ಅಂಶಗಳು ವೈವಾಹಿಕ ಜೀವನದ ಸೋಲಿಗೆ ಕಾರಣವಾಗುವ ಅಂಶಗಳು ಒಂದೇ ಎಂದು ಹೇಳಲು ಆಗುವುದಿಲ್ಲ.

ಪರಿಸರ ಅಂಶವಾದ ವ್ಯಕ್ತಿಯ ವ್ಯಕ್ತಿತ್ವವು ಬಹುಮಟ್ಟಿಗೆ ವ್ಯಕ್ತಿಯ ಬಾಲ್ಯ ಜೀವನದ ಅನುಭವಗಳನ್ನು ಅವಲಂಬಿಸಿರುತ್ತದೆ. ಕುಟುಂಬ ಮತ್ತು ವಿವಾಹ ಸಂಶೋಧಕರ ಅಭಿಪ್ರಾಯಗಳಂತೆ, ಬಾಲ್ಯ ಮತ್ತು ಯೌವನದ ಸಮಯದಲ್ಲಿ ವ್ಯಕ್ತಿಯ ಅನುಭವಗಳು ಮುಂದಿನ ಆತನ ವೈವಾಹಿಕ ಜೀವನಸಂಬಂಧ ಮತ್ತು ನಡವಳಿಕೆಯ ಹೊಂದಾಣಿಕೆಯ ಮೇಲೆ ಪ್ರಭಾವಗಳನ್ನು ಬೀರುತ್ತದೆ. ವೈವಾಹಿಕ ಜೀವನದಲ್ಲಿ ಕಾಣುವ ತಪ್ಪು ಹೊಂದಾಣಿಕೆಯ ನಡವಳಿಕೆಗಳು ಕುಟುಂಬದಲ್ಲಿ ಆಗಾಗ ಹೆತ್ತವರ ಮಧ್ಯೆ ಸಂಭವಿಸುವ ವೈವಾಹಿಕ ಸಂಘರ್ಷಣೆಯ ಪ್ರಭಾವದ ಪರಿಣಾಮವೆಂದು ಹೇಳುಬಹುದು. ಈ ಮೇಲೆ ಚರ್ಚಿಸಿರುವ ಅಂಶಗಳು ವ್ಯಕ್ತಿಯ ವ್ಯಕ್ತಿತ್ವ ಗತಿಶೀಲತೆ ಮೇಲೆ ಪರಿಣಾಮ ಬೀರುತ್ತದೆ.

ಕುಟುಂಬದಲ್ಲಿ ಕಾಣುವ ಪರಿಸರ ಅಂಶಗಳೆಂದರೆ ಪಾತ್ರಘರ್ಷಣೆ (ಅಧಿಕಾರ), ಭೌತಿಕ ಹಿಂಸೆ, ದಂಪತಿಗಳಲ್ಲಿನ ವಯಸ್ಸಿನ ಅಂತರ, ಅನವಶ್ಯಕ ಗಾತ್ರದ ಕುಟುಂಬ, ವಿವಾಹ ಸಮಯದಲ್ಲಿ ಕಾಣುವ ಅಪ್ರಬುದ್ಧತೆ ಮತ್ತು ದಂಪತಿಗಳ ವಿವಾಹದ ಹೊರಗಿನ ನಿಷಿದ್ಧ ದೇಹಸಂಬಂಧ ಇವೇ ಮುಂತಾದುವುಗಳು.

ವಿಚ್ಛೇದನಕ್ಕೆ ಕಾರಣವಾಗುವ ಕುಟುಂಬದ ಹೊರಗಿನ ಕಾರಣಗಳೆಂದರೆ, ವರದಕ್ಷಿಣೆ ಮತ್ತು ಹೆಂಡತಿಯ ಕುಟುಂಬದ ಹೊರಗಿನ ದುಡಿಮೆ. ಇದೇ ರೀತಿ ವ್ಯಕ್ತಿ ಸಂಬಂಧ ಕಾರಣಗಳೆಂದರೆ ವ್ಯಕ್ತಿಗಳಲ್ಲಿ ಕಾಣುವ ದರ್ಪಸ್ವಭಾವ ಕಿರಿ–ಕಿರಿ ಸ್ವಭಾವ ಸೋಮಾರಿತನ. ನಪುಂಸಕತೆ, ಬಂಜೆತನ ಮತ್ತು ಮಾನಸಿಕ ಅಸಮತೋಲನ. ದಂಪತಿಗಳ ವೈವಾಹಿಕ ಜೀವನದಲ್ಲಿ ತುಯ್ತಗಳು ಕಾಣಿಸಿಕೊಳ್ಳಲು ಗಂಡ–ಹೆಂಡತಿಯರಿಬ್ಬರ ವೃತ್ತಿ ಸ್ಥಾನಮಾನಗಳ ಅಸಮಾನತೆ, ಆದಾಯ, ವಿವಿಧ ವೃತ್ತಿಗಳು, ಶೈಕ್ಷಣಿಕ ಸಾಧನೆಗಳು ಮತ್ತು ಇವರುಗಳ ಸಾಮಾಜಿಕ–ಸಾಂಸ್ಕೃತಿಕ ಹಿನ್ನೆಲೆಗಳು ಕಾರಣವಾಗಿರುತ್ತವೆ.

ಪ್ರೊ. ಚೌಧರಿಯವರು ತಮ್ಮ ಅಧ್ಯಯನ ಒಂದರಲ್ಲಿ ವಿವಾಹ ಅಂತ್ಯಗೊಳ್ಳಲು ಯಾವುದೇ ಒಂದು ಕಾರಣವಿರದೆ, ಬಹುಕಾರಣಗಳಿರುತ್ತವೆ ಎಂದಿದ್ದಾರೆ. ಅವುಗಳೆಂದರೆ ಸಾಮಾಜಿಕ, ಜೈವಿಕ, ಮಾನಸಿಕ ಮತ್ತು ಆರ್ಥಿಕ ಕಾರಣಗಳು. ಇವರ ಅಧ್ಯಯನದ ವರದಿಯಂತೆ ವಿವಾಹ ಅಂತ್ಯಗೊಳ್ಳಲು ದಂಪತಿಗಳ ವ್ಯಕ್ತಿತ್ವಕ್ಕಿಂತ ಬಾಹ್ಯಪರಿಸರ ಆಧಾರಿತ ಅಂಶಗಳು ಹೆಚ್ಚು ಕಾರಣವಾಗಿರುತ್ತವೆ. ಇದೇ ರೀತಿ ಸಾಮಾಜಿಕ–ಜೈವಿಕ ಅಂಶಗಳೂ ಕಾರಣವಾಗಿರುತ್ತವೆ. ಈ ಅಂಶಗಳೇ ದಂಪತಿಗಳ ಜೀವನದಲ್ಲಿ ತುಮುಲಗಳು ಕಾಣಿಸಿಕೊಳ್ಳಲು ಪ್ರೇರಣೆ ನೀಡುತ್ತವೆ.

ಸಾಮಾಜಿಕ ಮತ್ತು ವೈಯಕ್ತಿಕ ಅಂಶಗಳು

ಬದಲಾಗುತ್ತಿರುವ ಕುಟುಂಬ :

ವಿವಾಹ ವಿಚ್ಛೇದನಕ್ಕೆ ಬದಲಾಗುತ್ತಿರುವ ಕುಟುಂಬ ರಚನೆ ಮತ್ತು ಕಾರ್ಯಗಳೂ ಕಾರಣವಾಗಬಹುದು. ಸಾಂಪ್ರದಾಯಿಕ ಕುಟುಂಬದಲ್ಲಿ ಹಾಸುಹೊಕ್ಕಾಗಿದ್ದ ಸಂರಕ್ಷಣೆ, ಧಾರ್ಮಿಕ, ಶೈಕ್ಷಣಿಕ ಮತ್ತು ಮನೋರಂಜನಾ ಕಾರ್ಯಗಳನ್ನು ಹೊರಗಿನ ಸಂಘ–ಸಂಸ್ಥೆಗಳು ನಿರ್ವಹಿಸುತ್ತಲಿವೆ. ಇಂದು ಕುಟುಂಬ ಮತ್ತು ವೈವಾಹಿಕ ಸಮಸ್ಯೆಗಳು ತಲೆದೋರಿದಾಗ ದಂಪತಿಗಳು ಇವುಗಳನ್ನು ತಮ್ಮಲ್ಲಿ ನಿವಾರಿಸಿಕೊಳ್ಳುವ ಬದಲು, ಪೋಲಿಸ್, ಕೌಟುಂಬಿಕ ಸಲಹೆಗಾರರು, ಸಾಮಾಜಿಕ ಕಾರ್ಯಕರ್ತರು ಮತ್ತಿತರ ಸಾಮಾಜಿಕ ಸಂಘಸಂಸ್ಥೆಗಳ ಮೊರೆಹೋಗುತ್ತಾರೆ.

ವೃತ್ತಿಗಳಲ್ಲಿ ತೊಡಗಿರುವ ಪತ್ನಿಯರು :

ಹಿಂದೆ ಪತ್ನಿಯು ತನ್ನ ಆಹಾರ, ಬಟ್ಟೆ ಮತ್ತು ಆಸರೆಗಳಿಗಾಗಿ ಪತಿಯನ್ನು ಅವಲಂಬಿಸಿರುತ್ತಿದ್ದಳು. ತನ್ನ ವೈವಾಹಿಕ ಜೀವನದಲ್ಲಿ ಏನೇ ಕಷ್ಟಗಳಿದ್ದರೂ, ವಿಚ್ಛೇದನದ ಬಗೆಗೆ ತಪ್ಪಿಯೂ ಚಿಂತಿಸುತ್ತಿರಲಿಲ್ಲ. ತನ್ನ ಜೀವನ ಸರ್ವಸ್ವವೂ ಪತಿ ಮತ್ತು ಕುಟುಂಬದೊಡನೆ ಸೇರಿಕೊಂಡಿರುತ್ತದೆಂಬ ಭಾವನೆ ಪ್ರಬಲವಾಗಿರುತ್ತಿತ್ತು. ಆದರೆ ಕುಟುಂಬದ ಹೊರಗೆ ಲಾಭದಾಯಕ ವೃತ್ತಿಯನ್ನು ಕಂಡುಕೊಂಡ ಮೇಲೆ ಆಕೆಯ ಮನೋಧರ್ಮ ಬದಲಾಗಿರುವುದರ ಜೊತೆಗೆ ವೈವಾಹಿಕ ಜೀವನದಲ್ಲಿ ಸ್ವಲ್ಪ ನಿರಾಶೆಹೊಂದಿದರೂ ವಿಚ್ಛೇದನ ಪಡೆಯಲು ಮುಂದಾಗುತ್ತಾಳೆ.

ಸಡಿಲಗೊಂಡ ನೈತಿಕ ಮತ್ತು ಧಾರ್ಮಿಕ ಕಟ್ಟಳೆಗಳು :

ಧರ್ಮಶಾಸ್ತ್ರಗಳು ಮತ್ತು ಧಾರ್ಮಿಕ ನಂಬುಗೆಗಳು ವಿವಾಹ ವಿಚ್ಛೇದನವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವಾದರೂ ಸಮಕಾಲೀನ ಹಿಂದೂಗಳು ವಿಚ್ಛೇದನದ ಬಗೆಗೆ ಸಡಿಲ ಮನೋಭಾವನೆಗಳನ್ನು ಹೊಂದಿದವರಾಗಿದ್ದಾರೆ. ಸಾರಾಂಶವಾಗಿ ಹೇಳಬೇಕೆಂದರೆ, ವಿವಾಹವನ್ನು ಒಂದು ಪವಿತ್ರ ಬಂಧನವೆಂದು ತಿಳಿಯುವ ಬದಲು ಲೌಕಿಕ

ಅಗತ್ಯ (ಮೂಲಪ್ರವೃತ್ತಿಯಾದ ಕಾಮತೃಪ್ತಿಯೂ ಸೇರಿದಂತೆ) ಬೆಳೆಸಿಕೊಳ್ಳಲಾರಂಭಿಸಿದ್ದಾರೆ.

ಸಂಗಾತಿಗಳ ವೈಯಕ್ತಿಕ ಆಯ್ಕೆ ಅವಕಾಶಗಳು :

ಹಿಂದಿನ ಕಾಲದಲ್ಲಿ ಹೆತ್ತವರು ತಮ್ಮ ಮಕ್ಕಳಿಗೆ ವಿವಾಹದ ಸಂಗಾತಿಗಳನ್ನು ಆಯ್ಕೆಮಾಡುತ್ತಿದ್ದರು. ಜೊತೆಗೆ ತಮ್ಮ ಮಕ್ಕಳು ಯಾರನ್ನು ವಧು/ವರನನ್ನಾಗಿ ಆರಿಸುವರೆಂಬುದರ ಬಗೆಗೆ ಗಮನವಿಡುತ್ತಿದ್ದರು. ಇದರ ಮುಖ್ಯ ಉದ್ದೇಶ ಮಕ್ಕಳು ಹೆಚ್ಚು ಭಾವುಕರಾಗಿ ವಿವಾಹಬಂಧನಕ್ಕೆ ಒಳಗಾಗಬಾರದೆಂಬುದೇ ಆಗಿರುತ್ತಿತ್ತು. ಹೆತ್ತವರು, ಮಕ್ಕಳ ಸಂಗಾತಿಯ ಆಯ್ಕೆಗೆ ಒಪ್ಪಿಗೆ ನೀಡುವ ಮೊದಲು ಪ್ರೀತಿಯೊಂದನ್ನೇ ಅಲ್ಲದೆ ಸಂಗಾತಿಯ ಕುಟುಂಬ ಹಿನ್ನೆಲೆ, ಆಸ್ತಿ, ಸಂಪತ್ತು, ಸಾಮಾಜಿಕ ಸ್ಥಾನಮಾನ ಇವೇ ಮುಂತಾದ ಅಂಶಗಳತ್ತಲೂ ಗಮನಹರಿಸುತ್ತಿದ್ದರು. ಆದರೆ ಇಂದು ವಿವಾಹಕ್ಕೆ ಒಳಗಾಗುವ ವ್ಯಕ್ತಿಗಳಿಗೆ ಪ್ರೀತಿಯೇ ಪ್ರಧಾನವಾಗಿದ್ದು ಇವರ ವೈವಾಹಿಕ ಜೀವನ ಶೀಘ್ರವೇ ಕೊನೆಗೊಳ್ಳುವ ಸಂಭವಗಳು ಹೆಚ್ಚಾಗಿರುತ್ತವೆ.

ಸುಖಸಂತೋಷವೆ ಮುಖ್ಯಗುರಿಯಾಗಿರುವುದು :

ಇಂದು ವಿವಾಹದ ಮುಖ್ಯಗುರಿ ವೈಯಕ್ತಿಕವಾಗಿ ಸುಖಪಡೆಯುವುದೇ ಆಗಿದೆ. ಇಂದು ದಂಪತಿಗಳು ವಿರಳವಾಗಿ ವಿವಾಹ ರಚನೆಯ ಬಗೆಗಾಗಲಿ, ಸಾಂಸ್ಥಿಕ ನಡವಳಿಕೆಯ ಬಗೆಗೆ ಚಿಂತಿಸುತ್ತಾರೆ. ದಂಪತಿಗಳು ವೈವಾಹಿಕ ಜೀವನದಲ್ಲಿ ಅಸಂತುಷ್ಟಗೊಂಡಾಗ ಮೊದಲು ಅವರ ಮನಸ್ಸಿಗೆ ಹೊಳೆಯುವ ಯೋಚನೆಯೆಂದರೆ "ನಾನು ಸಂತೋಷಕಾಣದ ಸಂಗಾತಿಯೊಡನೆ ಜೀವನವನ್ನೇಕೆ ಮುಂದುವರಿಸಬೇಕು" ಎಂಬುದು ಇಂತಹ ಸಂದರ್ಭಗಳಲ್ಲಿ ಸಂಗಾತಿಗಳು ತಮ್ಮ ವಿವಾಹ ಸಂದರ್ಭದಲ್ಲಿ ತೆಗೆದುಕೊಂಡಿರುವ ಪ್ರತಿಜ್ಞೆಯನ್ನು ನೆನೆಪಿಸಿಕೊಂಡು, ಕುಟುಂಬ, ಮಕ್ಕಳು ಮತ್ತು ಹೆತ್ತವರ ಒಳಿತನ್ನು ಗಮನದಲ್ಲಿಟ್ಟುಕೊಂಡು ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ಪ್ರಗತಿಪರ ಕಾನೂನುಗಳು :

ವಿವಾಹ ವಿಚ್ಛೆದನ ಕಾನೂನು ಮತ್ತು ವಿಚ್ಛೇದನ ಸಂಖ್ಯಾ ಪ್ರಮಾಣಗಳ ಅಧ್ಯಯನವೊಂದರಿಂದ ಕಂಡುಬರುವ ಗಮನಾರ್ಹ ಅಂಶವೆಂದರೆ ಕಾನೂನುಗಳು ವಿಚ್ಛೇದನಗಳಿಗೆ ಪ್ರಚೋದನೆ ನೀಡಿರುವುದರ ಜೊತೆಗೆ ವಿವಾಹ ವಿಚ್ಛೇದನ ಪ್ರಮಾಣಗಳನ್ನು ಹೆಚ್ಚಿಸಿರುವುದು. 1971ರ ಭಾರತದ ಜನಗಣತಿಯಂತೆ 870,000ರಷ್ಟು ದಂಪತಿಗಳು ವಿಚ್ಛೇದನ ಇಲ್ಲವೇ ಬೇರೆಯಾಗಿರುವ ಸಂದರ್ಭಗಳು ಕಂಡುಬರುತ್ತವೆ. ಇದರಲ್ಲಿ 743,200 ಪ್ರಕರಣಗಳು ಗ್ರಾಮೀಣ ಪ್ರದೇಶಗಳಲ್ಲೂ, 127,500 ಪ್ರಕರಣಗಳು ನಗರ ಪ್ರದೇಶಗಳಲ್ಲೂ ಸಂಭವಿಸಿದ್ದವು. ಪ್ರಮಾಣ ರೀತ್ಯ 1000 ಗಂಡಸರಿಗೆ 1630 ಜನ ಹೆಂಗಸರಿದ್ದರು. 1961–71ರ ಜನಗಣತಿ ರೀತ್ಯ ವಿವಾಹ

ವಿಚ್ಛೇದನ ಅಥವ ಪ್ರತ್ಯೇಕಗೊಂಡ ದಂಪತಿಗಳ ಸಂಖ್ಯೆಯಲ್ಲಿ ಸರಾಸರಿ ಇಳಿತ ಉಂಟಾಗಿದ್ದರೂ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆ ಹೆಚ್ಚಾಗಿದ್ದಿತು.

ವ್ಯಕ್ತಿಗತ ಅಂಶಗಳು:

ವೈವಾಹಿಕ ಅಸಂತೋಷಕ್ಕೆ ಹಲವಾರು ಸಾಮಾಜಿಕ ಅಂಶಗಳು ಕಾರಣವಾದರೂ ಅವುಗಳೇ ವಿಚ್ಛೇದನಕ್ಕೆ ಕಾರಣವೆಂದು ಹೇಳಲಾಗದು. ದಂಪತಿಗಳನ್ನು ವಿವಾಹ ವಿಚ್ಛೇದನಕ್ಕೆ ಪ್ರಚೋದಿಸುವ ಅಂಶಗಳನ್ನು ಈ ಕೆಳಕಂಡಂತೆ ವಿವರಿಸಬಹುದು.

ನಕಾರಾತ್ಮಕ ನಡವಳಿಕೆಗಳು:

ಸಮಾಜದಲ್ಲಿ ಸಾಮಾನ್ಯವಾಗಿ ವೈವಾಹಿಕ ಜೀವನದಲ್ಲಿ ಹೆಚ್ಚಿನ ಫಲ ನಿರೀಕ್ಷಿಸಿ, ಒಂಟಿತನಕ್ಕಿಂತ ವೈವಾಹಿಕ ಜೀವನ ಉತ್ತಮವೆಂಬ ಕಾರಣಕ್ಕಾಗಿ ವಿವಾಹ ಬಂಧನಕ್ಕೆ ಒಳಗಾಗುತ್ತಾರೆ. ವಿವಾಹಪೂರ್ವದ ಪ್ರಣಯಾಚರಣೆ ಸಂದರ್ಭ ನಡವಳಿಕೆಗಳಾದ–ಹೊಗಳಿಕೆ, ಭೌತಿಕ ಪ್ರೀತಿ, ಸಂಗಾತಿಯ ಭಾವನೆಗಳ ಅರಿವು ಇವೇ ಮುಂತಾದುವು ಸಂಬಂಧಗಳನ್ನು ಸ್ಥಿರವಾಗಿರಿಸುತ್ತವೆ. ನಿಜ ಹೇಳಬೇಕೆಂದರೆ "ಇಂದು ಈ ವ್ಯಕ್ತಿಯೊಡನೆ ಸಮಯ ಕಳೆಯುವ ನಿನಗೆ ನಾಳೆಯೂ ಈ ವ್ಯಕ್ತಿ ನಿನ್ನೊಡನೆ ಎಲ್ಲವನ್ನೂ ಹಂಚಿಕೊಳ್ಳಲು ಇರುವ" ಎಂಬ ಭರವಸೆಯನ್ನು ವಿವಾಹವು ನೀಡುತ್ತದೆ.

ಪ್ರೀತಿ ಭಾವನೆಯು ಸಂಗಾತಿಯ ಸಕಾರಾತ್ಮಕ ನಡವಳಿಕೆಗಳನ್ನು ಆಧರಿಸಿ ಆಗಿರುವುದರಿಂದ ಸಂಗಾತಿಯ ನಕಾರಾತ್ಮಕ ನಡವಳಿಕೆಗಳು ದ್ವೇಷದ ಭಾವನೆಗಳಿಗೆ ಎಡೆಮಾಡಿಕೊಡುತ್ತವೆ. ವಿವಾಹವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ದಂಪತಿಗಳ ಅಧ್ಯಯನದಲ್ಲಿ ಹಲವಾರು ಪತ್ನಿಯರು, ತಮ್ಮ ಗಂಡಂದಿರು ಮನೆಗೆ ಬರುವಾಗ ಕುಡಿದು ಬರುತ್ತಿದ್ದರಲ್ಲದೆ, ತಮ್ಮನ್ನು ಹಿಂಸಿಸುವುದರ ಜೊತೆಗೆ ಲೈಂಗಿಕವಾಗಿ ತಮ್ಮೊಡನೆ ಅವಿಧೇಯತೆಯಿಂದ ವರ್ತಿಸುತ್ತಿದ್ದರೆಂದು ದೂರಿದ್ದಾರೆ. ಇದಕ್ಕೆ ವಿರುದ್ಧವಾಗಿ ಗಂಡಂದಿರು ತಮ್ಮ ಹೆಂಡತಿಯರು ಲೈಂಗಿಕ ಕ್ರಿಯೆಗೆ ವಿರೋಧಿಸುತ್ತಿದ್ದರಲ್ಲದೆ, ಅವರ ತಾಯಂದಿರೊಡನೆ ಜೊತೆಗೂಡಿ ಅವರ ವಿರುದ್ಧವೇ ಪಿತೂರಿನಡೆಸುವುದರ ಜೊತೆಗೆ ಅತಿಯಾಗಿ ಕಾಡುತ್ತಿದ್ದರೆಂದಿದ್ದಾರೆ. ಸಂಗಾತಿಯೊಬ್ಬರ ಸಕಾರಾತ್ಮಕ ನಡವಳಿಕೆಗಳು ಬಹು ಕೆಳಮಟ್ಟ ಮುಟ್ಟಿದಾಗ, ಸಂಗಾತಿಯೊಡನೆ ವೈವಾಹಿಕ ಸಂಬಂಧ ಮುಂದುವರಿಸುವುದು ಕಷ್ಟವಲ್ಲದೆ, ಫಲಕ್ಕಿಂತ ಪ್ರತಿಫಲವೇ ಕಡಿಮೆ ಎಂದು ಭಾವಿಸುತ್ತಿದ್ದರು. ಇಂತಹ ಸಂದರ್ಭಗಳು ಬಲವರ್ಧಕ ಸನ್ನಿವೇಶಗಳನ್ನು ಸೃಷ್ಟಿಸುವಂತೆ ಮಾಡುತ್ತವೆ. ಈ ಮೇಲಿನ ಅಂಶಗಳು ವೈವಾಹಿಕ ಸಂಬಂಧಗಳನ್ನು ಮುಂದುವರಿಸುವ ಬದಲಿಗೆ ವಿವಾಹ ವಿಚ್ಛೇದನವನ್ನೇ ಪ್ರೇರೇಪಿಸಿ ಅದನ್ನು ಆಕರ್ಷಕವಾಗಿ ಕಾಣಿಸುತ್ತದೆ.

ವಿವಾಹೇತರ ಸಂಬಂಧಗಳು:

ಸಂಗಾತಿಗಳಿಂದ ನಿರೀಕ್ಷಿಸಿದ ಪುರಸ್ಕಾರದಿಂದ ವಂಚಿತರಾದ ದಂಪತಿಗಳು, ತಾವು ಯಾವುದೋ ಅಸಾಧ್ಯಬಿಕ್ಕಟ್ಟಿಗೆ ಸಿಲುಕಿಕೊಂಡಿರುವವೆಂಬ ಭಾವನೆಯಿಂದ ಪರ್ಯಾಯ ಗೆಳೆತನದತ್ತ ಒಲವು ತೋರುತ್ತಾರೆ. ಈ ಗೆಳೆತನ ನವ್ಯವೂ, ಉದ್ರೇಕ ಭರಿತವೂ ಆಗಿರುವುದರಿಂದಲೂ, ದಂಪತಿ ಪಾತ್ರದಿಂದ ಪ್ರೇಮಿಯ ಹೊಸಪಾತ್ರಕ್ಕೆ ಅವಕಾಶನೀಡುವುದರಿಂದಲೂ ಇವರ ಆಯ್ಕೆಯ ಒಲವು ಪ್ರೇಮಿಯ ಕಡೆಗೆ ಹೆಚ್ಚಾಗಿರುತ್ತದೆ. ಕೆಲವೊಮ್ಮೆ ಅತೀತ ಸಂಬಂಧಗಳನ್ನು ಇಟ್ಟುಕೊಂಡಿದ್ದರೂ ವ್ಯಕ್ತಿಗಳು ತಮ್ಮ ವೈವಾಹಿಕ ಸ್ಥಾನ-ಮಾನಗಳನ್ನು ಮುಂದುವರೆಸಿಕೊಂಡು ಹೋಗಲು ಉತ್ಸುಕರಾಗಿಯೇ ಇರುತ್ತಾರೆ. ಇಂತಹ ಸಂದರ್ಭದಲ್ಲಿ ದಂಪತಿಗಳಲ್ಲಿ ಒಬ್ಬರು ತಿರಸ್ಕೃತರೆಂಬ ಭಾವನೆ ಹೊಂದಿದ್ದು, ಸಂಗಾತಿಯು ಅತೀತ ಸಂಬಂಧ ತೊರೆಯುವುದಿಲ್ಲವೆಂದು ಕಂಡುಬಂದಾಗ ವಿಚ್ಛೇದನ ಕೇಳುವ ಬೆದರಿಕೆ ಹಾಕುತ್ತಾರೆ. ಸಮಾಜವು ವಿಚ್ಛೇದನವನ್ನು ಪ್ರೋತ್ಸಾಹಿಸದಿದ್ದರೂ ಕೆಲವೊಮ್ಮೆ ದಂಪತಿಗಳ ಅತೀತ ಸಂಬಂಧಗಳು ಮುಂದುವರೆಯುವುದಕ್ಕಿಂತ ವಿಚ್ಛೇದನವೇ ಒಳಿತೆಂದು ಒಪ್ಪಿಕೊಳ್ಳುತ್ತದೆ.

ವಿವಾಹ ವಿಚ್ಛೇದನದ ಪರಿಣಾಮಗಳು :

ವಿವಾಹ ವಿಚ್ಛೇದನದ ಅನುಮತಿಯು ದಂಪತಿಗಳು ಮತ್ತು ಇವರ ಮಕ್ಕಳ ಮೇಲೆ ಹಲವಾರು ಪರಿಣಾಮಗಳನ್ನು ಬೀರುತ್ತದೆ. ವಿಚ್ಛೇದನ ಬಹು ಜನರಿಗೆ ಭಾವನಾತ್ಮಕವಾಗಿ ಭಗ್ನ ಅನುಭವವನ್ನು ನೀಡುತ್ತದೆ. ವಿವಾಹ ವಿಚ್ಛೇದನದಿಂದ ವೈವಾಹಿಕ ಬಿಕ್ಕಟ್ಟಿಗೆ ಸಿಗುವ ಉಪಶಮನದ ಬಗೆಗೆ ಏನೇ ಉತ್ತಮ ಅಭಿಪ್ರಾಯಗಳಿದ್ದರೂ ವಿವಾಹ ವಿಚ್ಛೇದನಕ್ಕೆ ಒಳಗಾಗುವ ವ್ಯಕ್ತಿಗಳ ಜೀವನ ವ್ಯಥೆಯಿಂದ ಕೂಡಿರುತ್ತದೆ. ವಿಚ್ಛೇದನಕ್ಕೆ ಒಳಗಾಗುವವರಲ್ಲಿ ಹೆಂಗಸರಿಗಿಂತ ಗಂಡಸರು ಪುನರ್ವಿವಾಹಕ್ಕೆ ಇಚ್ಛಿಸುತ್ತಾರೆ. ಆದರೆ ಪರಿತ್ಯಕ್ತ, ಅವಿವಾಹಿತ ಮತ್ತು ವಿವಾಹಿತರು ಎದುರಿಸುವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ವಿವಾಹ ವಿಚ್ಛೇದನಕ್ಕೆ ಒಳಗಾದ ದಂಪತಿಗಳಲ್ಲೊಬ್ಬರು ನಿರಾಶರಾಗಿರುತ್ತಾರಲ್ಲದೆ ನಂತರ ಜೀವನದಲ್ಲಿ ನಕಾರಾತ್ಮಕ ನಡವಳಿಕೆಗಳನ್ನು ಬೆಳೆಸಿಕೊಳ್ಳುತ್ತಾರೆ. ಇವರು ವಿಚ್ಛೇದನದನಂತರದ ಜೀವನಕ್ಕೆ ಹೊಂದಿಕೊಳ್ಳುವರಾದರೂ ಈ ಕ್ರಿಯೆಯಲ್ಲಿ ಹೆಚ್ಚಿನ ನೋವನ್ನೂ ಅನುಭವಿಸುತ್ತಾರೆ. ಗಂಡಂದಿರಿಗಿಂತ ಹೆಂಡತಿಯರು ಈ ನೋವಿನ ಅನುಭವಕ್ಕೆ ಹೆಚ್ಚಾಗಿ ಒಳಗಾಗುತ್ತಾರಲ್ಲದೆ ಹೆಚ್ಚಿನ ತುಮುಲಕ್ಕೂ ಒಳಗಾಗುತ್ತಾರೆ. ಸಾಂಪ್ರದಾಯಿಕ ಹಿನ್ನೆಲೆಯ ಸ್ತ್ರೀಯರು ವಿಚ್ಛೇದನದ ನಂತರದ ಜೀವನಕ್ಕೆ ಹೊಂದಿಕೊಳ್ಳಲು ಬಹಳಷ್ಟು ಸೆಣಸಾಡುತ್ತಾರೆ.

ವಿಚ್ಛೇದನದ ನಂತರದ ದಿನಗಳಲ್ಲಿ ದಂಪತಿಗಳಿಬ್ಬರಲ್ಲೂ ಕೊರಗು, ನಿರಾಶಾ ಭಾವನೆ ಬೆಳೆಯುವುದರ ಜೊತೆಗೆ ಹಲವಾರು ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ.

ಅನ್ಯೋನ್ಯತೆಯ ಕೊರತೆ, ದೈನಂದಿನ ಜೀವನದಲ್ಲಿ ಏರುಪೇರುಗಳು, ಪರಿತ್ಯಕ್ತ ಸ್ಥಾನಮಾನ ಇವೇ ಮುಂತಾದುವು.

ಪರಿತ್ಯಕ್ತ ದಂಪತಿಗಳ ದೈನಂದಿನ ಚಟುವಟಿಕೆಗಳಲ್ಲಿ ಏರುಪೇರುಗಳು ಉಂಟಾಗುತ್ತವಲ್ಲದೆ ಒಂಟಿತನ ಅವರನ್ನು ಅತಿಯಾಗಿ ಕಾಡಿಸಲೂಬಹುದು. ಈ ಕ್ರಿಯೆಗಳು 'ಪರಿತ್ಯಕ್ತ'ವೆಂಬ ನಕಾರಾತ್ಮಕ ಪಟ್ಟಿಯನ್ನು ನೀಡುತ್ತದೆ. ಮುರಿದು ಬೀಳುತ್ತಿರುವ ವೈವಾಹಿಕ ಜೀವನಕ್ಕೆ ವಿಚ್ಛೇದನ ಸಮಂಜಸ ಪರಿಹಾರವೆನಿಸಿ ಕೊಂಡರೂ, ಸಮಾಜವು ಪರಿತ್ಯಕ್ತರನ್ನು ಪುರಸ್ಕರಿಸುವುದಿಲ್ಲ.

ವಿವಾಹ ವಿಚ್ಛೇದನ ಮತ್ತು ಕಾನೂನು :

ಭಾರತದಲ್ಲಿ ಹಿಂದೂ ವಿವಾಹ ವಿಘಟನೆಯ ಬಗೆಗೆ ಇರುವ ಅಭಿಪ್ರಾಯಗಳಿಗೆ ವಿರುದ್ಧವಾಗಿ, ಹಿಂದೂ ಸಮಾಜದ ಬಹುಭಾಗ ಜನರಲ್ಲಿ ಅದರಲ್ಲೂ ಮುಖ್ಯವಾಗಿ ಕೆಳಜಾತಿಯ ಜನರಲ್ಲಿ ಸಾಂಪ್ರದಾಯಿಕವಾಗಿ ವಿವಾಹ ವಿಚ್ಛೇದನ ಪದ್ಧತಿ ಅನುಸರಣೆ ಯಲ್ಲಿ ಇದ್ದುದು ಕಂಡುಬರುತ್ತದೆ. ಹಿಂದೂ ವಿವಾಹ ಕಾಯ್ದೆ 1955ರಂತೆ ದಂಪತಿ ಗಳು ಪರಸ್ಪರ ಒಪ್ಪಿಗೆ ಕೊಡುವ ಮೂಲಕ ವಿವಾಹ ವಿಚ್ಛೇದನಕ್ಕೆ ಸಾಮಾಜಿಕ ಮನ್ನಣೆ ನೀಡಲಾಗಿದೆ.

1955ರ ಹಿಂದೂ ವಿವಾಹಕಾಯ್ದೆಯು ಈ ಕೆಳಕಂಡ ಆಧಾರದ ಮೇಲೆ ದಂಪತಿಗಳು ವಿವಾಹವಿಚ್ಛೇದನ ಪಡೆಯಲು ಅವಕಾಶ ಕಲ್ಪಿಸಿದೆ.

ದಂಪತಿಗಳಲ್ಲೊಬ್ಬರು—1. ವ್ಯಭಿಚಾರದಲ್ಲಿ ತೊಡಗಿದ್ದಾಗ, 2. ಬೇರೆ ಧರ್ಮಕ್ಕೆ ಮತಾಂತರಗೊಂಡಿದ್ದರೆ, 3. ಬುದ್ಧಿ ಭ್ರಮಣೆಯಾಗಿದ್ದರೆ, 4. ಕುಷ್ಠ ರೋಗದಂತಹ ಸಾಂಕ್ರಾಮಿಕ ಕಾಯಿಲೆಯಿಂದ ಬಳಲುತ್ತಿದ್ದರೆ, 5. ಗುಹ್ಯರೋಗ ಪೀಡಿತರಾಗಿದ್ದರೆ, 6. ಬೇರೆಯಾಗಿ ಜೀವನ ನಡೆಸುತ್ತಿದ್ದರೆ 7. ಏಳು ವರ್ಷ ಗಳಿಗೂ ಹೆಚ್ಚುಕಾಲ ದಂಪತಿಗಳಲ್ಲೊಬ್ಬರು ಕಾಣೆಯಾಗಿದ್ದರೆ 8. ನ್ಯಾಯಾಲಯ ಪ್ರತ್ಯೇಕ ವಾಸಕ್ಕೆ ಅನುಮತಿ ನೀಡಿದನಂತರ ಎರಡುವರುಷಗಳಲ್ಲಿ ಜೊತೆಗೂಡಲು ಅಸಮರ್ಥವಾಗಿದ್ದಾಗ ಮತ್ತು ದಾಂಪತ್ಯ ಜೀವನ ಪುನಃ ಸ್ಥಾಪಿಸಲು ನ್ಯಾಯಾಲಯದ ತೀರ್ಪನ್ನು ಪಾಲಿಸಲು ಅಸಮರ್ಥರಾದಾಗ ದಂಪತಿಗಳಿಗೆ ವಿವಾಹ ವಿಚ್ಛೇದನಕ್ಕೆ ಅನುಮತಿಯನ್ನು ನೀಡಲಾಗುತ್ತದೆ.

ಹೆಂಡತಿಯು ನ್ಯಾಯಾಲಯದಿಂದ ವಿಚ್ಛೇದನ ಅಪೇಕ್ಷಿಸಿದಾಗ, ಈ ಮೇಲೆ ನಮೂದಿಸಿರುವ ಕಾರಣಗಳ ಜೊತೆಗೆ, ಇನ್ನಿತರ ಅವಕಾಶಗಳನ್ನೂ ಕಲ್ಪಿಸಲಾಗಿದೆ. ಹೆಂಡತಿ ವಿಚ್ಛೇದನ ಕೋರುವ ಸಮಯಕ್ಕೆ ಗಂಡನ ಇನ್ನೊಬ್ಬ ಪತ್ನಿ ಜೀವಂತವಾಗಿ ದ್ದರೆ, ಇಲ್ಲವೆ ಗಂಡ ಬಲಾತ್ಕಾರ ಸಂಭೋಗ ಅಪರಾಧಕ್ಕೆ ಒಳಗಾಗಿದ್ದರೆ, ಆತನು ಪುರುಷ ವೈಥುನಿಯಾಗಿದ್ದರೆ ಅಥವ ಪಶುತ್ವ ನಡವಳಿಕೆಗಳನ್ನು ಹೊಂದಿದ್ದರೆ, ವಿಚ್ಛೇದನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಈ ಮೇಲಿನ ಕಾಯ್ದೆಯನ್ನು ಪೂರ್ವಾನ್ವಯ ಜಾರಿಗೆ ತರಲಾಗಿದ್ದು ಏಕಪತಿ/ಪತ್ನಿತ್ವ ಸಾಮಾಜಿಕ ನೀತಿಯನ್ನು ದೃಢಪಡಿಸುವ ದೃಷ್ಟಿಯಿಂದ ಜಾರಿಗೆ ತರಲಾಗಿದೆ. ಭಾರತದ ಕಾನೂನು ಆಯೋಗ ಆಗಿಂದಾಗ್ಗೆ ಮಾಡುವ ಉದಾರ ಶಿಫಾರಸ್ಸುಗಳನ್ನು, ಪ್ರಪಂಚದ ಇತರ ದೇಶಗಳಲ್ಲಿ ಆಚರಣೆಯಲ್ಲಿರುವಂತೆ ಆಧುನಿಕಗೊಳಿಸಲು ಹೊಸ ವಿಧಿಗಳನ್ನು ಸೇರಿಸಲೂ ನಿರ್ಧರಿಸಲಾಗಿದೆ.

1955ರ ವಿವಾಹ ವಿಚ್ಛೇದನ ಕಾಯ್ದೆಗೆ ಹೊಸ ವಿಧಿಗಳಾದ 13, 13ಎ ಮತ್ತು 13ಬಿ ಗಳನ್ನು ಸೇರಿಸಲಾಗಿದೆ. ಆದರೂ "ಸರಿಪಡಿಸಲಾಗದ ಬಿರುಕಿನ ವಿವಾಹ" ಕಲ್ಪನೆಯ ಆಧಾರದ ಮೇಲೆ ನ್ಯಾಯಾಲಯ ತನ್ನ ವಿಚಕ್ಷಣೆ ಮೂಲಕ ವಿವಾಹ ವಿಚ್ಛೇದನಕ್ಕೆ ಅನುಮತಿ ನೀಡುವ ಬಗೆಗೆ ಮೌನವಾಗಿರುವುದು ಗಮನಾರ್ಹ. 1976ರಲ್ಲಿ ದಂಪತಿಗಳು ಒಂದು ವರುಷದವರೆವಿಗೆ ಬೇರೆ ಬೇರೆ ಜೀವಿಸುತ್ತಿದ್ದು ಪರಸ್ಪರ ಸಮ್ಮತಿಯ ಆಧಾರದ ಮೇಲೆ ವಿಚ್ಛೇದನ ಬಯಸಿದಾಗ ವಿಧಿ 13ಬಿ ಯಂತೆ ಅನುಮತಿ ನೀಡುವ ಅವಕಾಶವನ್ನು ಕಲ್ಪಿಸಲಾಯಿತು.

"ಸೇರ್ಪಡಿಸಲಾಗದ ಬಿರುಕಿನ ವಿವಾಹ" ಸಿದ್ಧಾಂತವು ಇತ್ತೀಚಿನದಾಗಿದ್ದು, ವಿವಾಹ ವಿಚ್ಛೇದನ ನೀಡಲು ಸಕಾರಣವೆಂದು ಹಲವಾರು ದೇಶಗಳು ಪರಿಗಣಿಸಿವೆ. ಈ ಸಿದ್ಧಾಂತದ ಆಧಾರದ ಮೇಲೆ ವಿವಾಹ ವಿಚ್ಛೇದನ ನೀಡುವ ವಿಧಿಯನ್ನು ಭಾರತದ ಶಾಸನ ಸಭೆಗಳು ಇನ್ನೂ ನಿರ್ಧರಿಸಬೇಕಾಗಿದೆ.

ಭಾರತದ ಕಾನೂನು ಆಯೋಗವು ತನ್ನ ಎಪ್ಪತ್ತೊಂದನೆ ವರದಿಯಂತೆ ಈಗಾಗಲೇ ಜಾರಿಯಲ್ಲಿರುವ 1955ರ ಹಿಂದೂ ವಿವಾಹ ಕಾಯ್ದೆಗೆ ಈ ಕೆಳಗಿನ ವಿಧಿಗಳನ್ನು ಸೇರಿಸುವಂತೆ ಶಿಫಾರಸ್ಸು ಮಾಡಿತ್ತು. ಅವೆಂದರೆ ವಿಧಿ 13ಸಿ, 13ಡಿ ಮತ್ತು 13ಇ. ಸೂಚಿಸಿರುವ 13ಸಿ ವಿಧಿಯ ಪ್ರಕಾರ ದಂಪತಿಗಳು ಕೊನೆಯ ಪಕ್ಷ ಮೂರು ವರುಷಗಳವರೆವಿಗೆ ಪ್ರತ್ಯೇಕವಾಗಿ ಜೀವನ ನಡೆಸಿದ್ದರೆ "ಸೇರ್ಪಡಿಸಲಾಗದ ಬಿರುಕಿನ ವಿವಾಹ" ಕಲ್ಪನೆಯ ಆಧಾರದಮೇಲೆ ವಿಚ್ಛೇದನಕ್ಕೆ ಅನುಮತಿ ನೀಡುವ ಅವಕಾಶ ಕಲ್ಪಿಸುತ್ತದೆ. ವಿಧಿ 13ಡಿ, ಹೆಂಡತಿಗೆ ಅನುಕೂಲಕರವಾಗಿದ್ದು ನ್ಯಾಯಾಲಯದಲ್ಲಿ ಪ್ರತಿವಾದಿ ಹೆಂಡತಿಯು ವಿಚ್ಛೇದನ ನೀಡುವುದರಿಂದ ತನಗೆ ಹಣಕಾಸಿನ ತೊಂದರೆಯಿಂದಾಗಿ ಜೀವನ ನಡೆಸುವುದೇ ಕಷ್ಟವಾಗುವುದೆಂಬುದನ್ನು ಶೃತಪಡಿಸಿದಾಗ ವಿಚ್ಛೇದನ ತಿರಸ್ಕರಿಸುವ ಹಕ್ಕನ್ನು ನ್ಯಾಯಾಲಯಕ್ಕೆ ನೀಡುತ್ತದೆ.

ಹಾಗೆಯೇ ಸೂಚಿಸಿರುವ ವಿಧಿ 13ಇ, ವಿವಾಹ ಮೂಲಕ ಜನಿಸಿರುವ ಅವಿವಾಹಿತ ಮತ್ತು ವಿಧವೆ ಹೆಣ್ಣುಮಕ್ಕಳಿಗೆ ಯಾವುದೇ ತೆರನ ಹಣಕಾಸು ಸೌಲಭ್ಯ ವಿರದೆ, ಜೀವನದ ಮೇಲ್ವಿಚಾರಣೆ ಅಸಾಧ್ಯವೆಂದು ಕಂಡುಬಂದಾಗ, ವಿಚ್ಛೇದನಕ್ಕೆ ಒಳಗಾಗುವ ದಂಪತಿಗಳಲ್ಲೊಬ್ಬರು ಈ ಮಕ್ಕಳ ಪಾಲನೆ-ಪೋಷಣೆಯನ್ನು ನಿರ್ವಹಿಸಬೇಕಾಗುತ್ತದೆ.

ಕೆ. ಮೊಹಮ್ಮದ್ ಶರೀಫ್

ಇಸ್ಲಾಂ ಧರ್ಮ—ಒಂದು ಅವಲೋಕನ

ಇಸ್ಲಾಂ ಜಗತ್ತಿನ ದೊಡ್ಡ ಧರ್ಮಗಳಲ್ಲಿ ಒಂದು. ಇದು ಮುಸ್ಲಿಮರ ಧರ್ಮಕ್ಕೆ ಇರುವ ಅರಬ್ಬೀ ಹೆಸರು. ಈ ಪದದ ಅರ್ಥ ಅಲ್ಲಾಹ್‌ನಿಗೆ (ದೇವನಿಗೆ) ಶರಣಾಗು ಅಥವ ವಿಧೇಯನಾಗು ಎಂದಿದೆ. ಈ ಪದದ ಇನ್ನೊಂದು ಅರ್ಥ 'ಶಾಂತಿ' ಎಂದಿದೆ. ಅಂದರೆ ದೈಹಿಕ ಹಾಗೂ ಮಾನಸಿಕ ಶಾಂತಿ ಎಂದರ್ಥ. ಈ ಪದವು 'ಸಿಲ್ಮ್' ಎಂಬ ಮೂಲ ಪದದಿಂದ ಉಂಟಾಗಿದ್ದು ಅಲ್ಲಾಹ್‌ನಿಗೆ ಅನನ್ಯ ಭಕ್ತಿಭಾವಗಳಿಂದ ಶರಣಾಗುವಿಕೆ, ಮೊರೆಹೋಗುವಿಕೆ, ಸರ್ವಾರ್ಪಣಾ ಭಾವವನ್ನು ಮನಸಾತೋರುವಿಕೆ ಎಂಬ ಅರ್ಥ ನೀಡುತ್ತದೆ.

ವಿಶ್ವದ ಅನೇಕ ಧರ್ಮಗಳು ಬಹುಮಟ್ಟಿಗೆ ಆ ಧರ್ಮದ ಸ್ಥಾಪಕನ ಅಥವ ಆ ಧರ್ಮದ ದೀಕ್ಷೆಪಡೆದ ಜನಾಂಗದ ಹೆಸರಿನಿಂದ ಕರೆಯಲ್ಪಡುತ್ತವೆ. ಆದರೆ ಇಸ್ಲಾಂ ಧರ್ಮ ಯಾವನೊಬ್ಬ ನಿರ್ದಿಷ್ಟ ವ್ಯಕ್ತಿಗೆ, ಜನಾಂಗಕ್ಕೆ ಅಥವ ದೇಶಕ್ಕೆ ಸೀಮಿತವಾದ ಧರ್ಮವಲ್ಲ. ಈ ಧರ್ಮದ ವ್ಯಾಪ್ತಿ ಬಹುದೊಡ್ಡದು. ಇದರ ನಿಜವಾದ ಸ್ಥಾಪಕ ಮೊಹಮ್ಮದ್ ಪೈಗಂಬರ್‌ರ (ಸ.ಅ.ಸ.) ಮಾತಿನಲ್ಲೇ ಹೇಳುವುದಾದರೆ ಪ್ರಥಮ ಪ್ರವಾದಿಯಾದ ಆದಂರ (ಅ) ಕಾಲದಿಂದಲೂ ಜಾರಿಯಲ್ಲಿದ್ದ ಮತಧರ್ಮಗಳಲ್ಲಿ ಅತ್ಯಂತ ಪ್ರಾಚೀನವೂ, ಸಂಪ್ರದಾಯಬದ್ಧವೂ ಆದ ಧರ್ಮವೆಂದರೆ 'ಇಸ್ಲಾಂ ಧರ್ಮ'. ಈ ಹೆಸರನ್ನು ಇಟ್ಟವರು ಆದಂ ಅವರ (ಅ) ನಂತರದ ಪ್ರವಾದಿಗಳಲ್ಲಿ ಒಬ್ಬರಾದ ಇಬ್ರಾಹೀಂ (ಅ) ಎಂದು ಮುಸ್ಲಿಮರ ಪವಿತ್ರ ಗ್ರಂಥವಾದ ಖುರಾನಿನಲ್ಲಿ ಹೇಳಿದೆ.

ಇಸ್ಲಾಂ ಧರ್ಮವು ಸತ್ವಪೂರ್ಣವೂ ಸತ್ಯಪೂರ್ಣವೂ ಆಗಿದೆ. ಸೃಷ್ಟಿಕರ್ತನೂ ಜಗದೊಡೆಯನೂ ಆದ ಅಲ್ಲಾಹ್‌ನು ಮನುಕುಲಕ್ಕೆ ಮಾರ್ಗದರ್ಶನ ರೂಪದಲ್ಲಿ ಅವತೀರ್ಣಗೊಳಿಸಿದ ಸಮಗ್ರ ಜೀವನ ಕ್ರಮವನ್ನು ಇಸ್ಲಾಂ ಒಳಗೊಂಡಿದೆ. ಇಸ್ಲಾಂ ಧರ್ಮದಲ್ಲಿ ಇತರ ಕೆಲವು ಧರ್ಮಗಳಲ್ಲಿರುವಂತೆ ಮುನಿಧರ್ಮ, ಗೃಹಸ್ಥಧರ್ಮ ಎಂಬ ವ್ಯತ್ಯಾಸವಿಲ್ಲ. ಇಸ್ಲಾಂ ಧರ್ಮದಲ್ಲಿ ಗುರುವರ್ಗವಿಲ್ಲ. ಸನ್ಯಾಸ ಜೀವನ ಇಸ್ಲಾಂ ನಂಬುವುದಿಲ್ಲ. ಆದುದರಿಂದ ಬ್ರಹ್ಮಚಾರಿಗಳಾಗಿ ಯಾರೂ ಉಳಿಯಬೇಕಾಗಿಲ್ಲ.

ಜೀವನದ ಸಿಹಿ-ಕಹಿಗಳನ್ನು ಉಣ್ಣುತ್ತ ಸದಾಚಾರದಿಂದ ಕೂಡಿದ ಗೃಹಸ್ಥ ಜೀವನವನ್ನು ಅದು ಮೆಚ್ಚುತ್ತದೆ. ಪುರುಷನಿಗೆ ಕುಟುಂಬದ ಮೇಲ್ವಿಚಾರಕನ ಸ್ಥಾನವನ್ನು ಇಸ್ಲಾಂ ನೀಡಿದೆ. ಕುಟುಂಬದ ಹಿರಿಯನೆನಿಸಿದ ಈತನ ಮೇಲೆ ಕೆಲವು ಹೊಣೆಗಳನ್ನು ಹೊರಿಸಿದೆ. ಜೀವನದ ನಿರ್ವಹಣೆಗೆ ಬೇಕಾದ ಧನಾರ್ಜನೆ ಮಾಡುವುದು, ಮನೆಯ ಹೊರಗಿನ ಎಲ್ಲಾ ಕೆಲಸಕಾರ್ಯಗಳನ್ನು ನಿರ್ವಹಿಸುವುದು ಇತ್ಯಾದಿ ಈತನ ಕರ್ತವ್ಯವೂ ಆಗಿದೆ. ಮನೆಯ ಒಳಗಿನ ಕೆಲಸಗಳ ಸರಿಯಾದ ನಿರ್ವಹಣೆ, ಮಕ್ಕಳ ಪಾಲನೆ ಇವು ಸ್ತ್ರೀಗೆ ನೀಡಲಾದ ಕೆಲಸ.

ಇಸ್ಲಾಂ ಧರ್ಮವು ವೈಯಕ್ತಿಕ, ಸಾಮಾಜಿಕ. ರಾಷ್ಟ್ರೀಯ, ಅಂತರರಾಷ್ಟ್ರೀಯ ರಂಗಗಳಿಗೆ ಅನ್ವಯಿಸುವ ಅನೇಕ ವಿಷಯಗಳನ್ನು ಬೋಧಿಸುತ್ತದೆ. ಸಮಗ್ರ ವಿಶ್ವವು ಏಕೈಕ ಪ್ರಭುವಿನಿಂದ ನಿರ್ಮಿತವಾಗಿದೆ. ಆ ಪ್ರಭುವೇ ಇಸ್ಲಾಂ ಹೆಸರಿಸುವ 'ಅಲ್ಲಾಹ್'. ಎಲ್ಲರ ಸೃಷ್ಟಿಕರ್ತನೂ ಒಬ್ಬನೇ 'ದೇವ.' ಮನುಕುಲವೆಲ್ಲ ಒಂದೇ ಕುಟುಂಬವಿದ್ದಂತೆ, ಕಾರಣ ಪರಸ್ಪರ ಯಾರೂ ದ್ವೇಷಿಸದಿರಿ. ಸಹಕಾರದೊಡನೆ ಬಾಳಿ. ಯಾರೂ ಜನಾಂಗದ್ವೇಷ ಮತ್ತು ಮಧ್ಯಪಾನ ಮಾಡಬಾರದು. ದೇವರು ಒಬ್ಬನೇ. ಅವನು ನಿರ್ವಿಕಾರಿ. ಅವನೇ ಎಲ್ಲರ ಎಲ್ಲಾ ವಸ್ತುಗಳ ಸೃಷ್ಟಿಕರ್ತ. ಅವನು ಸರ್ವಶಕ್ತ, ಸರ್ವರಕ್ಷಕ, ಸರ್ವವ್ಯಾಪಿ. ಅವನು ಸೃಷ್ಟಿಸಿದ ಎಲ್ಲಾ ಪ್ರಾಣಿಗಳನ್ನು ಪ್ರೀತಿಸಬೇಕು. ಪರಮತವನ್ನು ಅದರ ಸ್ಥಾಪಕರನ್ನು ಗೌರವಿಸಬೇಕು. ಎಲ್ಲರೂ ಸಮಾನರು, ಹಾಗೂ ಸಹೋದರರು. ಯಾರಲ್ಲೂ ಮೇಲು ಅಥವ ಕೀಳೆಂಬ ಭೇದವಿಲ್ಲ. ರಾಜ-ಮಂತ್ರಿ, ಬಲ್ಲಿದ-ಬಡವ, ಹೆಣ್ಣು-ಗಂಡು ಎಲ್ಲರೂ ದೇವರ ದೃಷ್ಟಿಯಲ್ಲಿ ಒಂದೇ. ಸುಳ್ಳು, ಮೋಸ, ಮಧ್ಯಪಾನ, ಜೂಜು ಇವೆಲ್ಲವನ್ನು ಪ್ರತಿಯೊಬ್ಬನೂ ತ್ಯಜಿಸಬೇಕು. ವಿದ್ಯಾವಂತರು ದೇವರ ಪ್ರತಿನಿಧಿಗಳಿದ್ದ ಹಾಗೆ—ಇವು ಮೊಹಮ್ಮದ್ ಪೈಗಂಬರರು (ಸ.ಅ.ಸ.) ಖುರಾನಿನ ಮೂಲಕ ಬೀರಿದ ಇಸ್ಲಾಂ ಸಂದೇಶದ ಸಾರಾಂಶ.

ಇಸ್ಲಾಂ ಪ್ರಪಂಚದಲ್ಲಿ ಏಷ್ಯಾ, ಆಫ್ರಿಕ ಮತ್ತು ಯೂರೋಪ್ ಖಂಡಗಳ ಅನೇಕ ಭಾಗಗಳಲ್ಲಿ ವಾಸಿಸುವ ಆರವತ್ತು ಕೋಟಿಗಿಂತಲೂ ಹೆಚ್ಚು ಜನರ ಮುಖ್ಯ ಧರ್ಮವಾಗಿದೆ. ಆಧುನಿಕ ಪ್ರಪಂಚದಲ್ಲಿ ಆಫ್ಘಾನಿಸ್ಥಾನ, ಅಲ್ಜೀರಿಯ, ಇರಾಕ್, ಇರಾನ್, ಇಂಡೋನೇಷ್ಯ, ಈಜಿಪ್ಟ, ತುರ್ಕಿ, ಟ್ಯುನೀಷಿಯ, ಪಾಕಿಸ್ತಾನ, ಬಂಗ್ಲಾದೇಶ, ಮೊರಾಕೊ, ಲಿಬಿಯ, ಸಿರಿಯ, ಸೌದಿ ಅರೇಬಿಯ ಮುಂತಾದವು ಮುಖ್ಯ ಮುಸ್ಲಿಂ ರಾಷ್ಟ್ರಗಳು. ಇವಲ್ಲದೆ ಮುಸ್ಲಿಮರು ಆಫ್ರಿಕ, ಚೀನ, ಫಿಲಿಪ್ಪೈನ್ಸ್, ಭಾರತ, ಯುಗೋಸ್ಲಾವಿಯ, ಲೆಬನಾನ್, ಸೋವಿಯತ್ ಮುಂತಾದ ದೇಶಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಇದ್ದಾರೆ.

ಇಸ್ಲಾಂ ಧರ್ಮದ ಪಾರಮಾರ್ಥಿಕ ಸ್ವರೂಪವು ಮೂಲಭೂತವಾಗಿ ಐದು ತತ್ವಗಳ (ಸಿದ್ಧಾಂತಗಳ) ಮೇಲೆ ಆಧಾರಿತವಾಗಿದೆ. ಪ್ರತಿಯೊಬ್ಬ ಮುಸ್ಲಿಮನಿಗೂ

ಇವು ಬಹಳ ಮುಖ್ಯವಾದುವು. ಅವುಗಳಾವುವೆಂದರೆ 1. ಈಮಾನ್ 2. ನಮಾಜ್ 3. ರೋಜಾ 4. ಜಕಾತ್ ಮತ್ತು 5. ಹಜ್.

೧. ಈಮಾನ್

ಈಮಾನ್ ಅಂದರೆ ಅರಿವು (ಜ್ಞಾನ), ನಂಬಿಗೆ ಅಥವಾ ವಿಶ್ವಾಸ; ದೇವರಲ್ಲಿ ವಿಶ್ವಾಸ ತೋರುವುದು ಎಂದರ್ಥ. ಪ್ರತಿಯೊಬ್ಬ ಮುಸ್ಲಿಮನು ದೇವರಲ್ಲಿ ವಿಶ್ವಾಸವನ್ನಿಡಬೇಕು. ಸತ್ಯ ವಿಶ್ವಾಸವಿಲ್ಲದೆ ಯಾರೂ ನೈಜ ಮುಸಲ್ಮಾನನಾಗಲಾರ. ಬೀಜವಿಲ್ಲದೆ ಗಿಡಬೆಳೆಯದಂತೆ ಈಮಾನ್ ಇಲ್ಲದೆ ಇಸ್ಲಾಂ ಬೆಳೆಯಲಾರದು. ಈಮಾನ್ ಇಲ್ಲದೆ ಇಸ್ಲಾಂ ಇಲ್ಲ. ಇದು ಐದು ವಿಧ.

ಈಮಾನ್ ಅಥವಾ ವಿಶ್ವಾಸದಲ್ಲಿ ಮೊದಲನೆಯದೇ ಏಕದೇವನಲ್ಲಿ ವಿಶ್ವಾಸ. "ಲಾ–ಇಲಾಹ–ಇಲ್ಲಲ್ಲಾಹು...." ಅಂದರೆ ಅಲ್ಲಾಹ್‌ನೊಬ್ಬನೇ ಆರಾಧನೆಗೆ ಯೋಗ್ಯನಾದವನು. ಈ ಮಾತಿನಲ್ಲಿ ವಿಶ್ವಾಸವುಳ್ಳವನೇ ಮುಸಲ್ಮಾನ. ಇದುವೇ ಪ್ರವಾದಿ ಮೊಹಮ್ಮದ್ (ಸ.ಅ.ಸ.)ರ ಮೂಲಭೂತ ಹಾಗೂ ಅತ್ಯಂತ ಪ್ರಮುಖವಾದ ಬೋಧನೆ. ಇದುವೇ ಇಸ್ಲಾಮಿನ ಜೀವಾಳ. ದೇವರ ಅಸ್ತಿತ್ವದಲ್ಲಿ ಅಚಲ ಶ್ರದ್ಧೆ ಇರಬೇಕಾದುದು ಪ್ರತಿಯೊಬ್ಬ ಮುಸ್ಲಿಮನಲ್ಲಿರಬೇಕಾದ ಪ್ರಾಥಮಿಕ ಅವಶ್ಯಕತೆ.

ಎರಡನೆಯದು ಮಲಕ್ ಅಥವ ದೇವದೂತರಲ್ಲಿ ವಿಶ್ವಾಸ. ಈ ದೇವದೂತರನ್ನು ಅಲ್ಲಾಹ್‌ನು ಜ್ಯೋತಿ (ಬೆಳಕು)ಯಿಂದ ಸೃಷ್ಟಿಸಿದ್ದಾನೆ. ಅವರಲ್ಲಿ ಪ್ರಸಿದ್ಧರು ನಾಲ್ವರು: ಹ|| ಜಿಬ್ರಾಯಿಲ್ (ಅ) ಅವರು ಅಲ್ಲಾಹ್‌ನ ಆಜ್ಞೆ, ಅಪ್ಪಣೆಗಳನ್ನು ಸಂದೇಶಗಳನ್ನು ಗ್ರಂಥಗಳನ್ನು ಎಲ್ಲಾ ಪ್ರವಾದಿಗಳ ಬಳಿ ಕೊಂಡೊಯ್ಯುತ್ತಿದ್ದರು. ಹ|| ಇಸ್ರಾಫೀಲ್ (ಅ) ಅವರು ನಿರ್ಣಾಯಕ ದಿನದಂದು ಸೂರ್ ಅಥವ ಕಹಳೆ ಊದುವವರು. ಹ|| ಮಿಕಾಈಲ್ (ಅ) ಅವರು ಮಳೆಯನ್ನು ಬರಿಸುವವರು ಹಾಗೂ ದೇವರು ಸೃಷ್ಟಿಸಿದ ಎಲ್ಲ ಜೀವಿಗಳಿಗೂ ಆಹಾರವನ್ನೊದಗಿಸುವವರು ಮತ್ತು ಹ|| ಇಝ್ರಾಈಲ್ (ಅ) ಅವರು ಜೀವಿಗಳ ಪ್ರಾಣ ತೆಗೆಯುವವರು. ಪ್ರತಿಯೊಬ್ಬ ಮುಸ್ಲಿಮನು ಇವರಲ್ಲಿ ವಿಶ್ವಾಸವನ್ನಿಡಬೇಕಾದುದು ಆವಶ್ಯಕ.

ಪ್ರತಿಯೊಬ್ಬ ಮುಸ್ಲಿಮನು ದೇವರು ಕರುಣಿಸಿದ ಧರ್ಮಗ್ರಂಥಗಳಲ್ಲಿ ವಿಶ್ವಾಸವನ್ನಿಡಬೇಕಾದುದು ಮೂರನೆಯದು. ಅವುಗಳಲ್ಲಿ ತೌರಾತ್ ಹ|| ಮೂಸ (ಅ) ಅವರ ಮೇಲೆ ಅವತೀರ್ಣವಾದ ಗ್ರಂಥ (ಯಹೂದಿಗಳ ಗ್ರಂಥ), ಝಬೂರ್ ಹ|| ದಾವೂದ್ (ಅ) ಅವರ ಮೇಲೆ ಅವತೀರ್ಣವಾದ ಗ್ರಂಥ, ಇಂಜಿಲ್ ಹ|| ಈಸಾ (ಅ) ಅವರ ಮೇಲೆ ಅವತೀರ್ಣವಾದ ಗ್ರಂಥ (ಕ್ರೈಸ್ತಿಯನ್ನರ ಗ್ರಂಥ) ಮತ್ತು ಖುರಾನ್ ಹ|| ಮೊಹಮ್ಮದ್ (ಸ.ಅ.ಸ.) ಅವರ ಮೇಲೆ ಅವತೀರ್ಣವಾದ ಗ್ರಂಥ (ಮುಸ್ಲಿಮರ ಗ್ರಂಥ) ಮುಖ್ಯವಾದುವು. ಈ ಗ್ರಂಥಗಳು ಮೊದಲು ದೇವದೂತರ ಮುಖಾಂತರ

ಪ್ರವಾದಿಗಳ ಮೇಲೆ ಅವತೀರ್ಣವಾಗಿ ನಂತರ ಜನರಿಗೆ ತಲುಪಿದುವು. ಇವುಗಳಲ್ಲಿ ವಿಶ್ವಾಸವನ್ನಿಡುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ.

ನಾಲ್ಕನೆಯದು ದೇವನು ಕಳುಹಿಸಿದ ಪ್ರವಾದಿಗಳಲ್ಲಿ ವಿಶ್ವಾಸ ಇಡುವುದು. ಇಸ್ಲಾಂ ಧರ್ಮದ ಮೂಲಭೂತ ಸಿದ್ಧಾಂತಗಳಲ್ಲಿ ಇದು ಎರಡನೆಯದು. ಇಲ್ಲಿಯ ವರೆಗೆ ದೇವರು ಜನರ ಕಲ್ಯಾಣಕ್ಕಾಗಿ ಒಂದು ಲಕ್ಷ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳನ್ನು ಈ ಭೂಲೋಕಕ್ಕೆ ಕಳುಹಿಸಿದ್ದಾನೆ. ಅವರಲ್ಲಿ ಪ್ರಥಮ ಪ್ರವಾದಿ ಆದಂ (ಅ) ಮತ್ತು ಕೊನೆಯ ಪ್ರವಾದಿ ಮೊಹಮ್ಮದ್ (ಸ.ಅ.ಸ.). "ಮೊಹಮ್ಮದರ್ರಸೂಲಿಲ್ಲಾಹಿ" ಅಂದರೆ ಮೊಹಮ್ಮದರು ದೇವರು ಕಳುಹಿಸಿದ ಪ್ರವಾದಿ. ಇವರ ಪ್ರವಾದಿತ್ವದಲ್ಲಿ ವಿಶ್ವಾಸವಿರಿಸುವುದು ಹಾಗೂ ಅವರ ಆದೇಶ ಮತ್ತು ಆದರ್ಶಗಳನ್ನು ಅನುಸರಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ.

ಮರಣೋತ್ತರ ಜೀವನದಲ್ಲಿ ವಿಶ್ವಾಸವನ್ನಿಡುವುದು ಐದನೆಯದು ಮತ್ತು ಕೊನೆಯದು. ಮರಣೋತ್ತರ ಜೀವನದಲ್ಲಿ ಮತ್ತು ನಿರ್ಣಾಯಕ ದಿನದಂದು ಮನುಷ್ಯನು ತಾನು ಇಹಜೀವನದಲ್ಲಿ ಮಾಡಿದ ಕೆಲಸಕಾರ್ಯಗಳಿಗಾಗಿ ಫಲಾಫಲಗಳನ್ನು ಪಡೆಯುಲಿರುವನೆಂಬ ಸಂಗತಿಯಲ್ಲಿ ವಿಶ್ವಾಸ. ಮೊಹರಂ ತಿಂಗಳ ಹತ್ತನೆಯದಿವಸ ಶುಕ್ರವಾರದಂದು ಪ್ರಪಂಚವು ಪ್ರಳಯವಾಗುತ್ತದೆ. ಆಗ ಸರ್ವನಾಶವಾಗುತ್ತದೆ. ಸತ್ತು ಹೋದ ಎಲ್ಲರಿಗೂ ದೇವರು ಜೀವಕೊಡುತ್ತಾನೆ ದೇವರು ಆ ನಿರ್ಣಾಯಕ ದಿನದಂದು ನ್ಯಾಯವಾದಿಯ ಸ್ಥಾನದಲ್ಲಿದ್ದು ಅವರವರ ಕರ್ಮಗಳಿಗನುಸಾರ ಸ್ವರ್ಗ ಹಾಗೂ ನರಕಗಳಿಗೆ ಕಳುಹಿಸುವನು ಎಂಬ ವಿಷಯದ ಬಗ್ಗೆ ವಿಶ್ವಾಸವನ್ನು ಪ್ರತಿಯೊಬ್ಬ ಮುಸ್ಲಿಮನು ಇಡಬೇಕು.

ಈ ಐದು ವಿಚಾರಗಳಲ್ಲಿ ವಿಶ್ವಾಸವಿಡಬೇಕೆಂದು ಪ್ರವಾದಿ ಮೊಹಮ್ಮದರು (ಸ.ಅ.ಸ.) ಆದೇಶವಿತ್ತಿದ್ದಾರೆ. ಈ ಎಲ್ಲ ವಿಶ್ವಾಸಗಳೂ ತರ್ಕಬದ್ಧವೆನಿಸಿವೆ.

೨. ನಮಾಜ್

ನಮಾಜ್ ಅಂದರೆ ಪ್ರಾರ್ಥನೆ. ಯಾವ ರೀತಿಯಲ್ಲಿ ಹಿಂದುಗಳಲ್ಲಿ ದೇವರ ಭಕ್ತಿಗಾಗಿ ಪೂಜೆ, ಭಜನೆ, ಕೀರ್ತನೆ, ಜಪ-ತಪ, ಸಾಮೂಹಿಕ ಪ್ರಾರ್ಥನೆ ಇತ್ಯಾದಿ ಮಾರ್ಗಗಳಿವೆಯೋ ಅದೇ ರೀತಿಯಲ್ಲಿ ಮುಸ್ಲಿಮರಲ್ಲಿ ನಮಾಜ್ ಮಾಡುವುದು ಒಂದು ಅನಿವಾರ್ಯ ಭಕ್ತಿಮಾರ್ಗ. ದೇವರು ನಮಗೆ ಗಾಳಿ, ಬೆಳಕು, ನೀರು, ಆಹಾರ, ವಸತಿ ಇತ್ಯಾದಿ ಅವಶ್ಯಕತೆಗಳನ್ನು ಪೂರೈಸಿದ್ದಾನೆ. ತನ್ನ ಅವಶ್ಯಕತೆಗಳನ್ನೆಲ್ಲಾ ಪೂರೈಸಿದ ದೇವರಿಗೆ ಮನುಷ್ಯನು ಕೃತಜ್ಞತಾಪೂರ್ವಕವಾಗಿ ಸಲ್ಲಿಸುವ ನಮನವೇ ನಮಾಜ್. ಪ್ರತಿಯೊಬ್ಬ ಮುಸ್ಲಿಮನು ದಿನಕ್ಕೆ ಐದು ಬಾರಿ ಪ್ರಾರ್ಥನೆಯನ್ನು ಮಾಡಬೇಕು. ಈ ಪ್ರಾರ್ಥನೆಗೆ ಶರೀರದ, ಉಡುಪಿನ ಮತ್ತು ಸ್ಥಳದ ಪರಿಶುದ್ಧತೆ ಅವಶ್ಯಕ. ಪ್ರತಿದಿನ ಆಗಾಗ್ಗೆ ಮಾಡುವ ಈ ಪ್ರಾರ್ಥನೆಗಳು ವ್ಯಾವಹಾರಿಕ ಚಟು

ವಟಿಕೆಗಳ ಗೊಂದಲದಲ್ಲಿ ನಮ್ಮ ಜೀವನದ ಧ್ಯೇಯೋದ್ದೇಶಗಳೇ ಮರೆತುಹೋಗದಂತೆ ಎಚ್ಚರಿಕೆ ನೀಡುತ್ತವೆ. ಪ್ರತಿದಿನವೂ ಐದುಸಲ ಮಸೀದಿಗಳಲ್ಲಿ ಮುಸ್ಲಿಮರು ನವಾಜ್ ಮಾಡಲು ಸೇರುತ್ತಾರೆ. ಇದರಿಂದ ಪರಸ್ಪರ ಪ್ರೇಮ ಮತ್ತು ಐಕ್ಯಭಾವನೆ ಉಂಟಾಗುತ್ತದೆ. ಬಡವ–ಬಲ್ಲಿದ, ಉಚ್ಚ–ನೀಚ, ಒಡೆಯ–ಸೇವಕ, ಕಪ್ಪು–ಬಿಳಿಯರೆಂಬ ಯಾವುದೇ ವಿಧದ ತಾರತಮ್ಯವಿಲ್ಲದೆ ಭುಜಕ್ಕೆ ಭುಜ ಹಚ್ಚಿ ಏಕ ಕಾಲದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದರಿಂದ ನಮ್ಮಲ್ಲಿ ಪರಸ್ಪರ ಸಮಾನತೆ ಮತ್ತು ಆಳವಾದ ಭ್ರಾತೃಭಾವನೆ ಉಂಟಾಗುತ್ತದೆ. ಪ್ರಾರ್ಥನೆ ಮುಸ್ಲಿಮನಿಗೆ ಮರಣದ ಭಯ, ಪುನರುತ್ಥಾನದ ದಿವಸ ದೇವರ ಮುಂದೆ ಹೋಗಿ ನಿಲ್ಲುವ ಭಯ ಮುಂತಾದ ಭಯಗಳನ್ನು ತೊಲಗಿಸುತ್ತದೆ. ಖುರಾನ್ ಹೀಗೆ ಹೇಳುತ್ತದೆ: ಪ್ರಾರ್ಥನೆ ಮುಸ್ಲಿಮನನ್ನು ದೇಹದಲ್ಲಿ ಮತ್ತು ಆತ್ಮದಲ್ಲಿ ಕ್ಲುಪ್ತನನ್ನಾಗಿ, ವ್ಯವಸ್ಥಿತನನ್ನಾಗಿ, ಸ್ವಸ್ಥ ಹಾಗೂ ಶುದ್ಧನನ್ನಾಗಿ ಇರಿಸುವ ಆಧ್ಯಾತ್ಮಿಕ ಸಾಧನ. ದೊಡ್ಡವನಿರಲಿ ಸಣ್ಣವನಿರಲಿ, ಧನಿಕನಿರಲಿ ದರಿದ್ರನಿರಲಿ, ದೊರೆಗಳಾಗಲಿ ಪ್ರಜೆಗಳಾಗಲಿ ಎಲ್ಲ ಮುಸ್ಲಿಮರು ಧರ್ಮದ ಕಾರ್ಯದಲ್ಲಿ ಸಮಾನರು. ಇಸ್ಲಾಂ ಧರ್ಮದಲ್ಲಿ ಪ್ರತಿಯೊಬ್ಬ ಮುಸ್ಲಿಮನು ದಿನಕ್ಕೈದುಸಾರಿ ಪ್ರಾರ್ಥನೆ ಮಾಡುವುದು ಕಡ್ಡಾಯವೂ ಮತ್ತು ಕರ್ತವ್ಯವೂ ಆಗಿದೆ.

೩. ರೋಜಾ

ರೋಜಾ ಅಂದರೆ ಉಪವಾಸವ್ರತ. ರಂಜಾನ್ ತಿಂಗಳಲ್ಲಿ ಮೂವತ್ತು ದಿವಸಗಳ ಉಪವಾಸಾಚರಣೆ ಮುಸ್ಲಿಮರ ಮೂಲಭೂತ ಕರ್ತವ್ಯಗಳಲ್ಲಿ ಒಂದು. "ಸತ್ಯ ವಿಶ್ವಾಸಿಗಳೇ ನಿಮ್ಮ ಪೂರ್ವಜರಮೇಲೆ ಕಡ್ಡಾಯಗೊಳಿಸಿದಂತೆ ನಿಮ್ಮ ಮೇಲೂ ಉಪವಾಸಾಚರಣೆಯನ್ನು ಕಡ್ಡಾಯಗೊಳಿಸಲಾಗಿದೆ. ನೀವು ದೇವರ ಭಕ್ತರಾಗಬೇಕೆಂದು ಹೀಗೆ ಮಾಡಿದೆ" ಎನ್ನುತ್ತದೆ ಪವಿತ್ರ ಖುರಾನ್. ಉಪವಾಸದ ಮಹತ್ವವನ್ನು ಯಾವ ಮುಸ್ಲಿಮನೂ ನಿರಾಕರಿಸಲು ಸಾಧ್ಯವಿಲ್ಲ. ನಿರಾಕರಿಸುವವರು ಮುಸ್ಲಿಮರಾಗಿ ಉಳಿಯುವುದಿಲ್ಲ ಇದು ಇಸ್ಲಾಮಿನ ಇತಿಹಾಸದ ಉದ್ದಕ್ಕೂ ಕಂಡು ಬಂದಿರುವ ಒಂದು ವಾಸ್ತವ ಸಂಗತಿ. ಒಂದು ತಿಂಗಳಲ್ಲಿ ಮುಸ್ಲಿಮರು ಸಹಿಸುವ ಕಷ್ಟ ಯಾತನೆಗಳಿಂದ ಜೀವನದ ಕಠಿಣತೆಯ ಅರಿವಾಗಿ ಇತರ ತಿಂಗಳುಗಳಲ್ಲಿಯೂ ಸರಳ ಜೀವನದೊಂದಿಗೆ ದೇವರ ಸ್ವೈಜ ಇಚ್ಛೆಗನುಗುಣವಾಗಿ ಬಾಳುವಂತಹ ರೂಢಿಉಂಟಾಗುತ್ತದೆ. ದುರಭ್ಯಾಸಗಳು ಕಡಿಮೆಯಾಗುತ್ತವೆ ಮಾಡಿದ ಪಾಪಗಳು ಕ್ಷಮಿಸಲ್ಪಡುತ್ತವೆ. ಧನಿಕ ಬಡವ ಪ್ರತಿಯೊಬ್ಬನು ಒಂದೇ ರೀತಿಯಲ್ಲಿ ಉಪವಾಸ ವ್ರತವನ್ನಾಚರಿಸುವುದರಿಂದ ಪರಸ್ಪರ ಸಮಾನತೆ, ಪ್ರೀತಿ, ವಾತ್ಸಲ್ಯ ಹಾಗೂ ಬಾಂಧವ್ಯಗಳು ಬೆಳೆಯಲು ಅನುಕೂಲವಾಗುತ್ತದೆ. ಬಡವರ ಕಷ್ಟದ ಅರಿವಾಗಿ ಅವರಿಗೆ ಸಹಾಯಮಾಡುವ ಮನೋಭಾವ ಶ್ರೀಮಂತರಲ್ಲಿ ಬೆಳೆಯುತ್ತದೆ. ಉಪವಾಸ ವ್ರತವು ಅನೇಕ ರೋಗ

ರುಜಿನುಗಳ ನಿವಾರಣೆಗೆ ಒಳ್ಳೆಯದೆಂದು ಹಲವು ತಜ್ಞವೈದ್ಯರ ಅಭಿಪ್ರಾಯ. ವ್ಯಕ್ತಿಗೆ ಉಪವಾಸ ವ್ರತವು ದೈವಭಕ್ತಿಯನ್ನು ಸದಾ ಜಾಗೃತವಿಡುವಲ್ಲಿ ಸಹಾಯಕವಾಗಿದೆ. ಉಪವಾಸವ್ರತವು ಉಪವಾಸಿಗನಿಗೆ ಪ್ರಾಮಾಣಿಕತೆಯನ್ನು ಕಲಿಸುತ್ತದೆ. ಸತ್ಕರ್ಮಗಳ ಒಲವನ್ನು ಬೆಳಸುತ್ತದೆ. ವ್ಯಕ್ತಿಯಲ್ಲಿ ತಾಳ್ಮೆ ಮತ್ತು ಔದಾರ್ಯದ ಗುಣಗಳನ್ನು ಬೆಳಸುತ್ತದೆ. ದೇವನ ದೃಷ್ಟಿಯಲ್ಲಿ ಮನುಷ್ಯರೆಲ್ಲರೂ ಸಂಪೂರ್ಣ ಸಮಾನರೆಂಬ ಪ್ರಜ್ಞೆಯನ್ನು ಬೆಳಸುತ್ತದೆ ಮತ್ತು ಸಾಮಾಜಿಕ ಬಾಂಧವ್ಯ ಬೆಳಸುವಲ್ಲಿ ಬಹಳ ಪರಿಣಾಮಕಾರಿ ಪಾತ್ರವಹಿಸುತ್ತದೆ. ಇದರಿಂದ ಪ್ರತಿಯೊಬ್ಬ ಮುಸ್ಲಿಮನಿಗೂ (ವ್ಯಕ್ತಿಗೂ) ಇದರ ಮಹತ್ವಗಳೇನೆಂದು ತಿಳಿಯುತ್ತದೆ.

೪. ಜಕಾತ್

ಜಕಾತ್ ಎಂಬುದು ಒಂದು ಬಗೆಯ ದಾನ. ಇದರ ಉದ್ದೇಶ ಸಾಮಾಜಿಕ ಸೇವೆ. ದಲಿತರ ಉದ್ಧಾರಕ್ಕಾಗಿ ಕೊಡಬೇಕಾದ ಕಡ್ಡಾಯ ಶುಲ್ಕ. ವಾರ್ಷಿಕ ಉಳಿತಾಯದಲ್ಲಿ ನಲವತ್ತನೇ ಒಂದಂಶ ಅಂದರೆ ಶೇಕಡ ಎರಡುವರೆ ಭಾಗವನ್ನು ದೀನದಲಿತರ, ದುರ್ಬಲರ, ಅಂಗವಿಕಲರ, ಅಬಲೆಯರ, ಅನಾಥರ, ವಿಧವೆಯರ ಸಹಾಯಾರ್ಥ ನೀಡುವ ಶುಲ್ಕವೇ ಜಕಾತ್. ಹೀಗೆ ನೀಡುವುದರಿಂದ ನೀಡಿದ ವ್ಯಕ್ತಿ ಹಗಲೂರಾತ್ರಿ ನಮಾಜ್ ಮಾಡಿದವರಂತೆ, ಅನುದಿನವೂ ಉಪವಾಸವ್ರತ ಕೈಗೊಂಡವರಂತೆ, ದೇವರ ಆದೇಶದಂತೆ ಸಕಲ ಸಂಪತ್ತನ್ನು ಸತ್ಕಾರ್ಯದಲ್ಲಿ ತೊಡಗಿಸಿದವರಂತೆ ಸತ್ಫಲಕ್ಕೆ ಅರ್ಹನಾಗುತ್ತಾನೆ ಎಂಬುದಾಗಿ ಪ್ರವಾದಿಯವರು ನುಡಿದಿದ್ದಾರೆ. ಸ್ವಾರ್ಥ ಹಾಗೂ ಧನದ ಆರಾಧನೆಗಳನ್ನು ತೊರೆದು ತ್ಯಾಗಮನೋಭಾವವನ್ನು ಬೆಳೆಸುವುದೇ ಜಕಾತ್‌ನ ವೈಶಿಷ್ಟ್ಯ ಮತ್ತು ಮಹತ್ವ. ಇದರಿಂದ ಅನೇಕರಿಗೆ ಆರ್ಥಿಕ ನೆರವು ಸಿಗುತ್ತದೆ. ಇದರಿಂದ ಶ್ರೀಮಂತರ ಒಂದಿಷ್ಟು ಹಣ ಸತ್ಕಾರ್ಯಕ್ಕೆ ತನ್ಮೂಲಕ ಬಡವರ ನೆರವಿಗೆ ಉಪಯೋಗಿಸಿದಂತಾಗುತ್ತದೆ. ವಾರ್ಷಿಕ ಉಳಿತಾಯದಲ್ಲಿ ಪ್ರತಿಯೊಬ್ಬ ಮುಸ್ಲಿಮನಿಗೂ ಜಕಾತ್ ಕಡ್ಡಾಯವಾಗಿದೆ.

೫. ಹಜ್

ಹಜ್ ಅಂದರೆ ಅರೇಬಿಯಾದ ಮಕ್ಕಾನಗರದಲ್ಲಿರುವ 'ಕಾಬಾ' ಮಂದಿರದ ದರ್ಶನ. ಮದಿನಾನಗರದಲ್ಲಿರುವ (ಕಾಬಾದಿಂದ ಸು. 250 ಮೈಲುಗಳಷ್ಟು ದೂರ) ಅಂತ್ಯ ಪ್ರವಾದಿಗಳ ಗೋರಿಗಳ ದರ್ಶನಮಾಡಿ ವಿಧಿವತ್ತಾದ ಪ್ರಾರ್ಥನೆಯನ್ನು ಸಲ್ಲಿಸುವುದೇ ಹಜ್ ಯಾತ್ರೆ. ಯಾವರೀತಿಯಲ್ಲಿ ಕಾಶಿ, ರಾಮೇಶ್ವರ, ದ್ವಾರಕಾ ಇತ್ಯಾದಿ ತೀರ್ಥಕ್ಷೇತ್ರಗಳ ಯಾತ್ರೆ ಮಾಡುವುದು ಹಿಂದುಗಳಲ್ಲಿ ಪುಣ್ಯಪ್ರದವೆಂದು ಭಾವಿಸಲಾಗಿದೆಯೋ, ಜೈನರಲ್ಲಿ ತೀರ್ಥಂಕರರ ಕ್ಷೇತ್ರಗಳು, ಬೌದ್ಧರಲ್ಲಿ ಬುದ್ಧನಿಗೆ ಸಂಬಂಧಪಟ್ಟ ಸ್ಥಳಗಳು ಪವಿತ್ರವಾಗಿವೆಯೋ ಅದೇ ರೀತಿಯಲ್ಲಿ ಮುಸ್ಲಿಮರಲ್ಲಿ ತನ್ನ ಜೀವಿತದಲ್ಲಿ ಒಂದು ಬಾರಿಯಾದರೂ ಮಕ್ಕಾಯಾತ್ರೆ ಮಾಡಿದವನು ಪುಣ್ಯವಂತನೆಂದು

ನಂಬಿಕೆ. ಮಕ್ಕಾನಗರದ ಕಾಬಾಮಂದಿರವನ್ನು ಇಸ್ಲಾಂನ ಪ್ರವಾದಿಗಳಲ್ಲೊಬ್ಬರಾದ ಇಬ್ರಾಹಿಂ (ಅ) ಮತ್ತು ಅವರ ಮಗ ಇಸ್ಮಾಯಿಲ್ (ಅ) ಅವರು ಅಲ್ಲಾಹ್‌ನ ಆಜ್ಞೆಯನುಸಾರ ಪ್ರಾರ್ಥನೆಗೋಸ್ಕರ ಕಟ್ಟಿದರು. ಅನುಕೂಲವಿದ್ದ ಪ್ರತಿಯೊಬ್ಬ ಮುಸ್ಲಿಮನೂ ಜೀವನದಲ್ಲಿ ಒಂದು ಸಾರಿಯಾದರೂ ಹಜ್‌ಯಾತ್ರೆ ಮಾಡಬೇಕು. ಹೀಗೆ ಹಜ್‌ಯಾತ್ರೆ ಮಾಡಿದ ಮುಸ್ಲಿಮನಿಗೆ ಹಾಜಿ ಎಂದು ಕರೆಯುತ್ತಾರೆ. ವಿಶ್ವದ ನಾನಾಭಾಗಗಳಿಂದ ಜನರು ಇಲ್ಲಿ ಬಂದು ಒಂದೇ ಕಡೆ ಪ್ರಾರ್ಥನೆಗೆ ಪಾಲ್ಗೊಳ್ಳುವುದ ರಿಂದ 'ವಿಶ್ವಮಾನವ ಬಾಂಧವ್ಯಕ್ಕೆ' ಸಹಾಯವಾಗುತ್ತದೆ. ಇದು ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಲ್ಲದಿದ್ದರೂ ಶ್ರೀಮಂತರು ಹಾಗೂ ಆರೋಗ್ಯವಂತರಿಗೆ ಇದು ಅನಿವಾರ್ಯ.

ಪ್ರತಿಯೊಬ್ಬ ಮುಸ್ಲಿಮನ ಜೀವನವನ್ನು ನಡೆಸುವ ಪ್ರೇರಕ ಶಕ್ತಿಗಳು ಎರಡು. ಒಂದು ಆತನ ಮತಧರ್ಮಶಾಸ್ತ್ರ, ಇನ್ನೊಂದು ನ್ಯಾಯಶಾಸ್ತ್ರ. ಅವನ ಶ್ರದ್ಧೆ, ನಂಬಿಕೆ ಗಳಿಗೆ ಮತಧರ್ಮಶಾಸ್ತ್ರ ಮೂಲ. ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬುದನ್ನು ನಿರ್ಣಯಿಸುವುದು ನ್ಯಾಯ. ನ್ಯಾಯದ ಅಡಿಗಲ್ಲಿನ ಮೇಲೆಯೇ ಮುಸ್ಲಿಮನ ವ್ಯಕ್ತಿತ್ವ ಬೆಳೆಯುತ್ತದೆ. ನ್ಯಾಯಸೂತ್ರಕ್ಕೆ ತುಂಬಾ ಪ್ರಾಧಾನ್ಯ ಈ ಧರ್ಮದಲ್ಲಿ ಉಂಟು. ಇಸ್ಲಾಮಿನ ನ್ಯಾಯದ ಮೂಲ ಆಧಾರಗಳೆಂದರೆ ಖುರಾನ್, ಹದೀಸ್, ಸುನ್ನಾ, ಇಜ್ಮಾ ಮತ್ತು ಕಿಯಾಸ್.

ಪ್ರತಿಯೊಬ್ಬ ಮುಸ್ಲಿಮನು ತನ್ನ ಪಾಲಿನ ಆರಾಧನಾ ಕಾರ್ಯಗಳನ್ನು ತಾನೇ ಪೂರೈಸಬೇಕಾಗುತ್ತದೆ. ಜೀವನದ ಆಸೆ–ಆಮಿಷಗಳನ್ನು ಯಥಾಶಕ್ತಿ ನಿಗ್ರಹಿಸಿ ನಿರಾಡಂಬರ ರೀತಿಯಲ್ಲಿ ಧರ್ಮಸಮ್ಮತವಾಗಿ ಬಾಳುವ ಮೂಲಕ ಆಧ್ಯಾತ್ಮಿಕ ಹೆಗ್ಗಳಿಕೆಯನ್ನು ಗಳಿಸಬೇಕೆಂದು ಪ್ರತಿಯೊಬ್ಬ ಮುಸ್ಲಿಮನಿಗೆ ಇಸ್ಲಾಂ ತಿಳಿಸುತ್ತದೆ.

ಇಸ್ಲಾಂ ಕೇವಲ ಮನುಷ್ಯನ ಆಧ್ಯಾತ್ಮಿಕ ದಾಹ ತಣಿಸಲು ಪ್ರಯತ್ನಿಸುವ ಧರ್ಮವಲ್ಲ. ಅದು ಮನುಷ್ಯನ ಸಾಮಾಜಿಕ, ಆರ್ಥಿಕ, ರಾಜಕೀಯ, ಮಾನಸಿಕ ಇತ್ಯಾದಿ ಎಲ್ಲ ಕ್ಷೇತ್ರಗಳ ಸರ್ವಾಂಗೀಣ ಅಭ್ಯುದಯದ ಧ್ಯೇಯ ಹೊಂದಿದೆ. ಅಂತೆಯೇ ಇಸ್ಲಾಂ ಧರ್ಮದಲ್ಲಿ ಕಡ್ಡಾಯಗೊಳಿಸಿರುವ ಆರಾಧನೆಗಳಲ್ಲೂ ನಾವು ಈ ಸಮಗ್ರತೆಯನ್ನು ಮತ್ತು ಸರ್ವಾಂಗೀಣ ಪ್ರಭಾವಗಳನ್ನು ಕಾಣಬಹುದು.

ಇಸ್ಲಾಂ ಕೇವಲ ಒಂದು ಕಾಲ್ಪನಿಕ ಧರ್ಮವಲ್ಲ. ಅದು ಒಂದು ಜೀವನ ಸಿದ್ಧಾಂತ ಮತ್ತು ಅತ್ಯುತ್ತಮ ಜೀವನ ವ್ಯವಸ್ಥೆಯಾಗಿದೆ. ಈ ಜೀವನದ ಕ್ರಮವನ್ನು ಪ್ರಪಂಚದಲ್ಲಿ ಅನೇಕ ರಾಷ್ಟ್ರಗಳ ಜನರು ಪಾಲಿಸುತ್ತಿದ್ದಾರೆ. ಪ್ರಸಿದ್ಧ ಲೇಖಕ ಜಾರ್ಜ್ ಬರ್ನಾರ್ಡ್ ಷಾನು "ಮೊಹಮ್ಮದನು ಬೋಧಿಸಿದ ಧರ್ಮದಲ್ಲಿಯ ಅಗಾಧ ಸತ್ವ ಮತ್ತು ಚೇತನಗಳಿಂದಾಗಿ ನಾನು ಆ ಧರ್ಮವನ್ನು ಬಹುವಾಗಿ ಗೌರವಿಸುತ್ತೇನೆ. ಬದಲಾಗುತ್ತಿರುವ ಜೀವನದ ಅವಶ್ಯಕತೆಗಳಿಗೆ ಹೊಂದಿಕೊಳ್ಳುವ ವೈಶಾಲ್ಯವನ್ನು ಪಡೆದ ಧರ್ಮ ಇದೊಂದೇ ಎಂದು ನನಗನಿಸುತ್ತದೆ. ಹೀಗಾಗಿ ಈ ಧರ್ಮವು ಎಲ್ಲ

ಕಾಲಗಳಿಗೂ ಅನ್ವಯಿಸುವಂತಿದೆ" ಎಂದಿದ್ದಾನೆ. ಆವನು ಮೊಹಮ್ಮದ್ ಪೈಗಂಬರರನ್ನು ಕುರಿತು "ಮನುಕುಲವನ್ನು ವಿನಾಶದಿಂದ ರಕ್ಷಿಸಿದ ತಾರಕ" ಎಂದೂ ಹೇಳಿದ್ದಾನೆ.

ಮಾನವನ ವೈಯಕ್ತಿಕ ಜೀವನಕ್ಕೆ ಮಾತ್ರ ಸೀಮಿತವಾದ ಧರ್ಮ ಇಸ್ಲಾಂ ಅಲ್ಲ. ಅದು ವೈಯಕ್ತಿಕ, ಸಾಮಾಜಿಕ, ನ್ಯಾಯ, ನೈತಿಕ, ಸಾಂಸ್ಕೃತಿಕ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮುಂತಾದ ಎಲ್ಲ ರಂಗಗಳಿಗೂ ಅನ್ವಯಿಸುವ ಮಾರ್ಗದರ್ಶನಗಳನ್ನು ನೀಡುತ್ತದೆ. ಅಂತೆಯೇ ಜೀವನದ ಎಲ್ಲ ಕ್ಷೇತ್ರಗಳಲ್ಲೂ ದೇವರ ಮಾರ್ಗದರ್ಶನವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕೆಂದು ಖುರಾನ್ ಬೋಧಿಸುತ್ತದೆ. ವ್ಯಕ್ತಿ ಮತ್ತು ಸಮಾಜಗಳ ನಡುವೆ ಸುಮಧುರಸಮನ್ವಯವನ್ನುಂಟುಮಾಡುವುದು ಇಸ್ಲಾಂ ಧರ್ಮದ ಇನ್ನೊಂದು ವೈಶಿಷ್ಟ್ಯವೆನಿಸಿದೆ.

ಒಟ್ಟಿನಲ್ಲಿ ಇಸ್ಲಾಂ ಧರ್ಮವು ಗೃಹಸ್ಥ ಜೀವನ, ಗೃಹಸ್ಥನಾದವನಿಗೆ ಪ್ರಾರ್ಥನೆ, ಸರಳಜೀವನಕ್ರಮ, ದಾನ, ಧರ್ಮ, ಪರೋಪಕಾರ, ಆತ್ಮೋದ್ಧಾರ, ಪರಸ್ಪರ ಪ್ರೇಮ, ಸಮಾನತೆ, ಭ್ರಾತೃತ್ವ, ಮಾನವೀಯತೆ ಮತ್ತು ವಿಶ್ವಬಾಂಧವ್ಯವನ್ನು ಬೋಧಿಸುತ್ತದೆ.

ಜ್ಞಾನಾರ್ಜನೆಯ ಅವಶ್ಯಕತೆಯ ಮಹತ್ವವನ್ನು ಇಸ್ಲಾಂ ಧರ್ಮ ಬಲವಾಗಿ ಪ್ರತಿಪಾದಿಸಿದೆ. ಅವಕ್ಕೆ ಅನ್ವಯಿಸುವ ಮೊಹಮ್ಮದ್ ಪೈಗಂಬರರ (ಸ.ಅ.ಸ.) ಕೆಲವು ನುಡಿಮುತ್ತುಗಳು (ನುಡಿರತ್ನಗಳು) ಇಂತಿವೆ.

ಜ್ಞಾನಾರ್ಜನೆಗಾಗಿ ಚೀನಾದ ತುದಿಯವರೆಗೆ ಹೋಗಬೇಕಾಗಿ ಬಂದರೂ ಹಿಂಜರಿಯದಿರಿ.

ವಿದ್ಯಾದಾನಕ್ಕಿಂತ ಮಿಗಿಲಾದ ದಾನ ಬೇರೊಂದಿಲ್ಲ.

ಬಾಲ್ಯದಲ್ಲಿ ಗಳಿಸಿದ ಜ್ಞಾನ ಕಲ್ಲಿನಲ್ಲಿ ಕೆತ್ತಿದಂತೆ; ವೃದ್ಧಾಪ್ಯದಲ್ಲಿ ಗಳಿಸಿದ ಜ್ಞಾನ ನೀರಿನಲ್ಲಿ ಬರೆದಂತೆ.

ಜ್ಞಾನಾರ್ಜನೆಯಲ್ಲಿ ತೊಡಗಿಸಿದ ಕಾಲ ದೇವರಾರಾಧನೆಯಲ್ಲಿ ತೊಡಗಿಸಿದ ಕಾಲವೆಂದು ತಿಳಿ.

ಯೋಗ್ಯ ವಿದ್ಯಾಭ್ಯಾಸಕ್ಕಿಂತ ಹೆಚ್ಚಿನ ಕಾಣಿಕೆಯನ್ನು ಯಾವ ತಂದೆಯೂ ತನ್ನ ಮಕ್ಕಳಿಗೆ ಕೊಡಲಾರ.

ವೆಚ್ಚಮಾಡಿದಷ್ಟು ಸಂಪತ್ತು ಕಡಿಮೆಯಾಗುತ್ತದೆ. ವಿತರಣೆ ಮಾಡಿದಷ್ಟು ಜ್ಞಾನ ಅಧಿಕವಾಗುತ್ತದೆ.

ಜ್ಞಾನವನ್ನು ಮೂಲಧನವನ್ನಾಗಿಯೂ, ನ್ಯಾಯವನ್ನು ಧರ್ಮವನ್ನಾಗಿಯೂ, ಸಹನೆಯನ್ನು ರಕ್ಷಾಕವಚವನ್ನಾಗಿಯೂ ಮತ್ತು ಸತ್ಯವನ್ನು ಅಸ್ತ್ರವನ್ನಾಗಿಯೂ ಉಪಯೋಗಿಸುವವನು ಇಹಪರಗಳೆರಡರಲ್ಲಿಯೂ ಯಶಸ್ವಿಯಾಗುತ್ತಾನೆ.

ತನ್ನ ತಾನರಿಯಲು ಜ್ಞಾನಬೇಕು.

ಜೀವನದ ಇತರ ಕ್ಷೇತ್ರಗಳಿಗೆ ಅನ್ವಯಿಸುವ ಮೊಹಮ್ಮದ್ ಪೈಗಂಬರ್ ಅವರ (ಸ.ಅ.ಸ.) ಕೆಲವು ನುಡಿರತ್ನಗಳು ಇಂತಿವೆ :

ನೆರೆಹೊರೆಯವರು ಹಸಿದಿರುವಾಗ ಹೊಟ್ಟೆ ತುಂಬಾ ಊಟಮಾಡುವವ ಮುಸಲ್ಮಾನನಲ್ಲ.

ಸುಳ್ಳುಹೇಳುವವನು, ಮೋಸಮಾಡುವವನು, ದ್ರೋಹಬಗೆಯುವವನು, ಮಾತಿಗೆ ತಪ್ಪುವವನು, ತ್ಯಾಗಕ್ಕೆ ಹೆದರುವವನು ಮುಸಲ್ಮಾನನಲ್ಲ.

ಅನಾಥ ಮಕ್ಕಳಿಗೆ ಆಶ್ರಯ ನೀಡಿ ಶುಶ್ರೂಷೆಮಾಡಿ ಪೋಷಿಸುವ ಮನೆ ನೈಜ ಮುಸಲ್ಮಾನನ ಮನೆ ಎನಿಸಿಕೊಳ್ಳುತ್ತದೆ.

ಮನುಕುಲದ ಮೇಲೆ ದಯೆತೋರದವನ ಮೇಲೆ ದೇವರು ದಯೆ ತೋರಲಾರ.

ಮಿತವ್ಯಯ ಅಭ್ಯಾಸ ಮಾಡಿದವನು ದರಿದ್ರನಾಗಲಾರ.

ಬಡವರೊಂದಿಗೆ ಬೆರೆತು ಅವರೊಂದಿಗೆ ಸ್ನೇಹದಿಂದ ವರ್ತಿಸಿ.

ನೆರೆಹೊರೆಯವರು ನಿಮ್ಮನ್ನು ಹೊಗಳಿದರೆ ನೀವು ಉತ್ತಮರು. ಅವರು ನಿಮ್ಮನ್ನು ತೆಗಳಿದರೆ ನೀವು ಕೆಟ್ಟವರು.

ಮಾತಾಪಿತರೊಡನೆ ಔದಾರ್ಯದಿಂದ ವರ್ತಿಸಿರಿ. ನಿಮ್ಮ ಮಕ್ಕಳು ಸಹ ನಿಮ್ಮೊಡನೆ ಉದಾರತೆಯಿಂದ ವರ್ತಿಸುವರು. ನೀವು ನಿಮ್ಮ ಚಾರಿತ್ರ್ಯವನ್ನು ಕಾಪಾಡಿಕೊಳ್ಳಿ, ನಿಮ್ಮ ಸ್ತ್ರೀಯರೂ ಚಾರಿತ್ರ್ಯವತಿಗಳಾಗುವರು.

ನಿಷ್ಠೆ ಪ್ರಾಮಾಣಿಕತೆಗಳಿಂದ ದುಡಿದು ಬಾಳುವವರು ದೇವರಿಗೆ ಅತ್ಯಂತ ಪ್ರೀತಿಪಾತ್ರರು.

ದಾನಮಾಡಲು ಹಣವೇ ಬೇಕೆಂದೇನು ಇಲ್ಲ. ಸತ್ಕಾರ್ಯಮಾಡುವ ಇಲ್ಲವೆ ದುಷ್ಟಕಾರ್ಯಗಳಿಂದ ದೂರವಿರುವ ಮೂಲಕವೂ ಆ ಕಾರ್ಯವನ್ನು ಮಾಡಬಹುದು.

ದಬ್ಬಾಳಿಕೆಗೆ ಒಳಗಾದವರು ಮುಸ್ಲಿಮರೇ ಆಗಿರಲಿ ಮುಸ್ಲಿಮೇತರರೇ ಆಗಿರಲಿ ಅವರ ರಕ್ಷಣೆ ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯ.

ನಿಮ್ಮ ಸಂಪತ್ತನ್ನೆಲ್ಲ ನೀವೇ ತಿಂದು ಮುಗಿಸಬೇಡಿ, ಪರರ ಧನದಲ್ಲೂ ಪಾಲು ಪಡೆಯಲು ಯತ್ನಿಸಬೇಡಿ. ಹಾಗೆ ಮಾಡಿದರೆ ನಿಮ್ಮ ವಿನಾಶಕ್ಕೆ ನೀವೇ ದಾರಿಮಾಡಿಕೊಂಡಂತೆ.

ಕೃಷಿಕನ ವಶವಿದ್ದ ಭೂಮಿಯನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವವನಿಗೆ ನರಕವೇ ಶಾಶ್ವತ ನೆಲೆ.

ನೈಜ ಸ್ನೇಹಿತನ ಪರೀಕ್ಷೆಯಾಗುವುದು ಕಷ್ಟಕಾಲದಲ್ಲಿ, ಬೆನ್ನ ಹಿಂದೆ ಮತ್ತು ಮರಣಾನಂತರ.

ರೋಜಾ (ಉಪವಾಸ), ನಮಾಜ್ (ಪ್ರಾರ್ಥನೆ), ಜಕಾತ್ (ದಾನ) ಗಳಿಗಿಂತಲೂ ಪವಿತ್ರವಾದ ಕೆಲಸ ಸೌಹಾರ್ದ ಸಾಧನೆ.

ಮಹಿಳೆಯರ ಬಗ್ಗೆ ಮೊಹಮ್ಮದ್ ಪೈಗಂಬರ್ (ಸ.ಅ.ಸ.) ಅವರ ಕೆಲವು ನುಡಿರತ್ನಗಳು ಇಂತಿವೆ:

ತಾಯಿಯ ಪಾದಗಳಡಿಯಲ್ಲಿ ಸ್ವರ್ಗವಿದೆ.

ವಿಧವೆಯರಿಗೂ ಬಡವರಿಗೂ ನೆರವು ನೀಡುವುದು ಅಜೀವ ಉಪವಾಸ ವ್ರತಾಚರಣೆಗಿಂತ ಮಿಗಿಲು.

ತನ್ನ ಹೆಂಡತಿಯ ಹಕ್ಕುಬಾಧ್ಯತೆಗಳನ್ನು ಮನ್ನಿಸಿ ಪುರಸ್ಕರಿಸುವವನೇ ಉತ್ತಮ ಗೃಹಸ್ಥ.

ಅನಾಥ ಹೆಣ್ಣು ಮಗುವನ್ನು ಪೋಷಿಸಿ ಸೂಕ್ತ ವಿದ್ಯಾಭ್ಯಾಸ ಮಾಡಿಸಿ ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಿಸುವಂತಹ ಪುಣ್ಯಕಾರ್ಯ ಬೇರೊಂದಿಲ್ಲ.

ವಿವಾಹ ವಿಚ್ಛೇಧನವು ನ್ಯಾಯಸಮ್ಮತವೆನಿಸಿದಾಗಲೂ ದೇವರಿಗೆ ಪ್ರಿಯವಲ್ಲ.

ಗುಣವತಿಯೂ ಸುಶೀಲೆಯೂ ಆದ ಸ್ತ್ರೀಯು ಅತ್ಯಮೂಲ್ಯಳು.

ಮಹಿಳೆಯರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ದೇವರು ಆಜ್ಞಾಪಿಸಿರುವನು. ಏಕೆಂದರೆ ಅವರು ನಿಮ್ಮ ತಾಯಂದಿರು, ಸಹೋದರಿಯರು ಮತ್ತು ಪುತ್ರಿಯರು.

ನಿಮ್ಮ ಪತ್ನಿಯರನ್ನು ದಾಸಿಯರಂತೆ ಕಾಣಬೇಡಿ.

ಇಸ್ಲಾಂ ಧರ್ಮ ಇಷ್ಟು ಹಕ್ಕುಗಳನ್ನು ನೀಡಿ ಮಹಿಳೆಯರಿಗೆ ಸ್ವತಂತ್ರವಾಗಿ ಬಿಡಲಿಲ್ಲ. ಅವಳ ಕೆಲವು ಗುಣ ಹಾಗೂ ಕರ್ತವ್ಯಗಳನ್ನು ಈ ರೀತಿ ಹೇಳಿದೆ.

ಪತಿ ಮನೆಯಿಂದ ದೂರವಿರುವಾಗ ಅವನ ಸೊತ್ತು ಮತ್ತು ತನ್ನ ಮಾನವನ್ನು ಕಾಪಾಡಿಕೊಳ್ಳಬೇಕು. ಇಂತಹ ಪತ್ನಿ ಮಾತ್ರ ಮಾದರಿಪತ್ನಿ ಎನಿಸುವಳು. ಲೋಕದಲ್ಲಿ ಸಂಪತ್ತಿಗಿಂತಲೂ ಮಿಗಿಲಾದ ವಸ್ತು ಉತ್ತಮ ಗುಣ ನಡತೆಯುಳ್ಳ ಪತ್ನಿ.

ಯಾವ ಮಹಿಳೆ ದಿನಕ್ಕೆ ಐದು ಬಾರಿ ಪ್ರಾರ್ಥನೆ ಮಾಡುತ್ತಾಳೆಯೋ, ಉಪವಾಸ ವ್ರತವನ್ನು ಆಚರಿಸುತ್ತಾಳೆಯೋ, ತನ್ನ ಪತಿಯ ಸೇವೆಯನ್ನು ಮಾಡುತ್ತಾಳೆಯೋ, ತನ್ನ ಮಾನವನ್ನು ರಕ್ಷಿಸಿಕೊಳ್ಳುತ್ತಾಳೆಯೋ, ಅಂತಹ ಮಹಿಳೆಯು ಯಾವ ಬಾಗಿಲಿನಿಂದಬೇಕಾದರೂ ಸ್ವರ್ಗವನ್ನು ಪ್ರವೇಶಿಸುವಳು.

ಡಾ. ಅರವಿಂದ ಮಾಲಗತ್ತಿ
ಡಾ. ಒಡೆಯರ್ ಡಿ. ಹೆಗ್ಗಡೆ

ಕೊರಗರು–ಒಂದು ಸಾಂಸ್ಕೃತಿಕ ಅಧ್ಯಯನ

೧ ಕೊರಗರ ದೈಹಿಕ ಲಕ್ಷಣ ಮತ್ತು ವೇಷಭೂಷಣ

ಕೊರಗರ ದೈಹಿಕ ಚರ್ಯೆ ಮತ್ತು ಲಕ್ಷಣಗಳು ಬಹುಮಟ್ಟಿಗೆ ದ್ರಾವಿಡ ಜನಾಂಗಕ್ಕೆ ಹತ್ತಿರದವಾಗಿವೆ. ಕೊರಗರು ಕಪ್ಪು ಮೈ ಬಣ್ಣದವರು, ಅಗಲವಾದ ಚಪ್ಪಟೆ ಮೂಗು, ಪುಟ್ಟ ಪುಟ್ಟ ಕಂಗಳು, ಅಗಲವಾದ ಹಣೆ, ಕಪ್ಪು ಕಪ್ಪಾದ ದಟ್ಟವಾದ ಗುಂಗುರು ಕೂದಲು ಉಳ್ಳವರು. ಸುಮಾರು ಐದು ಅಡಿ ನಾಲ್ಕು–ಆರು ಇಂಚು ಎತ್ತರದ ಕೊರಗರು ದೈಹಿಕ ರಚನೆ ಲಕ್ಷಣಗಳಲ್ಲಿ ಕೆಲವುಮಟ್ಟಿಗೆ ದಕ್ಷಿಣ ಭಾರತದ ಇತರೇ ಗುಡ್ಡಗಾಡು ಜನರನ್ನೂ ಹೋಲುವರು. ದಪ್ಪವಾದ ತೊಂಡೆ ಹಣ್ಣಿನಂಥ ತುಟಿಗಳುಳ್ಳವರು.

ಕೊರಗ ಗಂಡಸರು ಹೆಂಗಸರು ನಿಸರ್ಗದ ಮಡಿಲಲ್ಲೇ ಬೆಳೆದವರಾದ್ದರಿಂದ ಪ್ರಕೃತಿ ಪ್ರಿಯರು. ಕಾಡುಮೇಡುಗಳನ್ನು ಬೆಟ್ಟಗುಡ್ಡಗಳನ್ನು ಲೀಲಾಜಾಲವಾಗಿ ಅಲೆಯುತ್ತ, ಹತ್ತಿಳಿಯುತ್ತ ಕೆಲವೊಮ್ಮೆ ದಟ್ಟವಾದ ಕಾಡುಗಳಲ್ಲಿ ಚಿಗರೆಯಂತೆ ಚುರುಕಾಗಿ ಸಾಗುವವರು. ಮೊಣಕಾಲಿನವರೆಗೆ ಕೊರಗರು ತೊಡುವ ಮುಂಡು ಅವರಿಗೆ ರಭಸದಿಂದ ನಡೆಯಲು ನೆರವಾಗುವುದು. ಕಾಡು ಉತ್ಪತ್ತಿಗಳನ್ನು–ಹಣ್ಣು ಹಂಪಲುಗಳು, ಕಾಡುಕೋಳಿ, ಕಾಡುಹಂದಿ, ಚಿಗರೆ ಕವಡೆಗಳನ್ನು ಹೊಡೆದು ಆಹಾರವಾಗಿ ಬಳಸುವರು. ತೀರಾ ಇತ್ತೀಚಿನವರೆಗೂ ಕೊರಗರು ಇತರೇ ಗುಡ್ಡಗಾಡು ಜನರಂತೆ ಆಹಾರವನ್ನು ಸಂಗ್ರಹಿಸಿಡುತ್ತಿರಲಿಲ್ಲ. ಕೊರಗರು ಉತ್ತಮ ದೇಹದಾರ್ಢ್ಯತೆ ಆರೋಗ್ಯ ಪಡೆದವರು.

ಕೊರಗರ ವೇಷಭೂಷಣ ಬಹಳ ಸರಳವಾಗಿದೆ. ಏಕೆಂದರೆ ಅವರಿಗೆ ವಸ್ತ್ರ ತೊಡಬಾರದೆಂಬ ನಿಷೇಧವಿರುವುದರಿಂದ ಅವರು ಕೇವಲ ಮುಂಡು ಧರಿಸುವುದು ಅಥವಾ ಸೊಪ್ಪುಸೆದೆ ಕಟ್ಟಿಕೊಳ್ಳುವುದು ಇದುವರೆಗೆ ನಡೆದುಬಂದ ಪದ್ಧತಿ. ಗಂಡಸರು ಹೆಂಗಸರಂತೆ ಉದ್ದ ಕೂದಲು ಬಿಡುವರು, ಗಡ್ಡ ಮೀಸೆಗಳನ್ನು ಉದ್ದವಾಗಿ

ಬೆಳೆಸುವ ಕ್ರಮವಿತ್ತು. ಇತ್ತೀಚೆಗೆ ಕೊರಗರ ಗಂಡಸರು ಇತರರಂತೆ ಲುಂಗಿ ಪಂಚೆಯನ್ನೂ, ಬಣ್ಣಬಣ್ಣದ ಹತ್ತಿ ಬಟ್ಟೆಗಳನ್ನೂ ಟೆರಿಕಾಟ್ ಅಂಗಿಗಳನ್ನೂ ಬಳಸುವರು. ಹಿಂದೆ ಕೊರಗರ ಹೆಂಗಸರು ಮುಂಡನ್ನು ಸೊಂಟಕ್ಕೆ ಕಟ್ಟಿ ರವಿಕೆಯನ್ನು ತೊಡುತ್ತಿದ್ದರು; ಸೆರಗು ಹಾಕುತ್ತಿರಲಿಲ್ಲ. ಇಂದಿಗೂ ಹಳ್ಳಿಗಾಡುಗಳಲ್ಲಿರುವ ಕೊರಗ ಹೆಂಗಸರು ಅದೇ ಹಳೆಯ ಪದ್ಧತಿ ಅನುಸರಿಸುತ್ತಿದ್ದಾರೆ. ಆದರೆ ಮಂಗಳೂರು, ಕಾರ್ಕಳ, ಮೂಡುಬಿದಿರೆ, ಸುರತ್ಕಲ್ ಮುಂತಾದ ಪೇಟೆ ಪಟ್ಟಣಗಳ ಸಂಪರ್ಕಕ್ಕೆ ಬಂದ ಕೊರಗ ಹೆಂಗಸರು ಇತರೇ ಹಿಂದೂ ಮಹಿಳೆಯರಂತೆ ಸೆರಗು ಹೊದೆಯುವಂತೆ ಸೀರೆ ತೊಡುವುದನ್ನು ಕಲಿತಿದ್ದಾರೆ.

ನಿರಾಭರಣ ಸುಂದರರಾದ ಕೊರಗರು ವಿವಿಧ ಬಣ್ಣಬಣ್ಣಗಳ ಮಣಿಸರಗಳ ಪ್ರಿಯರು; ಕೈಗೆ ಹಿತ್ತಾಳೆ, ಕಬ್ಬಿಣ, ತಾಮ್ರದಿಂದ ಮಾಡಿದ ಬಳೆಗಳನ್ನು ಗಂಡಸರು ಹೆಂಗಸರು ಇಬ್ಬರೂ ಧರಿಸುವರು. ಇಂದಿನ ಕೊರಗ ಮಹಿಳೆಯರು ಎಲ್ಲರಂತೆ ಗಾಜಿನ ಬಳೆ, ಕರಿಮಣಿ ಸರ ಧರಿಸುವರು. ನೈಟ್ ಸ್ಕರ್ಟ್ ಧರಿಸಿದ ಕೆಲವು ಕೊರಗ ಹದಿಹರೆಯದ ಯುವತಿಯರನ್ನೂ ನಾವು ಕಂಡೆವು. ಹೀಗೆ ಕೊರಗರ ವೇಷಭೂಷಣಗಳಿಗೆ ನಾಗರಿಕತೆಯು ನೇರವಾಗಿ ಪ್ರವೇಶಿಸುತ್ತಿದೆ.

ಕೊರಗ ಗಂಡಸರು ಮತ್ತು ಹೆಂಗಸರು ಸೊಂಟದಿಂದ ಕೆಳಕ್ಕೆ ಕೇವಲ ಸೊಪ್ಪು ಕಟ್ಟಿಕೊಂಡು ಜೀವಿಸಬೇಕೆಂಬ ನಿರ್ಬಂಧವನ್ನು ಮೇಲ್ಜಾತಿಯವರು ಹೇರಿದರು ಎನ್ನುವ ಕಥೆಯೊಂದನ್ನು ಉಳ್ಳಾಲ ರಾಘವೇಂದ್ರರಾವ್ ದಾಖಲಿಸಿದ್ದಾರೆ. ಆ ಪ್ರಕಾರ ಕೊರಗರು ಆಳುವ ವರ್ಗವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕೊರಗನೊಬ್ಬನು ಮೇಲ್ವರ್ಗದ ಹೆಣ್ಣೊಬ್ಬಳನ್ನು ಬಯಸಿದನು. ಆಗ ಕೊರಗನ ಬೇಡಿಕೆಯಿಂದ ಕುಪಿತರಾದ ಮೇಲ್ವರ್ಗದವರು ಕೊರಗರ ರಾಜಕೀಯ ಪ್ರಾಬಲ್ಯ ಅಳಿಯುವವರೆಗೂ ತೆಪ್ಪಗಿದ್ದು ನಂತರ ಕೊರಗ ಹೆಂಗಸರು ಯಾವ ಬಗೆಯ ವಸ್ತ್ರವನ್ನೂ ತೊಡದಿರುವಂತೆ ನಿಷೇಧ ವಿಧಿಸಿದರು. ಆಗ ಆ ನತದೃಷ್ಟ ಕೊರಗ ಮಹಿಳೆಯರು ಮಾನ ಸಂರಕ್ಷಣೆಗಾಗಿ ಸೊಪ್ಪು ಕಟ್ಟಿಕೊಳ್ಳುವುದಕ್ಕೆ ತೊಡಗಿದರು. ಕೊರಗರನ್ನು ರಾಜಕೀಯ ಸಾಂಸ್ಕೃತಿಕ ಸೇಡಿನಿಂದಾಗಿ ವಿವಸ್ತ್ರಗೊಳಿಸಲಾಯಿತು ಎನ್ನುವುದಕ್ಕೆ ಇದು ಒಂದು ಪ್ರಮುಖ ಆಧಾರವಾಗುತ್ತದೆ. ಕಾಲಾನುಕ್ರಮದಲ್ಲಿ ಸೊಪ್ಪಿನಿಂದ ದೇಹ ಮುಚ್ಚಿಕೊಳ್ಳುವುದೇ ದೇವರು ನಮಗೆ ದಯಪಾಲಿಸಿದ ವರ ಎಂದು ಕೊರಗರು ನಂಬುವಂತಾಯಿತು ಎನ್ನುವುದನ್ನೂ ಉಳ್ಳಾಲ ರಾಘವೇಂದ್ರರಾವ್ ಹೇಳಿದ್ದಾರೆ.

ಕೊರಗರು ಕೇವಲ ಸೊಪ್ಪಿನ ವಸ್ತ್ರವನ್ನು ಸೊಂಟದಿಂದ ಕೆಳಕ್ಕೆ ತೊಡುವುದನ್ನು ಅವರನ್ನು ಅತ್ಯಂತ ಹೀನಾಯ ಸ್ಥಿತಿಗಿಳಿಸಿದುದರ ದ್ಯೋತಕವೆಂದೇ ವಾಲ್‌ಹೌಸ್ ಪರಿಗಣಿಸಿದ್ದಾನೆ. ಹಿಂದೆ ಕೊರಗ ಮಹಿಳೆಯರು ಇತರರಂತೆ ವಸ್ತ್ರ ತೊಡುವುದೂ ಮತ್ತು ಸೆರಗು ಹೊದೆಯುವುದೂ ಅಪಶಕುನದ್ದು, ಅಮಂಗಳಕರವಾದುದೆಂದು ನಂಬಿದ್ದರು.

ಕೊರಗರ ವೇಷಭೂಷಣಗಳ ಬಗೆಗೆ ಹೆಚ್.ವಿ. ಸ್ಟೂವರ್ಟ್, 'Manual of the South Kanara District' ನಲ್ಲಿ ಹೀಗೆ ಬರೆದಿದ್ದಾರೆ:

ಕೊರಗರು ಸೊಂಟದಿಂದ ಕೆಳಕ್ಕೆ ಕಪ್ಪು ವಸ್ತ್ರವೊಂದನ್ನೂ ಸೊಂಟದಿಂದ ಮೇಲಕ್ಕೆ ಬಿಳಿ ವಸ್ತ್ರವೊಂದನ್ನು ಕಟ್ಟಿಕೊಳ್ಳುತ್ತಿದ್ದರು. ಅವರು ತಲೆಗೆ ಅಡಿಕೆ ಹಾಳೆಯಿಂದ ಮಾಡಿದ ಟೊಪ್ಪಿಗೆ ಧರಿಸುವರು. ಈ ಟೊಪ್ಪಿಗೆ ಹೊಲೆಯರು ಧರಿಸುವ ಟೊಪ್ಪಿಗೆಯನ್ನೇ ಹೋಲುವುದು. ಕಿವಿಗೆ ಹಿತ್ತಾಳೆಯ ಬೆಂಡೋಲೆಗಳನ್ನು ಕೈಗಳಿಗೆ ಕಬ್ಬಿಣದ ಬಳೆಯನ್ನೂ ಸೊಂಟಕ್ಕೆ ಉಡಿದಾರವನ್ನೂ ಅವರು ಧರಿಸುವರು. ಉಡುಪಿಯಲ್ಲಿ ಕೊರಗನೊಬ್ಬನು ಧರಿಸಿದ್ದ ಉಡಿದಾರವನ್ನು ಗೂಬೆಗಳ ಮೂಳೆಗಳಿಂದ ತಯಾರಿಸಲಾಗಿದ್ದುದನ್ನು ನಾನು ಕಂಡೆ. ಇಂಥ ದೀನ ಹೀನ ಸ್ಥಿತಿಯಲ್ಲಿ ಇಂದು ಕೊರಗರಿಲ್ಲ.

೨ ಕೊರಗರ ಒಳಪಂಗಡಗಳು ಮತ್ತು ಬಳಿ ಪದ್ಧತಿ

'ಕೊರಗ' ಎನ್ನುವ ಒಂದು ಜನಾಂಗದಲ್ಲಿಯೇ ಒಳಪಂಗಡಗಳಿವೆ. ಈ ಒಳಪಂಗಡಗಳನ್ನು—

ಸೊಪ್ಪು ಕೊರಗರು
ಚಿಪ್ಪ್ರಿ ಕೊರಗರು
ಆಂಡೆ ಕೊರಗರು
ಮುಂಡು ಕೊರಗರು
ಬಾಕುಡೆ ಕೊರಗರು

ಎಂದು ಗುರುತಿಸಲಾಗುತ್ತದೆ. ಈ ಹೆಸರುಗಳೆಲ್ಲ ಅಂಕಿತನಾಮಗಳು ಎನ್ನುವದು ಸ್ಪಷ್ಟ. ಈ ಹೆಸರುಗಳನ್ನು ಅವರ ಒಂದೊಂದು ವಿಶೇಷ ಲಕ್ಷಣಗಳನ್ನು ಗುರುತಿಸಿ ಕರೆದಿದ್ದಾರೆ.

ಸೊಪ್ಪು ಕೊರಗರು ಎಂದರೆ; ಇವರು ಮೈಗೆ ಬಟ್ಟೆಯನ್ನು ತೊಡದೆ, ಗಿಡ ಮರಗಳ ಎಲೆಯನ್ನೇ ಬಳಸಿ, ದೇಹವನ್ನು ಮುಚ್ಚಿಕೊಂಡು ಬದುಕುವವರು. ಇವರನ್ನು ತಪ್ಪು ಕೊರಗರು, ತಪ್ಪಲು ಕೊರಗರು ಎಂಬ ಪರ್ಯಾಯ ನಾಮಗಳಿಂದಲೂ ಗುರುತಿಸುತ್ತಾರೆ. ಈ ಸೊಪ್ಪು ಕೊರಗರು 1940 ರಿಂದ ಬಟ್ಟೆಯನ್ನೂ ತೊಡಲು ಪ್ರಾರಂಭಿಸಿದರು ಎನ್ನುವ ಹೇಳಿಕೆಗಳು ಇವೆ.

ಮುಂಡು ಕೊರಗರು ಎಂದರೆ; ಇವರು ಮೊಣಕಾಲಿನವರೆಗೆ ಮುಂಡು (ಪಂಚೆ) ತೊಡುತ್ತಾರೆ. ಹೆಂಗಸರೂ ಕೂಡ ನಡದಿಂದ ಮೊಣಕಾಲಿನವರೆಗೆ ಮಾತ್ರ ಮುಂಡು ಸುತ್ತಿಕೊಳ್ಳುತ್ತಾರೆ. ಇವರಿಗೆ ಕುಂಬು ಕೊರಗರು(ಕುಂಬು–ಬಟ್ಟೆ), ಎಂದೂ ಕರೆಯುತ್ತಾರೆ. ಸೊಪ್ಪು ಕೊರಗರು 1940ರಲ್ಲಿ ಬಟ್ಟೆ ತೊಡಲು ಪ್ರಾರಂಭಿಸಿದರೂ ಇವರಿಗಿಂತ

ಭಿನ್ನವಾಗಿಲ್ಲ. ಆದರೆ ವರ್ಷಕ್ಕೊಂದು ಬಾರಿ ಸೊಪ್ಪು ಕೊರಗರು ತಮ್ಮ ಮೂಲದ ವೇಷ ಹಾಕಿ ನವರಾತ್ರಿಯ ಹಬ್ಬದಲ್ಲಿ ಕುಣಿಯುತ್ತಾರೆ, ಬೀದಿ ಬೀದಿ ತಿರುಗುತ್ತಾರೆ.

ಅಂಡೆ ಕೊರಗರು ಎಂದರೆ; ಇವರು ಕೊರಳಿಗೆ ಅಂಡೆಯನ್ನು ಕಟ್ಟಿಕೊಂಡು ತಿರುಗುವಂಥವರು. ಅಂಡೆ ಎಂದರೆ ಬಿದಿರಿನಲ್ಲಿ ತಯಾರಿಸಿದ ಒಂದು ಕೊಳವೆ (ಕೆಕ್ಕಿಲ ಕಾಳಾಂಜ). ಅದಕ್ಕೆ ದಾರವನ್ನು ಕಟ್ಟಿ ಕೊರಳಿಗೆ ಹಾಕಿಕೊಳ್ಳುತ್ತಾರೆ. ತಮ್ಮ ಬಾಯಿಯಲ್ಲಿ ಉಗುಳು ಬಂದಾಗ, ಅದನ್ನು ನೆಲಕ್ಕೆ ಉಗಿಯದೆ ಆ ಅಂಡೆಯಲ್ಲಿ ಉಗಿದುಕೊಳ್ಳಬೇಕು, ಇದೊಂದು ಸಾಮಾಜಿಕ ವಿಧಿ. ಅನಂತರ ಅಂಡೆಯಲ್ಲಿಯ ಉಗುಳನ್ನು ತಿಪ್ಪೆಯಲ್ಲಿ ಹೂಳುತ್ತಿದ್ದರು. ಈ ಪದ್ಧತಿ 1950ರ ವರೆಗೆ ವಿರಳವಾಗಿ ಬಳಕೆಯಲ್ಲಿತ್ತು. ಈಗ ಕಣ್ಮರೆಯಾಗಿ ಹೋದದ್ದು ಒಂದು ಒಳ್ಳೆಯ ಲಕ್ಷಣ (ಈ ವಿಷಯದ ಕುರಿತು 'ಆಹಾರ ಪದ್ಧತಿ' ಎಂಬ ಭಾಗದಲ್ಲಿ ವಿಶೇಷವಾಗಿ ಚರ್ಚಿಸಲಾಗಿದೆ ಗಮನಿಸಿ).

ಚಿಪ್ಪೆ ಕೊರಗರು ಎಂದರೆ; ತೆಂಗಿನ ಚಿಪ್ಪಿಗೆ ದಪ್ಪನೆಯ ದಾರದಿಂದ ಕಟ್ಟಿ ಬಗಲಿಗೆ ಅಥವಾ ಕುತ್ತಿಗೆಗೆ ಹಾಕಿಕೊಂಡಿರುತ್ತಿದ್ದರು. ಆಗ ಚಿಪ್ಪೆ ಬೆನ್ನಿನ ಹಿಂದೆ ಜೋತಾಡುತ್ತಿರುತ್ತದೆ. ಈ ಚಿಪ್ಪೆಯನ್ನು ಇವರು ನೀರು ಕುಡಿಯುವದಕ್ಕಾಗಿ ಬಳಸುತ್ತಿದ್ದರು. ಇವರು ಬೊಗಸೆಯಿಂದ ನೀರು ಕುಡಿಯುತ್ತಿರಲಿಲ್ಲವೆ? ಎಂದು ಪ್ರಶ್ನಿಸಿದರೆ ನಮಗೆ ತಕ್ಷಣ ದೊರೆಯುವ ಉತ್ತರ ಮತ್ತೆ ಎಂಜಲಿನ ವಿಚಾರ. ಅವರು ನೀರು ಕುಡಿಯುವಾಗ ಹನಿಗಳು ನೆಲಕ್ಕೆ ಬೀಳಬಹುದು ಎಂದು, ಅದನ್ನು ತಡೆಯುವದಕ್ಕಾಗಿ ಈ ತೆಂಗಿನ ಚಿಪ್ಪೆಯನ್ನು ಬಳಸುತ್ತಿದ್ದರು (ಚಿಪ್ಪೆಯನ್ನು ಪಾತ್ರೆಯನ್ನಾಗಿಸಿಕೊಂಡು ಊಟ ಮಾಡುವುದಕ್ಕೂ ಬಳಸುತ್ತಿರಬೇಕು. ಏಕೆಂದರೆ ಕೊರಗ ತನಿಯನ ಪಾಡ್ದನದಲ್ಲಿ ಕೊರಗ ತನಿಯನ ಸಾಕುತಾಯಿ ಈತನಿಗೆ ಚಿಪ್ಪಿನಲ್ಲಿ ಅನ್ನ, ಕೈಯಲ್ಲಿ ತಪ್ಪು ನೀಡಿ ಸಾಕಿದಳು ಎಂದು ಉಲ್ಲೇಖ ಬರುತ್ತದೆ. ಆದ್ದರಿಂದ ಚಿಪ್ಪೆಯನ್ನು ಇವರು ಊಟಕ್ಕೆ ಬಳಸುತ್ತಿದ್ದಾರೆಂದು ಗುರುತಿಸಬಹುದು). ಇವರಿಗೆ ತಿಪ್ಪಿ ಕೊರಗ ಅಥವಾ ಗೆರೆಟೆ ಕೊರಗ ಎಂದು ಕರೆಯುವ ವಾಡಿಕೆಯೂ ಇದೆ.

ಬಾಕುಡೆ ಕೊರಗರು ಎಂದರೆ; ಇವರು ಮೂಲತಃ ಭಂಗಿ ವೃತ್ತಿಯನ್ನು ಮಾಡುವವರು ಎಂದು ಹೇಳಲಾಗುತ್ತದೆ. ಮೊದಲು ಕೊರಗರ್ಯಾರೂ ಭಂಗಿಯ ವೃತ್ತಿಯನ್ನು ಮಾಡುತ್ತಿರಲಿಲ್ಲ. ನಗರಪಾಲಿಕೆಯ ವತಿಯಿಂದ ಕೊರಗರಿಗೆ ಕೆಲಸ ಸಿಕ್ಕ ನಂತರದಲ್ಲಿ ಕೊರಗರೂ ಭಂಗಿ ಕೆಲಸ ಮಾಡಬೇಕಾಗಿ ಬಂತು. ಈ ಮೊದಲು ಭಂಗಿ ಕೆಲಸವನ್ನು ಮಾಡುವ 'ಬಾಕುಡ' ಜನಾಂಗದೊಂದಿಗೆ ರಕ್ತ ಸಂಬಂಧವಾಗಲಿ, ದೈಹಿಕ ಸಂಬಂಧವಾಗಲಿ ಇರಲಿಲ್ಲ. ಆದರೆ ನಗರಪಾಲಿಕೆಯ ಕೆಲಸದಿಂದಾಗಿ ಪರಸ್ಪರ ಒಂದೇ ಉದ್ಯೋಗವಾಗಿ ಹೋಗಿದ್ದರಿಂದ ಬಾಕುಡರ ಜೊತೆಗೆ ಕೊರಗರ ರಕ್ತ ಸಂಬಂಧಗಳು ಪ್ರಾರಂಭವಾಗಿವೆ. ಆದರೆ ಎಲ್ಲ ಕೊರಗರೂ ಈ ಸಂಬಂಧವನ್ನು ಈಗಲೂ ಒಪ್ಪಿಕೊಳ್ಳುವುದಿಲ್ಲ.

ಕೊರಗರಲ್ಲಿಯೂ ಬಳಿ ಪದ್ಧತಿಯು ಬಳಕೆ ಇದೆ. ಕ್ಷೇತ್ರಕಾರ್ಯದಲ್ಲಿ ನಮಗೆ ಲಭ್ಯವಾದ ಬಳಿಗಳು ನಾಲ್ಕು—

ಕುಂದನ್ನಾಯ.
ಸಾಲೆತ್ತ್ರೆನ್ನಾಯ.
ಮುಂಚಿತ್ತ್ರೆನ್ನಾಯ.
ಬಂಗೇರ (ಆಯಕಲೆ).

ಆದರೆ ಬೇರೆ ಕೃತಿಗಳಲ್ಲಿ ಸಿಗುವ ಕೊರಗರ ಬಳಿಗಳೆಂದರೆ—

ಮೂಂಕೆಣಾಯ.
ಶಿರ್ಗೆನ್ನಾಯ (ಸಿರ್ಗೆನ್ನಾಯ).
ತಜ್ಜೆನಾಯ.
ಸೋಮಣ್ಣಾಯ (ಕೊರಗತನಿಯ ದೈವದ ಬಳಿ).

ಇಂಥ ಬಳಿಗಳು ಕೊರಗರಲ್ಲಿ ಲಭ್ಯವಾಗುತ್ತಿದ್ದು, ಒಂದು ಬಳಿಯಿಂದ ಇನ್ನೊಂದು ಬಳಿಗೆ ಸಲೀಸಾಗಿ ಕೊಡು–ಕೊಳ್ಳುವ ಸಂಪ್ರದಾಯಗಳು ನಡೆಯುತ್ತವೆ. ಆದರೆ ಬಂಟರಲ್ಲಿ ಬಿಲ್ಲವರಲ್ಲಿ ಒಂದು ಬಳಿಯಿಂದ ಇನ್ನೊಂದು ಬಳಿಗೆ ಮದುವೆಯಾಗಬಾರದು ಎಂಬ ನಿಷೇಧ ಇರುವಂತೆ ಇಲ್ಲಿ ಇಲ್ಲ. ಆದರೆ ಒಂದೇ ಬಳಿಯಲ್ಲಿ ಹೆಣ್ಣು, ಗಂಡುಗಳನ್ನೂ ಕೊಡು–ಕೊಳ್ಳುವ ವ್ಯವಹಾರ ಇವರಲ್ಲಿಯೂ ನಡೆಯುವದಿಲ್ಲ. ಬಳಿಗಳಲ್ಲಿಯೇ ಶ್ರೇಷ್ಠ, ಉತ್ತಮ ಎಂಬ ಹಾಯಗಾರಿಕೆ ಮಾಡಿ ನೋಡುವ ಲಕ್ಷಣಗಳು ಕಂಡು ಬರುತ್ತವೆ.

೩ ಕೊರಗರ ಜನನ—ಮರಣ ಸಂಸ್ಕಾರಗಳು

ಕೊರಗರು ಅನುಸರಿಸುವ ಜನನ–ಮರಣ ಸಂಸ್ಕಾರಗಳು ಇತರೇ ದಲಿತ ಮತ್ತು ಶೂದ್ರ ವರ್ಗಗಳ ಆಚರಣೆಗಳನ್ನೇ ಹೋಲುವುವು. ಕೊರಗರ ಸಂಪ್ರದಾಯಗಳು ಮತ್ತು ಆಚರಣೆಗಳು ಬಹಳ ಸರಳವಾದುವು.

ಮಗು ಜನನವಾದಾಗ ಸೋದರತ್ತೆಯು ಸೂತಕ ಕಳೆದ ನಂತರ ನಾಮಕರಣದ ದಿನ ಮಗುವಿಗೆ ಹೆಸರಿಟ್ಟು ತೊಟ್ಟಿಲು ತೂಗುವಳು. ತೊಟ್ಟಿಲನ್ನು ಕಾಡು ಹೂಗಳಿಂದ ಸಿಂಗರಿಸಲಾಗುವುದು. ನೆರೆದ ಎಲ್ಲ ಸಂಬಂಧಿಗಳಿಗೂ ಗುರಿಕಾರನ ಪರಿವಾರದವರಿಗೂ ಸಂತೃಪ್ತವಾಗುವಂತೆ ಊಟ ಬಡಿಸಲಾಗುವುದು. ಕೆಲವೊಮ್ಮೆ ಗುರಿಕಾರನೇ ಮಗುವನ್ನು ತೊಟ್ಟಿಲಿಗೆ ಹೆಸರಿಟ್ಟು ಹಾಕುವುದುಂಟು. ಹೆರಿಗೆಯ ನಂತರದ ಸೂತಕದ 12 ದಿನಗಳಲ್ಲಿ ಬಾಣಂತಿ ಮತ್ತು ಮಗುವಿನ ಸೋದರತ್ತೆ ಹೊರತುಪಡಿಸಿ ಉಳಿದವರು ಮನೆಯಲ್ಲಿ ನಿಲ್ಲುತ್ತಿರಲಿಲ್ಲ. ಈಗ ಈ ಆಚರಣೆಯನ್ನು ಕೊರಗರು ತೊರೆದಿದ್ದಾರೆ. ಸೂತಕ 12 ದಿನಗಳು. ಮಗುವಿಗೆ ಉಡುದಾರವನ್ನು ತಾಯಿ ಕಟ್ಟುವಳು.

ಕೊರಗರು ತಮ್ಮ ತಮ್ಮ ಮಕ್ಕಳಿಗೆ ವಾರವೊಂದರ ಏಳು ದಿನಗಳ ಹೆಸರುಗಳನ್ನು ಇಡುವುದು ಬಹುಮಟ್ಟಿಗೆ ಇಂದಿಗೂ ವಾಡಿಕೆಯಲ್ಲಿದೆ. ಈ ಕ್ರಮದ ವಿವರಗಳು ಹೀಗಿವೆ :

ದಿನದ ಹೆಸರುಗಳು	ಗಂಡು ಮಗು	ಹೆಣ್ಣುಮಗು
ಆದಿತ್ಯವಾರ	ಐತ	ಐತು
ಸೋಮವಾರ	ತೋಮ	ತೋಮು
ಮಂಗಳವಾರ	ಅಂಗಾರೆ	ಅಂಗಾರು
ಬುಧವಾರ	ಬೂದ	ಬೂಬು
ಗುರುವಾರ	ಗುರುವ	ಗುರುಬಿ
ಶುಕ್ರವಾರ	ತುಕ್ರ	ತುಕ್ರಿ
ಶನಿವಾರ	ತನಿಯ	ತನ್ನ್ಯಾರು

ಈ ಬಗೆಯ ನಾಮಕರಣ ಕ್ರಮವನ್ನು ಇತರೆ ದಲಿತ ಮತ್ತು ಶೂದ್ರ ವರ್ಗಗಳಲ್ಲೂ ಕಾಣಬಹುದು. ಈ ಆಧಾರದಲ್ಲಿ ಇಂಥ ಆಚರಣೆ ಹಿಂದುಗಳು ನಂಬುವ ನವಗ್ರಹಗಳ ಪರಂಪರೆಯನ್ನೂ ಹಾಗೂ ದ್ರಾವಿಡ ಸಂಸ್ಕಾರವನ್ನೂ ತೋರಿಸುವುದು.

ಕೊರಗರು ವಿಚಿತ್ರವಾದ ಬೇರೆಬೇರೆ ಬಗೆಯ ಹೆಸರುಗಳನ್ನೂ ತಮ್ಮ ಸಂತಾನಕ್ಕೆ ಇಡುತ್ತಾರೆ. ಉದಾ : ಗಂಡು ಮಕ್ಕಳಿಗೆ ಪ್ರಾಣಿ, ನಿಸರ್ಗ ಸಂಕುಲವನ್ನು ಆಧರಿಸಿ ಹೆಸರಿಡುವ ಕ್ರಮವು ಕೊರಗರಲ್ಲಿದೆ. ಗಂಡು ಮಕ್ಕಳಿಗೆ ಅವರು ಇಡುವ ಹೆಸರುಗಳೆಂದರೆ— ನಕ್ಕುರ (ಎರೆಹುಳ), ಬೆಜಕ್ಕುರ (ತರಗೆಲೆ), ತಬುರ (ಕೆಂಜಿರುವೆ), ಬೊಳುಂಬ (ಒಂದು ಬಗೆಯ ಮೀನು), ಮೆಣ್ಬ (ಮಿಂಚುಳ್ಳಿ), ಬೊಗ್ಗುರ (ಗಂಡುನಾಯಿ), ಪಿಜಿನ (ಇರುವೆ), ಚಲ್ಲ, ಕಟ್ಟಣ, ಕುಂದೆ, ಚಪ್ಪರೆ, ಕರಿಯ, ಕಾಳ, ಬೊಲ್ಲು, ಓಡಿ, ಮಂಗು, ನಂಗು, ನಂದು, ಮಾಂಕು ಇತ್ಯಾದಿ. ಹೆಣ್ಣು ಮಕ್ಕಳಿಗೆ ಸೆಂಜ್ಯಾರು, ಬಾಗಿ, ಅಮಾಸೆ, ತಂಡ್ರೆ, ಬಿಡಗು, ಪೀಂಚಲು ಎಂಬ ಹೆಸರುಗಳನ್ನೂ ಇಡುವರು. ಇತ್ತೀಚೆಗೆ ಪೇಟೆಪಟ್ಟಣಗಳ ಸಂಪರ್ಕಕ್ಕೆ ಬಂದಿರುವ ಕೊರಗರು ಇತರೇ ಹಿಂದೂಗಳಂತೆ ರಮೇಶ, ಸುರೇಶ, ಬಾಬು, ಸುಂದರ, ರಾಮ, ಕೃಷ್ಣ, ಪಾರ್ವತಿ, ಸುಂದರಿ ಮುಂತಾದ ಹೆಸರುಗಳನ್ನಿಡುವುದೂ ಬಳಕೆಗೆ ಬರುತ್ತಿದೆ.

ಕೊರಗರು ಸತ್ತವರನ್ನು ಹೂಳುತ್ತಾರೆ. ಸಾವಿನ ಸೂತಕ 13 ದಿನಗಳವರೆಗೆ ಇರುವುದು. ಚಿಕ್ಕ ಮಕ್ಕಳಿಗೆ ಮೂರು ದಿನಗಳ ಸೂತಕ. ಸತ್ತವರಿಗೆ ಸಂಸ್ಕಾರ ಪ್ರಾರಂಭಿಸುವುದಕ್ಕೆ ಮುಂಚೆ ಸಾಮಾನ್ಯವಾಗಿ ಗುರಿಕಾರನನ್ನು ಕರೆತಂದು ಅವನ ನೇತೃತ್ವದಲ್ಲಿ ಎಲ್ಲಾ ಆಚರಣೆಗಳು ನಡೆಯುವುವು. ಒಂದು ವೇಳೆ ಗುರಿಕಾರ

ಸಿಗದಿದ್ದರೆ ಅವನು ಬರುವವರೆಗೆ ಕಾಯಬೇಕೆಂಬ ಕ್ರಮವೇನೂ ಕೊರಗರಲ್ಲಿಲ್ಲ. ಸೂತಕ ಕಳೆಯುವುದಕ್ಕಾಗಿ 13ನೆಯ ದಿನ ತಿಥಿ ಮಾಡಲಾಗುವುದು. ತಂದೆಗೆ ಜ್ಯೇಷ್ಠ ಪುತ್ರನೂ, ತಾಯಿಗೆ ಕಿರಿಯ ಮಗನೂ ತಲೆ ಬೋಳಿಸಿಕೊಳ್ಳುವ ಕ್ರಮವಿದೆ. ಸಮಾಧಿಯ ಬಳಿ ಅಂದಿನ ಅಡಿಗೆಯ ಪದಾರ್ಥಗಳನ್ನು ಎಡೆ ಇಕ್ಕುತ್ತಾರೆ. ಮಡಿಕೆಗೆ ವಿಭೂತಿ ಕುಂಕುಮವಿರಿಸಿ ತೆಂಗಿನ ಹೂ ಇರಿಸಿ ನೀರು ತುಂಬಿ ಮಗನ ತಲೆ ಮೇಲೆ ಹೊರಿಸಿ ಸಮಾಧಿಗೆ ಮೂರು ಸುತ್ತು ಪ್ರದಕ್ಷಿಣೆ ಬರಲಾಗುವುದು. ಈ ಎಲ್ಲಾ ಆಚರಣೆಗಳು ಬಹುಮಟ್ಟಿಗೆ ಇತರೇ ಹಿಂದೂಗಳಲ್ಲೂ ಇವೆ.

ಶತಶತಮಾನಗಳ ಹಿಂದೆ ಕೊರಗರು ಮತ್ತು ಇತರೇ ಗುಲಾಮ ಜಾತಿಗಳಲ್ಲಿ ಶವಗಳನ್ನು ಸುಡುವ ಪದ್ಧತಿ ಇತ್ತು. ಸಿಡುಬು ರೋಗಕ್ಕೆ ಬಲಿಯಾಗಿ ಸತ್ತವರನ್ನು ಮಾತ್ರವೇ ಹೂಳಲಾಗುತ್ತಿತ್ತು ಎಂದೂ ವಾಲೆಹೌಸ್ ಅಭಿಪ್ರಾಯಪಡುವರು. ಹಿಂದೆ ಕೊರಗರು ಜನನ ಮರಣಗಳ ಸಂದರ್ಭದಲ್ಲಿ ಸಮಾರಂಭಗಳನ್ನು ನಡೆಸಲು ತಮ್ಮ ಧಣಿಗಳ ಒಪ್ಪಿಗೆ ಪಡೆಯಬೇಕಾಗಿತ್ತು. ಸತ್ತವನ ಸಮಾಧಿಯ ಬಳಿ ನಾಲ್ಕು ಅನ್ನದ ಉಂಡೆಗಳನ್ನು ಪ್ರೇತದ ತೃಪ್ತಿಗಾಗಿ ಇಡಲಾಗುತ್ತಿತ್ತು. ಶವವನ್ನು ಹೂಳಿದ 16ನೆಯ ದಿನ ಒಂದು ಹಿಡಿ ಮಣ್ಣನ್ನು ತೆಗೆಯಲಾಗುವುದು. ಸಮಾಧಿಯ ಬಳಿ ಸತ್ತವನ ನೆನಪಿಗೆಂದು ಕಲ್ಲೊಂದನ್ನು ನೆಡಲಾಗುವುದಲ್ಲದೆ ಅದರ ಮೇಲೆ ಸ್ವಲ್ಪ ಅನ್ನ ಮತ್ತು ಹೆಂಡವನ್ನೂ ಸುರಿಯಲಾಗುವುದು. ಅದನ್ನುಂಡು ಸತ್ತವರ ಆತ್ಮವು ಅಂದಿನಿಂದ ತಮ್ಮ ಪೂರ್ವಜರನ್ನು ಸೇರುವುದೆಂಬುದು ಕೊರಗರ ನಂಬಿಕೆ.

ಅಂದರೆ ಎಲ್ಲಾ ಹಿಂದೂಗಳಂತೆ ಕೊರಗರೂ ಆತ್ಮ, ಪ್ರೇತ ಮತ್ತು ಭೂತಗಳನ್ನು ನಂಬುತ್ತಾರೆ ಹಾಗು ಸತ್ತ ಪೂರ್ವಜರನ್ನು ಎಲ್ಲಾ ಜನಾಂಗಗಳಂತೆ ಸದ್ಗತಿ ಕಾಣಿಸಲು ಮುಂದಾಗುತ್ತಾರೆ.

ಳ ಕೊರಗರ ಆಹಾರದ ವಿಧಿ—ನಿಷೇಧಗಳು

ಕೊರಗರು ಅರೆ ಅಲೆಮಾರಿ ಜನಾಂಗದ ಸಾಲಿನಲ್ಲಿ ಸೇರುತ್ತಾರೆ. ಮೂಲದಲ್ಲಿ ಆಹಾರ ಸಂಗ್ರಹಿಸಿಡುವುದು ಇವರಲ್ಲಿ ನಿಷೇಧವಿತ್ತು ಎನ್ನುವ ವಿಚಾರ ತಿಳಿದುಬರುತ್ತದೆ. ಅರೆ ಅಲೆಮಾರಿಗಳಾದ ಇವರು ಒಂದೆಡೆ ನಿಂತಾಗ ಮೂಲದ ಈ ನಿಯಮ ಕಾಲಾಂತರದಲ್ಲಿ ಮೂಲೆಗುಂಪಾಗಿದೆ.

ಕೊರಗರು 'ಎಂಜಲು ಅನ್ನವನ್ನು ತಿನ್ನುವವರು' ಎನ್ನುವ ಕಾರಣದಿಂದ, ಇತ್ತೀಚಿನ ದಿನಗಳಲ್ಲಿ ಸಮಾಜಸುಧಾರಕರ ಚಿಂತಕರ ಗಮನವನ್ನು ಸೆಳೆದಿದ್ದಾರೆ. ನೀವು ಎಂಜಲು ಅನ್ನವನ್ನು ಏಕೆ ತಿನ್ನುತ್ತೀರಿ? ಎಂದು ಪ್ರಶ್ನಿಸಿದರೆ ಅದಕ್ಕೊಂದು ಪೌರಾಣಿಕ ಕಥೆಯನ್ನೇ ಹೇಳುತ್ತಾರೆ. ಈ ಹಿಂದೆ ಕೊರಗರ ಮೂಲ ಕುರಿತು ಪ್ರಸ್ತಾವಿಸುವಾಗ ಅಣ್ಣ–ತಂಗಿಯರ ಕಥೆಯನ್ನು ಗಮನಿಸಿದ್ದೆವು. ಆ ಕಥಾಭಾಗವೇ ಮುಂದುವರಿದು, ಎಂಜಲು ಅನ್ನವನ್ನು ತಿನ್ನುವುದರ ಕುರಿತು ಪ್ರಸ್ತಾಪಿಸುತ್ತದೆ.

ಅಣ್ಣ–ತಂಗಿಯರು ಪರಸ್ಪರ ಕೂಡಬಾರದಾಗಿತ್ತು, ಹೀಗೆ ಕೂಡಿದ್ದರಿಂದಾಗಿ 'ಪಾಪ' ಬಂದಿದೆ. ಈ ಪಾಪದ ಪರಿಹಾರಕ್ಕಾಗಿ ತಂಗಿ ಪರಿತಪಿಸತೊಡಗಿದಳು. ಅಕ್ಕನ ಸಂತಾನದಿಂದ ಬಂದವರು (ಬ್ರಾಹ್ಮಣರು) ತಂಗಿಯನ್ನು ಮತ್ತು ತಂಗಿಯ ಸಂತಾನವನ್ನು ಹಂಗಿಸತೊಡಗಿದರು. ಇದಕ್ಕೆ ಪರಿಹಾರವೇನು ? ಎಂದು ನಾರಾಯಣ ದೇವರಿಗೆ ಕೇಳಲಾಗಿ ; ನಾರಾಯಣನು, ಅಕ್ಕನ ಸಂತಾನದವರು ಹೇಳಿದ ಕೆಲಸವನ್ನು ಕೇಳಿ ಅವರು ತಿಂದು ಬಿಟ್ಟ ಎಂಜಲನ್ನು ತಿಂದರೆ ನೀವು ಮಾಡಿದ ಪಾಪ ಪರಿಹಾರವಾಗುತ್ತದೆ—ಎಂದು ಹೇಳಿದನಂತೆ. ಈ ಕಾರಣಕ್ಕಾಗಿ ಪಾಪದ ಸಂತಾನಕ್ಕೆ ಮೂಲಳಾದ ತಂಗಿಯೂ ಅದಕ್ಕೆ ನಿಮ್ಮ ವರ್ಗದ ಮಕ್ಕಳಾದರೇನಂತೆ? ಅವರೂ ನನ್ನ ಸಂತಾನದವರಲ್ಲವೆ ? ಅವರು ನನ್ನ ಮಕ್ಕಳಲ್ಲವೆ ? ಮಕ್ಕಳು ತಿಂದು ಬಿಟ್ಟದ್ದು ತಾಯಿ ತಿನ್ನಬೇಕಲ್ಲವೇ ? ಹಾಗೆ ನನ್ನ ಮಕ್ಕಳ ಎಂಜಲು ನಾನು ತಿಂದರೆ ತಪ್ಪೇನು ? ಎಂದು, ತನ್ನ ಪಾಪ ಕಳೆದುಕೊಳ್ಳುವುದಕ್ಕಾಗಿ ಎಂಜಲುತಿನ್ನುವ ಕೆಲಸ ಪ್ರಾರಂಭಿಸಿದಳು. ಆ ಎಂಜಲು ಅನ್ನವನ್ನು ತಿನ್ನಲು ಪ್ರಾರಂಭಿಸಿದ ತಂಗಿಯ ಸಂತಾನದವರೇ ನಾವು (ಕೊರಗರು). ಆದಕ್ಕಾಗಿ ನಾವು ಎಂಜಲು ಅನ್ನವನ್ನು ತಿನ್ನುತ್ತೇವೆ ಎಂದು ಕೊರಗರು ಹೇಳಿಕೊಳ್ಳುತ್ತಾರೆ.

ಈ ಎಂಜಲು ಅನ್ನಕ್ಕೆ ಸಂಬಂಧಿಸಿದಂತೆ ಇನ್ನೊಂದು ನಂಬಿಕೆಯೂ ಇದೆ. ಬ್ರಾಹ್ಮಣರ ಎಂಜಲನ್ನು ತಿಂದರೆ ಮುಂದಿನ ಜನ್ಮದಲ್ಲಿ ನಾವು ಅಕ್ಕನ ಮಕ್ಕಳಾಗಿ (ಬ್ರಾಹ್ಮಣರಾಗಿ) ಹುಟ್ಟುತ್ತೇವೆ.

ಚಾರಿತ್ರಿಕ ಹಿನ್ನೆಲೆಯಲ್ಲಿ ಕೊರಗರ ಮೂಲದ ವಿಷಯ ಪ್ರಸ್ತಾಪಿಸುವಾಗ ಬ್ರಾಹ್ಮಣರ ಸಂಬಂಧ ಎಂತಹುದಿತ್ತು ಎಂಬುದನ್ನು ಗಮನಿಸಿದ್ದೇವೆ. ಈ ಪೌರಾಣಿಕ ಕಥೆಯ ಮುಂದುವರೆದ ಭಾಗದಲ್ಲಿ ಕಾಣುವ ವಿಚಾರವೆಂದರೆ ಯಜಮಾನಿಕೆಯ ಪ್ರವೃತ್ತಿ ಮತ್ತು ಜೀತಗಾರಿಕೆಯ ಪ್ರವೃತ್ತಿಯನ್ನು ಕಾಣುತ್ತೇವೆ. ಈ ಕಥೆಯಲ್ಲಿ ಮತ್ತು ವಾಸ್ತವದಲ್ಲಿ, ತಮ್ಮ ಜೀತಪ್ರವೃತ್ತಿಯಿಂದ—ಹಾಗೂ ತಂಗಿ ಸಂತಾನದಿಂದ (ಪಾಪ ಸಂತಾನದಿಂದ) ಬಿಡುಗಡೆ ಪಡೆಯಲು ಹಾತೊರೆಯುವುದನ್ನು ಕಾಣುತ್ತೇವೆ. ಇಲ್ಲಿ ಕರ್ಮಸಿದ್ಧಾಂತದ ಹೇರಿಕೆ ಯಾವ ರೀತಿಯಲ್ಲಿವೆ ಎಂದು ಗುರುತಿಸಿಕೊಳ್ಳಬಹುದು.

ಈ ಕಥೆಯಿಂದ ಎಂಜಲನ್ನು ಕುರಿತಾಗಿ ಕೊರಗರಲ್ಲಿ ಎಂತಹ ಪವಿತ್ರವಾದ ಭಾವನೆ ಇದೆ ಎನ್ನುವದು ತಿಳಿದುಬರುತ್ತದೆ. ಆದರೆ ಕೊರಗರ ಎಂಜಲು ಸವರ್ಣೀಯರಿಗೆ ವಿಷವಾಗಿ ಪರಿಣಮಿಸಿದೆ ಎನ್ನುವ ವಿಷಯ ಕೆಲವು ಆಚರಣೆಗಳ ಮೂಲಕ ತಿಳಿದು ಬರುತ್ತದೆ. ಕೊರಗರಲ್ಲಿ ಬರುವ ಅಂಡೆ ಕೊರಗರು, ಬಿದಿರಿನ ಕೊಳವೆಯನ್ನು (ಅಂಡೆ) ಉಗಿಯುವದಕ್ಕಾಗಿ ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದರು ಎನ್ನುವ ವಿಷಯ ಈ ಹಿಂದೆಯೇ ಗಮನಿಸಿದ್ದೇವೆ. ಇಲ್ಲಿ ಕೊರಗರ ಉಗುಳು ನೆಲಕ್ಕೆ ಬೀಳಬಾರದು, ಬಿದ್ದರೆ ಆದರಿಂದ ಸವರ್ಣೀಯರಿಗೆ ಕೆಡಕುಂಟಾಗುತ್ತದೆ ಎಂದು ತಿಳಿಯಲಾಗುತ್ತದೆ. ಅಲ್ಲದೆ

ಊರಲ್ಲಿ ಬರುವಾಗ ಕೊರಗರು 'ದಂಡ'ವನ್ನು ನೆಲಕ್ಕೆ ಬಡಿದು ಸದ್ದು ಮಾಡುತ್ತ ಬರಬೇಕು ಎನ್ನುವ ನಿಯಮವಿದೆ. 'ನಾನು ಬಂದೆ' ಎಂದು ಎಚ್ಚರಿಕೆ ಕೊಡುವುದಕ್ಕಾಗಿಯೇ ಈ ಸದ್ದಿನಸೂಚನೆ ಇರಬೇಕು. ಅಂದರೆ ಇವರಿಂದ ಬರಬಹುದಾದ ಕೆಡಕುಗಳಿಂದ ಬಿಡುಗಡೆ ಹೊಂದುವುದಕ್ಕಾಗಿ ಈ ಕಟ್ಟಳೆಯನ್ನು ಹೇರಿರುವದು ತಿಳಿದು ಬರುತ್ತದೆ. ಕೊರಗರು ಬಾಯಿಯಲ್ಲಿಯ ಉಗುಳು ನೆಲಕ್ಕೆ ಉಗಿಯುವದರಿಂದ, ಅದನ್ನು ನಾವು (ಶುದ್ಧಜನ) ದಾಟಿದರೆ ಅಥವಾ ತುಳಿದರೆ ರೋಗಕ್ಕೆ ತುತ್ತಾಗಿ ಸಾಯುತ್ತೇವೆ ಎನ್ನುವ ನಂಬಿಕೆ ಇದೆ. ಇಲ್ಲಿ ಕೊರಗರ ಎಂಜಲು ಕೊರಗರಿಗೆ ವಿಷವಾಗಿ, ಬ್ರಾಹ್ಮಣರ ಎಂಜಲು ಕೊರಗರಿಗೆ ಅಮೃತವಾಗಿರುವ ಬಗೆಯನ್ನು ನೋಡುತ್ತೇವೆ.

ಇನ್ನು ಕೊರಗ–ಕೊರಗರಲ್ಲಿಯೇ ಎಂಜಲದ ಕುರಿತು ಇರುವ ವಿಧಿ–ನಿಷೇಧಗಳು ಇನ್ನೂ ಕುತೂಹಲಕಾರಿಯಾಗಿವೆ. ಸಾಮೂಹಿಕವಾದ ಊಟದ ಸಂದರ್ಭದಲ್ಲಿ, ಊಟ ಮಾಡುವಾಗ ಅಚಾತುರ್ಯದಿಂದ ಅನ್ನದ ಅಗುಳು ನೆಲಕ್ಕೆ ಬಿದ್ದರೆ ಅಥವಾ ಇನ್ನೊಬ್ಬನ ತಟ್ಟೆಯಲ್ಲಿ ಬಿದ್ದರೆ ಮತ್ತೆ ಅಂತಹ ಸಾಮೂಹಿಕ ಊಟವನ್ನು ಹಾಕಿಸುವುದಲ್ಲದೆ ತಮ್ಮ ದಂಡವನ್ನು ಕೊಡಬೇಕು ಎನ್ನುವ ನಿಯಮಗಳಿವೆ. ಇಲ್ಲಿ ಕೊರಗ ಮತ್ತು ಬ್ರಾಹ್ಮಣರ ನಡುವಿನ ಸಂಬಂಧದ ನಿಯಮಗಳನ್ನೇ ತಮ್ಮ ಒಳಪಂಗಡಕ್ಕೆ ಅನ್ವಯಿಸಿಕೊಂಡಿರುವುದು ಕಂಡುಬರುತ್ತದೆ. ಇಂಥಹ ಬೇರೆ ಬೇರೆ ಉದಾಹರಣೆಗಳನ್ನು ನೋಡಬಹುದು.

"ಕಳ್ಳು" ಕುಡಿತ ಅವಮಾನಕರವೆಂದು ಈ ಜನಾಂಗದವರು ಭಾವಿಸುವುದಿಲ್ಲ. ಅದನ್ನು ಅಷ್ಟೇ ಪವಿತ್ರತೆಯ ಹಿನ್ನೆಲೆಯಲ್ಲಿಯೇ ನೋಡುತ್ತಾರೆ. ಶುಭ–ಅಶುಭದ ಯಾವುದೇ ಬಗೆಯ ಕಾರ್ಯಕ್ರಮವಿದ್ದರೂ ಕಳ್ಳು ಬೇಕೇಬೇಕು. ಸಾಮೂಹಿಕವಾದ ಕಾರ್ಯಕ್ರಮದಲ್ಲಿ ಕಳ್ಳನ್ನು ಕುಡಿಯುವಾಗ, ನೆಲಕ್ಕೆ ಒಂದು ಹನಿ ಬಿದ್ದರೆ ಸಾಕು ಅದಕ್ಕೆ ತಪ್ಪುದಂಡ ವಿಧಿಸುತ್ತಾರೆ ಇಲ್ಲವೆ ಅಂಥಹುದೇ ಒಂದು ಸಮಾರಂಭವನ್ನು ಮಾತಿಗೆ ತಪ್ಪದೆ ಒಪ್ಪಿಸಬೇಕು ಎನ್ನುವ ನಿಯಮಗಳಿವೆ. ಬಡವರಾಗಿದ್ದಲ್ಲಿ ಖರ್ಚು ಕಡಿಮೆ ಮಾಡಿಸಿ ಆಚರಿಸುವ ಸಂಪ್ರದಾಯಗಳೂ ಇವೆ.

ಕೊರಗರ ಒಳಪಂಗಡಗಳಲ್ಲಿಯ ವಿಧಿ–ನಿಷೇಧಗಳು ವಿಶಿಷ್ಟವಾದ ಗುಣಗಳನ್ನು ಹೊಂದಿವೆ. ಈ ಗುಣಗಳೇ ದಲಿತ ಸಂಸ್ಕೃತಿಯ ಮೌಲ್ಯಗಳಾಗಿ ನಿಲ್ಲುತ್ತವೆ (?). ಕಾಲಾಂತರದಲ್ಲಿ ಇಂಥ ವ್ಯವಸ್ಥೆಗಳಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ. 'ಅಂಡೆ' ಕೊರಗರು ಇನ್ನೊಬ್ಬ ಕೊರಗನ ಅಂಗಳದಲ್ಲಿ ಅಥವಾ ಸಂಮುಖದಲ್ಲಿ ಉಗಿಯಬಾರದು ಎಂಬ ಸಾಂಪ್ರದಾಯಿಕ ನಿಯಮಗಳಿವೆ ಕೊರಗರ ಮತ್ತು ಬ್ರಾಹ್ಮಣರ ಕುರಿತು ಬರುವ ಎಂಜಲಿನ ನಿಷೇಧಗಳು ಹೇಗೆ ಇವೆಯೋ ಅದೇ ರೀತಿ ಕೊರಗ ಕೊರಗರಲ್ಲಿಯೂ ಎಂಜಲ ಕುರಿತು ಅಪವಿತ್ರತೆಯ ಭಾವನೆ ಇರುವುದು (ದ.ಕ.) ಒಡೆದು ಕಾಣುತ್ತವೆ. ಪವಿತ್ರ ಮತ್ತು ಅಪವಿತ್ರ ಎಂಬ ಎರಡೂ ಬಗೆಯ ಆಶಯಾಗಳಲ್ಲಿ ಎಂಜಲಿನ ಸುತ್ತ ಕಂಡುಬರುತ್ತದೆ. ಮೂಲದ ಕತೆಯಲ್ಲಿ ಬರುವ 'ಎಂಜಲ' ಗೌರವ

ಭಾವನೆಯ ವಿಚಾರ, ಈಗ ಅವರಲ್ಲಿಯೇ ಕಡಿಮೆಯಾಗುತ್ತಿದೆ. ಎಂಜಲು ಪವಿತ್ರ ಎಂಬ ವಿಚಾರ ಮೂಲದಲ್ಲಿ ಸಾರ್ವತ್ರಿಕವಾಗಿರಬೇಕು, ಅನಂತರದಲ್ಲಿ ಅಪವಿತ್ರ ಎಂಬ ವಿಚಾರ ಸೇರಿಕೊಂಡಿರಬೇಕು. ಮೇಲು ಜಾತಿಯವರ ಮಕ್ಕಳಿಗೆ ಮೊಲೆಯುಣಿಸಿ 'ಕೊರತ' ಅಥವಾ 'ಕೊರತಳು' ಎಂದು ಹೆಸರಿಡುವ ಸಂಪ್ರದಾಯ ಗಮನಿಸಿದರೆ ಇಲ್ಲಿಯೂ 'ಪವಿತ್ರತೆ'ಯ ವಿಚಾರವನ್ನು ಕಂಡುಕೊಳ್ಳುತ್ತೇವೆ. ಈ ಸಂಪ್ರದಾಯ ಇವತ್ತಿನ ದಿನಗಳಲ್ಲಿಯೂ ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ. ಆದರೆ ಮೊಲೆಯುಣಿಸುವ ಸಂಪ್ರದಾಯ ಗೌರವ ಭಾವನೆಗಾಗಿ ಮತ್ತು ತಮ್ಮ ಅಸಹನೀಯ ಕೃತ್ಯಕ್ಕೆ ಪರ್ಯಾಯವಾಗಿ ನೀಡುವ ಅಥವಾ ಒಳಗೊಳ್ಳುವ ಕ್ರಿಯೆ ಎಂದೂ ಹೇಳಲಾಗುತ್ತದೆ. ಆದರೆ ಕೊರಗಳು ಮೊಲೆಯುಣಿಸುವುದರಿಂದ, ಮಗು ರೋಗದಿಂದ ಪಾರಾಗುತ್ತದೆ ಎಂದು ನಂಬುತ್ತಾರೆ.

ಅಣ್ಣನ ಹೆಂಡತಿ ಮೈದುನನಾದವನಿಗೆ ಊಟಕ್ಕೆ ಬಡಿಸಬಾರದು ಎಂಬುದೊಂದು ನಿಯಮ. ಕೊರಗರು ಸತ್ತ ಪ್ರಾಣಿಗಳನ್ನು ಎಳೆದೊಯ್ಯುವುದಲ್ಲದೆ ಅವುಗಳ ಮಾಂಸವನ್ನು ತಿನ್ನುತ್ತಾರೆ. ಇದಲ್ಲದೆ ಮೇಲು ವರ್ಗದ ಜನರ ಸಭೆ–ಸಮಾರಂಭಗಳಲ್ಲಿ ಹಾಜರಿದ್ದು ಅವರು ಕೊಟ್ಟ ಅನ್ನವನ್ನೂ, ಮಾಂಸದ ತುಂಡುಗಳನ್ನೂ ತಂದು, ತಿಂದು ಉಳಿದದ್ದು ತೊಳೆದು ಒಣಗಿಸಿ ಕಾದಿಟ್ಟು ತಿನ್ನುವ ಸಂಪ್ರದಾಯ ಹಿಂದೆ ಬಳಕೆಯಲ್ಲಿತ್ತು. ಈಗಲೂ ಗುಡ್ಡಗಾಡು ಪ್ರದೇಶದಲ್ಲಿರುವ ಕೊರಗರು ಈ ಕ್ರಮ ಮುಂದುವರಿಸಿಕೊಂಡು ಬಂದಿದ್ದಾರೆ. ಈ ಪದ್ಧತಿಯಲ್ಲಿ ಕೊರಗರು ಆಹಾರ ಸಂಗ್ರಹಿಸುವುದರಿಂದ ಇವರಿಗೆ ಅಡಿಗೆ ಮಾಡಿಕೊಂಡು ತಿನ್ನಲೂ ಬರುತ್ತಿರಲಿಲ್ಲ ಎಂದು ಹೇಳಲಾಗುತ್ತದೆ. ಆದರೆ ಈ ಬಗೆಯ ಆಹಾರ ಸೇವನೆಯಿಂದ ಜರಿದ ಜನ ಇವರ ಎಂಜಲು ಅಪವಿತ್ರವಾದುದು ಎಂಬ ಭಾವನೆ ತಂದಿರುವ ಸಾಧ್ಯತೆಗಳಿವೆ. ಜೊತೆಗೆ ಪವಿತ್ರತೆಯ ಮೆರಗು ಸಿಕ್ಕಿರುವ ಸಾಧ್ಯತೆಗಳೂ ಇವೆ. ಹೇಗೆಂದರೆ ಈ ಬಗೆಯಲ್ಲಿ ಒಣಗಿಸಿ ಆಹಾರವನ್ನು ಕಾಲಾಂತರದಲ್ಲಿ ತಿಂದೂ ಸದೃಢಕಾಯರಾಗಿರುವ ಮತ್ತು ಆರೋಗ್ಯವಂತರಾಗಿರುವ, ಕಲ್ಲನ್ನೂ ತಿಂದು ಅರಗಿಸಿಕೊಳ್ಳುವ ಗುಣ ಹೊಂದಿದ ಇವರನ್ನು ನೋಡಿ ಮೇಲುಜಾತಿಯವರಲ್ಲಿ ಈ ಮನೋಭಾವ ತಂದಿರುವ ಸಾಧ್ಯತೆಗಳಿವೆ. ಪುರಾಣದ ಕಥೆಯಲ್ಲಿ ಬರುವ ತಾಯಿಯು ಅಂದರೆ ಮೂಲದ ನಿವಾಸಿಗಳು ಎನ್ನುವ ಹಿನ್ನೆಲೆಯಲ್ಲಿಯೂ ಈ ಬಗೆಯ ಗೌರವ ಭಾವನೆ ಸೇರಿರುವ ಸಾಧ್ಯತೆಗಳಿವೆ.

ಜೇಡಿ ತಿನ್ನುವ ಪ್ರವೃತ್ತಿಯವರಾದ ಕೊರಗರಲ್ಲಿಯೂ ಸಾಕಷ್ಟು ವ್ಯವಸ್ಥಿತ ನಿಯಮಾಚಾರಗಳಿವೆ ಒಂದೊಂದು ಕೊರಗ ಮನೆತನದವರೂ ಒಂದೊಂದು ಹಳ್ಳಿಯ ಒಂದೊಂದು ಭಾಗಗಳನ್ನು ಗುತ್ತಿಗೆಯಂತೆ, ತಾವು ಜೇಡಿ ತಿನ್ನುವ ಸ್ಥಳಗಳನ್ನು ನಿಗದಿ ಮಾಡಿಕೊಂಡಿರುತ್ತಾರೆ. ಒಂದುವೇಳೆ ಒಬ್ಬ ಕೊರಗ ತನ್ನ ಭಾಗದ ಸೀಮೆಯನ್ನು ಮೀರಿ ಬೇರೊಬ್ಬರ ಭಾಗದ ಸೀಮೆಯಲ್ಲಿ ಬೇಡುತ್ತಿದ್ದರೆ ಅದಕ್ಕಾಗಿಯೇ ಕಲಹಗಳಾಗುತ್ತವೆ. ಇದು ಭೂಮಾಲೀಕರು ಗ್ರಾಮಗಳಲ್ಲಿ ತಮ್ಮ ಗದ್ದೆಗಳ ಕೆಲಸಕ್ಕೆ ಕೆಲಸಗಾರರನ್ನು

ಹಂಚಿಕೊಳ್ಳುವ ಪದ್ಧತಿಯಂತೆ, ಕೊರಗರೂ ಒಂದು ಹಳ್ಳಿಯನ್ನು ಒಡೆದು ತಮ್ಮ ತಮ್ಮಲ್ಲಿಯೇ ಹಂಚಿಕೊಳ್ಳುತ್ತಾರೆ. ಇದೂ ಕೂಡ ಅನುಕರಣೆಯ ಒಂದು ಗುಣವೆಂದೇ ಹೇಳಬಹುದು.

೫ ಕೊರಗರ ಹಬ್ಬ-ಹರಿದಿನಗಳು ಮತ್ತು ಆರಾಧನೆ

ನಿಸರ್ಗದ ಮಡಿಲಿನಲ್ಲಿ ವಾಸಿಸುವ ಕೊರಗರು ಮುಖ್ಯವಾಗಿ 'ಸೂರ್ಯ'ನ ಆರಾಧಕರು. ವೃಕ್ಷ ಮತ್ತು ಜಲಾರಾಧನೆಯೂ ಇದರೊಂದಿಗೆ ಸೇರಿಕೊಂಡಿವೆ. ಈ ಮೂರು ಶಕ್ತಿಗಳನ್ನು ಸಮೀಕರಿಸಿ ಆರಾಧಿಸುವ ಪದ್ಧತಿ ಇದೆ. ಬೆಳಗಿನ ಜಾವದಲ್ಲಿ ಎದ್ದು, ಗಿಡದಡಿಗೆ ಬಂದು ನೀರು ಹಾಕಿ, ನಂತರ ತಾನು ಮುಖ ತೊಳೆದು ಸೂರ್ಯ ದೇವನಿಗೆ ನಮಿಸುವ ವಾಡಿಕೆ ಇದೆ.

ಕೊರಗ ತನಿಯ ದೈವದ ಆರಾಧಕರಾದ ಇವರು ಇತ್ತೀಚಿನ ದಿನಗಳಲ್ಲಿ ಪೀಲಿ ಚಾಮುಂಡಿ, ಮಹಾಕಾಳಿ, ಜುಮಾದಿ, ಗುಳಿಗ ಇಂಥವುಗಳನ್ನು ಆರಾಧಿಸುತ್ತಾರೆ. ಆದರೆ ಇವುಗಳ ಆರಾಧನೆ ಕೊರಗ ತನಿಯನ ಸಂಭ್ರಮಕ್ಕೆ ಏರುವದಿಲ್ಲ. ಧರ್ಮಸ್ಥಳ, ಸುಬ್ರಹ್ಮಣ್ಯ ದೇವರುಗಳ ಪ್ರಭಾವದಿಂದಲೂ ಇವರಿಗೆ ತಪ್ಪಿಸಿಕೊಳ್ಳಲಾಗಿಲ್ಲ. ಇವರಲ್ಲಿ ವಾರದ ದಿನಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇದೆ. ತಮ್ಮ ಮಕ್ಕಳಿಗೆ ಹೆಸರಿಡುವಾಗ ವಾರದ ದಿನಗಳನ್ನೇ ಇಡುತ್ತಾರೆ. ಆರಾಧನೆಯಲ್ಲಿಯೂ ವಾರದ ದಿನಗಳಿಗೆ ಆದ್ಯತೆ ಸಿಗುವುದು ಕಂಡುಬರುತ್ತದೆ. ಆದಿತ್ಯವಾರ ಮತ್ತು ಶುಕ್ರವಾರಗಳನ್ನು 'ಶುಭ' ದಿನಗಳೆಂದು ತಿಳಿಯುತ್ತಾರೆ.

ಇಂಥವುಗಳನ್ನು ಹೊರತುಪಡಿಸಿದರೆ ಇವರಿಗೆ ತಮ್ಮದೇ ಆದ ಸ್ವತಂತ್ರ ಹಬ್ಬಗಳು ಇಲ್ಲ. ಕೊಟ್ಟ ಅನ್ನವನ್ನು ತಿಂದು ಬದುಕನ್ನು ಕಳೆವ ಇವರು ಹಿಂದೂಗಳನ್ನೇ ಅನುಕರಿಸಿದ್ದಾರೆ. ಬ್ರಾಹ್ಮಣರ ಹಬ್ಬದ ಅಥವಾ ಉತ್ಸವದ ದಿನದಂದು ಅವರು ತಿಂದು ಬಿಟ್ಟ ಸಿಹಿಯೂಟವೇ, ಕೊರಗರಿಗೂ ಅದೇ ಹಬ್ಬದ ಸಿಹಿಯೂಟ. ಹೀಗಾಗಿ ಬ್ರಾಹ್ಮಣರ ಹಬ್ಬದ ದಿನಗಳೇ ಇವರಿಗೂ ವಿಶೇಷ ದಿನಗಳಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇದಲ್ಲದೆ ಮಗುವಿನ ಹುಟ್ಟು, ಹೆಣ್ಣು ಋತುಮತಿಯಾದ ದಿನ ಇಂಥವುಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ. ಇವು ಸಾಂಪ್ರದಾಯಿಕವೆನಿಸಿದರೂ, ಉತ್ಸವದ ಮಟ್ಟ ಮುಟ್ಟದಿದ್ದರೂ, ಇಂತಹ ಸಂದರ್ಭಗಳು ಉತ್ಸವದ ಕೊರತೆಯನ್ನು ನೀಗಿಸಿವೆ.

ಬರಹಗಾರರು ಚರ್ಚಿಸಿದಂತೆ ಗೋಕುಲಾಷ್ಟಮಿ ಮತ್ತು ಚೌತಿಯ ಹಬ್ಬಗಳನ್ನು ಆಚರಿಸುತ್ತಾರೆ.' ಇವರ ಅಣ್ಣ–ತಂಗಿಯರ ಕಥೆಯಲ್ಲಿ ಬರುವ ನಾರಾಯಣ ದೇವರ ವಿಚಾರವನ್ನೂ ಗಮನಿಸಿದರೆ ಮತ್ತು ಇಲ್ಲಿ ಅನುಕರಣೆ ಮಾಡಿರುವ ಪದ್ಧತಿಗಳನ್ನು ಗಮನಿಸಿದರೆ ಬ್ರಾಹ್ಮಣರ ಸಂಪ್ರದಾಯಗಳಿಂದ ಹೆಚ್ಚು ಪ್ರಭಾವಿತರಾಗಿರುವುದು ಕಂಡುಬರುತ್ತದೆ. ಬ್ರಾಹ್ಮಣರೆಂದರೆ ಸಾಕು ಹೆದರುತ್ತಾರೆ. ಅವರಲ್ಲಿ ಭಕ್ತಿ–ಭಯ ಎರಡನ್ನೂ ಹೊಂದಿದವರಾಗಿದ್ದಾರೆ.

'ಬಲಿ' ಪದ್ಧತಿಗೆ ಇವರಲ್ಲಿ ವಿಶಿಷ್ಟವಾದ ಸ್ಥಾನವಿದೆ. ಆಡು, ಕೋಳಿ, ಹಂದಿಗಳನ್ನೂ ಬಲಿ ಕೊಡುತ್ತಾರೆ. ಹಿಂದೆ ಗೂಬೆ ಮತ್ತು ಎಮ್ಮೆಗಳನ್ನೂ ಬಲಿಕೊಡುತ್ತಿದ್ದ ವಿವರಗಳು ತಿಳಿದು ಬರುತ್ತವೆ. ಬಲಿ ಕೊಡುವ ಸಂದರ್ಭದಲ್ಲಿ ಒಂದೇ ಹೊಡೆತಕ್ಕೆ ರುಂಡ–ಮುಂಡ ಬೇರೆ ಬೇರೆಯಾಗಬೇಕು ಎನ್ನುವ ನಂಬಿಕೆ ಇದೆ. 'ಬಲಿ'ಯನ್ನು ತೆಗೆದುಕೊಳ್ಳುವವನಿಗೆ 'ಅಸಾದಿ' ಎಂದು ಕರೆಯುತ್ತಾರೆ.

ಕೊರಗ ತನಿಯ ಭೂತದ ಆರಾಧನೆ [ಇದರ ಹೆಚ್ಚಿನ ವಿವರಕ್ಕಾಗಿ ನೋಡಿ: ಅಮೃತ ಸೋಮೇಶ್ವರ ಅವರ ಕೃತಿಯನ್ನು ನೋಡಿರಿ] ಕೊರಗ ಜನಾಂಗದಲ್ಲಿ ಹಿರಿಯದು.

'ಕೊರಗ ತನಿಯು'ನಿಗೆ 'ಕೊರಗ ಚನಿಯು' ಎಂದು ಕರೆಯುವ ವಾಡಿಕೆ ಇದ್ದರೂ, ಅದು ಕಡಿಮೆ. ಈತನ ಕುರಿತು ಸಾಕಷ್ಟು ಪಾಡ್ದನಗಳು ಲಭ್ಯವಾಗುತ್ತವೆ. ಈತನ ತಂದೆ ಕುರವನ ಕೋಡಿ, ತಾಯಿ ಕೊರಪ ಸನಿಯರು. ಬಾಲ್ಯದಲ್ಲಿಯೇ ಇವರನ್ನೂ ಕಳೆದುಕೊಂಡು, ತಾಯಿ ಜೈರಕ್ಕ ಬೈದಲೆಯ ಆಶ್ರಯವನ್ನು ಪಡೆದು ಬೆಳೆಯುತ್ತಾನೆ. ಈತ ಬೆಳೆದ ಸ್ಥಳ ಎಣಸೂರು ಬಾಳಿಕೆ. ಇಲ್ಲಿ ನೇಮ ನಡೆಯುವಾಗ ತೆಂಗಿನ ಎಳೆಯ ಗರಿ, ಬಾಳೆಯ ದಿಂಡು ಏಳೇಳು ಹೊರೆಗಳನ್ನು ತಂದು ಹಾಕಲು ತನಿಯನಿಗೆ ಹೇಳಿದರೆ ಆತ ಏಳರ ಅಂಕಿಯ ಬದಲಾಗಿ ಎಪ್ಪತ್ತರಷ್ಟು ತಂದು ಹಾಕುತ್ತಾನೆ.

ಇಷ್ಟೆಲ್ಲಾ ಕೆಲಸವಾದ ನಂತರ **ನೇಮದ ಜನ ತನಿಯನಿಗೆ** 'ಮಾಡ'ದ ಬಳಿಗೆ ಬರಬಾರದೆಂದು ಹೇಳುತ್ತಾರೆ. "ನಾನು ತಂದ ಶಿರಿ ಬಾಳೆ ಆದೀತು, ನಾನು ಮಾತ್ರ ಮಾಡದ ಸಮೀಪ ಬರಬಾರದೆ?" ಎಂದು ಹತ್ತಿರಕ್ಕೆ ಹೋಗುತ್ತಾನೆ. ಮಾಡದ ಸಮೀಪವೇ ಸಾರಂಗದ ಮರವೊಂದರಲ್ಲಿ ಇರುವ ಕಾಯಿಗಳನ್ನು ನೋಡಿ 'ನಾನು ಬರುವಾಗ ಮನೆಯಲ್ಲಿ ಉಪ್ಪಿನಕಾಯಿ ಮುಗಿದಿದೆ' ಎಂದು ತಾಯಿ ಹೇಳಿದ್ದಳು. **"ಇಲ್ಲಿಂದ ಸಾರಂಗದ ಹುಳಿಯನ್ನು ಒಯ್ಯುತ್ತೇನೆ"** ಎಂದು ಮಾಡದ ಮಾಡಿಗೆ ಹತ್ತಿ ಕೊಯ್ಯುವಾಗ ಮೈಸಂದಾಯ ಮತ್ತು ಕಿನ್ನಿ ಕೊಡೆಂಗನಾರ ದೈವಗಳು ಕಡೆಗಣ್ಣಿನಿಂದ ನೋಡಿ ಕೊರಗ ತನಿಯನನ್ನು ಮಾಯ ಸ್ವರೂಪಮಾಡಿಬಿಡುತ್ತವೆ.

ಹೀಗೆ ಪಾಡ್ದನಗಳಲ್ಲಿ ಬರುವ ಕೊರಗ ತನಿಯನ ಕಥೆ ಸಾಹಸದ ಘಟನೆಗಳಿಂದ ಅಮಾನುಷ ಶಕ್ತಿಯನ್ನು ಹೊಂದಿದವನಾಗಿ, ಪರೋಪಕಾರಿಯಾಗಿ, ತಿಂಡಿಬಾಕನಾಗಿ, ಶ್ರಮ ಜೀವಿಯಾಗಿ ಈತನ ವ್ಯಕ್ತಿತ್ವ ವ್ಯಕ್ತವಾಗಿದೆ. ಕೊರಗ ತನಿಯ ಮರದಿಂದ ಬಿದ್ದು ಸತ್ತ ಎನ್ನುವುದಾಗಲಿ, ಭೂತಗಳು ಮಾಯಮಾಡಿದವು ಎನ್ನುವುದಾಗಲಿ, ಇವು ತನಿಯನ ಸಾವಿನ ಕುರಿತು ಸಾಕಷ್ಟು ಸಂದೇಹಗಳನ್ನು ತಂದೊಡ್ಡುತ್ತವೆ ಮಾಡದ ಹತ್ತಿರ ಹೋಗುವುದು ಕೊರಗ ತನಿಯನಿಗೆ ನಿಷೇಧ. ನಿಷೇಧವಿರುವುದನ್ನು ಹೇಳಿ ಎಚ್ಚರಿಸಿದನಾಗಲೂ, ಮಾಡದ ಮಾಡದಲ್ಲಿ ಕಲ್ಲಿಟ್ಟು ಕಾಯಿಯನ್ನು ಕೀಳುವ ಸಾಹಸಕ್ಕೆ

ಕೈಹಾಕಿದ್ದು, ಅಸ್ಪೃಶ್ಯತನದ ಬಗ್ಗೆ ಪ್ರಶ್ನೆ ಮಾಡಿದ್ದು ದೈವಗಳು ಕಣ್ಣು ಕೆಂಪು ಮಾಡಿದ್ದು ಇವೆಲ್ಲಾ ಗಮನಿಸಿದರೆ, 'ಮಾಯೆ' ಎನ್ನುವ ಶಬ್ದದ ಹಿಂದೆ ಕೊರಗ ತನಿಯನ 'ಕೊಲೆ' ನಡೆದಿದೆ ಎನ್ನುವುದು ಸ್ಪಷ್ಟ. ಮೇಲುವರ್ಗದವರಿಗೆ ಇರುವ ಸವಲತ್ತುಗಳನ್ನು ಪಡೆದುಕೊಳ್ಳುವದಕ್ಕಾಗಿ ಹಂಬಲಿಸುವ ಒಬ್ಬ ಕೆಳವರ್ಗದವನ ಸ್ಥಿತಿ ಇಲ್ಲಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ತನಿಯನನ್ನು ದೈಹಿಕವಾಗಿಯೇ ಇಲ್ಲವಾಗಿಸುವ ಕ್ರಿಯೆ ನಡೆದಿರುವುದನ್ನು ಹೇಳುತ್ತಾರೆ. ಇದು ಸಾಮಾಜಿಕ ವ್ಯವಸ್ಥೆಯ ಪ್ರತೀಕವೆನ್ನುವುದರಲ್ಲಿ ಸಂದೇಹವಿಲ್ಲ.

ತನಿಯನ ಸಾಹಸದ ಗುಣಗಳಿಗೆ ಅನುಗುಣವಾಗಿ ಮತ್ತು ಸಮಾನ ಅವಕಾಶಗಳಿಗಾಗಿ ಹಾತೊರೆಯುವ, ಅಸ್ಪೃಶ್ಯತನದ ಸಮಸ್ಯೆಯನ್ನೇ ಅನುಭವಿಸಿ ಪ್ರತಿಭಟಿಸಿದ ಒಬ್ಬ ಸಾಂಸ್ಕೃತಿಕ ನಾಯಕನಿಗೆ ಈ ಬಗೆಯ ರೂಪ ಸಿಕ್ಕಿದೆ. ಆದರೆ ಇಂದಿನ ಸ್ಥಿತಿ—ಗತಿಗಳಲ್ಲಿ ಕೆಳಜಾತಿಯ 'ಕೊರಗ ತನಿಯ' ಭೂತವನ್ನು ಎಲ್ಲರೂ ಆರಾಧಿಸುತ್ತಿರುವುದು ಒಂದು ವಿಶೇಷ ಎಂದೆನಿಸಬಹುದು. ಆದರೆ ಆ ವಿಶೇಷತೆ ಕೇವಲ ಕೊರಗ ತನಿಯನಂತಹ ದೈವಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದಿಲ್ಲ. ಕೆಳಜಾತಿಯ ಎಲ್ಲ ಹೆಸರುವಾಸಿ ಭೂತಗಳಿಗೆ ಈ ವಿಶೇಷತೆ ಅನ್ವಯಿಸುತ್ತದೆ. ಇದು ಜನಪದದ ವಿಶಿಷ್ಟ ಲಕ್ಷಣವೆಂದೇ ಹೇಳಬೇಕಾಗುತ್ತದೆ. ಇದು 'ಸಂಸ್ಕೃತೀಕರಣಗೊಳಿಸುವ ಒಂದು ಕ್ರಿಯೆ'ಯಾಗಿದೆ.

ಜನಪದದಲ್ಲಿ ಕಾಣುವ ಸಾಮಾನ್ಯ ಲಕ್ಷಣವೆಂದರೆ ಕೆಳಜಾತಿಯ ನಾಯಕನ ಸಾವು ಆದಾಗಲೂ, ವಿಜಯದ ಸಂಕೇತವಾಗಿ ಆ ನಾಯಕನನ್ನೇ ಅಥವಾ ನಾಯಕಿಯನ್ನೇ ಕೇಂದ್ರ ಬಿಂದುವಾಗಿ ಆರಾಧಿಸುವ ಪದ್ಧತಿ ಇದೆ (ಉದಾ : ಮಾರಿಕಾಂಬೆ, ಎಲ್ಲಮ್ಮ, ಜೋಕುಮಾರ ಮುಂತಾದವು). ಆ ಆರಾಧನೆಯಲ್ಲಿ ನಾಯಕ ಅಥವಾ ನಾಯಕಿ ಪ್ರಬುದ್ಧವಾದ ಶಕ್ತಿಯಾಗಿ ಬೆಳೆದಾಗ ಆ ಶಕ್ತಿಯನ್ನು ಮೇಲುವರ್ಗದ ಜನ ತಮ್ಮ ದೇವತೆಯ ಅಥವಾ ದೈವದ ಶಕ್ತಿಗೆ ಸಂಬಂಧ ಹೇಳಿಕೊಳ್ಳುವುದು, ನಂಬಿಕೆ ಸಂಪ್ರದಾಯಗಳನ್ನು ಬೆಳೆಸುವದು ಕಂಡುಬರುತ್ತದೆ. ಕಾಲಾಂತರದಲ್ಲಿ ನಡೆಯುವ ಈ ಕ್ರಿಯೆ ಮೂಲದ ಘಟನೆಗಳನ್ನು ಮರೆಯಿಸಿಬಿಡುತ್ತವೆ (ಕೆಲವು ಸಲ ದುಃಖ ಸೂಚಕವಾದ ಆಚರಣೆ ಇದ್ದಾಗಲೂ ಸಂಭ್ರಮದಿಂದ ಆಚರಿಸುವ ಪದ್ಧತಿ ಬೆಳೆದುಕೊಂಡು ಬಿಡುತ್ತದೆ. ಇಸ್ಲಾಂರಲ್ಲಿಯ ಮೊಹರಂ ಹಬ್ಬ ಇದಕ್ಕೊಂದು ಒಳ್ಳೆಯ ಉದಾಹರಣೆ) ಕೆಳವರ್ಗದ ದೇವತೆ ಅಥವಾ ದೈವ ಮೇಲು ವರ್ಗದ ದೇವತೆಗಳೊಂದಿಗೆ ಅಥವಾ ನಂಬಿಕೆ ಸಂಪ್ರದಾಯಗಳೊಂದಿಗೆ ಸಂಬಂಧ ಪಡೆದುಕೊಂಡಾಗ ಮತ್ತು ಹಿಂದಿನ ಚರಿತ್ರೆಯ ಸ್ಪಷ್ಟವಾದ ಅರಿವು ಇಲ್ಲದೆ ಹೋದಾಗ ಕೆಳವರ್ಗದವರು ಅದನ್ನು ಮನ್ನಿಸಿ ಸ್ವಾಗತಿಸುತ್ತಾರೆ. ಇದರಿಂದ ತಮ್ಮ 'ಶಕ್ತಿ'ಗೂ ವಿಶಿಷ್ಟವಾದ ಗೌರವ ಎಂದು ತಿಳಿಯುತ್ತಾರೆ. ವಿಶೇಷ ಶಕ್ತಿಗಳಲ್ಲಿ ಕಂಡುಬರುವ ಈ ಲಕ್ಷಣಕ್ಕಿಂತ ಕೊರಗ ತನಿಯ ಭೂತವೇನು ಭಿನ್ನವಾಗಿಲ್ಲ. ಕೊರಗ ತನಿಯನ ಹಿಂದಿರುವ ನಂಬಿಕೆ

ಸಂಪ್ರದಾಯಗಳೊಂದಿಗೆ ಇರುವ ಸಂಬಂಧದಿಂದ ಈ ವಿಚಾರ ಗುರುತಿಸಿಕೊಳ್ಳಬಹುದು.

ಹೀಗೆ ಒಂದು ಭೂತ ದೈವ ಅಥವಾ ದೇವರು, ಕೆಳವರ್ಗದಿಂದ ಮೇಲು ವರ್ಗಕ್ಕೆ ಸಂಸ್ಕೃತೀಕರಣಗೊಳ್ಳಲು ಮುಖ್ಯವಾಗಿ ಎರಡು ಕಾರಣಗಳು: ಒಂದು, ಕೆಳವರ್ಗದ ದೇವರಿಗೆ ವಿಶಿಷ್ಟ ಶಕ್ತಿ ಪ್ರಾಪ್ತವಾಗಬೇಕಾದರೆ ನಮ್ಮ ಸಂಪ್ರದಾಯ-ನಂಬಿಕೆ-ದೇವರುಗಳೇ ಕಾರಣ ಎಂದು ಹೇಳಿ ಹೆಮ್ಮೆಪಟ್ಟುಕೊಳ್ಳುವುದು. ಎರಡನೆಯದಾಗಿ, ಆರಾಧನೆಯನ್ನು ಮಾಡುವ ಕೆಳವರ್ಗದ ಜನಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಉದ್ದೇಶವೂ ಇದರಿಂದ ಸಾಧಿತವಾಗುತ್ತದೆ. ಕೊರಗತನಿಯನ ಹಿನ್ನೆಲೆಯಲ್ಲಿ ನೋಡಿದರೆ ಇಂತಹ ಸಾಧನೆಗಳು ಸ್ಪಷ್ಟವಾಗಿ ಗೋಚರವಾಗುತ್ತದೆ. 'ಮಾಯಕ'ದಂತಹ ಶಕ್ತಿ ಶೈಲಿಗಳು ಕೆಳಜಾತಿಯವರಲ್ಲಿ (ವರ್ಗದವರಲ್ಲಿ) ಅನುಕರಣೆ ಅಥವಾ ಹೇರಿಕೆಯ ಸ್ವರೂಪದಿಂದ ಬಂದಂಥವು.

ದಲಿತ ದೈವಗಳನ್ನು ಅಧ್ಯಯನ ಮಾಡುತ್ತ ಹೋದರೆ ಮೇಲುವರ್ಗದವರ ದಬ್ಬಾಳಿಕೆ ಮತ್ತು ದಲಿತರು ಅದಕ್ಕೆ ನೀಡಿರುವ ಪ್ರತಿಭಟನೆ ಸ್ಪಷ್ಟವಾಗುತ್ತದೆ. ತುಳು ಜನಪದ ಸಾಹಿತ್ಯ ಕ್ಷೇತ್ರದಲ್ಲಿ ದಲಿತರ ಪ್ರತಿಭಟನಾ ಸ್ವರೂಪ ಇದರಷ್ಟು ಕಟುವಾಗಿ ಮತ್ತು ನೇರವಾಗಿ ಹೇಳುವ ಬಗೆ ಕನ್ನಡ ಜನಪದ ಸಾಹಿತ್ಯದಲ್ಲಿಯೂ ದೊರೆಯುವುದಿಲ್ಲ. ಬಹುಶಃ ಅನ್ಯಭಾಷಾ ಸಾಹಿತ್ಯದಲ್ಲಿಯೂ ಇಂತಹ ಪ್ರತಿಭಟನಾತ್ಮಕ ರೂಪಗಳು ದೊರೆಯಲಿಕ್ಕಿಲ್ಲ. ದಲಿತೀಯತೆಯ ಹಿನ್ನೆಲೆಯಲ್ಲಿ ದಲಿತ ಪಾಡ್ದನಗಳಿಗೆ ಒಂದು ವಿಶಿಷ್ಟವಾದ ಸ್ಥಾನ ದೊರೆಯುತ್ತದೆ.

೬ ಕೊರಗರ ನಂಬಿಕೆ ಸಂಪ್ರದಾಯಗಳು

ಜನಪದದಲ್ಲಿಯೇ ಆಗಲಿ ಆದಿವಾಸಿಗಳಲ್ಲಿಯೇ ಆಗಲಿ ಅವರಲ್ಲಿರುವ ನಂಬಿಕೆ ಮತ್ತು ಸಂಪ್ರದಾಯಗಳು ಎರಡು ರೀತಿಯ ಪರಿಣಾಮಗಳನ್ನುಂಟು ಮಾಡುತ್ತವೆ. ನಂಬಿಕೆ-ಸಂಪ್ರದಾಯಗಳನ್ನು ಆಚರಿಸುವವರಿಗೆ ರಕ್ಷಣೆ ಒಂದಾದರೆ, ಇನ್ನೊಂದೆಡೆಗೆ ಅವರನ್ನು ಮೇಲಕೇಳದಂತೆ ಹತ್ತಿಕ್ಕುವ ಕೆಲಸವನ್ನು ಮಾಡುತ್ತದೆ. ಹತ್ತಿಕ್ಕುವ ಕೆಲಸವನ್ನು ಮಾಡುವಂತಹ ನಂಬಿಕೆ ಮತ್ತು ಸಂಪ್ರದಾಯಗಳು ಮೇಲುವರ್ಗದವರಿಗೆ ಪೂರಕವಾಗಿರುತ್ತವೆ. ಇಂತಹ ನಂಬಿಕೆಗಳು ಮೇಲುವರ್ಗದವರು ಕೆಳವರ್ಗದವರ ಮೇಲೆ ಹೇರಿದ್ದಾರೆ.

ಉದಾಹರಣೆ:

* ಕೊರಗರು ನೆಲದ ಮೇಲೆ ಉಗಿಯಬಾರದು.
* ಕೊರಗರ ಹೆಸರು ರಾತ್ರಿ ಎತ್ತಬಾರದು.
* ಕೊರಗರು ಊರಲ್ಲಿ ಬರುವಾಗ ದಂಡವನ್ನು ಕುಟ್ಟುತ್ತ ಬರಬೇಕು.

* ಬ್ರಾಹ್ಮಣರ ಎಂಜಲು ತಿಂದರೆ ಮುಂದಿನ ಜನ್ಮದಲ್ಲಿ ಬ್ರಾಹ್ಮಣರಾಗಿ ಹುಟ್ಟುತ್ತಾರೆ.
* ನವರಾತ್ರಿಯಲ್ಲಿ ಕೊರಗ ವೇಷ ಹಾಕದಿದ್ದರೆ ಅವರಿಗೆ ಕಾಡಿಕೆ ಇದೆ.
* ಬಟ್ಟೆ ತೀಡಬಾರದು.
* ಅನ್ನ ಸಂಗ್ರಹಿಸಬಾರದು.
* ಕೊರಗರ ಶವ ಯಾರ ಕಣ್ಣಿಗೂ ಬೀಳದ ಹಾಗೆ ತೆಗೆದುಕೊಂಡು ಹೋಗಬೇಕು.
* ಮನೆಯಲ್ಲಿ ಸೂತಕ, ಗ್ರಹಚಾರ ಇದ್ದರೆ ಕೊರಗರಿಗೆ ಅನ್ನದಾನ ಮಾಡಬೇಕು.
* ಬಟ್ಟೆಗಳನ್ನು ಹೆಣೆದು ಕೊಡುವ ಕೆಲಸ ನಾರಾಯಣನೇ ಹೇಳಿದ್ದು.

ಇನ್ನೂ ಕೆಲವು ನಂಬಿಕೆಗಳು ಕೊರಗರ ಆಂತರಿಕ ವಲಯಕ್ಕೆ ಸಂಬಂಧಿಸಿದವು. ಇವು ಅವರ ಆಚಾರ–ವಿಚಾರ ಹೇಳುವಂತಹವಾಗಿದ್ದರೂ ಪ್ರಗತಿಪರ ವಿಚಾರದ ಹಿನ್ನೆಲೆಯಲ್ಲಿ ನೋಡಿದಾಗ ಅವು ಕೊರಗರಿಗೆ ಪೂರಕವೆನಿಸಿದರೂ ಅವರದೇ ಆದ ಸಾಮಾಜಿಕ ಬಂಧವನ್ನು ಸುರಕ್ಷಿತವಾಗಿಡಲು ಬಂದವುಗಳಾಗಿವೆ. ಇವು ಕುಟುಂಬ ಮತ್ತು ಸಾಮೂಹಿಕ ಐಕ್ಯತೆಯ ಭಾವನೆಯನ್ನು ಕೆದುಕದಿರಲಿ ಎನ್ನುವ ಕಾರಣಕ್ಕಾಗಿ ಬಂದಿವೆ.

—ಅಣ್ಣನ ಮಡದಿಯಾದವಳು ಮೈದುನನಿಗೆ ಊಟಕ್ಕೆ ಬಡಿಸಬಾರದು.
—ಚಿಕ್ಕಮಕ್ಕಳಿಗೆ ಕಳ್ಳು ಕುಡಿಸಿದರೆ ರೋಗ–ರುಜಿನಗಳು ಬರುವುದಿಲ್ಲ.
—ಕನ್ನೆಯಾದವಳು ಪ್ರಾರ್ಥನೆ ಮಾಡಿದರೆ ದೇವರು ಬೇಗನೆ 'ಓ' ಎನ್ನುತ್ತಾನೆ.
—ಒಂದೇ ಬಳಿಯಲ್ಲಿ ರಕ್ತಸಂಬಂಧ ಬೆಳೆಸಬಾರದು.

ಹೀಗೆ ಕೊರಗರಲ್ಲಿಯ ನಂಬಿಕೆಗಳು ಎರಡೂ ಮುಖದಿಂದಲೂ ನೋಡಲು ಸಾಧ್ಯವಾಗುತ್ತವೆ. ಮೊದಲ ಭಾಗದ ನಂಬಿಕೆಗಳು ಕೊರಗ ಜನಾಂಗಕ್ಕೆ ಮಾರಕವಾದವು ಮತ್ತು ಕೊರಗರ ಬೆಳವಣಿಗೆಯನ್ನು ಹತ್ತಿಕ್ಕುವಂತಹವು. ಆದರೆ ಕೊರಗರು ಈ ಬಗೆಯ ನಂಬಿಕೆಗಳನ್ನು ಬಿಟ್ಟುಕೊಡಲು ಸಿದ್ಧರಿಲ್ಲ. ಎರಡನೆಯ ಭಾಗದ ನಂಬಿಕೆಗಳು ಅವರ ಸಾಮಾಜಿಕ ಬಂಧದ ಮತ್ತು ಕೌಟುಂಬಿಕ ಸಂಬಂಧಗಳ ಬಿಗುವನ್ನು ಕುರಿತು ತಿಳಿಸುತ್ತವೆ.

ಇವರ ನ್ಯಾಯಪದ್ಧತಿಯೂ ವಿಶಿಷ್ಟವಾಗಿರುವುದರಿಂದ ಅದನ್ನು ಪ್ರತ್ಯೇಕವಾಗಿಯೇ ನೋಡಲಾಗಿದೆ. ಇವರ ನ್ಯಾಯ ಪದ್ಧತಿ ವಿಶಿಷ್ಟವಾದ ನಂಬಿಕೆಗಳ ಮೇಲೆ ನಿಂತಿರುವುದರಿಂದ, ಇದು ದಿವ್ಯದ ಇನ್ನೊಂದು ಸ್ವರೂಪವೆಂದೇ ಹೇಳಬಹುದು.

ಮದುವೆ, ಮೊದಲ ಋತುಮತಿಯ ದಿನ, ಜನನ–ಮರಣ, ದೈವಭಕ್ತಿ, ಆರಾಧನೆ ಇವೆಲ್ಲವುಗಳ ಹಿಂದೆ ತಮ್ಮದೇ ಆದ ವಿಶಿಷ್ಟ ಬಗೆಯ ಆಚರಣೆಗಳಿವೆ. ಇವೆಲ್ಲ ಅವರ ಬದುಕಿನ ಅಲೆಮಾರಿತನದ ಹಿನ್ನೆಲೆಯಲ್ಲಿ ಕಂಡುಬರುವಂಥವು. ಕೊರಗ ತನಿಯನ ಸುತ್ತ ಇರುವ ಕೆಲ ಸಂಚಿಕೆಗಳನ್ನು ಗಮನಿಸಿ.

* ಕೊರಗತನಿಯು ನಂಬಿದವರ ಕೈ ಬಿಡುವುದಿಲ್ಲ.
* ಒಂದು ಗುಡಾಣದಲ್ಲಿ ಕಳ್ಳು ತುಂಬಿ 'ಬಾ' ಕರೆದರೆ ಸಾಕು, ಕೊರಗತನಿಯು ಪ್ರತ್ಯಕ್ಷನಾಗುತ್ತಾನೆ.
* ಕೊರಗತನಿಯು ಬರುವಾಗ ಎಲ್ಲಿಯೂ ದೀಪವಿರಬಾರದು.
* ಸ್ತ್ರೀಯರು ತನಿಯನ ಕೋಲವನ್ನು ನೋಡಬಾರದು.
* ಕಾಡಿನಲ್ಲಿ ರಾತ್ರಿ ದಾರಿ ತಪ್ಪಿದವರಿಗೆ ಕೊರಗತನಿಯು ಪ್ರತ್ಯಕ್ಷನಾಗಿ ದಾರಿ ತೋರಿಸುತ್ತಾನೆ.

ಕೊರಗರ ವಾದ್ಯ, ವೃತ್ತಿ, ನಾಟಿ ವೈದ್ಯತನದ ಹಿನ್ನೆಲೆಯಲ್ಲಿ ಇಂಥವೆಲ್ಲವೂ ನಂಬಿಕೆ ಮತ್ತು ಸಂಪ್ರದಾಯಗಳಿಂದ ಬಂಧಿಸಲ್ಪಟ್ಟಿವೆ. ನಂಬಿಕೆ–ಸಂಪ್ರದಾಯ–ಆಚರಣೆಗಳನ್ನು ಬಿಟ್ಟು ಇವರ ಬದುಕೇ ಇಲ್ಲವೇನೋ ಎನ್ನುವಂತೆ ಕೊರಗರ ಬದುಕಿನಲ್ಲಿ ಹಾಸುಹೊಕ್ಕಿವೆ.

೭ ಕೊರಗರ ವಿವಾಹ ಪದ್ಧತಿ

ಕೊರಗರದು ಸರಳ ವಿವಾಹ ಪದ್ಧತಿ. ಕೊರಗ ಜಾತಿಯ ಹಿರಿಯ ಗುರಿಕಾರರಿಬ್ಬರು ಸೇರಿ ಗಂಡು ಹೆಣ್ಣಿನವರ ಆಶಯ ಅಭಿಪ್ರಾಯದ ಮೇರೆಗೆ ವಿವಾಹ ನಿರ್ಣಯ ಮಾಡುತ್ತಾರೆ. ಕೊರಗರಲ್ಲಿ ಹೆಣ್ಣು ಋತುಮತಿಯಾದ ನಂತರವೇ ವಿವಾಹ ಮಾಡುವುದು ರೂಢಿಯಲ್ಲಿದೆ. ಅಂದರೆ ಕೊರಗರಲ್ಲಿ ಬಾಲ್ಯ ವಿವಾಹ ಪದ್ಧತಿ ಇಲ್ಲ. ಪುಷ್ಪವತಿಯಾದ ಹೆಣ್ಣು ಮಾತ್ರವೇ ವಿವಾಹ ಯೋಗ್ಯಳು ಎನ್ನುವ ಪರಿಕಲ್ಪನೆ ಕೊರಗರ ದಲಿತ ಸಂಸ್ಕೃತಿಯ ಹೆಗ್ಗಳಿಕೆ ಆಗಿದೆ. ಕೊರಗರಲ್ಲಿ ವಿವಾಹವೇರ್ಪಡಿಸುವುದಕ್ಕೆ ಮುಂಚೆ ಗಂಡು ಹೆಣ್ಣಿನ ಒಪ್ಪಿಗೆ ಕೇಳಿಯೇ ಸಂಬಂಧ ಏರ್ಪಡಿಸಲಾಗುವುದು. ಹೆಣ್ಣು ಗಂಡಿನ ಪೈಕಿ ಯಾರಾದರೊಬ್ಬರಿಗೂ ವಿವಾಹ ಒಪ್ಪಿಗೆಯಿಲ್ಲದಿದ್ದಲ್ಲಿ ಅಂಥ ವಿವಾಹವನ್ನು ಮಾಡುವುದಿಲ್ಲ. ಇಲ್ಲಿ ಕೊರಗ ಹೆಣ್ಣು–ಗಂಡಿಗೆ ವಿವಾಹದಂಥ ಗುರುತರವಾದ ಕಾರ್ಯದಲ್ಲಿ ಆಯ್ಕೆ ಸ್ವಾತಂತ್ರ್ಯವಿರುವುದು ಆಶ್ಚರ್ಯತರುವುದು. ಇದು ಕೊರಗರ ದಲಿತ ಸಂಸ್ಕೃತಿಯ ಬೆಳಕಾಗಿದೆ. ಈ ಅರ್ಥದಲ್ಲಿ ಕೊರಗರು ಪ್ರತಿನಿಧಿಸುವ ವಿವಾಹ ಸಂಸ್ಕೃತಿ ವೈದಿಕ ವಿವಾಹ ಸಂಸ್ಕಾರಕ್ಕಿಂತಲೂ ಭಿನ್ನವೂ ಪ್ರಗತಿಪರವೂ ಆಗಿರುವುದನ್ನು ಕಾಣಬಹುದು.

ಕೊರಗರ ಸಮಾಜದಲ್ಲಿ ಕನ್ಯೆಗೆ ಬಹಳ ಮಹತ್ವವಿದೆ. ಕನ್ಯೆಯೇ ದೇವರ ಪೂಜೆಗೆ ಮುಂದಾಳು. ಈ ಅಂಶ ಕೊರಗ ಸಮಾಜದಲ್ಲಿ ಹೆಣ್ಣಿಗಿರುವ ಪ್ರಾಧಾನ್ಯತೆಯನ್ನು ಸೂಚಿಸುವುದು.

ಕೊರಗರು ತಮ್ಮ ಮಕ್ಕಳ ವಿವಾಹವೇರ್ಪಡಿಸುವುದಕ್ಕೂ ಹಿಂದಿನ ಕಾಲದಲ್ಲಿ ತಮ್ಮ ಧಣಿಗಳ ಒಪ್ಪಿಗೆ ಪಡೆಯಬೇಕಾಗಿತ್ತು. ಈ ನಿರ್ಬಂಧ ಕೊರಗರು ಗುಲಾಮ ಸ್ಥಿತಿಗಿಳಿದಿದ್ದರಿಂದ ಹುಟ್ಟಿಕೊಂಡುದಾಗಿದೆ.

ವಿವಾಹಕ್ಕೆ ಕೊರಗರಿಗೆ ಆದಿತ್ಯವಾರವೇ ಬಹಳ ಪ್ರಶಸ್ತವಾದುದು. ಇತರೇ ಗುಲಾಮು ಜಾತಿಗಳಿಗೆ ವಿವಾಹಕ್ಕೆ ಸೋಮವಾರ ಶುಭ ದಿನ. ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲೇ ನಡೆಯುವುದು ರೂಢಿ. ವಿವಾಹ ದಿನದಂದು ಗಂಡು ಹೆಣ್ಣಿಗೆ ಮಂಗಳ ಸ್ನಾನ ಮಾಡಿಸಿ ಚಾಪೆಯ ಮೇಲೆ ಈರ್ವರನ್ನು ಜೋಡಿಯಾಗಿ ಕೂರಿಸುತ್ತಾರೆ. ಮದುವಣಿಗರ ಮುಂದೆ ತಟ್ಟೆಯಲ್ಲಿ ಅಕ್ಕಿ ಇರಿಸುವರು. ಕೊರಗರ ವಿವಾಹ ಸಮಾರಂಭದ ನೇತೃತ್ವವನ್ನು ಹಿರಿಯ ಕೊರಗನೊಬ್ಬನು ವಹಿಸುವನು. ಆತನು ವಧೂವರರ ತಲೆಯ ಮೇಲೆ ಅಕ್ಕಿ ಕಾಳನ್ನು ಹಾಕಿ ಆಶೀರ್ವದಿಸುವನು. ಅನಂತರ ಗಂಡಸರು ಆಮೇಲೆ ಹೆಂಗಸರು ವಧೂವರರನ್ನು ಆಶೀರ್ವದಿಸುವರು. ಆಗ ವರನು ತನ್ನ ವಧುವಿಗೆ ಎರಡು ಬೆಳ್ಳಿಯ ನಾಣ್ಯಗಳನ್ನು ನೀಡುವನು; ತನ್ನ ಸಮಾಜ ಬಾಂಧವರಿಗೆ ಆರು ಊಟಗಳನ್ನು ನೀಡುವನು. ಇದು ಹಿಂದೆ ನಡೆದು ಬರುತ್ತಿದ್ದ ಕೊರಗರ ವಿವಾಹ ಕ್ರಮ.

ಕೊರಗರಲ್ಲಿ ವಿವಾಹ ಒಪ್ಪಂದವಾದ ಮೇಲೆ ಹೆಣ್ಣಿಗೆ ತಾಮ್ರದುಂಗುರ ತೊಡಿಸುವ ಕ್ರಮ ಉಂಟು. ಹೆಣ್ಣಿಗೆ ವಿವಾಹದಲ್ಲಿ ಗಂಡು ೧ ರೂ. ತೆರ ಕೊಡುತ್ತಾನೆ. ಕೊರಗರು ವಿವಾಹಕ್ಕೆ ಶುಕ್ರವಾರವೂ ಪ್ರಶಸ್ತ ದಿನವೆಂದು ಪರಿಗಣಿಸುವರು. ಕೊರಗರಲ್ಲಿ ಹೆಣ್ಣು–ಗಂಡುಗಳು ಜನಿಸಿದ ದಿನಗಳಂದು ವಿವಾಹ ಮಾಡುವುದಿಲ್ಲ. ಗಂಡು ವಿವಾಹದಂದು ಹೆಣ್ಣಿಗೆ ಮಣಿಸರ ತೊಡಿಸುತ್ತಾನೆ. ಇದು ಕರಿಮಣಿ ಅಲ್ಲ. ಬದಲಿಗೆ ಬಣ್ಣ ಬಣ್ಣದ ಮಣಿಗಳ ಸರ. ಅದರಲ್ಲಿ ತಾಳಿ ಇರುವುದಿಲ್ಲ. ಹೆಚ್ಚು ಹೆಚ್ಚು ಮಣಿಸರಗಳುಳ್ಳ ಕೊರಗರೇ ಶ್ರೀಮಂತರು ಎಂಬ ನಂಬಿಕೆ ಕೂಡಾ ಅವರಲ್ಲುಂಟು.

ಕೊರಗರಲ್ಲೂ ಒಂದೇ ಬಳಿಗೆ ಸೇರಿದವರು ವಿವಾಹವಾಗುವುದಿಲ್ಲ. ಅವರು ಸೋದರ ಸಂಬಂಧಿಗಳಾದ್ದರಿಂದ ಅಂಥ ವಿವಾಹ ನಿಷಿದ್ಧ. ಮದುವೆ ಸಂದರ್ಭದ ಊಟೋಪಚಾರಗಳಲ್ಲಿ ಕಿಂಚಿತ್ತು ಲೋಪವಾದರೂ ಕೊರಗರು ಸಹಿಸುವುದಿಲ್ಲ. ಅದನ್ನು ಗಂಭೀರ ಪ್ರಮಾದವೆಂದೇ ಪರಿಗಣಿಸಿ ದಂಡ ವಿಧಿಸುವುದೂ ಉಂಟು. ಈ ಊಟೋಪಚಾರಗಳಲ್ಲಿ ಕೊರಗರು ತಿನ್ನುವುದರಲ್ಲಿ ಕುಡಿಯುವುದರಲ್ಲಿ ಪರಸ್ಪರ ಸ್ಪರ್ಧಿಸುವುದೂ ಉಂಟು. ಅದು ಅವರ ಸಂತೋಷ ಕೂಟದ ಅವಿಚ್ಛಿನ್ನ ಭಾಗವಾಗಿರುವುದು.

ಇತರೇ ಗುಲಾಮು ಜಾತಿಗಳಲ್ಲಿ ಗಂಡು ಹೆಣ್ಣಿಗೆ ವಿವಾಹ ವಿಚ್ಛೇದನ ಸುಲಭವಾಗಿ ದಕ್ಕುವುದು. ಅಂಥ ವಿಚ್ಛೇದನಕ್ಕೆ ತಮ್ಮ ಸಮಾಜದ ಒಪ್ಪಿಗೆ ಸಿಕ್ಕರೆ ಸಾಕು. ಅಂಥ ಮಹಿಳೆಯರು ಮರು ವಿವಾಹವಾಗಲು ಅವಕಾಶವುಂಟು. ಆದರೆ ಕೊರಗರಲ್ಲಿ ಕೇವಲ ಸಣ್ಣ ಪುಟ್ಟ ಕಾರಣಗಳಿಗಾಗಿ ಹುಟ್ಟಿಕೊಳ್ಳುವ ಭಿನ್ನಾಭಿಪ್ರಾಯಗಳಿಗಾಗಿ ವಿವಾಹ ವಿಚ್ಛೇದನ ದೊರಕುವುದಿಲ್ಲ. ಒಂದು ಗಂಡು–ಒಂದು ಹೆಣ್ಣಿನ ಸಂಬಂಧವೇ ಪವಿತ್ರವೆಂದು ಕೊರಗರು ನಂಬುವರು. ಆದ್ದರಿಂದ ಕೊರಗರಲ್ಲಿ ಮೊದಲ ಹೆಂಡತಿ ಗಟ್ಟಿಮುಟ್ಟಾಗಿ ಆರೋಗ್ಯವಿರುವಾಗಲೇ ಗಂಡು ಮರುಮದುವೆಯಾಗುವುದು

ಸಾಧ್ಯವಿಲ್ಲ. ಆದರೆ ವಿಧುರ ಅಥವಾ ವಿಧವೆಯೊಬ್ಬಳು ಮರುಮದುವೆಯಾಗಬಹುದು. ಮರುಮದುವೆಯಲ್ಲಿ ಧಾರೆಯೆರೆಯುವುದು ಕೊರಗರಲ್ಲಿಲ್ಲ.

ಕೊರಗರ ವಿವಾಹ ಸಂಪ್ರದಾಯಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯ, ನೈತಿಕತೆ, ಕೌಟುಂಬಿಕ ಭದ್ರತೆ, ಸರಳತೆಗೆ ಪ್ರಮುಖ ಸ್ಥಾನವಿದೆ. ಈ ದೃಷ್ಟಿಯಿಂದ ಕೊರಗರ ವಿವಾಹ ಸಂಪ್ರದಾಯ ದಲಿತ ಸಂಸ್ಕೃತಿಯ ಪ್ರಗತಿಪರತೆಯ ಪ್ರಮುಖ ಲಕ್ಷಣವಾಗಿದೆ.

೮ ಕೊರಗರ ನ್ಯಾಯ ಪದ್ಧತಿ

ಕೊರಗ ಜನಾಂಗದವರು ತಮ್ಮದೇ ಆದ ವಿಶಿಷ್ಟ ನ್ಯಾಯದಾನ ವ್ಯವಸ್ಥೆ ಹೊಂದಿದ್ದಾರೆ. ವಿವಿಧ ಬಗೆಯ ತಪ್ಪುಗಳಿಗೆ ನ್ಯಾಯಕ್ಕೆ ಕೂಡುವುದು ಎಲ್ಲಾ ಕೆಳವರ್ಗಗಳಲ್ಲಿ ನಡೆದು ಬಂದಿದೆ. ದೇವರ ಉತ್ಸವ, ಭೂತ ಕೋಲ, ಮದುವೆ ಸಂದರ್ಭಗಳಲ್ಲಿ ಕೊರಗರು ಒಂದೆಡೆ ಸೇರಿದಾಗ ಹಿಂದಿನ ಸಮಸ್ಯೆಗಳನ್ನು ಎತ್ತಿಕೊಂಡು ನ್ಯಾಯದಾನ ವಿಚಾರಣೆ ನಡೆಸುವುದು ಕೊರಗರಲ್ಲಿ ವಾಡಿಕೆ. ನ್ಯಾಯ ವಿಚಾರಣೆಯ ನೇತೃತ್ವವನ್ನು ಕೊರಗರ ಗುರಿಕಾರರು ಹಿರಿಯರು ವಹಿಸುವುದು ರೂಢಿಯಲ್ಲಿದೆ.

ಕೊರಗರು ಸ್ವಭಾವತಃ ಬಹಳ ನಾಜೂಕಿನ ಸೂಕ್ಷ್ಮ ಜನ. ಅವರು ಚಿಕ್ಕಪುಟ್ಟ ತಪ್ಪುಗಳನ್ನೂ ಗಂಭೀರವಾಗಿ ತೆಗೆದುಕೊಳ್ಳುವುದುಂಟು. ಕೊರಗರ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುವ ತಪ್ಪುಗಳ ಮಾದರಿಗಳೆಂದರೆ :

೧. ಹಬ್ಬ ಹಾದಿನಗಳಲ್ಲಿ ಒಬ್ಬರ ಎಲೆಯ ಅನ್ನದ ಅಗುಳು ಇನ್ನೊಬ್ಬನ ಎಲೆಗೆ ಬೀಳುವುದು.
೨. ಸೇಂದಿ ಸುರಿಯುವವನು ಅದನ್ನು ನೆಲಕ್ಕೆ ಕೈ ತಪ್ಪಿ ಚೆಲ್ಲುವುದು.
೩. ಹೆಂಡತಿಯ ಒಪ್ಪಿಗೆಯಿಲ್ಲದೆ ಗಂಡನು ಮರುವಿವಾಹವಾಗುವುದು.
೪. ಹೆಣ್ಣು ವ್ಯಭಿಚಾರದಲ್ಲಿ ತೊಡಗುವುದು.
೫. ಕೊರಗತನಿಯ ದೈವದ ಆರಾಧನೆಯನ್ನು ನಡೆಸದಿರುವುದು.
೬. ಸಮೂಹ ನೃತ್ಯದಲ್ಲಿ ಪಾಲ್ಗೊಳ್ಳದಿರುವುದು.
೭. ಕೊರಗರು ಭಿಕ್ಷೆಗಾಗಿ ಮೇಲ್ವರ್ಗದವರ ಮನೆಗಳನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡಿರುತ್ತಾರೆ. ಈ ಕ್ರಮದ ಉಲ್ಲಂಘನೆಯೂ ತಪ್ಪಾಗುವುದು.
೮. ಕೊರಗರು ಕೊಳಲು ಬಾರಿಸಲು ಬೇರೆ ಬೇರೆ ಸ್ಥಳಗಳಿಗೆ ಹೋಗುವ ಅವಕಾಶ ಮತ್ತು ಜವಾಬ್ದಾರಿಯನ್ನು ಅವರ ಗುರಿಕಾರ ತೀರ್ಮಾನಿಸಿ ನಿರ್ಣಯಿಸುವನು. ಆ ಪ್ರಕಾರ ಕೊರಗನು ನಡೆದುಕೊಳ್ಳದಿದ್ದರೆ ಗುರಿಕಾರನು ತಪ್ಪಿತಸ್ಥ ಕೊರಗನಿಗೆ ದಂಡ ವಿಧಿಸಬಹುದು. ದಂಡವನ್ನು ಹಣದ ರೂಪದಲ್ಲಿ ನೀಡಬೇಕು ಅಥವಾ ಕೊರಗ ಸಮಾಜದ ಬಾಂಧವರಿಗೆ ಊಟ ಹಾಕಬೇಕು.

ವ್ಯಭಿಚಾರ ಮಾಡಿದ ಹೆಣ್ಣೊಬ್ಬಳನ್ನು ವಿಚಾರಣೆಗೊಳಪಡಿಸಿ ದಂಡಿಸುವ ಕ್ರಮ ಈ ರೀತಿ ಇದೆ: ಹೆಣ್ಣು ದೇಹ ಸಂಬಂಧಹೊಂದಿದ ಗಂಡು ಅವಳಂತೆ ಕೆಳವರ್ಗಕ್ಕೆ ಸೇರಿದವನಾಗಿದ್ದರೆ ಆತನು ಆಕೆಯು ವಿವಾಹವಾಗಬೇಕು. ಅಂಥ ಸಂದರ್ಭದಲ್ಲಿ ಹೆಣ್ಣನ್ನು ಶುದ್ಧೀಕರಣಗೊಳಿಸಲಾಗುವುದು. ಆ ಕಾರ್ಯಕ್ಕಾಗಿ ಗಂಡು ತನ್ನ ಸ್ವಂತ ಖರ್ಚಿನಲ್ಲಿ ಗುಡಿಸಲನ್ನು ಕಟ್ಟಿ ಅವಳನ್ನು ಅದರೊಳಗಿರಿಸಬೇಕು. ಆಗ ಆ ಗುಡಿಸಲಿಗೆ ಬೆಂಕಿ ಹಚ್ಚಲಾಗುವುದು. ಆ ಹೆಣ್ಣು ಅಲ್ಲಿಂದ ತಪ್ಪಿಸಿಕೊಂಡು ಬೇರೆ ಸ್ಥಳಕ್ಕೆ ಓಡಿ ಹೋಗುವಳು. ಅಲ್ಲಿಯೂ ಅದೇ ರೀತಿ ಮಾಡಲಾಗುವುದು. ಹೀಗೆ ಏಳು ಸಲ ಹೆಣ್ಣನ್ನು ಶುದ್ಧೀಕರಿಸಲಾಗುವುದು. ಆಗ ಮಾತ್ರ ಆ ಹೆಣ್ಣು ಪ್ರಾಮಾಣಿಕಳೆಂದೂ ಮತ್ತು ವಿವಾಹಯೋಗ್ಯಳೆಂದೂ ಕೊರಗರು ಭಾವಿಸುತ್ತಾರೆ. ವಾಲ್‌ಹೌಸ್‌ನ ಪ್ರಕಾರ ತಪ್ಪಿತಸ್ಥ ಹೆಣ್ಣನ್ನು ನದಿಯ ದಡದಲ್ಲಿ ಉದ್ದಕ್ಕೆ ಸಾಲಾಗಿ ಕಟ್ಟಿದ ಏಳು ಗುಡಿಸಲುಗಳೊಳಗೆ ಮೊದಲು ಬಿಡಲಾಗುವುದು. ಆಮೇಲೆ ಅವಕ್ಕೆ ಬೆಂಕಿ ಹಚ್ಚಲಾಗುವುದು. ಆಗ ಆ ಹೆಣ್ಣು, ಬೊಂಬುಗಳ ಹಿರಿದುಕೊಂಡು ಅಲ್ಲಿಂದ ಜೀವಂತ ತಪ್ಪಿಸಿಕೊಳ್ಳಬೇಕು. ಆ ಬಳಿಕ ಆಕೆ ಪರಿಶುದ್ಧಳಾದಂತೆ.

ಶುದ್ಧೀಕರಣಕ್ಕೆ ಪವಿತ್ರ ಕಾರ್ಯಗಳಿಗೆ ಅಗ್ನಿಯನ್ನು ಆರ್ಯರು ದ್ರಾವಿಡರು ಇಬ್ಬರೂ ಬಳಸುವರು. ಆರ್ಯರು ಅಗ್ನಿಷ್ಟಿಕೆ ಹಾಕಿ ತುಪ್ಪ ಎಣ್ಣೆ ಎರೆದು ಜ್ವಾಲೆ ಎಬ್ಬಿಸಿ ಅಗ್ನಿದೇವನನ್ನು ಆರಾಧಿಸುವರು. ಕೊರಗರೂ ಸೇರಿದಂತೆ ದ್ರಾವಿಡರು ಅಗ್ನಿಯನ್ನು ಕೆಂಡದ ರೂಪದಲ್ಲಿ (ಕೊಂಡ ಹಾಯುವುದು) ಆರಾಧಿಸುತ್ತಾರೆ. ದ್ರಾವಿಡರು ಮೈಗೆ ಕೆಂಡದ ಬೂದಿ ಅರಿಸಿನ ಮೈಗೆ ಹಚ್ಚಿಕೊಂಡು ಶುದ್ಧರಾಗುವರು. ಈ ಕ್ರಮ ಆರ್ಯರಲ್ಲಿಲ್ಲ. ಹೀಗೆ ಕೊರಗರ ಶುದ್ಧೀಕರಣ ಕ್ರಿಯೆಯು ದ್ರಾವಿಡ ಪರಂಪರೆಗೆ ಸೇರಿದ್ದು ತನ್ನದೇ ಆದ ವಿಶಿಷ್ಟತೆ ಪಡೆದಿದೆ. ಹೆಣ್ಣನ್ನು ಶುದ್ಧೀಕರಣಗೊಳಿಸುವುದು ಕುಟುಂಬ ವ್ಯವಸ್ಥೆಯಲ್ಲಿ ಶೀಲಕ್ಕಿರುವ ಪಾವಿತ್ರತೆಯನ್ನು ಸಾರುವುದು. ಈ ಅರ್ಥದಲ್ಲಿ ಕೊರಗರದ್ದೂ ಹಿಂದೂ ಸಂಸ್ಕಾರವೇ.

ಕೊರಗರಲ್ಲಿ ತೀರಾ ಇತ್ತೀಚಿನವರೆಗೂ ಅವಿಭಕ್ತ ಕುಟುಂಬವ್ಯವಸ್ಥೆ ಗಟ್ಟಿಯಾಗಿ ಬೇರೂರಿತ್ತು. ಈ ಕಾರಣದಿಂದಾಗಿ ಆಯಾಯ ಅವಿಭಕ್ತ ಕುಟುಂಬ ಪರಂಪರೆಯ ಹಿರಿಯನೇ ಎಲ್ಲ ಬಗೆಯ ವಿಚಾರಗಳಲ್ಲೂ ತೀರ್ಮಾನ ನಿರ್ಣಯ ತೆಗೆದುಕೊಳ್ಳುವವನು. ಆತನ ಕುಟುಂಬದ ಇತರ ಸದಸ್ಯರಿಗೆ ಅವರು ಬುದ್ಧಿವಂತರಾಗಿದ್ದರೂ ನ್ಯಾಯ ವಿಚಾರಣೆಯಲ್ಲೇ ಕುಟುಂಬದ ಕಲಹಗಳು ಹಾಗೂ ಆಗು-ಹೋಗುಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಇರುವುದಿಲ್ಲ.

ತಪ್ಪಿತಸ್ಥನು ದಂಡತೆರುವ ಸ್ಥಿತಿಯಲ್ಲಿಲ್ಲದಿದ್ದರೆ ಅವನಿಗೆ ಹೆಚ್ಚಿನ ಕಾಲಾವಕಾಶ ಕೊಡಲಾಗುವುದು ಅಥವಾ ತಪ್ಪಿತಸ್ಥನ ಪರವಾಗಿ ಆತನ ಧಣಿಯಾಗಲಿ ನೆಂಟರಿಷ್ಟರಾಗಲಿ ದಂಡ ತೆರುವುದಕ್ಕೂ ಕೊರಗರಲ್ಲಿ ಅವಕಾಶವಿದೆ. ಎಲ್ಲಾ ಸಾಂಪ್ರ

ದಾಯಿಕ ನ್ಯಾಯ ವ್ಯವಸ್ಥೆಗಳು ಆಧುನಿಕತೆಯ ಧಾಳಿಗೆ ಸಿಕ್ಕಿ ಕುಸಿಯುತ್ತಿರುವಂತೆ ಇಂದು ಕೊರಗರ ನ್ಯಾಯ ಪದ್ಧತಿಯೂ ಬಿರುಕುಬಿಟ್ಟು ಕುಸಿಯುತ್ತಿದೆ.

೯ ಕೊರಗರ ಮನರಂಜನೆ ಮತ್ತು ಸಂಗೀತ

ಕೊರಗರಲ್ಲಿ ತಮ್ಮದೇ ಆದ ವಿಶಿಷ್ಟ ವಾದ್ಯಗಳಿವೆ. 'ಈರಣ' ಎಂಬುದು ಚರ್ಮದ ವಾದ್ಯ. ಇದರೊಂದಿಗೆ 'ಕರಂಡೆ' ಎಂಬುದು ಇನ್ನೊಂದು ವಾದ್ಯ. ಈ ಎರಡು ವಾದ್ಯಗಳಲ್ಲಿ ಈರಣ ಇಮ್ಮುಖ ಚರ್ಮದ ವಾದ್ಯವಾಗಿದ್ದು, ಒಂದೆಡೆ ಗುಣಿಯಿಂದ (ಕೋಲು) ಇನ್ನೊಂದೆಡೆ ಕೈಯನ್ನು ಬಳಸಿ ನುಡಿಸುತ್ತಾರೆ. ಕರಂಡೆ ಒಮ್ಮುಖ ಚರ್ಮದ ವಾದ್ಯ. ಇದನ್ನು ಗುಣಿಗಳಿಂದ ಬಾರಿಸಲಾಗುತ್ತದೆ. ಇವುಗಳಲ್ಲಿ ಸೇರುವ, ಅತ್ಯಂತ ಪ್ರೀತಿಯ ವಾದ್ಯ ಕೊಳಲು. ಇದು ಅಡ್ಡ ಕೊಳಲು. ಇದರಲ್ಲಿ ಕೊಳಲಿನ ತುದಿಯನ್ನು ಬಾಯಿಯಲ್ಲಿ ಹಿಡಿದು ಊದುವ ಕೊಳಲು ಇಲ್ಲ. ತಮಗೆ ಇಂತಹದೇ ಅಡ್ಡಕೊಳಲೇ ಆಗಬೇಕು ಎಂದು ಹೇಳಿ ಕಥೆಯೊಂದಿಗೆ ಕೊರಗತನಿಯನಿಗೆ ತಳಕು ಹಾಕುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೈ ತಾಳಗಳನ್ನೂ ಈ ವಾದ್ಯಗಳೊಂದಿಗೆ ಬಳಸುವುದು ಕಂಡುಬರುತ್ತದೆ

ಶುಭ ಮತ್ತು ಅಶುಭ, ಈ ಎರಡೂ ಬಗೆಯ ಕಾರ್ಯಕ್ರಮಗಳಲ್ಲಿ ಇವರ ಸಂಗೀತ ವಾದ್ಯಗಳು ಮೊಳಗುತ್ತವೆ. ಅಂದರೆ, ಹಬ್ಬ-ಹರಿದಿನಗಳಲ್ಲಿ ಜನಿಯನ ಕೋಲದ ಸಂದರ್ಭದಲ್ಲಿ, ಯಾರಾದರೂ ಸತ್ತಾಗ—ಈ ವಾದ್ಯಗಳನ್ನೂ ನುಡಿಸಲಾಗುತ್ತದೆ. ಶುಭಸಂದರ್ಭದಲ್ಲಿ ನುಡಿಸುವ ಗತ್ತುಗಳು ಬೇರೆ ದುಃಖದ ಸಂದರ್ಭದಲ್ಲಿ ನುಡಿಸುವ ಗತ್ತುಗಳು ಬೇರೆಯಾಗಿವೆ.

ಊರಿನ ಸಾಮೂಹಿಕವಾದ ಕಾರ್ಯಕ್ರಮಗಳಲ್ಲಿಯೂ ಇವರು ಭಾಗವಹಿಸುತ್ತಾರೆ. ಕಂಬಳದಂತಹ ಸಂದರ್ಭದಲ್ಲಿ ಇವರ ವಾದ್ಯಗಳ ನಾದ ಹರಿಯುತ್ತದೆ. ಆದರೆ ಆ ಸಂಭ್ರಮದ ಕೇಕೆಯ ಬಣ್ಣದಲ್ಲಿ ಇವರ ವಾದ್ಯಗಳ ನಾದ ಯಾರ ಕಿವಿಗೂ ಬೀಳುವುದಿಲ್ಲ. ಕಂಬಳದ ಗದ್ದೆಯಲ್ಲಿ ಜನರಿಲ್ಲದ ಯಾವುದೋ ಒಂದು ಮೂಲೆಯಲ್ಲಿ ಕುಳಿತು ಇವರು ವಾದ್ಯಗಳನ್ನು ನುಡಿಸುತ್ತಾರೆ. ಇಂತಹದೆ ಇನ್ನೊಂದು ಸಂದರ್ಭ ಭೂತಾರಾಧನೆಯಲ್ಲಿ ನೋಡಬಹುದು. ಸೇವೆಯ ಸಂದರ್ಭದಲ್ಲಿ ಇವರು ಭೂತಾರಾಧನೆಯಾ ಗಡಿಪ್ರದೇಶದ ಒಂದು ಮೂಲೆಯಲ್ಲಿ ಕುಳಿತು ಅಥವಾ ಮರದಡಿಯಲ್ಲಿ ಕುಳಿತು ವಾದ್ಯವನ್ನು ನುಡಿಸುತ್ತಾರೆ. ಭೂತಾರಾಧನೆಯ ಸಂದರ್ಭದಲ್ಲಿ 'ಪುರುಷರು' (ಜೋಗಿಗಳು) ಭೂತಗಳ ನೃತ್ಯಕ್ಕೆ, ವಾದ್ಯಗಳನ್ನು ಹಿಮ್ಮೇಳವಾಗಿ ಒದಗಿಸುತ್ತಾರೆ. ಈ ಪುರುಷರು ವಾದ್ಯ ನುಡಿಸಲು ಪ್ರಾರಂಭಿಸಿದರೆ ದೂರದ ಗಡಿಯಲ್ಲಿ ಕುಳಿತ ಕೊರಗರೂ ಅವರ ಧ್ವನಿಯೊಂದಿಗೆ ವಾದ್ಯಗಳನ್ನು ನುಡಿಸುತ್ತಾರೆ. ಪುರುಷರು ನಿಲ್ಲಿಸಿದಾಕ್ಷಣ ಇವರೂ ನಿಲ್ಲಿಸುತ್ತಾರೆ. ಸುಮಾರು ದೂರದಲ್ಲಿ ಕುಳಿತು ನುಡಿಸುವ ಇವರ ವಾದ್ಯಗಳ ನಾದ ಯಾರಿಗೂ ಕೇಳುವುದಿಲ್ಲ. ತಮ್ಮ ಸಂತೃಪ್ತಿ

ಗಾಗಿಯೇ ಇವರು ನುಡಿಸುತ್ತಾರೆ. ಇವರ ಈ ಸಂಗೀತಕ್ಕೆ ಸಾರ್ವಜನಿಕರ ಅಪೇಕ್ಷೆ ಕಡಿಮೆ ಎನ್ನುವದಕ್ಕಿಂತ, ಇವರ ಸಂಗೀತಕ್ಕೆ ಬೆಲೆಯೇ ಇಲ್ಲದಂತೆ ಚಪ್ಪಾಳೆ ತಟ್ಟಿ ನಕ್ಕುಬಿಡುತ್ತಾರೆ. ಕಂಬಳದ ಸಂದರ್ಭದಲ್ಲಿಯೂ ಇದೇ ಸ್ಥಿತಿ.

ಸಂಗೀತಗಾರರು ಯಾವುದೇ ಕಾರ್ಯಕ್ರಮಕ್ಕೆ ಹೋಗಬೇಕಾದರೆ, ಕೊರಗರ ಗುರಿಕಾರನೇ ಸಂಗೀತಗಾರರನ್ನು ಆಯ್ಕೆಮಾಡಿ ಕಳುಹಿಸುತ್ತಾನೆ. ಯಾವ ಮನೆಯ ಹೆಣ್ಣಿಗೆ ಸೂತಕವಿರುತ್ತದೆಯೋ ಆ ಮನೆಯ ಸಂಗೀತಗಾರನನ್ನು ಯಾವುದೇ ಕಾರ್ಯ ಕ್ರಮಕ್ಕೆ ಕಳುಹಿಸುವುದಿಲ್ಲ. ಸೂತಕದ ಹೆಣ್ಣಿಗೆ ನೇರ ಸಂಬಂಧಹೊಂದಿದವರು ಆರಾಧನೆಯಲ್ಲಿ ವಾದ್ಯನುಡಿಸಬಾರದು ಎನ್ನುವ ನಂಬಿಕೆಯೂ ಇದೆ.

ಕೊರಗರ ಸಂಗೀತ ಕೀಳುಮಟ್ಟದ್ದೇನಲ್ಲ ಮತ್ತು ಬೇತಾಳದ ಸೂರಿನವರು ಎಂದಿಲ್ಲ. ಶಾಸ್ತ್ರೀಯವಾದ ಸಂಗೀತ ಅಲ್ಲದೆಹೋದರೂ ಅವರಿಗೆ ಅವರದೇ ಆದ ಸಂಗೀತದ ಗತ್ತುಗಳಿವೆ. ಒಂದೊಂದು ಸಂದರ್ಭಕ್ಕೆ ಒಂದೊಂದು ಬಗೆಯ ಗತ್ತು (ತಾಳ)ಗಳನ್ನು ನುಡಿಸುವುದು ಗಮನಿಸಿದರೆ ಅವರ ಪರಂಪರೆಯಲ್ಲಿಯ ತರಬೇತಿ ಎಷ್ಟು ಎನ್ನುವುದು ಗೊತ್ತಾಗುತ್ತದೆ. ಕೆಲವೆಡೆ ಇವರನ್ನು ಕರೆಯಿಸಿ ವಾದ್ಯ ನುಡಿಸಲು ಹೇಳಿದರೆ ಇನ್ನೂ ಕೆಲವೆಡೆ ಇವರು ತಾವಾಗಿಯೇ ಹೋಗಿ ವಾದ್ಯ ನುಡಿಸು ತ್ತಾರೆ. 'ಅದು ನಮ್ಮ ಕರ್ತವ್ಯ' ಎಂದು ಅವರು ಭಾವಿಸುತ್ತಾರೆ. ಆ ಕೆಲಸ ನಾವು ಮಾಡದೆಹೋದರೆ 'ದೈವಗಳು ಮುನಿಯುತ್ತವೆ' ಎಂದು ಹೆದರುತ್ತಾರೆ. ಕರೆಯ ದಿದ್ದರೂ ಹೋಗಿ ವಾದ್ಯ ನುಡಿಸುವ ಸಂಪ್ರದಾಯವನ್ನು ಗಮನಕ್ಕೆ ತಂದುಕೊಂಡರೆ, ಮೊದಲು ಆಯಾ ಸ್ಥಳದಲ್ಲಿ ಇವರೇ ವಾದ್ಯ ನುಡಿಸುತ್ತಿರಬೇಕು. ಅಶುಭದ ಲಕ್ಷಣಗಳು ಇವರಿಗೆ ಆರೋಪವಾದ ಅನಂತರದ ಘಟ್ಟದಲ್ಲಿ ಇವರನ್ನು ಆ ಕೆಲಸದಿಂದ ತೆಗೆದುಹಾಕಿರಬೇಕು ಎಂಬ ಸಂದೇಹಗಳು ಬರುತ್ತವೆ. ಪುರುಷರು ಮೂಲತಃ ಇಲ್ಲಿಯವರಲ್ಲ. ವಲಸೆ ಬಂದು ಇವರ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೆ.

ಈ ಕಾರಣಗಳಿಂದಾಗಿ ಪರಂಪರಾಗತವಾಗಿ ಬಂದ ಅವರ ಆ ಸಂಗೀತಕ್ಕೆ ಪ್ರೋತ್ಸಾಹ ಸಿಕ್ಕದೆ ಕ್ಷೀಣಿಸಿರಬೇಕು. ಸಂಗೀತಕ್ಕೆ 'ಭೇದ–ಭಾವವಿಲ್ಲ ಕುಲೀನ ನಾದರೂ ಅವನನ್ನು ಮೇಲಕ್ಕೆ ಎತ್ತುತ್ತದೆ.

ಉತ್ತರ ಕರ್ನಾಟಕದಲ್ಲಿ 'ಕೊರವರು' ಎನ್ನುವ ಒಂದು ಜನಾಂಗವಿದ್ದು ಅವರೂ ವಾದ್ಯಗಳನ್ನು ನುಡಿಸುತ್ತಾರೆ ಮತ್ತು ಬುಟ್ಟಿಗಳನ್ನು ಹೆಣೆಯುವ ಕೆಲಸ ವನ್ನೇ ಮಾಡುತ್ತಾರೆ. ಮೊದಲು ಇವರು ಪರಂಪರೆಯ ವಾದ್ಯಗಳನ್ನು ನುಡಿಸು ತ್ತಿದ್ದರು. ಅವಕ್ಕೆ ಬೆಲೆ ಸಿಕ್ಕದೇ ಹೋದಾಗ ತಮ್ಮ ವಾದ್ಯಗಳಲ್ಲಿ ಬದಲಾವಣೆ ಯನ್ನು ತಂದುಕೊಂಡರು. ಊರ ಎಲ್ಲ ಜನತೆಯ ಕಾರ್ಯಕ್ರಮದಲ್ಲಿ ಇವರು ಭಾಗವಹಿಸುತ್ತಾರೆ. ಜಾತಿಯಿಂದ ಕೀಳಾದರೂ ಸಂಗೀತದಿಂದ ಅವರಿಗೆ ಸಿಕ್ಕ ಸ್ಥಾನ ದೊಡ್ಡದು. ಕೊರವರಿಗೂ–ಕೊರಗರಿಗೂ ಹೆಚ್ಚಿನ ಸಾಮ್ಯತೆಗಳು ಕಂಡುಬರುತ್ತವೆ. ಆದರೆ ಇಲ್ಲಿಯ ಕೊರಗರು ಸಂಗೀತ ಪರಂಪರೆಯಲ್ಲಿ ಮೇಲುವರ್ಗದವರಿಂದ ವಂಚಿತ

ರಾಗಿದ್ದಾರೆ. ಇವರಿಗೆ ಆಧುನಿಕ ವಾದ್ಯಗಳ ಸೌಕರ್ಯವನ್ನು ಒದಗಿಸಿ ಕೊಟ್ಟು ಮೇಲೆತ್ತಲೂ ಮತ್ತು ಸಮಾಜದಲ್ಲಿ ಹೆಚ್ಚಿನ ಸ್ಥಾನ–ಮಾನ ದೊರಕಿಸಿ ಕೊಡಲು ಸಾಧ್ಯವಿದೆ. ಈ ದಿಸೆಯಲ್ಲಿ ಪ್ರಯತ್ನಗಳು ನಡೆದರೆ ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಎರಡೂ ದಿಸೆಗಳಿಂದ ತೀವ್ರತರವಾದ ಬೆಳವಣಿಗೆ ಹೊಂದಲು ಸಾಧ್ಯವಿದೆ.

ಕೊರಗರು ಮನರಂಜನೆಗೆ ಸಂಗೀತವನ್ನೂ ಬಳಸಿಕೊಳ್ಳುತ್ತಾರೆ. ಕೆಲ ಸಂದರ್ಭಗಳಲ್ಲಿ ಮೋಜಿಗಾಗಿ ಅನ್ಯಜಾತಿಯವರೂ ಇವರ ಸಂಗೀತ ಕೇಳುವುದಕ್ಕಾಗಿ ಕರೆಯಿಸುತ್ತಾರೆ. ಆದರೆ ಅಲ್ಲಿ ಗಂಭೀರತೆ ಕಡಿಮೆ. ಇವರಲ್ಲಿ ಪ್ರತ್ಯೇಕವಾಗಿ ಮನರಂಜನೆಯ ಪರಿಕರಗಳು ಇರುವುದು ಕಡಿಮೆ. ನೋಜಿನ ಮತ್ತು ಬಳಿಯ ಸಮಸ್ಯೆಯ ಆಟಗಳು ಇವರಲ್ಲಿ ಬಳಕೆಯಲ್ಲಿವೆ. ಇದಲ್ಲದೆ ಚೌಕಾದಾರ ಆಟದ ಮನೆಗಳನ್ನು ಬರೆದು ಆಡುವ ರೀತಿಯೂ ಇವರಲ್ಲಿ ಕಂಡುಬರುತ್ತದೆ. ಡೋಲಿನೊಂದಿಗೆ ಇವರ ಮಕ್ಕಳು ಹಾಡಿ ಕುಣಿಯುವ ಬಗೆ ಹೆಚ್ಚು ಬಳಕೆಯಲ್ಲಿದೆ. ಈಗಾಗಲೇ ಎಲ್ಲ ಬರಹಗಾರರು ಈ ವಿಷಯವನ್ನು ಗುರುತಿಸಿದ್ದಾರೆ.

೧೦ ಕೊರಗರ ಭಾಷೆ

ಕೊರಗ ಜನಾಂಗದವರು ತಮ್ಮ ತಮ್ಮ ಮನೆಗಳಲ್ಲಿ ಮಾತನಾಡುವ ಭಾಷೆಯನ್ನು ಆ ಜನಾಂಗದ ಹೆಸರಿನಿಂದಲೇ 'ಕೊರಗ' ಎಂದು ಕರೆಯಲಾಗುತ್ತದೆ. ಕೊರಗ ಭಾಷೆಯು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದುದಾಗಿದೆ. ಸರ್ವೇಸಾಮಾನ್ಯವಾಗಿ ಕೊರಗರು ದ್ವಿಭಾಷಿಗಳು ಹಾಗೂ ಮೂಡು ಕೊರಗರು ಮಾತ್ರ ಬಹು ಭಾಷಿಗಳಾಗಿದ್ದಾರೆ. ಅಂದರೆ ಕೊರಗರು ವ್ಯಾವಹಾರಿಕ ಜೀವನದಲ್ಲಿ ಹೊರಗೆ ತುಳು, ಕನ್ನಡವನ್ನು ಬಳಸುವರು. ಮನೆಯಲ್ಲಿ ತಮ್ಮದೇ ಆದ ಕೊರಗ ಭಾಷೆಯನ್ನು ಮಾತನಾಡುವರು. ತಮ್ಮ ಕೊರಗ ಭಾಷೆಯು ತುಳು, ತಮಿಳು, ಕನ್ನಡ ಮತ್ತು ಮಲಯಾಳ ಮುಂತಾದ ದ್ರಾವಿಡ ಭಾಷೆಗಳ ಸಂಮಿಶ್ರಣದಿಂದಾದುದಾಗಿದೆ ಎಂದು ನಂಬುತ್ತಾರೆ.

ಕೊರಗರು ತಮ್ಮ ಭಾಷೆಯನ್ನು ಇತರರಿಗೆ ಕಲಿಸುವುದಿಲ್ಲ; ಇತರರು ಕೊರಗರೊಂದಿಗೆ ಅವರು ದಲಿತರೆಂಬ ಕಾರಣಕ್ಕೆ ಬೆರೆಯುವುದಿಲ್ಲ. ಹೀಗಾಗಿ ಕೊರಗರು ಬೇರೆ ಜನಾಂಗದವರೆದುರಿಗೆ ತಮ್ಮ ಭಾಷೆಯನ್ನಾಡುವುದಿಲ್ಲ. ಈ ವಿಷಯದಲ್ಲಿ ಕೊರಗರು ಸಂಕೋಚ ಸ್ವಭಾವದವರು. ಕೊರಗರನ್ನು ಅವರ ಭಾಷೆಯ ಬಗೆಗೆ ವಿಚಾರಿಸಿದರೆ ಅವರಿಗೆ ಬಹಳ ಕೋಪ ಬರುವುದೆಂದು ವಾಲ್‌ಹೌಸ್ ಒಂದು ಶತಮಾನದ ಹಿಂದೆಯೇ ಬರೆದಿದ್ದಾರೆ. ಅಂಥ ಸಂದರ್ಭಗಳಲ್ಲಿ ಕೊರಗನೊಬ್ಬನು ಬಹಳ ವಿಚಿತ್ರವಾಗಿ ವರ್ತಿಸುವನು ಎನ್ನುವುದು ವಾಲ್‌ಹೌಸ್‌ರವರ ಅನುಭವ. ಹೀಗಾಗಿ ತೀರಾ ಇತ್ತೀಚಿನವರೆಗೆ ಕೊರಗ ಭಾಷೆಯ ವೈಜ್ಞಾನಿಕ ಅಧ್ಯಯನ ಸಾಧ್ಯವಾಗಿರಲಿಲ್ಲ.

ಕೊರಗ ಭಾಷೆಯನ್ನು ಮೊತ್ತ ಮೊದಲಿಗೆ ಗುರುತಿಸಿ ಅಧ್ಯಯನ ಮಾಡಲೆತ್ನಿಸಿದವರು ಬ್ರಿಟಿಷ್ ಅಧಿಕಾರಿಗಳು. 19ನೆಯ ಶತಮಾನದ ಕೊನೆಯ ಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ಒಂದು ಸಾವಿರದಷ್ಟು ಕೊರಗರು ಕೊರಗ ಭಾಷೆಯನ್ನಾಡುತ್ತಿದ್ದರು. ಜನಗಣತಿ ಅಧಿಕಾರಿಗಳು ಕ್ರಿ.ಶ. ೧೮೮೧ ರಿಂದಲೂ ಕೊರಗ ಭಾಷೆಯನ್ನು ತುಳು ಭಾಷೆಯ ಉಪಭಾಷೆಯ ರೂಪವೆಂದೇ ಪರಿಗಣಿಸುತ್ತಿದ್ದಾರೆ. ಆದರೆ ಈಗಾ ಇತ್ತೀಚೆಗೆ ಡಾ. ಡಿ. ಎನ್. ಎಸ್. ಭಟ್ (೧೯೭೧) ಎಂಬುವರು ನಡೆಸಿದ ಕ್ಷೇತ್ರಕಾರ್ಯ ಆಧರಿಸಿದ ಅಧ್ಯಯನದಿಂದ ಮೇಲ್ಕಂಡ ಅಭಿಪ್ರಾಯವನ್ನು ಬದಲಾಯಿಸಬೇಕಾಗುವುದು. ಡಾ. ಭಟ್‌ರವರ ಅಧ್ಯಯನವು ಕೊರಗ ಭಾಷೆಯು ಸ್ವತಂತ್ರವಾದ ದ್ರಾವಿಡ ವರ್ಗದ ವಿಶಿಷ್ಟ ಭಾಷೆಯಾಗಿದ್ದು ಅದು ಮೂರು ಉಪಭಾಷಾ ಸ್ವರೂಪಗಳನ್ನು ತನ್ನ ಗರ್ಭದಲ್ಲಡಗಿಸಿಕೊಂಡಿದೆ; ಹಾಗು ಕೊರಗ ಭಾಷೆಯು ತುಳುವಿನೊಂದಿಗೆ ಹೊಂದಿರುವ ಸಂಬಂಧವು ಆಳವೂ ಮತ್ತು ದೂರ ಸ್ವರೂಪದ್ದೂ ಆಗಿದೆ ಎನ್ನುವುದನ್ನು ಪ್ರತಿಪಾದಿಸಿದೆ.

ಕೊರಗ ಭಾಷೆಗೆ ಸ್ವತಂತ್ರ ಅಸ್ತಿತ್ವವಿದೆ. ಅದು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಪ್ರತ್ಯೇಕ ಲಿಪಿ ಇಲ್ಲದ ಭಾಷೆ. ಕೊರಗರಲ್ಲಿ ಸುಶಿಕ್ಷಿತರಿಲ್ಲವೇ ಇಲ್ಲದ ಕಾರಣ ಕೊರಗ ಭಾಷೆಯನ್ನು ಬರೆಯಲು ಬಳಸಲಾಗುತ್ತಿಲ್ಲ. ನಮಗೆ ತಿಳಿದು ಬಂದ ಪ್ರಕಾರ ಕೊರಗ ಜನಾಂಗದಲ್ಲೇ ಕೇವಲ ಇಬ್ಬರು ಮೂವರು ವಿದ್ಯಾವಂತರಿದ್ದಾರೆ. ಅವರು ಸಿಂಡಿಕೇಟ್ ಬ್ಯಾಂಕಿನಲ್ಲಿ ರಾಜ್ಯ ಸರ್ಕಾರದ ಯೋಜನಾ ಇಲಾಖೆಯಲ್ಲಿದ್ದಾರೆ. ಹಾಗು ಉಡುಪಿ–ಪುತ್ತೂರಿನ ಹನುಮಂತನಗರದ ಒಬ್ಬ ಯುವಕ ಪದವಿ ತರಗತಿಯಲ್ಲಿ ಕಲಿಯುತ್ತಿದ್ದಾನೆ. ಹೀಗಾಗಿ ಕೊರಗರು ತಮ್ಮ ಭಾಷೆಯನ್ನು ಬರೆಯಲು ಕನ್ನಡ ಅಥವಾ ಬೇರೆ ಯಾವುದೇ ಭಾಷೆಯನ್ನು ಬಳಸುತ್ತಾರೆ ಎನ್ನುವುದನ್ನು ಭವಿಷ್ಯವೇ ಹೇಳಬೇಕು.

"ಕೊರಗ ಭಾಷೆ ಮತ್ತು ತುಳು ಭಾಷೆ ನಡುವಣ ಸಂಬಂಧವು ಬಹಳ ಕ್ಷೀಣವಾದುದು. ಕೊರಗ ಭಾಷೆ ಮತ್ತು ಇತರ ದ್ರಾವಿಡ ಭಾಷೆಗಳ ನಡುವಣ ಸಂಬಂಧವು ಮೇಲ್ನೋಟಕ್ಕೆ ಎದ್ದು ಕಾಣುವಂಥ ಸಂಬಂಧವಾಗಿದೆ. ಆ ಸಂಬಂಧವು ತುಳು ಕನ್ನಡದೊಂದಿಗೆ ಅಥವಾ ಮಲೆಯಾಳ ಮತ್ತು ತಮಿಳು ನಡುವಣ ಸಂಬಂಧಗಳಿಗಿಂತ ಮಿಗಿಲಾದುದೇನಲ್ಲ. ಆದ್ದರಿಂದ ಕೊರಗ ಭಾಷೆಯನ್ನು ಒಂದು ಸ್ವತಂತ್ರ ದ್ರಾವಿಡ ಭಾಷೆಯಾಗಿಯೇ ಗುರುತಿಸುವುದು ಸೂಕ್ತ; ಅದನ್ನು ತುಳುವಿನ ಅಥವಾ ಇತರೆ ಯಾವುದೇ ಭಾಷೆಯ ಉಪಭಾಷೆಯಾಗಿ ಪರಿಗಣಿಸಬಾರದು." ಹೀಗೆ ಕ್ರಿ.ಶ. ೧೮೮೧ ರಲ್ಲಿ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಯೂ ಮತ್ತು ಜನಗಣತಿ ಮುಖ್ಯಸ್ಥನೂ ಆಗಿದ್ದ ಬ್ರ್ರಾಡಿಯು ತನ್ನ ಮೇಲಧಿಕಾರಿ ಮದ್ರಾಸಿನಲ್ಲಿದ್ದ ಸ್ಟುವರ್ಟ್‌ರವರಿಗೆ ಬರೆದು ತಿಳಿಸಿದ್ದಾನೆ. ಕೊರಗ ಭಾಷೆಯ ಬಗೆಗೆ ಆಸಕ್ತಿ ತಳೆದ ಸ್ಟುವರ್ಟ್ ದಕ್ಷಿಣ ಕನ್ನಡದಿಂದ ಕೊರಗ ಭಾಷೆ ಕುರಿತು ಹೆಚ್ಚು ಹೆಚ್ಚು ವಿವರಗಳನ್ನು ತರಿಸಿಕೊಂಡು ಮುಂದೆ

ಅವುಗಳನ್ನು ತಾನೇ ಸಂಪಾದಿಸಿ ಪ್ರಕಟಿಸಿದ ಮ್ಯಾನ್ಯುಯಲ್ ಆಫ್ ದಿ ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ದಾಖಲಿಸಿದ್ದಾನೆ. ಸ್ಟೂವರ್ಟ್‌ಗೆ ಕಳುಹಿಸಲಾದ ವರದಿಯಲ್ಲಿದ್ದ ಕೊರಗ ಭಾಷಾ ಪದ ಸಂಪತ್ತು ಅಪಾರವಾಗಿ ತುಳು ಪದ ಸಂಪತ್ತಿನಿಂದಲೇ ಕೂಡಿತ್ತು. ಹೀಗಾಗಿ ಸ್ಟೂವರ್ಟ್ ಕೊರಗ ಭಾಷೆ ತುಳುವಿನ ಉಪ ಭಾಷಾ ರೂಪವಾಗಿದ್ದು ಅದು ಭಾಷೆಯ ಸ್ತರದಲ್ಲೇ ಉಳಿದುಬಿಟ್ಟಿದೆ ಎಂದು ತಿಳಿಸಿದನು. ತಾನು ಈ ನಿರ್ಣಯಕ್ಕೆ ಬಹಳ ಅನುಮಾನದಿಂದಲೇ ಬಂದಿದ್ದೇನೆ; ಆದರೆ ದ್ರಾವಿಡ ಭಾಷಾ ವರ್ಗಕ್ಕೆ ಇನ್ನೊಂದು ಹೊಸ ಭಾಷೆಯನ್ನು (ಕೊರಗ) ಸೇರ್ಪಡೆಗೊಳಿಸಲು ಇನ್ನೂ ಹೆಚ್ಚಿನ ಅಧ್ಯಯನ ಮತ್ತು ಕ್ಷೇತ್ರ ಅಗತ್ಯವಾಗಿದೆ ಎಂದೂ ಅಂದು ಸ್ಟೂವರ್ಟ್ ಬರೆದನು.

ಕೊರಗರ ಭಾಷೆಯನ್ನು ಅನೇಕ ಉಪಭಾಷೆಗಳಾಗಿ ವರ್ಗೀಕರಿಸುವ ಪ್ರಯತ್ನವನ್ನು ಭೌಗೋಳಿಕ ಮತ್ತು ಸಾಮಾಜಿಕ ಅಂಶಗಳ ಆಧಾರದಲ್ಲಿ ನಡೆಸಲಾಗಿದೆ. ಡಾ. ಡಿ. ಎನ್. ಎಸ್. ಭಟ್‌ರವರು ಪ್ರಕಟಿಸಿರುವ 'The Koraga Language' (೧೯೭೧) ಕೃತಿಯಲ್ಲಿ ಕೊರಗ ಭಾಷೆಯ ಮೂರು ಬಗೆಯ ಪ್ರಕಾರಗಳನ್ನು ಗುರುತಿಸಿ ಭಾಷಾಶಾಸ್ತ್ರದ ವೈಜ್ಞಾನಿಕ ನೆಲೆಯಲ್ಲಿ ಅಭ್ಯಸಿಸುವ ಪ್ರಯತ್ನ ನಡೆಸಿದ್ದಾರೆ. ಇದೊಂದೇ ಇದುವರೆಗೆ ನಡೆದಿರುವ ಕೊರಗ ಭಾಷೆ ಕುರಿತ ವೈಜ್ಞಾನಿಕ ಅಧ್ಯಯನ ಪ್ರಯತ್ನವಾಗಿದೆ ಡಾ. ಭಟ್ ಗುರುತಿಸಿರುವ ಕೊರಗ ಉಪಭಾಷೆಗಳೆಂದರೆ—'ಒಂಟಿ ಕೊರಗ' 'ತಪ್ಪು ಕೊರಗ' ಮತ್ತು 'ಮೂಡು ಕೊರಗ'—ಆಗಿವೆ. ಈ ಮೂರು ಬಗೆಯ ಕೊರಗ ಭಾಷೆಗಳನ್ನಾಡುವ ಕೊರಗರು ಉಡುಪಿ ತಾಲ್ಲೂಕು, ಹೆಬ್ರಿ ಮತ್ತು ಕುಂದಾಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಈಗಲೂ ಇದ್ದಾರೆ. ಈ ಸ್ಥಳಗಳಿಂದಲೇ ಮಾಹಿತಿ ನೀಡಿಕೆದಾರರನ್ನೂ ಡಾ. ಭಟ್ ತಮ್ಮ ಅಧ್ಯಯನಕ್ಕೆ ಆಯ್ಕೆ ಮಾಡಿದ್ದಾರೆ. ಕುಂದಾಪುರ ತಾಲ್ಲೂಕಿನ ಉತ್ತರ ಭಾಗದ ಕಾಡುಗಳಲ್ಲಿ ಮತ್ತು ಕಣಿವೆಯಂಥ ಪ್ರದೇಶ, ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ವಾಸಿಸಿರುವ ಕೊರಗರನ್ನು ಸಂಪರ್ಕಿಸಿ ಕ್ಷೇತ್ರ ಕಾರ್ಯ ನಡೆಸಿದರೆ ಕೊರಗ ಭಾಷೆಯ ಇನ್ನೂ ಬೇರೆ ಬೇರೆ ಬಗೆಗಳು ಕಂಡು ಬರಬಹುದಾಗಿದೆ.

ಡಾ. ಭಟ್ ತಮ್ಮ ಅಧ್ಯಯನದಿಂದ ಒಂಟಿ ಕೊರಗ ಮತ್ತು ತುಳು ಭಾಷಾ ಪ್ರಭೇದದ ನಡುವೆ ಹಾಗೂ ಮೂಡು ಕೊರಗ ಮತ್ತು ಕನ್ನಡ ಭಾಷೆಗಳ ನಡುವೆ ಹೆಚ್ಚಿನ ನಂಟು ಇರುವುದನ್ನು ಗುರುತಿಸಿದ್ದಾರೆ ಈ ಸಂಬಂಧವು ಆಯಾಯ ಭಾಷೆಗಳ ಕೊಡುಕೊಳ್ಳುವಿಕೆಯ ಅಂತರ್ಗತ ಶಕ್ತಿಯಿಂದ ಮೂಡಿದುದಲ್ಲ; ಬದಲಾಗಿ ಒಂಟಿ ಕೊರಗ ಮತ್ತು ಮೂಡು ಕೊರಗ ಭಾಷೆಗಳನ್ನಾಡುವ ಕೊರಗರು ದ್ವಿಭಾಷಿಗಳಾಗಿರುವುದರಿಂದ ಮೂಡಿ ಬಂದುದಾಗಿದೆ ಎನ್ನುತ್ತಾರೆ. ಇದಕ್ಕೆ ಕಾರಣ ಒಂಟಿ ಕೊರಗ ಭಾಷೆಯನ್ನಾಡುವ ಕೊರಗರು ವಾಸಿಸುವ ಉಡುಪಿ ತಾಲ್ಲೂಕಿನಲ್ಲಿ ತುಳುವಿನದೇ ಮೇಲುಗೈ. ಮೂಡು ಕೊರಗ ಭಾಷೆಯನ್ನಾಡುವ ಕೊರಗರಿರುವ ಕುಂದಾಪುರ

ಪ್ರದೇಶದಲ್ಲಿ ಕನ್ನಡದ್ದೇ ಮೇಲುಗೈ. ತಾವು ವಾಸಿಸುವ ಸ್ಥಳದ ಜನಭಾಷೆಯನ್ನೇ ಇದರೊಂದಿಗಿನ ವ್ಯಾವಹಾರಿಕ ಸಂಬಂಧಕ್ಕೆ ಕೊರಗರು ಅಳವಡಿಸಿಕೊಳ್ಳುತ್ತಾರೆ. ವಾಮಂಜೂರು, ಕಾರ್ಕಳಪೇಟೆ ಮತ್ತು ಮೂಡುಬಿದಿರೆಯ ಮಾಸ್ತಿಕಟ್ಟೆಯ ಕೊರಗರನ್ನು ಅವರ ಭಾಷೆಯ ಬಗೆಗೆ ನಾವು ಕೇಳಿದಾಗ ತಾವು ತುಳು ಭಾಷಿಕರೆಂದೇ ಅವರು ಉತ್ತರಿಸಿದರು. ಕೊರಗರು ದ್ವಿಭಾಷಿಗಳಾಗಿ ಸಾವಿರಾರು ವರ್ಷಗಳಿಂದಲೇ ಉಳಿದು ಬೆಳೆದು ಬಂದಿದ್ದಾರೆ. ಹೀಗಾಗಿ ಮೂಡುಕೊರಗ ಭಾಷೆಯು ಕನ್ನಡದಿಂದಲೂ ಒಂಟಿಕೊರಗ ಭಾಷೆಯು ತುಳುವಿನಿಂದಲೂ ಬೆಳೆದಿವೆ. ಆದ್ದರಿಂದ ಕೊರಗ ಭಾಷೆಯ ಉಪ ಬಗೆಗಳ ಮೇಲೆ ದ್ರಾವಿಡ ಭಾಷೆಗಳಾದ ಕನ್ನಡ ಮತ್ತು ತುಳುವಿನ ಪ್ರಭಾವ ಗಾಢವಾದುದಾಗಿದೆ. ಪರಿಣಾಮವಾಗಿ ಕೊರಗ ಭಾಷೆಯ ಪದಸಂಪತ್ತಿನಲ್ಲಿ ಯಾವುದು ಕೊರಗ, ಯಾವುದು ಕನ್ನಡ, ಯಾವುದು ತುಳು ಎಂದು ಗುರುತಿಸುವ ಕಾರ್ಯ ಬಹಳ ಸಂಕೀರ್ಣವಾದುದು. ಈ ಹಿನ್ನೆಲೆಯಲ್ಲಿ ಕೊರಗ ಭಾಷೆಯು ಭಾಷಾ ಪಂಡಿತರ ಸಂಶೋಧನೆಗೆ ಒಳ್ಳೆಯ ವಸ್ತುವಾಗಬಲ್ಲುದಾಗಿದೆ.

ಹೀಗಾಗಿ ಕೊರಗ ಭಾಷೆ ಮತ್ತು ಇತರ ದ್ರಾವಿಡ ಭಾಷೆಗಳ ನಡುವಣ ಸ್ಪಷ್ಟ ಸಂಬಂಧವನ್ನು ಗ್ರಹಿಸುವುದು ಗುರುತಿಸುವುದು ಕಷ್ಟ. ಈ ಬಗೆಯ ಸಮಸ್ಯೆಯು ಎಲ್ಲಾ ದ್ವಿಭಾಷಾ ಜನರ ಮೂಲಭಾಷೆಯ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ಕಂಡು ಬರುವುದು.

ಕೊರಗ ಭಾಷೆಯು ಪದಸಂಪತ್ತಿನ ದೃಷ್ಟಿಯಿಂದ ದಕ್ಷಿಣ ಭಾರತದ ದ್ರಾವಿಡ ಭಾಷೆಗಳೊಂದಿಗೆ ಹೆಣೆದುಕೊಂಡಿದ್ದರೂ ವ್ಯಾಕರಣದ ದೃಷ್ಟಿಯಿಂದ ಉತ್ತರ ದ್ರಾವಿಡ ಭಾಷಾ ವರ್ಗದೊಂದಿಗೆ—ಕುಡು, ಮಾಲ್ತೋ ಮತ್ತು ಬ್ರಾಹೂಈ—ಹೆಣೆದುಕೊಂಡಿದೆ. ಈ ಅಂಶವು ವಿಲಕ್ಷಣವಾಗಿ ಎದ್ದು ತೋರುವುದು. ಕೊರಗ ಭಾಷೆಯ ಮೂರು ಒಳಬಗೆಗಳನ್ನು ಹೀಗೆ ವಿವರಿಸಬಹುದಾಗಿದೆ.

ಆಧಾರ ಗ್ರಂಥಗಳು

E. Thursten : Castes and Tribes of Southern India Cosmo Publications Delhi, 1975.

D. N. S. Bhat : The Koraga Language, Deccan College, Postgraduate and Research Institute, Poona, 1971.

Dr. B. R. Ambedkar : Emancipation of the Untouchables Thacker & Co., Bombay, 1972.

Stuart : Manual of the South Kanara District.

ಅಮೃತ ಸೋಮೇಶ್ವರ : ಕೊರಗರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು 1982.

ಅರವಿಂದ ಮಾಲಗತ್ತಿ : ಜಾನಪದ ವ್ಯಾಸಂಗ ಮತ್ತು ಜಾನಪದ ಶೋಧ ಶೈಲ ಪ್ರಕಾಶನ, ಮುದ್ದೇಬಿಹಾಳ, 1985, 1990.

ಡಾ|| ಜಿ. ಪುರುಷೋತ್ತಮ

ಉಗ್ಗು ಮಾತು ಅಥವಾ ತೊದಲುವಿಕೆ :

ಮಾತು ಅರ್ಥವುಳ್ಳ ಶಬ್ದಗಳ ಒಂದು ಸರಪಳಿ. ಈ ಶಬ್ದಗಳು ಒಂದರ ಹಿಂದೊಂದು ಸೇರಿಕೊಂಡು ಒಟ್ಟೊಟ್ಟಿಗೆ ಇರುತ್ತವೆ. ಒಂದೊಂದು ಸಾರಿಗೆ ಸುಮಾರು 50 ರಿಂದ ಹೆಚ್ಚು ಶಬ್ದಗಳು ವಾಕ್ಯಗಳಲ್ಲಿ ಕೇಳಿಬರುತ್ತವೆ. ಇವು ಕಡಿಮೆಯೂ ಇರಬಹುದು, ಹೆಚ್ಚು ಇರಬಹುದು. ಮಾತಿನ ಬಗ್ಗೆ ಆಡುವವರಿಗೂ ಅಂತೆಯೇ ಕೇಳುವವರಿಗೂ ಗಮನ ಇರುವುದಿಲ್ಲ. ಮಾತಿನ ಅರ್ಥದ ಬಗ್ಗೆಯೇ ಎಲ್ಲರ ಗಮನ, ಇದು ಸಹಜ ಕಾರ್ಯ. ಮಾತಿನಲ್ಲಿ ತೊಂದರೆ ಇದ್ದಾಗ ಮಾತ್ರ ಎಲ್ಲರ ಗಮನವೂ ಮಾತಿನ ಅರ್ಥ ಬಿಟ್ಟು ಮಾತಿನ ಕಡೆಗೇ ಹರಿಯುತ್ತದೆ. ಮಾತಿನ ಸರಪಳಿಯ ಮಧ್ಯೆ ಸಾಮಾನ್ಯವಾಗಿ ಆಗುವ ತಪ್ಪುಗಳು ಹಾಗೂ ಅವುಗಳ ರಿಪೇರಿ, ಮಧ್ಯೆ ಮಧ್ಯೆ ನಿಲ್ಲಿಸುವಿಕೆ ಇವು ನಮ್ಮ ಗಮನಕ್ಕೆ ಬರುವುದಿಲ್ಲ. ಏಕೆಂದರೆ ಅವು ಸಹಜವಾದವು. ಮಾತು ನೀರಿನಂತೆ ಹರಿಯುವಂಥದು ಈ ಹರಿಯುವಿಕೆಯಲ್ಲಿ ಸಣ್ಣಪುಟ್ಟ ಏರುಪೇರುಗಳು ಅಮುಖ್ಯ. ಹರಿಯುವಿಕೆ ನಿಂತಾಗ ಅಥವಾ ಅದಕ್ಕೆ ದೊಡ್ಡ ತೊಡಕಾದಾಗ ಅದು ಎಲ್ಲರ ಗಮನ ಸೆಳೆಯುತ್ತದೆ. ಉಗ್ಗು ಅಥವಾ ತೊದಲಿಕೆ ಈ ರೀತಿಯ ಹರಿಯುವಿಕೆಯ ತೊಂದರೆ.

ಇದ್ದಕ್ಕಿದ್ದಂತೆ ಒಂದು ಗುಂಪಿನ ಮುಂದೆ ಮಾತನಾಡಬೇಕಾದಾಗ ಅಥವಾ ಸರಿಯಾಗಿ ಮಾತನಾಡಲೇಬೇಕಾದ ಒತ್ತಡ ಬಂದಾಗ—ಒಂದು ಸಂದರ್ಶನದಲ್ಲಿ ಬೇಕಾಗುವಂತೆ—ಸಾಮಾನ್ಯ ಮನುಷ್ಯ ಉದ್ರೇಕಗೊಂಡು ತೊದಲುತ್ತಾನೆ. ಶಬ್ದಗಳನ್ನು, ಪದಗಳನ್ನು ಮತ್ತೆ ಮತ್ತೆ ಹೇಳುವುದು, ಮಾತೇ ಹೊರಡದಂತಾಗುವುದು ಇದರ ಲಕ್ಷಣ, ಇದು ಸಾಮಾನ್ಯ. ಆದರೆ ಉಗ್ಗು ಮಾತಿನ ತೊಂದರೆ ಇರುವಾಗ ಈ ಸಂದರ್ಭಗಳೇ ಅಲ್ಲದೆ ಸುಮಾರು ಎಲ್ಲ ಸಮಯದಲ್ಲೂ ಮಾತಿನಲ್ಲಿ ಈ ಲಕ್ಷಣವನ್ನು ಹೊಂದಿರುತ್ತಾನೆ. ಮಾತಿನ ಈ ತೊಂದರೆಗೆ ಅವನು ಉದ್ರೇಕಗೊಂಡಿರುವುದೇ ಕಾರಣವೆಂದು ಹೇಳಲು ಬರುವುದಿಲ್ಲ. ಸಾಮಾನ್ಯ ಮಾತುಗಾರ ಮಾತನಾಡುವಾಗ ಕೆಲವು ಸಂದರ್ಭದಲ್ಲಿ ಉಗ್ಗಿನಂತೆ ಮಾತನಾಡಿದರೂ ಆ ರೀತಿ ಆಗುತ್ತದೆಂದು ಅವನಿಗೆ ಮೊದಲೇ ಅನ್ನಿಸಿರುವ ಸಂಭವ ಕಡಿಮೆ. ಆದರೆ ಉಗ್ಗು ಇರುವವರಿಗೆ ತನ್ನ ಮಾತಿನಲ್ಲಿ

ತೊಂದರೆ ಬರಬಹುದೆಂಬ ಅರಿವು ಮಾತಾಡುವ ಮೊದಲೇ ಇರುತ್ತದೆ. ಉಗ್ಗುವವನು ತನ್ನ ಈ ಅರಿವಿನಿಂದಾಗಿ ಮಾತನಾಡಲು ಆರಂಭಿಸುವ ಮೊದಲು ತನ್ನ ಮಾತಿನಲ್ಲಿ ಆಗುವ ತೊಂದರೆಗಳ ಬಗ್ಗೆ ಚಿಂತಿಸಬಹುದು. ಅವನ ಮಾತಿನಲ್ಲಿ ತೊಂದರೆ ಮುಂದುವರಿದಂತೆ ಅವನ ಚಿಂತೆಯೂ ಹೆಚ್ಚುತ್ತದೆ. ಮಾತಿನ ಬಗ್ಗೆ ಚಿಂತಿಸುವುದೇ ಮಾತಿನ ತೊಂದರೆಯನ್ನು ಹೆಚ್ಚಿಸುತ್ತದೆ. ಮಾತು ಸರಿಯಾಗಿ ಇರಲೇ ಬೇಕಾದಂಥ ಒತ್ತಡ ಇಲ್ಲದಿರುವಾಗ ತೊಂದರೆ ಕಡಿಮೆ ಇರುತ್ತದೆಂದು ಉಗ್ಗುವವರ ಅನುಭವ. ಮಾತಿನ ಬಗ್ಗೆ ಕಾಳಜಿ ಹೆಚ್ಚುತ್ತಲೇ ಇರುವಾಗ ತೊಂದರೆಯೂ ಹೆಚ್ಚುತ್ತದೆ. ತನ್ನ ಬಾಲವನ್ನೇ ತಿನ್ನುವ ಹಾವಿನಂತೆ ಅದರ ಸ್ವರೂಪ ಬಿಗಡಾಯಿಸುತ್ತದೆ. ಉಪಶಮನ ಅಷ್ಟರ ಮಟ್ಟಿಗೆ ಕಠಿಣವಾಗುತ್ತಾ ಸಾಗುತ್ತದೆ.

ಕಾರಣಗಳು :

ಉಗ್ಗು ದೇಹದ ತೊಂದರೆಯಲ್ಲ. ಹಲವು ಸಲ ಉಗ್ಗುವಿಕೆ ಮಿದುಳಿನ ಆಘಾತ, ಬುದ್ಧಿಶಕ್ತಿಯ ತೊಂದರೆಗಳ ಜೊತೆ ಇರುವ ಸಾಧ್ಯತೆಗಳು ಇವೆ. ಆದರೆ ಆಗ ಮೂಲವಾಗಿ ಇರುವ ತೊಂದರೆಯ ಕಡೆ ಗಮನ ಮುಖ್ಯ. ಮಿದುಳಿಗೆ ಆಘಾತವಾದಾಗ ಅಥವಾ ಬುದ್ಧಿಮಾಂದ್ಯತೆ ಇದ್ದಾಗ ಮಾತಿನ ಬೆಳವಣಿಗೆಯೇ ಕುಂಠಿತವಾಗುತ್ತದೆ. ಹೀಗಾಗಿ ಮಾತು ತಡೆದು ಬರಲಿ, ಶಬ್ದಗಳು ತಿರುಗಿ ತಿರುಗಿ ಬರಲಿ, ಅದನ್ನು ಉಗ್ಗುವಿಕೆ ಎಂದು ಪರಿಗಣಿಸುವುದಿಲ್ಲ.

ಉಗ್ಗಿನ ಬೆಳವಣಿಗೆಯ ಜೊತೆ ಸಾಮಾನ್ಯವಾಗಿ ಕಂಡುಬರುವ ವಿಷಯವೆಂದರೆ ಅದು ಮಾತು ಕಲಿಯುವ ಸಮಯ, ಅಂದರೆ ಸುಮಾರು ಆರೇಳು ವರ್ಷ ವಯಸ್ಸಿನ, ಮೊದಲೇ ಶುರುವಾಗಿರುವುದು ಸಾಮಾನ್ಯ. ಈ ತೊಂದರೆ ಇರುವ ಮಕ್ಕಳಲ್ಲಿ ತಡವಾಗಿ ಮಾತು ಕಲಿಯುವುದೂ, ಉಚ್ಚಾರಣೆಯಲ್ಲಿ ದೋಷಗಳಿರುವುದು ಕಂಡುಬರಬಹುದು. ಕೆಲವು ಸಲ ಮಗುವಿನ ಪರಿಸರದಲ್ಲಿ ಉಗ್ಗು ಇರುವವರು ಇದ್ದು ಅದರಿಂದಾಗಿ ತೊಂದರೆ ಬಂದಿರಬಹುದೆಂದು ಶಂಕಿಸುವ ಸಾಧ್ಯತೆಗಳು ಇವೆ. ಆದರೆ ಈ ವಾದಕ್ಕೆ ಸಾಕಷ್ಟು ಪುಷ್ಟಿ ಇಲ್ಲ. ಮಗುವು ಮಾತು ಕಲಿಯುವ ವಯಸ್ಸಿನಲ್ಲಿ ಆಗುವ ಅಡಚಣೆ, ಮಾನಸಿಕ ಒತ್ತಡ ಇವುಗಳು ಮುಖ್ಯ ಕಾರಣವೆಂದು ಕಂಡುಬಂದಿದೆ.

ಮಕ್ಕಳಲ್ಲಿ ಮಾನಸಿಕ ಒತ್ತಡ ಅಸಂಗತವೆನಿಸಿದರೂ ಅದು ಸಾಧ್ಯ. ಸುಮಾರು ಮೂರು ವರ್ಷದ ಮಗುವನ್ನು ಊಹಿಸಿಕೊಳ್ಳಿ. ಆತ ಬಹಳ ರೀತಿಯಲ್ಲಿ ಅಸಹಾಯಕ. ಸುಮಾರು ಎಲ್ಲವನ್ನೂ ಕಲಿಯುತ್ತಿರುವ ವಯಸ್ಸು ಅದು. ತಿನ್ನಲು, ಉಡಲು, ತೊಡಲು, ಹಾಗೆಯೇ ಮಾತನಾಡಲು ಕೂಡ. ಆಗ ಅವನಿನ್ನೂ ಮಾತನ್ನು ಸಾಕಷ್ಟು ಕಲಿತಿರುವುದಿಲ್ಲ, ವಾಕ್ಯಗಳನ್ನು ಆಗತಾನೆ ಹೇಳಲು ಪ್ರಾರಂಭಿಸಿರುತ್ತಾನೆ. ಆಗಿನ ಮಾತು ಹಲವು ಮಕ್ಕಳಲ್ಲಿ ತೊದಲು ಮಾತು ಸಾಕಷ್ಟು ಜನ ಮಕ್ಕಳು ಸ್ಪಷ್ಟವಾಗಿಯೇ ಮಾತನಾಡಲು ಶುರುಮಾಡುತ್ತಾರೆ ಆದರೆ ಕೆಲವರಾದರೂ ತೊದಲು

ಮಾತಿನಿಂದ ಶುರುಮಾಡುತ್ತಾರೆ. ಪದಗಳನ್ನು ಮತ್ತೆ ಮತ್ತೆ ತಡೆದು ತಡೆದು ಹೇಳುವುದು ಆಗ್ಗೆ ಸಾಮಾನ್ಯ. ಮಾತಾಡಲು ಅವರು ಕಲಿಯುತ್ತಿರುತ್ತಾರಾದ್ದರಿಂದ ಅವರಿಗೆ ಈ ಅಭ್ಯಾಸ ಆವಶ್ಯಕ. ಇದನ್ನು ಮಾತಿನ ತೊಂದರೆಯೆಂದು ಪರಿಗಣಿಸಲು ಆಗದು. ಇದು ಆಗ್ಗೆ ತೊಂದರೆಯುಲ್ಲದಿದ್ದರೂ ಇದು ಬೆಳೆದು ಬೇರು ಬಿಟ್ಟು ಉಗ್ಗುವಿಕೆಯಾಗಿ ಮಾರ್ಪಾಡಾಗುವುದು ಸಾಧ್ಯ. ಮಾನಸಿಕ ಒತ್ತಡ ಈ ಬೆಳವಣಿಗೆಗೆ ಸಹಾಯ ಕೊಡುತ್ತದೆ.

ಈ ಸಾಮಾನ್ಯವಾದ ತೊದಲು ಮಾತು ತಂದೆತಾಯಿಯರ ಗಮನ ಸೆಳೆಯುವ ಸಾಧ್ಯತೆಗಳಿವೆ. ಅದನ್ನು ಗಮನಿಸಿದಾಗ ಕೇಳಿ ನಲಿಯುವವರೇ ಹೆಚ್ಚು. ಆ ಮಾತಿಗೆ ಅಸಾಮಾನ್ಯ ಕಾಳಜಿ ತೋರಿದರೆ ಅಲ್ಲಿಂದ ನಿಜವಾದ ತೊಂದರೆ ಶುರುವಾಗುತ್ತದೆ. ಮಗುವಿನ ಮಾತಿನ ಅರ್ಥಕ್ಕೆ ಗಮನ ಕೊಡದೆ ಮಾತಿನ ರೀತಿಗೆ ಗಮನ ಕೊಟ್ಟು ಅದನ್ನು ಸರಿಪಡಿಸಹೊರಟರೆ ಮಗುವಿಗೆ ದಿಗ್ಭ್ರಮೆಯಾಗುತ್ತದೆ. ಅವನಿನ್ನೂ ಬೆಳೆಯುತ್ತಿರುವ ಮನುಷ್ಯ. ಅವನಿಗೆ ದೊಡ್ಡವರ ಈ ನಡತೆ ಅಸಂಬದ್ಧವಾದದ್ದು. ಈ ರೀತಿಯ ಘಟನೆಗಳು ಹೆಚ್ಚಿದ್ದೇ ಆದರೆ ಮಗುವಿಗೆ ಮಾತನಾಡುವುದು ಒಂದು ಸಂದಿಗ್ಧ ಪರಿಸ್ಥಿತಿಯಾಗುತ್ತದೆ. ಮಾತನಾಡುವ ಅವಕಾಶವೆಲ್ಲ ನೀರಸವಾಗಬಹುದು. ಎಲ್ಲಕ್ಕೂ ತಾಯಿತಂದೆಯರನ್ನು ಅವಲಂಬಿಸಿ ಅವರ ಒಡನಾಡುವ ಪುಟ್ಟ ಮನುಷ್ಯನಿಗೆ ಇದು ನಿಜವಾಗಿಯೂ ಮಾನಸಿಕ ಹೊಡೆತವಾಗುತ್ತದೆ. ಅರ್ಥಮಾಡಿಕೊಳ್ಳುವಂತಹ, ಒಳ್ಳೆಯ ಕಾಳಜಿಯುಳ್ಳ ತಾಯಿತಂದೆಯರೂ ಈ ಸ್ಥಿತಿಯನ್ನು ತಂದೊಡ್ಡಬಹುದು. ಮಾತು ಮಾತಿಗೂ ಸಿಟ್ಟಾಗುವ ವ್ಯಸನಗಳುಳ್ಳ ಪೋಷಕರಾದರಂತೂ ತೀರಿತು. ಇತ್ತೀಚಿನ ಅಭ್ಯಾಸವಾದ, ಎಳೆಯ ಮಕ್ಕಳನ್ನು ಇಂಗ್ಲಿಷು ಕಲಿಯಲು 3 ವರ್ಷಕ್ಕೇ ಕಳಿಸಿ ಅವರನ್ನು ಪಂಡಿತರನ್ನಾಗಿಸುವ ಯತ್ನವು ಹಲವು ಸಾರಿ ಅವರ ಮನಸ್ಸಿನ ಒತ್ತಡಕ್ಕೆ ಕಾರಣವಾಗುತ್ತದೆ. ಈ ರೀತಿಯ ಮಾನಸಿಕ ಒತ್ತಡಗಳು ಮಗುವಿನಲ್ಲಿ ಹಲವಾರು ರೀತಿಯ ವಿಚಿತ್ರ ವರ್ತನೆಗಳಲ್ಲಿ ಪರಿಣಮಿಸಬಹುದು—ಮಗುವು ಹಾಸಿಗೆ ಒದ್ದೆಮಾಡುವುದು, ಮೌನಿಯಾಗಬಹುದು ಅಥವಾ ತೊದಲು ಮಾತು ಹೆಚ್ಚಾಗಬಹುದು. ಹಲವು ರೀತಿಯ ಹೆದರಿಕೆಗಳೂ ಈ ರೀತಿಯಲ್ಲಿ ಪರಿಣಮಿಸುವುದು ಸಾಧ್ಯ. ಅಂತೂ ಮಗುವಿಗೆ ತಾನು ಸಾಮಾನ್ಯವಾಗಿ ಮಾತನಾಡಲಾರೆ ಅನ್ನುವುದು ಮನಸ್ಸಿನಲ್ಲಿ ಉಳಿದು ತನ್ನ ಈ ನಡವಳಿಕೆಯನ್ನು ಬೇರೆಯವರು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ ಅನ್ನುವುದು ಗೊತ್ತಾಗುವ ಹೊತ್ತಿಗೆ ಅವನ ಮಾತಿನ ತೊಂದರೆ ಬಲವಾಗಿರುತ್ತದೆ. ಮೊದಲಿನ ಹಂತದಲ್ಲೇ ಅವನಿಗೆ ಸಹಾಯ ಸಿಗದಿದ್ದರೆ ಉಗ್ಗುವಿಕೆಗೆ ಅವನ ವ್ಯಕ್ತಿತ್ವದ ಭಾಗವಾಗಿ ಉಳಿದುಬಿಡುತ್ತದೆ. ಇದು ಜೀವನದ ಮುಖ್ಯವಾದ ಸಮಯ ಅಂದರೆ ಸುಮಾರು ಮಧ್ಯ ವಯಸ್ಸಿನವರೆಗೂ ಉಳಿದು, ಹಲವು ಬಾರಿ ಕೀಳರಿಮೆಯನ್ನು ತಂದು ಸಾಮಾನ್ಯ ಸಂತೋಷಕ್ಕೆ ಅಡ್ಡಿತರುತ್ತದೆ.

ಉಗ್ಗುವಿಕೆಗೆ ಕಾರಣಗಳನ್ನು ಹುಡುಕುವಾಗ ಇನ್ನೂ ಹಲವು ವಿಷಯಗಳು

ಇವಕ್ಕೆ ಸಂಬಂಧಿಸಿದಂತೆ ಕಂಡುಬಂದರೂ ಅವುಗಳನ್ನು ಕಾರಣಗಳೆಂದು ಕರೆಯಲು ಬರುವುದಿಲ್ಲ ಹಾಗೂ ಅವುಗಳಿಗೆ ಉಪಶಮನಗಳು ಸುಲಭವಾಗಿ ಕಂಡುಬರುವುದಿಲ್ಲ. ಉದಾಹರಣೆಗೆ, ಮಾತಿನ ಕಾರ್ಯ ಸಾಮಾನ್ಯವಾಗಿ ನಡೆಯುವುದು ಮಿದುಳಿನ ಎಡಭಾಗದಲ್ಲಿ, ಇದಕ್ಕೆ ಆಧಾರವಿದೆ. ಈ ಕಾರ್ಯ ಬಲಗಡೆಯ ಭಾಗದಲ್ಲೂ ಆಗಬಹುದು. ಎಡ ಹಾಗೂ ಬಲದ ಭಾಗಗಳಲ್ಲಿ ಪೈಪೋಟಿಯಾದರೆ ಆಗ ಮಾತಿಗೆ ತೊಂದರೆಯಾಗುತ್ತದೆಂದು ಒಂದು ವಾದ. ಹಾಗೆಯೇ ಕೇಳುವಿಕೆಯಲ್ಲಿ ಹಾಗೂ ಉಸಿರಾಟದಲ್ಲಿ ಸೂಕ್ಷ್ಮವಾದ ಏರುಪೇರುಗಳಾಗಿ ಮಾತಿನಲ್ಲಿ ಈ ತೊಂದರೆ ಬರುತ್ತದೆಂದು ಹಲವು ಮತಗಳು. ಇವು ಇನ್ನೂ ಸಂಶೋಧನೆಯ ಅವಸ್ಥೆಯಲ್ಲಿವೆ. ಇವು ಮಾತಿನ ತೊಂದರೆ ಬೆಳೆದ ಬಳಿಕ ಕಂಡುಬರುವಂಥವಾದ್ದರಿಂದ ಇವು ಕಾರಣವಾಗುತ್ತದೆಂಬ ಅನಿಸಿಕೆ ಸರಿಯಾಗಿಲ್ಲದಿರಬಹುದು.

ಸುಮಾರು ನೂರು ಜನ ಮಕ್ಕಳಲ್ಲಿ ಒಬ್ಬನಿಗೆ ಈ ತೊಂದರೆ ಇರುತ್ತದೆ. ಈ ತೊಂದರೆ ಗಂಡು ಮಕ್ಕಳಲ್ಲಿ ಮಾತ್ರವೇನೋ ಎಂಬಷ್ಟು ಹೆಚ್ಚು, ಹೆಣ್ಣುಮಕ್ಕಳಲ್ಲಿ ಬಹಳ ಅಪರೂಪ. ಚಿಕ್ಕಂದಿನಲ್ಲಿ ನಿಧಾನವಾಗಿ ಶುರುವಾಗುವುದು ಇದರ ಗುಣ. ಶುರುವಾದ ಕೂಡಲೇ ಚಿಕಿತ್ಸೆ, ಮಾರ್ಗದರ್ಶನ ಸಿಗದಿದ್ದರೆ ತೊಂದರೆ ಹೆಚ್ಚಾಗುತ್ತದೆ.

ಪರಿಹಾರ

ಉಗ್ಗು ಮಾತು ದೇಹದ ಕಾಯಿಲೆಯಲ್ಲ. ಇದಕ್ಕೆ ಔಷಧದಿಂದ ಚಿಕಿತ್ಸೆ ಸಾಧ್ಯವಿಲ್ಲ. ಇದು ಮಾನಸಿಕರೋಗವೂ ಅಲ್ಲ. ವಶೀಕರಣ ಸುಪ್ತಸ್ಥಿತಿಯಿಂದ (ಹಿಪ್ನಾಟಿಸಂ) ಕೂಡ ಈ ತೊಂದರೆಗೆ ಗುಣ ಕಂಡುಬಂದಿಲ್ಲ. ಈ ತೊಂದರೆ ಎಷ್ಟು ಪುರಾತನವೋ ಇದಕ್ಕೆ ಚಿಕಿತ್ಸಾ ರೀತಿಗಳು ಹಾಗೆಯೇ ಹಲವಾರಿವೆ.

ಮಾತಿನ ಚಿಕಿತ್ಸೆಗೆ ತೊಂದರೆಯುಳ್ಳವ ಪೂರ್ಣವಾಗಿ ಅವನನ್ನೇ ಒಡ್ಡಿಕೊಳ್ಳಬೇಕು. ಮಾತು ಸರಾಗವಾಗಿರಬೇಕಾದರೆ ಬೇರೆಯೇ ರೀತಿಯಲ್ಲಿ ಮಾತನಾಡುವುದು ಒಂದೇ ದಾರಿ. ಮಾತಿನ ಹೊಸ ರೀತಿಯಲ್ಲಿ ಅಲ್ಪ ಸಮಯದಲ್ಲಿ ಕಲಿಯಲು ಸಾಧ್ಯವಿಲ್ಲ. ಮಾತು ನಮ್ಮ ನಡತೆಯ ಒಂದು ಭಾಗ. ಅದನ್ನು ಇದ್ದಕ್ಕಿದ್ದಂತೆ ಬದಲಾಯಿಸುವುದು ದುಸ್ಸಾಧ್ಯ. ಮಾತನಾಡುವಾಗಲೆಲ್ಲಾ ಅದು ಚೆನ್ನಾಗಿದೆಯೇ ಎಂದು ಗಮನಿಸುವುದು ಕಷ್ಟದ ಕೆಲಸ. ಬೇರೆಯ ರೀತಿಯಲ್ಲಿ ಮಾತನ್ನು ಹೊರಡಿಸಲು ಕಷ್ಟವಲ್ಲ. ಮಾತಿನ ರೀತಿಯನ್ನು ಬದಲಾಯಿಸಲು ಉಪಕರಣಗಳ ಸಹಾಯದಿಂದ ಕೂಡ ಸಾಧ್ಯ. ಆಡುವವನ ಮಾತು ಸೆಕೆಂಡಿನ ಐದನೇ ಒಂದು ಭಾಗದಷ್ಟು ತಡಮಾಡಿ ಕೇಳಿಸಿದರೆ ಸಾಕು ಮಾತಿನ ರೀತಿ ಏರುಪೇರಾಗುತ್ತದೆ, ಉಗ್ಗುವವರಲ್ಲಿ ಮಾತು ಹೆಚ್ಚು ನಿಧಾನವಾಗಿ ಸಿಗುತ್ತದೆ. ಆಡುವವನ ಮಾತು ತನಗೇ ಕೇಳಿಸದ ಹಾಗೆ ಉಪಕರಣದ ಸಹಾಯದಿಂದ ಕಿವಿಯಲ್ಲಿ ಶಬ್ದ ತುಂಬಿದರೆ ಆಗ ಕೂಡ ಮಾತು ಜೋರಾಗಿ, ಬೇರೆ ರೀತಿಯೇ ಆಗುತ್ತದೆ. ಒಂದು ತಾಳಸೂಚಿ (ಮೆಟ್ರೊನೋಮ್) ಉಪಯೋಗಿಸಿ

ಮಾತಿನಲ್ಲಿ ಒಂದೇ ಗತ್ತು ಬರುವಂತೆ ಮಾಡಿದರೂ ಸಾಕು ಮಾತು ಬೇರೆ ರೂಪದ್ದಾಗುತ್ತದೆ. ಬರಿಯ ಸೂಚನೆಯಿಂದಲೂ ಮಾತಿನ ರೀತಿಯನ್ನು ಬದಲಾಯಿಸಲು ಸಾಧ್ಯ. ಆದರೆ ಯಾವಾಗಲೂ ಮಾತಿನ ರೀತಿಯನ್ನು ಬದಲಾಯಿಸಿ ಉಪಯೋಗಿಸುತ್ತಿರಲು ಅಷ್ಟು ಸುಲಭ ಸಾಧ್ಯವಲ್ಲ. ಕೆಲವು ಸಾರಿ ಧ್ವನಿ ಕಟ್ಟಿತೆಂದರೆ ಹಲವಾರು ಸೆಕೆಂಡುಗಳು ಕಾಲ ಮಾತು ಹೊರಡದೆಯೇ ನಿಲ್ಲುತ್ತದೆ. ಆ ತೊಂದರೆಯಿಂದ ಹೊರಬರಲು ತಜ್ಞರು ಹಲವಾರು ರೀತಿಯ ಉಪಾಯುಗಳನ್ನು ಕಲಿಸುತ್ತಾರೆ. ಇವನ್ನು ಕಲಿಯಲು ಮನಸ್ಸು ಹಾಗೂ ಸಮಯ ಬೇಕಾಗುತ್ತದೆ.

ಉಗ್ಗು ಮಾತು ಉಳ್ಳವನು ಬಹಳ ಸಾರಿ ತನ್ನ ವ್ಯಕ್ತಿತ್ವದ ಜೊತೆ ಅದನ್ನು ಹೊಂದಿಸಿಕೊಂಡಿರುವುದರಿಂದ ಬೇರೆ ರೀತಿ ಮಾತನಾಡಲು ಕಲಿತಿದ್ದರೂ ಉಪಯೋಗಿಸುವುದರಲ್ಲಿ ಅನುಮಾನ ಮಾಡುತ್ತಾನೆ. ತಜ್ಞರ ಜೊತೆ ಮಾತನ್ನು ಸರಿಯಾಗಿ ಆಡಿ ಹೊರಗಡೆ ಬಂದಕೂಡಲೇ ತೊದಲಿಗೆ ವಾಪಸ್ಸಾಗುವುದು ಸಾಮಾನ್ಯ. ಮಾತು ಪೂರ್ಣವಾಗಿ ಸರಿಹೋಗಿದೆಯೆಂದು ಹೋದವರು ಹಲವಾರು ತಿಂಗಳುಗಳ ಬಳಿಕ ಮತ್ತೆ ತೊಂದರೆಯೊಡನೆ ವಾಪಸ್ಸು ಬಂದಿದ್ದಾರೆ. ಚೆನ್ನಾಗಿ ಬಂದ ಮಾತನ್ನು ಉಳಿಸಿಕೊಳ್ಳಲು ಆಗಿರುವುದಿಲ್ಲ. ಇದಕ್ಕಾಗಿಯೇ, ಕಲಿಯುವಾತ ಮಾತಿನ ಚಿಕಿತ್ಸೆಯಲ್ಲಿ ತನ್ನನ್ನು ಮನಃಪೂರ್ವಕವಾಗಿ ಒಳಗೊಂಡು ಎಡೆಬಿಡದೆ ಗಮನಹರಿಸಿ ಮಾತಿನ ಹೊಸ ರೀತಿಯನ್ನು ತನ್ನದಾಗಿಸಿಕೊಳ್ಳಬೇಕು. ಹತ್ತಾರು ವರ್ಷಗಳ ಕಾಲ ಉಪಯೋಗಿಸಿದಂತಹ ಮಾತಿನ ಧಾಟಿಯನ್ನು ಅದು—ಚೆನ್ನಾಗಿರಲಿ ಬಿಡಲಿ—ಬದಲಾಯಿಸಲು ಅಲ್ಪಕಾಲ ಸಾಲದು. ಇದಕ್ಕೆ ಹೋಲಿಸಿದರೆ ಈ ಮಾತಿನ ತೊಂದರೆ ಶುರುವಾಗುತ್ತಿರುವ ಕಾಲ ಅಂದರೆ ಚಿಕ್ಕಂದಿನಲ್ಲೇ ಇದಕ್ಕೆ ಪರಿಹಾರ ಕಂಡುಕೊಳ್ಳುವುದು ಉತ್ತಮ.

ಮಕ್ಕಳಲ್ಲಿ ಈ ತೊಂದರೆಯ ಪರಿಹಾರಕ್ಕೆ ಮಗುವನ್ನಷ್ಟೇ ಅಲ್ಲದೆ ತಂದೆ ತಾಯಿ ಹಾಗೂ ಉಳಿದ ಪರಿಸರವನ್ನೂ ಹೆಚ್ಚಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಮೊದಲು ಹೇಳಿದಂತೆ ಮಗುವಿನ ಮಾನಸಿಕ ಒತ್ತಡಕ್ಕೆ ಕಾರಣವಾಗಿರುವಂಥ ಹಲವು ವಿಷಯಗಳನ್ನು ತಿಳಿದುಕೊಳ್ಳುವುದು ಮುಖ್ಯ. ತಾಯಿತಂದೆಯರ ನಡವಳಿಕೆ, ಶಾಲೆಯ ಪರಿಸರ, ಮಗುವಿನ ವಯಸ್ಸು, ಕಲಿಯುವ ಶಕ್ತಿ, ಇವೆಲ್ಲವೂ ಮಗುವಿನ ಮಾನಸಿಕ ಆರೋಗ್ಯಕ್ಕೆ ಅನುಕೂಲಕರವಾಗಿವೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ತಾಯಿತಂದೆಯರ ಜೊತೆ ಸಮಾಲೋಚಿಸಿ ತೊಂದರೆಯ ಸ್ವರೂಪದ ಬಗ್ಗೆ ಪರಿಚಯಿಸಿ ಅವರಿಗೆ ತಿಳಿಯದಂತೆಯೇ ಅವರಿಂದ ತೊಂದರೆಯಾಗುತ್ತಿದ್ದಲ್ಲಿ ಅದನ್ನು ತಪ್ಪಿಸಬಹುದು. ಜೊತೆಗೇ ಮಗುವಿಗೂ ಮಾತಿನ ಚಿಕಿತ್ಸೆ ಅಗತ್ಯ. ಮಗುವಿಗೆ ಬರಿಯ ಮಾತಾಡಲು ಉತ್ತೇಜನ ಕೊಟ್ಟು ಒಳ್ಳೆಯ ಮಾದರಿಯಾಗಿರುವುದರಿಂದ ಹಿಡಿದು ಮಗುವಿಗೆ ಪದಗಳನ್ನು ಸರಿಯಾಗಿ ಸರಾಗವಾಗಿ ಹೇಳಲು ಕಲಿಸಿಕೊಡುವುದನ್ನು ತಜ್ಞರು ಮಾಡಬಹುದು. ಮೊದಲು ತಾಯಿತಂದೆಯರಿಗೆ ಮಾರ್ಗದರ್ಶನಮಾಡಿ

ಒಂದಾರು ತಿಂಗಳು ತಡೆದು ಅನಂತರ ಮಾತಿನ ಚಿಕಿತ್ಸೆಗೆ ತೊಡಗುವುದು ಸಾಮಾನ್ಯ. ಮಗುವು ಆರೇಳು ವರ್ಷಗಳಿಗಿಂತ ಹೆಚ್ಚಾಗಿದ್ದಲ್ಲಿ ನೇರವಾಗಿ ಮಾತಿನ ಚಿಕಿತ್ಸೆಯನ್ನು ಪ್ರಾರಂಭಿಸಬಹುದು.

ಗಲಿಬಿಲಿ ಮಾತು

ಉಗ್ಗು ಮಾತಿನಂತೆಯೇ ತೋರುವ ಮಾತಿನ ತೊಂದರೆ ಇದು. ಮಾತಾಡುವವ ಬೇಗ ಬೇಗ ಮಾತಾಡುತ್ತಿರುವಂತೆ ಹಾಗೂ ಗೊಂದಲಗೊಂಡವನಂತೆ ತೋರಿಬರುತ್ತದೆ. ಮಾತು ಎಷ್ಟು ವೇಗವಾಗಿ ಹರಿಯಬಹುದೆಂದರೆ ಅದು ಅಸ್ಪಷ್ಟವಾಗಬಹುದು. ಈ ತೊಂದರೆಯ ಇನ್ನೊಂದು ಮುಖ್ಯ ಗುಣವೆಂದರೆ ಮಾತಾಡುವವನು ತನ್ನ ತೊಂದರೆಯ ಬಗ್ಗೆ ಎಳ್ಳಷ್ಟು ಕಾಳಜಿ ತೋರದೆ ಇದ್ದು, ಮಾತನ್ನು ಮುಂದುವರಿಸುವುದು. ಹೇಳುವವರು ಅರ್ಥವಾಗದೆ ಪುನಃ ಕೇಳಿದರೂ ಮಾತಿನ ಧಾಟಿಯಲ್ಲಿ ಹೆಚ್ಚು ವ್ಯತ್ಯಾಸ ಮಾಡದೆ ಹಾಗೇ ಮುಂದುವರಿಸುತ್ತಾನೆ. ಬಹಳ ಸಾರಿ ಇಂಥವರು ಚಿಕಿತ್ಸೆಗೆ ಬಂದಾಗ ಹೇಳುವುದೆಂದರೆ ಬೇರೆಯವರು ಇವರ ಮಾತಿನ ಬಗ್ಗೆ ದೂರುತ್ತಾರೆ ಮತ್ತು ಅರ್ಥಮಾಡಿಕೊಳ್ಳಲು ಕಷ್ಟಪಡುತ್ತಾರೆಂದು. ಉಗ್ಗುವವನ ಮನಸ್ಸಿನಂತಲ್ಲದೆ, ವಿರುದ್ಧವಾಗಿ, ತನ್ನ ಮಾತಿನ ಬಗ್ಗೆ, ಸರಿಪಡಿಸಿಕೊಳ್ಳಲು ಆಗದುದರ ಬಗ್ಗೆ ಮನಸ್ಸಿಗೆ ಹಚ್ಚಿಕೊಳ್ಳದೆ ನಿರ್ಲಿಪ್ತನಾಗಿರುತ್ತಾನೆ ಈ ತೊಂದರೆ ಇರುವಾತ.

ಉಗ್ಗು ಮಾತಿನಂತೆ ಮಾತಿನಲ್ಲಿ ಶಬ್ದಗಳು ಮತ್ತೆ ಮತ್ತೆ ಬರುವುದು, ಮಾತು ಕಟ್ಟುವುದು ಇವು ಹೆಚ್ಚಾಗಿ ಕಂಡುಬರುವುದಿಲ್ಲ. ಮಾತಿನ ವೇಗದಿಂದಾಗಿ ಮಾತಿನಲ್ಲಿ ಅಸ್ಪಷ್ಟತೆ ಕಂಡುಬರುತ್ತದೆ. ಪದಗಳನ್ನು ನುಂಗಿಬಿಡುತ್ತಾನೆ ಅನ್ನಿಸುತ್ತದೆ. ಈ ಮಾತಿನ ತೊಂದರೆಯ ಜೊತೆ ಭಾಷೆಗೆ ಸಂಬಂಧಪಟ್ಟಂತೆ ಇನ್ನೂ ಹಲವು ತೊಂದರೆಗಳಿರುವ ಸಾಧ್ಯತೆ ಹೆಚ್ಚು. ಬರವಣಿಗೆಯಲ್ಲಿ ಗೊಂದಲ, ತಪ್ಪುಗಳು ಕಂಡು ಬರುತ್ತವೆ. ಓದುವಾಗ ಕೂಡ ತಪ್ಪುಗಳು ಸಾಮಾನ್ಯವಾಗಿ ಇರುತ್ತವೆ. ಆಡುವ ಮಾತಿನಲ್ಲಿ ವಾಕ್ಯಗಳ ರಚನೆ ಸರಿಯಾಗಿರದೆ ಹೋಗಬಹುದು. ಇವು ಗಲಿಬಿಲಿ ಮಾತಿನ ರೂಪ, ಇದಕ್ಕೆ ' ಕ್ಲಟರಿಂಗ್ ' ಎನ್ನುತ್ತಾರೆ.

ಕಾರಣಗಳು

ಈ ತೊಂದರೆಗೆ ಕಾರಣಗಳು ಉಗ್ಗಿನದಕ್ಕಿಂತ ಬೇರೆಯಾದವುಗಳು. ಈ ತೊಂದರೆಯುಳ್ಳ ಮಕ್ಕಳನ್ನು ಪರೀಕ್ಷಿಸಿದರೆ ಸೂಕ್ಷ್ಮವಾದ ದೋಷಗಳು ನರಮಂಡಲಕ್ಕೆ ಸಂಬಂಧಪಟ್ಟಂತೆ ಕಾಣಬರುತ್ತವೆ ಈ ಲಕ್ಷಣಗಳು ನರದೋಷ ಇದೆಯೋ ಇಲ್ಲವೋ ಅನ್ನುವಷ್ಟು ಸೂಕ್ಷ್ಮವಾಗಿರುವುದರಿಂದ ಮಿದುಳಿನ ತೊಂದರೆ ಇದ್ದರೂ ಇರಬಹುದೆಂಬ

ಅನುಮಾನ ಹುಟ್ಟಿಸುತ್ತದೆ, ಆದರೆ ಅದರ ಬಗ್ಗೆ ಖಚಿತವಾಗಿ ಏನೂ ಹೇಳಬರುವುದಿಲ್ಲ. ವಿಶೇಷ ತರಬೇತಿ ಕೊಡದಿದ್ದರೆ ಬರವಣಿಗೆ ಹಾಗೂ ಓದಿನಲ್ಲಿಯ ತೊಂದರೆಗಳು ಮಾತಿನಂತೆಯೇ ಮುಂದುವರಿಯುತ್ತವೆ. ಇವುಗಳಿಗೆ ದೇಹದಲ್ಲಿ ದೋಷವನ್ನು ಹುಡುಕುವ ಗೋಜಿಗೆ ಹೋಗಬೇಕಾದ ಅವಶ್ಯಕತೆ, ಈ ತೊಂದರೆಯ ಪರಿಹಾರಕ್ಕೆ ಬೇಕು ಎಂದು ತಜ್ಞರಿಗೆ ಈಗ ಅನ್ನಿಸುತ್ತಿಲ್ಲ. ಈ ತೊಂದರೆಗೆ ನೇರ ಪರಿಹಾರ ಹುಡುಕಿಕೊಳ್ಳುವುದೇ ಮುಖ್ಯ ಎನ್ನುವುದು ಈಗಿನ ಅಭಿಪ್ರಾಯ.

ಪರಿಹಾರ

ಗಲಿಬಿಲಿ ಮಾತು ಇರುವವನ ತೊಂದರೆಯನ್ನು ಅವನ ಅವಗಾಹನೆಗೆ ತರುವುದು ಮುಖ್ಯ ಕೆಲಸ. ಅವನ ತೊಂದರೆಗೆ ಕನ್ನಡಿ ಹಿಡಿಯಬೇಕು ಹಾಗೂ ಸರಿಯಾದ, ಸ್ಪಷ್ಟವಾದ ಮಾತಿನ ರೀತಿಯನ್ನು ಕಲಿಸಬೇಕು. ತಜ್ಞರು ಸ್ಪಷ್ಟವಾದ ಮಾತಿನ ರೀತಿಗೆ ಕೊಟ್ಟ ಸೂಚನೆಯನ್ನು ಮರುಕ್ಷಣದಲ್ಲಿಯೇ ಆತ ಮರೆತಿರುತ್ತಾನೆ. ಒಂದು ವಾಕ್ಯದಲ್ಲಿ ಪದಗಳನ್ನು ಬಿಡಿಸಿ ಓದಲು ಹೇಳಿದರೆ ಅದು ಅಸಾಧ್ಯವಾದ ಕೆಲಸವೇನೋ ಎಂಬಂತೆ ಇರುತ್ತದೆ ಆತನ ಮಾತಿನ ವರ್ತನೆ. ಎಷ್ಟೋ ಸಾರಿ ಪದಗಳನ್ನು ಮುಂದು ಹಿಂದಾಗಿ ಓದಲು ಹೇಳಬೇಕಾದ ಅವಶ್ಯಕತೆ ಬರುತ್ತದೆ. ಮೊದಲಿಗೆ ಅವನಿಂದ ಸ್ಪಷ್ಟವಾದ ಮಾತು ಹೊರಡಿಸಿ, ತೋರಿಸಿ ನಂತರ ಅದರ ಅಭ್ಯಾಸವನ್ನು ಮಾಡಿಸಬೇಕು. ಮೊದಲು ಹೇಳಿದ ಹಾಗೆ, ಅವನಿಗೆ ತನ್ನ ಮಾತು ದೋಷವುಳ್ಳದ್ದು ಎಂದು ಅನ್ನಿಸುವುದಿಲ್ಲವಾದ್ದರಿಂದ ಅಷ್ಟರಮಟ್ಟಿಗೆ ಚಿಕಿತ್ಸೆ ಕಷ್ಟವಾಗುತ್ತದೆ. ಸ್ಪಷ್ಟವಾದ ಮಾತು ಕಲಿಯಲು ಹೊರಗಿನಿಂದ ಹೆಚ್ಚು ಒತ್ತಡ ವಿದ್ದಾಗ ಮಾತ್ರ ಚಿಕಿತ್ಸೆಗೆ ಒಳಪಟ್ಟು ಆತ ಕಲಿಯಲು ಮುಂದಾಗುತ್ತಾನೆ.

ಕೈ ಬರವಣಿಗೆಯ ತೊಂದರೆ

ಬರವಣಿಗೆಯು ಓದಿನ ಜತೆ ಸಾಮಾನ್ಯವಾಗಿ ಅಭಿವೃದ್ಧಿ ಹೊಂದುವಂತಹದು. ಸಾಮಾನ್ಯವಾಗಿ ಮಾತಿನ ಬೆಳವಣಿಗೆಯಲ್ಲಿ ತೊಂದರೆಯಿದ್ದಾಗ ಓದು ಹಾಗೂ ಬರವಣಿಗೆ ಎರಡರ ಬೆಳವಣಿಗೆಯೂ ಅಸಮರ್ಪಕವಾಗುತ್ತದೆ. ಮಾತು ಹಾಗೂ ಓದು ಎರಡೂ ಸರಿಯಾಗಿದ್ದರೂ ಹಲವು ಸಲ ಬರವಣಿಗೆಯಲ್ಲಿ ತೊಂದರೆ ಕಂಡು ಬರುತ್ತದೆ. ಇದಕ್ಕೆ ಕಲಿಕೆಯ ತೊಂದರೆಯೂ ಅಲ್ಲದೆ ಬೇರೆ ಕಾರಣಗಳು ಸಾಧ್ಯ.

ಸಾಮಾನ್ಯವಾಗಿ ಬರವಣಿಗೆ ಬಲಗೈನ ಕೆಲಸ, ಹಾಗೂ ಬರಹ ಎಡದಿಂದ ಬಲಕ್ಕೆ ಸಾಗುತ್ತದೆ. ಬಲಗೈಯಿಂದ ಎಡದಿಂದ ಬಲಕ್ಕೆ ಬರೆಯುವುದು ಸುಲಭ ಸಹಜ. ಕೈಯನ್ನು ಮೈಯಿಂದ ದೂರಕ್ಕೆ ಚಾಚುವುದು ಹೆಚ್ಚು ಸುಲಭ. ಇದೇ ಕಾರಣ

ದಿಂದ ಸಾಮಾನ್ಯ ಬರವಣಿಗೆ ಎಡಗೈನಿಂದ ಕಷ್ಟವಾಗುತ್ತದೆ. ಕೈಯಿಂದ ಗೆರೆ ಎಳೆಯುವಾಗ ಕೆಳಗಿನಿಂದ ಮೇಲಕ್ಕೆ ಕಷ್ಟ, ಮೇಲಿನಿಂದ ಕೆಳಕ್ಕೆ ಸುಲಭ. ಅಕ್ಷರ ಗಳನ್ನು ಗಮನಿಸಿದರೆ ಅವು ಬಲಗೈಗಾಗಿಯೇ ಆಗಿರುವಂಥವು ಅನ್ನಿಸುವುದಿಲ್ಲವೇ? ಹೀಗಾಗಿ ಎಡಗೈನ ಬರವಣಿಗೆ ಸ್ಫುಟವಾಗಿರುವುದಿಲ್ಲ ಹಾಗೂ ಕಲಿಕೆ ಸ್ವಲ್ಪ ಕಷ್ಟ ವಾಗುತ್ತದೆ. ಆದರೆ ಬರವಣಿಗೆ ಬರಿಯ ಕೈಕೆಲಸ ಅಲ್ಲ ಅದು ಮೂಲತಃ ಮಿದುಳಿನ ಕೆಲಸ, ಅದು ಬಲಗೈ, ಎಡಗೈ ಅಥವಾ ಕಾಲುಗಳಿಂದಲೂ ಆಗಬಹುದು.

ಬೆಳೆಯುವಾಗ ಮಗು ಸಹಜವಾಗಿ ಬಲಗೈಯನ್ನು ಉಪಯೋಗಿಸಲು ಪ್ರಾರಂಭಿಸುತ್ತಾನೆ, ಒಂದೇ ಕೈನ ಉಪಯೋಗ ಬೇಕೆಂದಾಗ, ಇದಕ್ಕೆ ಕಾರಣ ಎಡ ಮಿದುಳಿನ ಭಾಗದ ಸಾಮರ್ಥ್ಯ. ಯಾವುದೋ ಕಾರಣದಿಂದ ಸುಮಾರು ಶೇಕಡಾ ಇಬ್ಬರು ಮಕ್ಕಳು ಬಲಗೈನ ಬದಲು ಎಡಗೈಯನ್ನು ಉಪಯೋಗಿಸಲು ಪ್ರಾರಂಭಿಸು ತ್ತಾರೆ. ನಮ್ಮ ಸಮಾಜದಲ್ಲಿ, ಮೂಲವಾಗಿ ಶೌಚದ ಕಾರಣದಿಂದಾಗಿ, ಮಗುವನ್ನು ಎಡಗೈನ ಉಪಯೋಗದಿಂದ ತಪ್ಪಿಸುತ್ತಾರೆ. ಇದು ಅಷ್ಟು ಒಳ್ಳೆಯದಲ್ಲ. ಅವನು ಅನವಶ್ಯವಾಗಿ ಬಲಗೈನಲ್ಲಿ ಬರೆಯಲು ಕಷ್ಟಪಟ್ಟು ಕಲಿಯಬೇಕಾಗುತ್ತದೆ. ಇದರಿಂದ ಅವನ ಬರವಣಿಗೆಯಲ್ಲಿ ತೊಂದರೆ ಕಂಡುಬರುವ ಸಾಧ್ಯತೆಗಳಿವೆ. ಮಗುವಿಗೆ ಕೈಯಿನ ವಿಷಯದಲ್ಲಿ ಸ್ವಾತಂತ್ರ್ಯ ಕೊಡುವುದು ಒಳ್ಳೆಯದು. ಎಡಗೈನಲ್ಲಿ ಬರೆಯುವ ಮಗು ಹೆಚ್ಚು ಅಕ್ಷರಗಳನ್ನು ತಿರುಮುರುವಾಗಿ ಬರೆಯುತ್ತಾನೆ. ಬಲಗೈಯಲ್ಲಿ ಬರೆಯುವ ಮಕ್ಕಳು ಕೂಡ ಮೊದಲು ಅಕ್ಷರಗಳನ್ನು ತಿರುಗಿಸಿ ಬರೆದಾರು, ಆದರೆ ಇಲ್ಲಿ ಅದು ಹೆಚ್ಚು ಇಷ್ಟೆ. ಜೊತೆಗೆ ಎಡಚರು ಸ್ಲೇಟು-ಪೇಪರನ್ನು ಎಡಗಡೆಗೆ ತಿರುಗಿಸಿ ಇಟ್ಟು ಕೊಳ್ಳಬೇಕಾಗುತ್ತದೆ ಅದಕ್ಕೆ ಅವಕಾಶ ಕೊಡಬೇಕು. ಬಲಗೈ ಸಾಮಾನ್ಯವಾಗಿ ಉಪಯೋಗಿಸುವವರಿಗೆ ಎಡಗೈಯಿಂದ ಬರೆಯಲು ಎಷ್ಟು ಕಷ್ಟವೋ, ಅಷ್ಟೇ ಕಷ್ಟ ಎಡಚರಿಗೆ ಬಲಗೈನಿಂದ ಬರೆಯಲು ಆಗಬಹುದೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಕೆಲವು ಸಲ ಬಲಗೈನಲ್ಲೇ ಬರೆಯುವವರಿಗೂ ಕೈಬರಹದಲ್ಲಿ ತೊಂದರೆ ಬರುವ ಸಾಧ್ಯತೆಗಳಿವೆ. ಬರವಣಿಗೆ ಸೂಕ್ಷ್ಮತರವಾದ ಕಣ್ಣು—ಕೈಯಿನ ಕೆಲಸಗಳನ್ನು ಒಳಗೊಳ್ಳುತ್ತದೆ. ಈ ಸಂದರ್ಭದಲ್ಲಿ ನಮಗೆ ಗೋಚರಿಸದಂತಹ ತೊಂದರೆಗಳು ಇದ್ದು ಬರವಣಿಗೆ ಅಸ್ಪಷ್ಟವಾಗಬಹುದು. ಬರವಣಿಗೆಯ ಸ್ಪಷ್ಟತೆಯನ್ನು ಹೆಚ್ಚಿಸುವುದು ಮುಖ್ಯವಾದ ಕೆಲಸ. ಅಸಮರ್ಪಕವಾದ ಹಿಡಿತವನ್ನು ಪೆನ್ಸಿಲಿನ ಮೇಲಿದ್ದಾಗ ಕೂಡ ಬರವಣಿಗೆ ಅಸ್ಪಷ್ಟವಾಗುತ್ತದೆ. ಇದನ್ನು ಬರೆಯುವವನ ಗಮನಕ್ಕೆ ತರುವುದು, ಅದನ್ನು ಸರಿಮಾಡುವುದು ಅವಶ್ಯಕ. ಕೈಯಿಂದ ಮೆದುಳಿಗೆ ತಲುಪುವ ನರಗಳಿಂದ ಸ್ಪರ್ಶಜ್ಞಾನ ಸರಿಯಾಗಿರದಿದ್ದರೂ ಬರಹ ಕೆಡಬಹುದು. ಇಂತಹವರಲ್ಲಿ ಹಲವು ಭಾರಿ ಬೆರಳುಗಳ ಅರಿವು ಕಡಿಮೆಯಾಗಿರುವುದು ತಿಳಿಯುತ್ತದೆ. ಅವರಿಗೆ ಕಣ್ಣುಮುಚ್ಚಿಕೊಳ್ಳಲು ಹೇಳಿ ಯಾವುದಾದರೂ ಒಂದು ಬೆರಳನ್ನು ಮುಚ್ಚಿ ಅದನ್ನು ಗುರುತಿಸಲು ಹೇಳಿದಾಗ ಅವರಿಗೆ ಗುರುತಿಸಲು ಆಗದೆಹೋಗಬಹುದು.

ರಟ್ಟಿನ ಮೇಲೆ ಕೊರೆದಿರುವ ಅಕ್ಷರಗಳನ್ನು ತಿದ್ದುವುದು, ಮರಳಲ್ಲಿ ಬರೆಯುವುದು ಅನುಕೂಲಕ್ಕೆ ಬರಬಹುದು. ದಪ್ಪನಾದ ಪೆನ್ನು ಪೆನ್ಸಿಲಿನ ಬಳಕೆ ಕೂಡ ಒಳ್ಳೆಯದು. ಅಕ್ಷರಗಳನ್ನು ಕೂಡಿಸಿ ಬರೆಯುವುದನ್ನು ತಪ್ಪಿಸುವುದರ ಮೂಲಕ ಅಸ್ಪಷ್ಟತೆಯನ್ನು ಸುಧಾರಿಸಬಹುದು. ನನ್ನ ಪರಿಚಯದ ಪ್ರೊಫೆಸರರೊಬ್ಬರು ಅಕ್ಷರಗಳನ್ನು ಇಂಗ್ಲಿಷಿನಲ್ಲಿ ಬಿಡಿಬಿಡಿಯಾಗಿ ಬರೆಯುತ್ತಿದ್ದರು, ಬರಹ ಪೂರ್ತಿ ಹಾಗೇ ಗೀರುಗಳಿರುವ ಹಾಳೆಗಳಲ್ಲಿ ಬರೆಯುವುದು ಉತ್ತಮ. ದೊಡ್ಡಕ್ಷರಗಳಲ್ಲಿ ಬರೆಯುವುದನ್ನು ಅಭ್ಯಾಸ ಮಾಡಿಸಬಹುದು.

ಬರೆಯುವ ಕೈ, ಸಾಮಾನ್ಯವಾಗಿ ಬಲಗೈಗೆ ಹಾನಿಯುಂಟಾದಾಗ ಆಘಾತವಾಗಿ ಅಥವಾ ಪಾರ್ಶ್ವವಾಯುವಿನಿಂದಾಗಿ ಬರಹ ಸಾಧ್ಯವಾಗದೆ ಹೋಗಬಹುದು. ಅಂಥ ಸಮಯದಲ್ಲಿ ಎಡಗೈನಲ್ಲಿ ಬರೆಯಬಹುದು. ಇದು ಸಾಧ್ಯ ಎಂದು ಅವರಿಗೆ ಅನ್ನಿಸದೆ ಹೋಗುವುದು ಸಾಮಾನ್ಯ. ಸೂಕ್ತ ತರಬೇತಿಯಿಂದ ಅವರು ಪುನಃ ಬರೆಯುವುದು ಸಾಧ್ಯವಾಗುತ್ತದೆ. ಅಭ್ಯಾಸ ಮಾಡಲು ಮನಸ್ಸು ಕೊಡುವುದು ಮುಖ್ಯ. ಮೊದಲು ಬರವಣಿಗೆ ನಿಧಾನ ಹಾಗೂ ಅಸ್ಪಷ್ಟವಾಗಿರುತ್ತದೆ. ಸಹಿ ಮಾಡುವಷ್ಟು ಲೀಲಾಜಾಲವಾಗಿ ಬರೆಯಲು ಸಮಯ ಬಹಳಷ್ಟು ಹಿಡಿಯುತ್ತದೆ.

ಹಸಿದವನಾರೂ ದೇಶಪ್ರೇಮಿಯಾಗಲಾರ.

—ವಿಲಿಯಂ ಕೌಪರ್ ಬ್ರೌನ್

ಅತಿಥಿಗಳಂತೆ ಲೋಕದಲ್ಲಿ ನಾಲ್ಕೇದಿನ ಇದ್ದರೂ ಬಹಳಷ್ಟು ಆಕ್ರಮಿಸುತ್ತೇವೆ.

—ಕಬೀರ್

ಕರೆಯದ ಸ್ಥಳಕ್ಕೆ ಹೋಗುವುದು, ಕೇಳದಿದ್ದಾಗಲೂ ಬಹಳ ಮಾತನಾಡುವುದು—ಇವು ಮೂಢರ ಲಕ್ಷಣ.

—ಮಹಾಭಾರತ

ಸಂಸತ್ತು ಸಾರ್ವಜನಿಕ ಅಭಿಪ್ರಾಯವನ್ನು ಕ್ರಮಬದ್ಧವಾಗಿ ಪ್ರತಿನಿಧಿಸುತ್ತದೆ. ಅದನ್ನು ಮೀರುವುದೆಂದರೆ ಕಾನೂನನ್ನು ಮೀರುವುದೇ.

—ಜೋಸೆಫ್ ಕೋವನ್

ಬಿರುದು ಮನುಷ್ಯನಿಗೆ ಗೌರವತರುವುದಿಲ್ಲ; ಮನುಷ್ಯ ಬಿರುದಿಗೆ ಗೌರವ ತರಬೇಕು.

—ಮ್ಯಾಕಿ ವಿಲಿ

ವೈ. ಸಿ. ಭಾನುಮತಿ

ಒಸಗೆ

ಒಸಗೆ ಶಬ್ದಕ್ಕೆ ಕಿಟ್ಟೆಲ್ ಅವರು Joy, Joyful occasion, a feast, festival ಎಂಬ ವಿವರಣೆಗಳನ್ನು ಕೊಟ್ಟಿದ್ದಾರೆ. ಮೈಸೂರು ಕಡೆ ಒಸಗೆ, ಶೋಭನ, ನಿಷೇಕಪ್ರಸ್ತ, ಗರ್ಭಾದಾನ ಇವೆಲ್ಲ ಸಮಾನಾರ್ಥಕ ಶಬ್ದಗಳು. ಬ್ರಾಹ್ಮಣರಲ್ಲಿ ಋತುಮತಿಯಾದ ಹುಡುಗಿಗೆ ಹದಿನಾರನೆಯ ದಿನ ನಡೆಸುವಂಥ ಪ್ರಸ್ತಕ್ಕೆ ಒಸಗೆ ಎಂದು ಕರೆಯುತ್ತಾರೆ. ವಿಶಾಲಾರ್ಥದಲ್ಲಿ ಒಸಗೆ ಶಬ್ದ ಶುಭ, ಮಂಗಳಕಾರ್ಯ ಎಂಬ ಅರ್ಥವನ್ನು ಧ್ವನಿಸುತ್ತದೆ. ಆದರೆ ಹಾಸನ ಜಿಲ್ಲೆಯ ಮಲೆನಾಡು ಒಕ್ಕಲಿಗರಲ್ಲಿ 'ಒಸಗೆ' ನಿರ್ದಿಷ್ಟ ಸಂದರ್ಭದಲ್ಲಿ ಮಾತ್ರ ಬಳಸುವಂಥದ್ದು. ಹೆಣ್ಣು ಪ್ರೌಢಾವಸ್ಥೆ ತಲುಪಿದಾಗ ಅಂದರೆ ಋತುಮತಿಯಾದಾಗ ಮಾಡುವ ಸಂಪ್ರದಾಯ 'ಒಸಗೆ' ಎನಿಸಿ ಕೊಂಡಿದೆ. ಹೆಣ್ಣಿನ ಜೀವನದ ಎರಡು ಮಹತ್ವದ ಘಟ್ಟಗಳೆಂದರೆ ಪ್ರೌಢಾವಸ್ಥೆ ಮತ್ತು ಗರ್ಭಾವಸ್ಥೆ. ಈ ಅವಧಿಯಲ್ಲಿ ಹೆಣ್ಣು ದೈಹಿಕವಾಗಿ ಮತ್ತು ಮಾನಸಿಕವಾಗಿ ಬದಲಾವಣೆಗೆ ಒಳಪಡುತ್ತಾಳೆ. ಆದುದರಿಂದ ಪ್ರತಿಯೊಂದು ಸಮಾಜವೂ ಈ ಸಮಯದಲ್ಲಿ ಹೆಣ್ಣನ್ನು ಜತನದಿಂದ ನೋಡಿಕೊಳ್ಳುತ್ತದೆ.

ಲಿಂಗಪ್ರೌಢಿಮೆ ಗಂಡುಹೆಣ್ಣುಗಳಿಬ್ಬರಲ್ಲಿಯೂ ಕಂಡುಬರುವಂಥ ಒಂದು ನೈಸರ್ಗಿಕ ಪ್ರಕ್ರಿಯೆ. ಸೃಷ್ಟಿಕ್ರಿಯೆಯಲ್ಲಿ ಹೆಣ್ಣು ಗಂಡಿಗಿಂತ ಭಿನ್ನಪಾತ್ರ ವಹಿಸುವುದರಿಂದ ಹೆಣ್ಣಿಗೆ ಸಂಬಂಧಿಸಿದಂತೆ ಈ ಸಂದರ್ಭವನ್ನು ವಿಶಿಷ್ಟವಾಗಿ ಪರಿಗಣಿಸಲಾಗುತ್ತದೆ. ಸಂಭ್ರಮದಿಂದ ಸ್ವಾಗತಿಸಲಾಗುತ್ತದೆ.

ಎಲ್ಲ ಜನಾಂಗಗಳಂತೆ ಕರ್ಣಾಟಕದ ಒಕ್ಕಲಿಗ ಜನಾಂಗ ಕೂಡ ಲಿಂಗಪ್ರೌಢಿಮೆಗೆ ಸಂಬಂಧಿಸಿದಂತೆ ಕೆಲವೊಂದು ಆಚರಣೆಗಳನ್ನು ಇಟ್ಟುಕೊಂಡಿದೆ. ಬಯಲುಸೀಮೆಯ ಒಕ್ಕಲಿಗರಲ್ಲಿ ಋತುಮತಿಯಾದ ಹೆಣ್ಣಿಗೆ 'ಗುಡ್ಲುಕೂಡುವ' ಸಂಪ್ರದಾಯವಿದೆ. ಹೆಣ್ಣು ಈ ಅವಧಿಯಲ್ಲಿ ಮನೆಯ ಹೊರಗೆ, ಸೋದರಮಾವ ಹಾಕಿದ ಸೊಪ್ಪಿನ ಗುಡ್ಲಿನಲ್ಲಿ ವಾಸಿಸಬೇಕು. ಈ ಸಂಪ್ರದಾಯ ಮಲೆನಾಡು ಒಕ್ಕಲಿಗರಲ್ಲಿ ಇಲ್ಲವೆಂಬುದು ವಿಶೇಷ. ಹಾಸನ ಜಿಲ್ಲೆಯ ಮಲೆನಾಡು ಒಕ್ಕಲಿಗರ ಪ್ರೌಢಸಂಸ್ಕಾರಗಳಿಗೂ ತೀರ್ಥಹಳ್ಳಿ ಸುತ್ತಿನ ನಾಮಧಾರಿ ಒಕ್ಕಲಿಗರ ಸಂಪ್ರದಾಯ

ಗಳಿಗೂ ಸಾಮ್ಯತೆಯಿದೆ. ಪ್ರಸ್ತುತ ಹಾಸನ ಜಿಲ್ಲೆಯ ಮಲೆನಾಡು ಒಕ್ಕಲಿಗರ ಪ್ರೌಢಸಂಸ್ಕಾರಗಳನ್ನು ಕುರಿತು ವಿವರಿಸಿದೆ.

ಹಾಸನ ಜಿಲ್ಲೆಯ ಮಲೆನಾಡು ಒಕ್ಕಲಿಗರು ಹೆಣ್ಣು ಋತುಮತಿಯಾಗುವುದನ್ನು ಋತುವಾದಳು, ದೊಡ್ಡವಳಾದಳು, ಹೆಣ್ಣಾದಳು, ಮೈನೆರೆದಳು ಎಂದು ವಿವಿಧರೀತಿಯಲ್ಲಿ ಗುರುತಿಸುವುದು ರೂಢಿಯಲ್ಲಿದೆ. ಆರೋಗ್ಯವಂತರಾದ ಮಲೆನಾಡಿನ ಹೆಣ್ಣುಮಕ್ಕಳು ಇಲ್ಲಿನ ಹವಾಗುಣಕ್ಕೆ ಅನುಗುಣವಾಗಿ 12-15 ವರ್ಷಗಳ ಅವಧಿಯಲ್ಲಿ ಋತುಮತಿಯಾಗುವುದು ಸಾಮಾನ್ಯ. ಇಲ್ಲವಾದರೆ ನುರಿತ ನಾಟಿವೈದ್ಯರಿಂದ ಔಷಧ ಕೊಡಿಸುವರು. ಹಿಂದೆ ಬಾಲ್ಯವಿವಾಹ ಜಾರಿಯಲ್ಲಿದ್ದುದರಿಂದ ಹೆಣ್ಣು ಋತುಮತಿಯಾಗುವ ಮೊದಲೆ ವಿವಾಹಿತಳಾಗಿರುತ್ತಿದ್ದಳು. ಆದರೆ ಪ್ರೌಢಳಾಗುವವರೆಗೆ ಆಕೆಯನ್ನು ತವರಿನಲ್ಲಿ ಬಿಟ್ಟಿರುತ್ತಿದ್ದರು.

ಬೆಳೆಯುತ್ತಿರುವ ಮಗಳ ಶಾರೀರಿಕ ಲಕ್ಷಣವನ್ನು ಗಮನಿಸಿ ತಾಯಿ, ಅಜ್ಜಿ ಅಥವಾ ಕುಟುಂಬದ ವೃದ್ಧೆಯರು ಋತುವಾಗುವ ಕಾಲ ಸಮೀಪಿಸುತ್ತಿದೆಯೆಂದು ಅನುಭವದಿಂದ ತಿಳಿಯುವರು. ಅಂಥ ಹೆಣ್ಣುಮಕ್ಕಳನ್ನು ಪರಸ್ಥಳದಲ್ಲಿರುವ ನೆಂಟರಿಷ್ಟರ ಮನೆಯಲ್ಲಿ ಬಹಳ ದಿನ ತಂಗಲು ಬಿಡುವುದಿಲ್ಲ. ಮನೆಗೆ ಬರುವ ಹೆಂಗಸರು 'ಹುಡುಗಿ ಹೆಣ್ಣಾಗಿದೆಯೆ' ಎಂದು ಕೇಳಿ ತಮ್ಮ ಬಾಯಿಚಪಲ ಪೂರೈಸಿಕೊಳ್ಳುವುದೂ ಉಂಟು. ಎಲ್ಲರ ನಿರೀಕ್ಷೆಯಂತೆ ಹುಡುಗಿ ಋತುಮತಿಯಾದೊಡನೆಯೆ ಆಕೆಯ ಬೆದರಿದ ಮೊಗ ಕೌತುಕದ ಕಣ್ಣುಗಳನ್ನು ನೋಡಿ ಮಗಳು ದೊಡ್ಡವಳಾದಳೆಂದು ತಾಯಿ ತಿಳಿಯುತ್ತಾಳೆ, ಸಂತಸ, ಸಡಗರಗೊಳ್ಳುತ್ತಾಳೆ. ಬ್ರಾಹ್ಮಣ ಜನಾಂಗದಲ್ಲಿ ಮಗಳ ಪ್ರಥಮ ಋತುಸ್ರಾವವನ್ನು ತಾಯಿ ನೋಡಬಾರದೆಂಬ ನಂಬಿಕೆಯಿದೆ. ಗ್ರಾಮೀಣ ಬದುಕು ತೆರೆದ ಪುಸ್ತಕದಂತೆ. ಅಲ್ಲಿ ರಹಸ್ಯ ಮುಚ್ಚುಮರೆಗಳಿಲ್ಲ. ಹಾಗೆಯೆ ಇಂಥ ವಿಷಯಗಳು ಊರಿಗೆಲ್ಲ ಹರಡುವುದು ತಡವಾಗುವುದಿಲ್ಲ. ಸುದ್ದಿ ತಿಳಿದ ಹೆಂಗಳೆಯರು ಹುಡುಗಿಯನ್ನು ನೋಡಲು ಮತ್ತು ಇತರ ವಿಚಾರಗಳಲ್ಲಿ ನೆರವಾಗಲು ಬರುತ್ತಾರೆ.

ಋತುವಾದ ಕ್ಷಣದಿಂದಲೆ ಹುಡುಗಿಯ ಹಾಗೂ ಆಕೆಯ ರಕ್ತಸಂಬಂಧಿಗಳಿಗೆ 'ಸೂತಕ' ತಲೆದೋರುತ್ತದೆ. ಹನ್ನೆರಡು ದಿನಗಳವರೆಗೆ ಇರುವ ಈ ಸೂತಕದ ಅವಧಿಯಲ್ಲಿ ದೇವಸ್ಥಾನಕ್ಕೆ ಹೋಗಬಾರದು. ಶುಭಕಾರ್ಯಗಳಲ್ಲಿ ಭಾಗವಹಿಸಬಾರದು. ಮನೆಯಲ್ಲಿಯೂ ಶುಭಕಾರ್ಯ ಇಟ್ಟುಕೊಳ್ಳಬಾರದು. ಇತರರು ಸೂತಕದ ಮನೆಯಲ್ಲಿ ಊಟಮಾಡಬಾರದು. ಜನನದ ಫಲವನ್ನು ತಿಳಿಯುವಂತೆ, ಋತುಮತಿಯಾದ ಸಮಯ ವಾರವನ್ನು ಗುರುತು ಹಾಕಿಕೊಂಡು ಜೋಯಿಸರಲ್ಲಿ ಶುಭಾಶುಭಗಳನ್ನು ಅರಿತುಕೊಳ್ಳುವರು. 'ಮೈ ನೆರೆದ ಫಲ'ಗಳನ್ನು ನಿರೂಪಿಸುವ ಜ್ಯೋತಿಷ ಗ್ರಂಥಗಳ ಸಹಾಯದಿಂದ ವಿವರಗಳನ್ನು ಹೇಳುವರು. ಒಸಗೆ ಇಟ್ಟುಕೊಳ್ಳಬೇಕಾದ ದಿನ ಮತ್ತು 'ಗಂಗೆ ತರಿಸುವ' ಮುಹೂರ್ತವನ್ನು ಕೇಳಲಾಗುವುದು.

ಹುಡುಗಿಯನ್ನು ಋತುಸ್ರಾವವಾದ ಕೂಡಲೆ ಮನೆಯ ಹಿತ್ತಲಿನಲ್ಲಿರುವ ಯಾವುದಾದರೂ ಹಾಲುಬರುವ ಮರದ ಹತ್ತಿರ ಕರೆದುಕೊಂಡು ಹೋಗುವರು. ಮಲೆನಾಡಿನ ಹಳ್ಳಿಗಳಲ್ಲಿ ಹಲಸಿನ ಮರಗಳು ಸಾಮಾನ್ಯ. ಆದುದರಿಂದ ಹಲಸಿನ ಮರದ ಕೆಳಗೆ ಹುಡುಗಿಯನ್ನು ಕೂರಿಸಿ ನೀರುಹಾಕುವರು. ಇದು ಹೆಣ್ಣಿ ಫಲವಂತಿಕೆಗೆ ಅರ್ಹಳಾದುದರ ಸಂಕೇತ. ಅನಂತರ ಬಚ್ಚಲಮನೆಗೆ ಕರೆದೊಯ್ದು ವಿಶಾಯಿಸುವರು. ಹೀಗೆ 'ನೀರು ಹಾಕುವ ಶಾಸ್ತ್ರ'ವನ್ನು ಮಾಡಿದ ಬಳಿಕ ಹುಡುಗಿಯನ್ನು ಅಡುಗೆ ಮನೆಯಿಂದ ದೂರವಿರುವ ಒಂದು ಕೋಣೆಯಲ್ಲಿ ಕುಳ್ಳಿರಿಸುವರು. ಒಳ್ಳೆಯ ಸೀರೆ ಉಡಿಸಿ, ತಲೆ ಬಾಚಿ ಕುಂಕುಮವಿಟ್ಟು ಸಿಂಗರಿಸುವರು. ಆಕೆಯ ಮಡಲಿಗೆ ಅಕ್ಕಿ, ಬೆಲ್ಲ, ತೆಂಗಿನಕಾಯಿ, ವೀಳೆಯದೆಲೆ, ಅಡಿಕೆ, ಓಲೆತೋಡು, ನೂಲು ಇವುಗಳನ್ನು ಇಟ್ಟು 'ಮಡಿಲಕ್ಕಿ ಹುಯ್ಯುವರು'. ಇದು ಮುಂದೆ ಹುಡುಗಿ ಸಂತಾನ ನೀಡಿ ವಂಶವನ್ನು ಬೆಳೆಸಲಿ ಎಂಬ ಹಾರೈಕೆಯ ಪ್ರತೀಕ. ಅನಂತರ ಈ ಮಡಿಲಕ್ಕಿಯಿಂದ ಹುಡುಗಿಗೆ ಹುಗ್ಗಿ ಬಾನ ಮಾಡಿ ಬಡಿಸುವರು.

ಋತುಮತಿಯಾದ ಹುಡುಗಿಗೆ ಸ್ನಾನ ಬಹುಮುಖ್ಯ. ಆರೋಗ್ಯಶಾಸ್ತ್ರ ಕೂಡ ಈ ಅವಧಿಯಲ್ಲಿ ಶುಚಿತ್ವದ ಅಗತ್ಯವನ್ನು ಮನಗಾಣಿಸಿದೆ. ಶಾಸ್ತ್ರೀಯವಾಗಿ ಅಧ್ಯಯನ ಮಾಡದಿದ್ದರೂ ತಮ್ಮ ಅನುಭವದಿಂದಲೆ ಅರಿತ ಮಲೆನಾಡ ಒಕ್ಕಲಿಗರು ಋತುವಾದ ಹುಡುಗಿಗೆ ಹನ್ನೆರಡು ದಿನಗಳ ಕಾಲ ಪ್ರತಿದಿನ ನೀರುಹಾಕುವರು. ಹುಡುಗಿಯ ಬಟ್ಟೆಗಳನ್ನು ಆಕೆಯಾಗಲಿ, ಮನೆಯವರಾಗಲಿ ಒಗೆಯಬಾರದು. ಸೂತಕ ಕಳೆಯುವವರೆಗೂ ಮಡಿವಾಳತಿ ಬಟ್ಟೆ ತೊಳೆಯಬೇಕು. ಅದಕ್ಕಾಗಿ ಆಕೆಗೆ ಒಸಗೆಯ ದಿನದಂದು ಮೂರು ಕೊಳಗ ಬತ್ತ, ಮೂರುರೂಪಾಯಿ ಮತ್ತು ಹುಡುಗಿ ಋತುಮತಿಯಾದಾಗ ಉಟ್ಟಿದ್ದ ಸೀರೆಯನ್ನು ಇನಾಮಾಗಿ ಕೊಡಲಾಗುವುದು. ಹುಡುಗಿ ಮೊದಲ ಮೂರುದಿನ ಪ್ರತ್ಯೇಕ ಕೋಣೆಯಲ್ಲಿರಬೇಕು. ಅನಂತರ ಮನೆಯ ಉಳಿದ ಭಾಗಗಳಲ್ಲಿ ಓಡಾಡಿಕೊಳ್ಳಬಹುದಾದರೂ ಹೊಸ್ತಿಲು ದಾಟಿ ಹೊರಗೆ ಹೋಗುವಂತಿಲ್ಲ. ಮನೆಗೆಲಸಕ್ಕೂ ಸಂಪೂರ್ಣ ವಿರಾಮ. ಊಟಮಾಡಿದ 'ಗಂಗಳ ಚೆಲ್ಲಬಾರದಂತೆ' ವಿಶ್ರಾಂತಿಯಲ್ಲಿಟ್ಟಿರುತ್ತಾರೆ. ಈ ಅವಧಿಯಲ್ಲಿ ಆಕೆಗೆ ಬೇಸರಿಕೆ ಬಾರದಂತೆ ಓರಗೆಯ ಹುಡುಗಿಯರನ್ನು ಕರೆದು ಮನೆಯಲ್ಲಿ ಇರಿಸಿಕೊಳ್ಳುತ್ತಾರೆ.

ಹುಡುಗಿಯ ಆಹಾರವಿಚಾರದಲ್ಲಿ ಕಾಳಜಿ ವಹಿಸಲಾಗುವುದು. ಋತುದರ್ಶನವಾದ ದಿನದ ಪ್ರಥಮ ಭೋಜನ ಹುಗ್ಗಿಬಾನ. ಅತ್ತಿ, ಆಲ, ಹಲಸು, ಮಾವು ಇಂಥ ಹಾಲು ಬರುವ ಐದು ಮರದಿಂದ ಒಂದೊಂದು ಎಲೆಗಳನ್ನು ಕಿತ್ತು ತಂದು ಹಚ್ಚಿ ಅದರ ಮೇಲೆ ಊಟ ಬಡಿಸುವರು. ಪಂಚಪಲ್ಲವಗಳ ಮೇಲೆ ಊಟಬಡಿಸುವ ಸಂಪ್ರದಾಯ ಬ್ರಾಹ್ಮಣ ಜನಾಂಗದಲ್ಲಿಯೂ ಕಂಡುಬರುತ್ತದೆ. ಮಲೆನಾಡು ಒಕ್ಕಲಿಗರಲ್ಲಿ ಹನ್ನೆರಡು ದಿನಗಳವರೆಗೆ ಹುಡುಗಿಗೆ ಪಥ್ಯದ ಆಹಾರ. ಈ ಅವಧಿಯಲ್ಲಿ ಮೆಂತ್ಯವನ್ನು ಹೆಚ್ಚಾಗಿ ಬಳಸುವರು. ಬೆಳಗ್ಗೆ ರೊಟ್ಟಿ ತುಪ್ಪ ಕೊಬ್ಬರಿ, ಮಧ್ಯಾಹ್ನ

ಮೆಂತ್ಯದ ಹಿಟ್ಟು, ಹುಗ್ಗಿ ಬಾನ ಅಥವಾ ಕಿಚ್ಚಡಿ, ರಾತ್ರಿಯ ಭೋಜನಕ್ಕೆ ಅನ್ನ ಸಾರು ಹಾಲು ಕೊಡುವರು. ಒಸಗೆಯಾಗುವ ವರೆಗೆ ಮಾಂಸಾಹಾರ ನಿಷಿದ್ಧ. ಕಾಯಿಸಿದ ನೀರು ಕುಡಿಯಬೇಕು. ಒಂದು ತಿಂಗಳವರೆಗೆ ಬೆಳಿಗ್ಗೆ ಮೆಂತ್ಯದ ಪುಡಿಯನ್ನು ಸೇವಿಸಬೇಕು. ಇಂಥ ಪೌಷ್ಟಿಕ ಆಹಾರವನ್ನು ಸ್ವೀಕರಿಸಿದ ಹುಡುಗಿ ಒಸಗೆಯ ದಿನದ ಹೊತ್ತಿಗಾಗಲೆ ಮೈ ಕೈ ತುಂಬಿಕೊಂಡು ಚೆಲುವಾಗಿ ಕಾಣಿಸುವಳು.

ಹನ್ನೆರಡನೆಯ ದಿನ ನಡೆಸುವ ಆಚರಣೆಗಳಿಗೆ ಒಸಗೆ ಎಂದು ಕರೆಯುವರು. ಹುಡುಗಿಯ ಮನೆಯವರು ದಿನ ಮುಂಚಿತವಾಗಿ ನೆಂಟರಿಷ್ಟರಿಗೆ ಹಾಗೂ ಊರಿನವರಿಗೆ ಒಸಗೆಯ ದಿನವನ್ನು ಹೇಳಿ ಊಟಕ್ಕೆ ಆಹ್ವಾನಿಸುವರು. ಸೋದರಮಾವನಿಗೆ ವಿಶೇಷ ಆಮಂತ್ರಣ. ಒಸಗೆಯ ಊಟಕ್ಕೆಂದು ಕುರಿ ಮತ್ತು ಹಂದಿಗಳನ್ನು ಮುಂಗಡವಾಗಿ ಕೊಂಡು ತರುತ್ತಾರೆ. ಮನೆಯ ಆರ್ಥಿಕಸ್ಥಿತಿಗೆ ಅನುಗುಣವಾಗಿ ಕುರಿ ಹಂದಿಗಳನ್ನು ಖರೀದಿಸಲಾಗುವುದು.

ಒಸಗೆಯ ದಿನ ಮನೆಯನ್ನು ಗುಡಿಸಿ ಸಾರಿಸಿ ಶುಚಿಗೊಳಿಸಲಾಗುವುದು. ಜೋಯಿಸರು ಬಂದು ಪುಣ್ಯಾಹ ಮಾಡಿ ಮನೆಗೆಲ್ಲ ತೀರ್ಥಹಾಕಿ ಶಾಸ್ತ್ರೋಕ್ತವಾಗಿ ಸೂತಕ ತೆಗೆದು ಹೋಗುವರು. ಮಡಿವಾಳತಿ ಹುಡುಗಿಗೆ ನೀರು ಹಾಕಿ ಬಟ್ಟೆ ಒಗೆದು ಮೈಲಿಗೆ ತೊಡೆಯುವಳು. ಹಿಂದಿನ ದಿನದಿಂದಲೆ ಬಂಧುಗಳು ಆಗಮಿಸುವರು. ಮನೆಯ ಮುಂದೆ ಚಪ್ಪರ ಹಾಕಲಾಗುವುದು ಮುಂಜಾವಿಗೆ ಎದ್ದು ಹಂದಿ ಮತ್ತು ಕುರಿಯನ್ನು ಹಸಗೊಳಿಸಿ ಅಡಿಗೆಗೆ ತೊಡಗುವರು.

ಹುಡುಗಿಯ ಸೋದರಮಾವ ಮತ್ತು ಹತ್ತಿರದ ಬಂಧುಗಳು ಒಸಗೆಗೆಂದು 'ಗೂಡೆ ತರುವ' ಸಂಪ್ರದಾಯವಿದೆ. ಒಂದು ಕುಕ್ಕೆಯಲ್ಲಿ ಸೀರೆ, ರವಿಕೆ ಕಣ, ಹಣ್ಣು, ಕಾಯಿ, ಮೆಂತ್ಯದಹಿಟ್ಟು, ಕೊಬ್ಬರಿ ಇವುಗಳನ್ನು ಇಟ್ಟು 'ಗೂಡೆ ತುಂಬಿಸುವರು'. ಇದನ್ನು ಮಡಿವಾಳ ಹೊತ್ತುಕೊಳ್ಳುವನು. ಕುಳವಾಡಿ, ಮಡಿವಾಳ ಇವರುಗಳನ್ನು ಜೊತೆಯಲ್ಲಿಟ್ಟುಕೊಂಡು ಬಾಜಾಬಜಂತ್ರಿಯೊಡನೆ ಸೋದರಮಾವ ಬಹಳ ಡೌಲಿನಿಂದ ಗೂಡೆತರುತ್ತಾನೆ. ಹೀಗೆ ವಾದ್ಯದ ಮೇಲೆ ಬಂದವರನ್ನು ಆರತಿ ಎತ್ತಿ ಬರಮಾಡಿ ಕೊಳ್ಳುವರು. ಹೆಂಗಳೆಯರು ಹಾಡುವರು—

ಹೂವು ಬಂದ್ವು ಹೂವು ಬಂದ್ವು ತೋಟದ್ಹೂವು ಬಂದ್ವು
ಎಲೆ ಬಂದ್ವು ಎಲೆ ಬಂದ್ವು ತೋಟದೆಲೆ ಬಂದ್ವು
ಅಡಕಿ ಬಂದ್ವು ಅಡಕಿ ಬಂದ್ವು ತೋಟದಡಕಿ ಬಂದ್ವು
ಹಣ್ಣು ಬಂದ್ವು ಹಣ್ಣು ಬಂದ್ವು ತೋಟದ್ಹಣ್ಣು ಬಂದ್ವು
ಕಾಯಿ ಬಂದ್ವು ಕಾಯಿ ಬಂದ್ವು ತೋಟದ್ಕಾಯಿ ಬಂದ್ವು
ಕಾಯಿ ತಗಂಡು ಮಾವನ ಮನಿಗ್ಹೋಗಿ
ಹೂವಿನ್ಹಾರ ಕಟ್ಟಿಸ್ಕಂದು ಮಾವನೆಂಬುವನು ಮುಸಿನಗೆ ನಗುತಾನೆ
ಸೊಸೆ ಒಸಗೀಗೆ ಹೂವಿನ್ಹಾರ ಕೊಟ್ಟರು
ಹೂವಿನ್ಹಾರನೇ ಕೊಟ್ಟು ಮಾವತ್ತೆ ಒಸಗೀಗೆ ಹೋದಾರು

ನೀವ್ ಹೋಗಿ ಮಾವಯ್ಯ ಏನ ಹೇಳುತೀರಿ
ಏನ ಹೇಳಲುತಾರೆ ಸೊಸೀಗೆ ಈಗ ಒಸಗೆಲ್ಲವೊ ನಾರಿ ಒಸಗೆಲ್ಲವೊ
ಮಾವನ ಮನಿಗೆ ಒಸಗೆ ಹೇಳಾಯ್ತೀಗ
ಮಾವನೆಂಬೋನು ಹೂವ ಕಟ್ಟಿಸ್ಯಾನೆ ಸೊಸೆಯ ಒಳಗೆ ಕಳಿಸ್ಯಾನೆ

ಒಸಗೆಯ ದಿನದ ಪ್ರಮುಖ ಕಾರ್ಯಕ್ರಮ ಗಂಗೆ ತರಿಸುವುದು. ಇದಕ್ಕೆ 'ನೀರು ಹೊರಿಸುವುದು' ಎಂಬ ಪರ್ಯಾಯನಾಮವೂ ಇದೆ. ಮಲೆನಾಡ ಒಕ್ಕಲಿಗರ ಯಾವುದೇ ಶುಭಕಾರ್ಯದಲ್ಲಿ ಗಂಗೆಪೂಜೆಗೆ ಅತ್ಯಂತ ಮಹತ್ವವಿದೆ. ಅಂತೆಯೆ ಒಸಗೆಯಲ್ಲಿಯೂ ಗಂಗೆಪೂಜೆ ಮುಖ್ಯ. ಗಂಗೆ ತರಿಸುವ ಮುನ್ನ ಮುತ್ತೈದೆಯರು ಹುಡುಗಿಗೆ ಎಣ್ಣೆ ಅರಸಿನ ಮಾಡಿ ಸ್ನಾನಮಾಡಿಸುವರು. ಈ ಸಂದರ್ಭಕ್ಕಾಗಿಯೆ ತಂದ ಹೊಸಸೀರೆ ಉಡಿಸುವರು. ಅಡ್ಡಿಕೆ ಡಾಬು ಮೊದಲಾದ ಆಭರಣಗಳನ್ನು ತೊಡಿಸಿ ನವವಧುವಿನಂತೆ ಸಿಂಗರಿಸುವರು. ಅಲಂಕಾರ ಮುಗಿದ ಮೇಲೆ ಆಕೆ ಮನೆಯ ಹಿರಿಯರಿಗೆ ನಮಸ್ಕರಿಸಿ ಕುಲದೇವತೆಯನ್ನು ನೆನೆಯುವಳು.

ನಿಗದಿತ ವೇಳೆಗೆ ಗಂಗೆ ತರಲು ಹುಡುಗಿಯನ್ನು ಹೊರಡಿಸುವರು. ವಾದ್ಯಗಳು ಮೊಳಗುವವು. ಪೂಜೆಗೆ ಬೇಕಾಗುವ ನೆನೆಅಕ್ಕಿ, ನೆನೆಗಡಲೆ, ಬೆಲ್ಲ, ಖಾಲಿ ಚೊಂಬುಗಳು, ಎಲೆ ಅಡಿಕೆ, ಹೂವು ಹಣ್ಣು, ಅರಿಶಿನ ಕುಂಕುಮ ಮೊದಲಾದ ಪೂಜಾಪರಿಕರಗಳನ್ನು ಹೆಂಗಳೆಯರು ತೆಗೆದುಕೊಂಡು ನಡೆಯುವರು. ಹುಡುಗಿಯ ಜೊತೆ ದೊಡ್ಡಗುಂಪು ವಾದ್ಯಘೋಷಗಳ ನಡುವೆ ಮೆರವಣಿಗೆಯಲ್ಲಿ ಸಮೀಪದ ಬಾವಿ ಅಥವಾ ಕೆರೆಯ ಬಳಿಗೆ ತೆರಳುವುದು. ಮುತ್ತೈದೆಯರು ಮೂರು ಚೊಂಬುಗಳಿಗೂ ನೀರು ತುಂಬಿಸಿ ಕಲಶಸ್ಥಾಪಿಸುವರು. ವಿಭೂತಿ ಅರಿಶಿನ ಕುಂಕುಮ ಹೂವುಗಳನ್ನು ಹುಡುಗಿಯ ಕೈಯಲ್ಲಿಡಿಸಿ ಮೂರು ಕಲಶಗಳಿಗೂ ಪೂಜೆಮಾಡಿಸುವರು. ಕಲಶಗಳ ಮುಂದೆ ಒಂದೊಂದು ಮಣ್ಣಿನ ಉಂಡೆ ಇಡಲಾಗುವುದು. ಬಾಳೆಹಣ್ಣು ಸುಲಿದಿಟ್ಟು ತೆಂಗಿನಕಾಯಿ ಒಡೆದು ಗಂಧದ ಕಡ್ಡಿ ಬೆಳಗುವರು. ಅನಂತರ ನೆನೆಅಕ್ಕಿ ನೆನೆಗಡಲೆ ಬೆಲ್ಲದ ಮಿಶ್ರಣವನ್ನು ನೈವೇದ್ಯ ಮಾಡಿ ಎಲ್ಲರಿಗೂ ಹಂಚುವರು. ವಾದ್ಯ ಮಾಡಿದ ಹರಿಜನರಿಗೆ ಒಂದು ಹೋಳು ತೆಂಗಿನಕಾಯಿ ಸಿಕ್ಕುತ್ತದೆ.

ಗಂಗೆ ಪೂಜಿಸಿದ ಬಳಿಕ ಹುಡುಗಿಯ ತಲೆಯ ಮೇಲೆ ಒಂದು ಕಲಶವನ್ನು ಇಡಲಾಗುವುದು. ಉಳಿದೆರಡು ಕಲಶವನ್ನು ಓರಗೆಯ ಹುಡುಗಿಯರಾಗಲಿ ವಿವಾಹಿತ ಸ್ತ್ರೀಯರಾಗಲಿ ಹೊತ್ತುಕೊಳ್ಳುವರು. ಹುಡುಗಿ ದಾರಿಯುದ್ದಕ್ಕೂ 'ಅಕ್ಕಿಬೀಜ'*ವನ್ನು ಬಿತ್ತಿಕೊಂಡು ನಡೆಯಬೇಕು. ಮನೆಯನ್ನು ಪ್ರವೇಶಿಸುವ ಮೊದಲು ಹಲಸಿನ ಮರಕ್ಕೆ ಪ್ರದಕ್ಷಿಣೆ ಬಂದು ಹಿರಿಯರ ನಿರ್ದೇಶನದಂತೆ ಮರದ ನಾಲ್ಕು ಸುತ್ತೂ ದಾರ ಕಟ್ಟಲಾಗುವುದು. ಕಲಶದ ನೀರನ್ನು ಹಲಸಿನ ಮರದ ಸುತ್ತ ಸುರಿದು, ಮರವನ್ನು

* ಅಕ್ಕಿಬೀಜ=ಅಕ್ಕಿ ಮತ್ತು ಬತ್ತವನ್ನು ಬೆರಸಿರುವುದು.

ಪೂಜಿಸಿ ಮನೆಗೆ ಕಾಲಿಡುತ್ತಾಳೆ. ಫಲ ಬಿಡುವ ವೃಕ್ಷದಂತೆ ಈಕೆಯ ಬದುಕೂ ಫಲಪ್ರದವಾಗಿರಲಿ ಎಂಬ ಆಶಯ ಹಲಸಿನ ಮರದ ಪೂಜೆಯಲ್ಲಿ ಅಡಗಿರಬೇಕು.

ಹುಡುಗಿಯ ಜೊತೆಗಾತಿಯರ ಕಲಶಗಳನ್ನು ಅಡುಗೆಯ ಮನೆಯಲ್ಲಿ ಇರಿಸಲಾಗುವುದು. ಈ ಕಲಶಗಳ ಮುಂದೆ ದೀಪ ಹಚ್ಚಿಸಿ ಹುಡುಗಿಯ ಕೈಯಲ್ಲಿ ಪೂಜೆ ಮಾಡಿಸಿ ಕಾಯಿ ಒಡೆಸುವರು. ಅನಂತರ ಆಕೆ ಹಿರಿಯರಿಗೆ ಎರಗಿ ಆಶೀರ್ವಾದ ಪಡೆಯುವಳು. ಇಲ್ಲಿಗೆ ಶಾಸ್ತ್ರಗಳು ಮುಗಿಯುತ್ತವೆ. ನಡುಮನೆಯಲ್ಲಿ ಚಾಪೆಹಾಸಿ ಹುಡುಗಿಯರನ್ನು ಕೂರಿಸುವರು. ಆಗ ಬಂಧುಗಳು ಆಕೆಗೆ ಬೆಳ್ಳಿಯ ಲೋಟ, ಸೀರೆ, ರವಿಕೆಕಣ, ನಗದುಹಣ ಮೊದಲಾದುವುಗಳನ್ನು 'ಮುಯ್ಯಿ ಮಾಡುವರು'. ಅಷ್ಟರಲ್ಲಿ ಊಟ ಸಿದ್ಧವಾಗುವುದು. ವಾಡಿಕೆಯಂತೆ ಅಗಲಿದ ಹಿರಿಯರ ಹೆಸರು ಹೇಳಿ 'ಎಡೆ ಇಕ್ಕಿ' ಕೈಮುಗಿಯುವರು. ಆ ಬಳಿಕ ಚಪ್ಪರದಲ್ಲಿ ಬಂಧುಮಿತ್ರರಿಗೆ ಊಟ. ಹಂದಿ ಅಥವಾ ಕುರಿಮಾಂಸದ ಹುರಿತುಂಡು, ಸಾರು, ಕಾವಲಿ ದೋಸೆ ಅಥವಾ ಕಡುಬು, ಮೆಂತ್ಯದ ಹಿಟ್ಟು, ಪಾಯಸ ಮತ್ತು ಚಿಗಳಿ ಉಂಡೆಗಳು ಒಸಗೆಯ ಊಟದ ವೈಶಿಷ್ಟ್ಯ. ಇತ್ತೀಚೆಗೆ ಒಸಗೆಯನ್ನು ಹಿಂದಿನಂತೆ ಅದ್ದೂರಿಯಾಗಿ ಮಾಡುವುದು ಕಡಿಮೆ. ಊಟದ ವೆಚ್ಚವನ್ನು ತಗ್ಗಿಸಲು ಮಾಂಸಾಹಾರದ ಬದಲು ಪಾಯಸ ಕೋಸಂಬರಿಯಲ್ಲಿ ಒಸಗೆ ಮಾಡಿ ಮುಗಿಸುವುದುಂಟು.

ಒಸಗೆಯಾದ ಮರುದಿನ ಸೋದರಮಾವನ ಮನೆಯವರು ಹುಡುಗಿಯನ್ನು ಕರೆದುಕೊಂಡು ಹೋಗಿ ನಾಲ್ಕುದಿನ ಇಟ್ಟುಕೊಂಡು ಆತಿಥ್ಯ ನೀಡಿ, ಹೊಸಸೀರೆ ಉಡಿಸಿ ಕಳುಹಿಸುವರು. ಮುಂದೆ ಹುಡುಗಿ ಪ್ರತಿತಿಂಗಳು ಬಹಿಷ್ಠೆಯಾದಾಗ ಎರಡು ದಿನ 'ಹೊರಗಿದ್ದು' ಮೂರನೆಯ ದಿನ ನೀರು ಹಾಕಿಕೊಂಡು ಒಳಗೆ ಬರುವುದು ರೂಢಿ. ಬ್ರಾಹ್ಮಣ ಜನಾಂಗದಲ್ಲಿ ಮೂರು ದಿನ ಹೊರಗಿದ್ದು ಚತುರ್ಥಸ್ನಾನ ಮಾಡಿದ ಬಳಿಕ ಒಳಗೆ ಬರಬೇಕು. ಒಕ್ಕಲಿಗರ ಮನೆಗಳಲ್ಲಿ ಕೆಲಸದ ಒತ್ತಡ ಅಧಿಕ. ಈ ಕಾರಣದಿಂದ ಎರಡು ದಿನ ಮಾತ್ರ ಹೊರಗಿರುವ ಏರ್ಪಾಟು ಮಾಡಿಕೊಂಡಿರಬೇಕು. ಋತುಮತಿಯಾದ ಹುಡುಗಿ ವಿವಾಹಿತಳಾಗಿದ್ದಲ್ಲಿ ಪ್ರಶಸ್ತ ದಿವಸ ನೋಡಿ ಪ್ರಸ್ತ ಮಾಡಿಕೊಡುವರು.

ಡಾ. ಕೆ. ಕೆಂಪೇಗೌಡ

ಭಾರತೀಯ ಭಾಷೆ ಹಾಗೂ ಸಾಹಿತ್ಯದಲ್ಲಿ ಅಸ್ಸಾಮಿ ಭಾಷೆ ಮತ್ತು ಸಾಹಿತ್ಯ

ಆಧುನಿಕ ಭಾರತೀಯ ಆರ್ಯಭಾಷೆಗಳಲ್ಲಿ ಅಸ್ಸಾಮಿ ಭಾಷೆ ಹೆಚ್ಚು ಮಹತ್ವ ಪೂರ್ಣವಾದದ್ದು. ಇದು ಭವ್ಯವಾದ ಇತಿಹಾಸವನ್ನು ಮತ್ತು ಹೆಚ್ಚು ಪ್ರಾಚೀನ ಸಾಹಿತ್ಯವನ್ನು ಪಡೆದುಕೊಂಡಿದೆ. ಅಸ್ಸಾಮ್‌ನ ಸುತ್ತಮುತ್ತಲ ಪ್ರದೇಶದಲ್ಲಿ ಐವತ್ತು ಲಕ್ಷಕ್ಕೂ ಹೆಚ್ಚು ಜನರು ಅಸ್ಸಾಮಿ ಭಾಷೆ ಆಡುವವರಿದ್ದಾರೆ. ಅಸ್ಸಾಮಿ ಎಂಬ ಶಬ್ದ ಅಸಾಮೀಯಾ ಎಂಬುದರ ತದ್ಭವ ರೂಪ. ಅಸಮೀಯ ಎಂಬುದು ಇದರ ಉಚ್ಚಾರ. ಆ ರಾಜ್ಯದ ಜನರಲ್ಲಿ ಈ ಹೆಸರೇ ಹೆಚ್ಚು ರೂಢಿಗೆ ಬಂದು ಬಳಕೆಯಲ್ಲಿದೆ. ಪ್ರಾಚೀನ ಕಾಲದಲ್ಲಿ ಅಸ್ಸಾಮ್ ಪ್ರದೇಶವನ್ನು ಪ್ರಾಚೀನ ಜೋತಿಷ್ ಎಂದೂ, ಕಾಮರೂಪ ಎಂದೂ ಕರೆಯುತ್ತಿದ್ದರು. 13ನೇ ಶತಮಾನದಲ್ಲಿ ಬರ್ಮದಿಂದ ಬಂದ ಷಾನ್ (ಶಾನ್) ಜಾತಿಯ ಜನರು ಇಲ್ಲವೇ ಥಾಯ್ ದೇಶದಿಂದ ಬಂದ ನಿಷಾದ್ ಜಾತಿಯ ಜನರು ಈ ಪ್ರದೇಶವನ್ನು ನಮ್ಮ ಪರಾಕ್ರಮದಿಂದ ವಶಪಡಿಸಿಕೊಂಡು ಅವರು ನಮ್ಮ ರಾಜ್ಯವನ್ನು ಸ್ಥಾಪಿಸಿಕೊಂಡು ಅದನ್ನು ಅಸಾಮ್ ಎಂದು ಹೆಸರಿಸಿಕೊಂಡರು ಎಂದು ಕೆಲವರ ಅಭಿಪ್ರಾಯ. ಈ ಕಾರಣದಿಂದಲೇ ಈ ಪ್ರದೇಶಕ್ಕೆ ಅಸ್ಸಾಮ್ ಎಂಬ ಹೆಸರು ಬಂದಿರಬಹುದು. ಆದರೆ ಈ ಪ್ರದೇಶಕ್ಕೆ ಅಸಾಮ್ ಅಥವಾ ಅಸ್ಸಾಮ್ ಎಂಬ ಹೆಸರು ಬರಲು ಕಾರಣವೇನು. ಎಂಬುದರ ಬಗ್ಗೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಈ ಕಾರಣದಿಂದ ಇಲ್ಲಿನ ಹೆಸರಿನ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಅಭಿಪ್ರಾಯಭೇದಗಳಿವೆ.

ಅಸ್ಸಾಮಿ ಅಸ್ಸಾಮ್‌ನ ರಾಜ್ಯಭಾಷೆ. ಅದೇ ಅಲ್ಲಿನ ಆಡಳಿತ ಭಾಷೆ. ಅದೇ ವ್ಯಾವಹಾರಿಕ ಭಾಷೆಯೂ ಕೂಡ. ಭಾರತದ ಸಂವಿಧಾನದ ಎಂಟನೇ ವಿಧಿಯಲ್ಲಿ ಅಧಿಕೃತವಾಗಿ ಅಂಗೀಕರಿಸಿ ನಮೂದಿಸಿರುವ ಹದಿನಾಲ್ಕು ರಾಷ್ಟ್ರೀಯ ಭಾಷೆಗಳ ಪಟ್ಟಿಯಲ್ಲಿ ಅಸ್ಸಾಮಿ ಭಾಷೆಯೂ ಸೇರಿದೆ. ಅದು ಪೂರ್ವಕ್ಕೆ ಉತ್ತರ ಲಖೀಮ್‌ಪುರ, ಪಶ್ಚಿಮಕ್ಕೆ ಗೋಯಲ್ ಪಾರ ಮತ್ತು ಬ್ರಹ್ಮಪುತ್ರ ಕಣಿವೆಯ ಕೆಲವು ಜಿಲ್ಲೆಗಳಲ್ಲಿ ವ್ಯಾಪಿಸಿಕೊಂಡಿದೆ. ಇವರ ರಾಜ್ಯಗಳಿಂದ ಬಂದ ಬೇರೆ ಜನರು

ತಮ್ಮ ಮಾತೃಭಾಷೆಯ ಜೊತೆಗೆ ಅಸ್ಸಾಮಿ ಭಾಷೆಯನ್ನು ಅನಿವಾರ್ಯವಾಗಿ ಆಡುತ್ತಿದ್ದಾರೆ. ಅಸ್ಸಾಮ್ ರಾಜ್ಯದ ಎಲ್ಲಾ ಶೈಕ್ಷಣಿಕ ಮತ್ತು ಸರಕಾರಿ ವ್ಯವಹಾರಗಳು ಇದರಲ್ಲಿಯೇ ನಡೆಯುತ್ತಿದೆ. ಅಸ್ಸಾಮಿ ಭಾಷಾ ಪ್ರದೇಶದ ಸುತ್ತಮುತ್ತಲ ಪ್ರದೇಶಗಳಲ್ಲಿ ಟಿಬೆಟೋ ಬರ್ಮನ್, ಆಸ್ಟ್ರಿಕ್, ಥಾಯ್‌ಕಡೈ ಭಾಷೆಗಳು ವ್ಯಾಪಿಸಿಕೊಂಡಿವೆ. ಈ ಕಾರಣದಿಂದಲೇ ಅಸ್ಸಾಮಿ ಭಾಷೆಯಲ್ಲಿ ಟಿಬೆಟಿಯನ್, ಬರ್ಮಿ ಮತ್ತು ಆಸ್ಟ್ರಿಕ್ ಭಾಷೆಗಳ ಪ್ರಭಾವವು ಹೆಚ್ಚಾಗಿ ಕಂಡುಬರುವುದು. ಅಸ್ಸಾಮಿ ಭಾಷೆ ಮಾಗಧಿ ಅಪಭ್ರಂಶದ ಪೂರ್ವರೂಪದಿಂದ ವಿಕಾಸಗೊಂಡಿದ್ದು ಭಾರತದ ಈಶಾನ್ಯ ಭಾಗದ ಎಲ್ಲಾ ಪ್ರಮುಖ ಭಾಷೆಗಳು ಈ ಮಾಗಧಿ ಅಪಭ್ರಂಶದಿಂದಲೇ ವಿಕಾಸಗೊಂಡಿರಬಹುದೆಂದು ಕೆಲವರ ಊಹೆ. ಆದರೆ ಮಾಗದಿ ಪ್ರಾಕೃತ ರಾಢಾ, ವಂಗ, ಕಾಮರೂಪ, ಮತ್ತು ವಾರೇಂದ್ರ ಎಂಬ ನಾಲ್ಕು ಅಪಭ್ರಂಶ ರೂಪಗಳಿಗೆ ಜನ್ಮಕೊಟ್ಟಿದೆ. ಈ ಕಾಮರೂಪ ಎಂಬ ಅಪಭ್ರಂಶ ರೂಪದಿಂದ ಬಂಗಾಳಿ ಮತ್ತು ಅಸ್ಸಾಮಿ ಭಾಷೆಗಳು ವಿಕಾಸಗೊಂಡವು ಎಂದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ಮಾಗಧಿ ಅಪಭ್ರಂಶದ ಪೂರ್ವರೂಪದಿಂದ ಬಂಗಾಳಿ, ಅಸ್ಸಾಮಿ, ಒರಿಯ ಮತ್ತು ಬಿಹಾರಿ ಎಂಬ ಭಾಷೆಗಳು ವಿಕಾಸಗೊಂಡಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ಉತ್ತರ ಬಂಗಾಳ ಮತ್ತು ಅಸ್ಸಾಮ್ ಪ್ರದೇಶಗಳು ಒಂದೇ ಭಾಷಾ ಪ್ರದೇಶಗಳಾಗಿದ್ದವು. ಇವು ಅನಂತರ ಬೇರೆಬೇರೆಯಾಗಿ ಹೋದವು. ಈ ಪ್ರದೇಶ ಮತ್ತೆ ರಾಜಕೀಯವಾಗಿ ಪರಸ್ಪರ ವಿಲೀನವಾದಮೇಲೆ ಈ ಪ್ರದೇಶದ ಭಾಷೆಗಳಲ್ಲಿ ಹೆಚ್ಚು ಬದಲಾವಣೆ ಕಾಣಿಸಿಕೊಂಡಿತು. ಉತ್ತರ ಬಂಗಾಳದ ಭಾಷೆ ದಕ್ಷಿಣ ಬಂಗಾಳದ ಭಾಷೆ ಬೇರೆಯಾಗಿ ಉಳಿಯಲು ಒಂದು ಕಡೆ ಅಸ್ಸಾಮಿ ಭಾಷೆಯ ಪ್ರಭಾವ, ಇನ್ನೊಂದು ಕಡೆ ಬಂಗಾಳಿ ಭಾಷೆಯ ಪ್ರಭಾವ ಮುಖ್ಯ ಕಾರಣವಾಗಿವೆ. ಉತ್ತರ ಬಂಗಾಳದಲ್ಲಿ ಕೂಛ್‌ಬಿಹಾರಿನ ಕೂಛ್ ದೊರೆಗಳು ಅಸ್ಸಾಮಿ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ನೀಡಿದರು. ವಾಸ್ತವವಾಗಿ ಅಸ್ಸಾಮಿ ಸಾಹಿತ್ಯ 15-16ನೇ ಶತಮಾನಗಳಲ್ಲಿ ಆರಂಭಗೊಂಡಿದ್ದು. ಆದರೆ ಮಹಾರಾಜ ನರನಾರಾಯಣ ಮತ್ತು ಚಿಲರಾಯರ ಆಶ್ರಯದಲ್ಲಿ ಅಸ್ಸಾಮಿ ಸಾಹಿತ್ಯ ಹೆಚ್ಚು ಪ್ರಚಾರಕ್ಕೆ ಬಂದಿತು.

ಅಸ್ಸಾಮಿ ಅಥವಾ ಅಸ್ಸಾಮ್ ಎಂಬ ಶಬ್ದದ ಉಗಮದ ಬಗ್ಗೆ ಆಳವಾಗಿ ಪರಿಶೀಲಿಸಿ ಆಲೋಚಿಸಲು ಹೊರಟ ಸರ್ ಎಡ್ವರ್ಡ್ ಗೇಟ್ ಎಂಬಾತನು ಅಸಮ್, ಆಸಾಮ್, ಅಸ್ಸಾಮ್ ಎಂಬ ಶಬ್ದಗಳು ಮೂಲತಃ ಸಂಸ್ಕೃತದಿಂದ ನಿಷ್ಪನ್ನವಾದ ಶಬ್ದಗಳು ಎಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಬರ್ಮಾದಿಂದ ಬಂದ ಷಾನ್ ಜಾತಿಯ ಜನರು ಅಥವಾ ಥಾಯ್ ದೇಶದಿಂದ ಬಂದ ನಿಷಾದ್ ಜಾತೀಯ ಜನರು ಕಾಮರೂಪವನ್ನು ತಮ್ಮ ಶೌರ್ಯ ಹಾಗೂ ಪರಾಕ್ರಮಗಳಿಂದ ಗೆದ್ದು ಆ ಸ್ಥಳದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿಕೊಂಡು ಅದನ್ನು ಅಸಮ್ ಅಥವಾ ಆಸಾಮ್

ಎಂದು ಕರೆದರು. ಅದೇ ಮುಂದೆ ಅಸ್ಸಾಮ್ ಎಂದು ಬಳಕೆಗೆ ಬಂದಿತೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನೂ ಕೆಲವರು ಶಾನ್ ಅಥವಾ ಷಾನ್ ಎಂಬ ಶಬ್ದವನ್ನು ರಹವಮ್ ಎಂದು ಉಚ್ಚರಿಸುತ್ತಿದ್ದರು. ಇವರ ಉಚ್ಚಾರ ದಿನೇ ದಿನೇ ಬದಲಾಗುತ್ತಾ ಬಂದು ರಹವಮ್ ಎಂಬ ಶಬ್ದ ಅವರ ಉಚ್ಚಾರದಲ್ಲಿ ಅಹೊಮ್ > ಅಹೋಮ್ ಎಂದು ಬದಲಾಗಿ ಅದೇ ಮುಂದೆ ಅಸಮ್ > ಅಸಾಮ್ > ಅಸ್ಸಾಮ್ ಎಂದಾಗಿ ಬದಲಾಗಿರಬಹುದೆಂದು ಊಹಿಸುವರು. ಇದನ್ನು ಗಮನಿಸಿದ ಕೆಲವರು ಶಾನ್ ಅಥವಾ ಷಾನ್ ಎಂಬ ಶಬ್ದ ಶನ್ ಅಥವಾ ಸನ್ ಎಂದು ಬದಲಾಗಿ ಅದೇ ಮುಂದೆ ಸಮ್ ಎಂದಾಗಿರಬಹುದು. ಅದರ ಆದಿಯಲ್ಲಿ ಅ ಎಂಬ ಧ್ವನಿಯನ್ನು ಸೇರಿಸಿ ಅವರು ಅಸಮ್ ಅಥವಾ ಅಸಾಮ್ ಎಂದು ಕರೆದುಕೊಂಡಿದ್ದರೂ ಇರಬಹುದೆಂದು ಭಾವಿಸುವರು. ಇದನ್ನು ಪರಿಶೀಲಿಸಿದ ಬಾಗ್ಚಿ ಎಂಬಾತನು ಅಸಾಮ್, ಅಸಮ್ ಅಥವಾ ಅಸ್ಸಾಮ್ ಎಂಬ ಶಬ್ದಗಳು ಮೂಲತಃ ಷಿಯೆನ್ ಸ್ಯಾಮ್ ಎಂಬುದರಿಂದ ವಿಕಾಶಗೊಂಡಿರಬಹುದೆಂದು ಅಭಿಪ್ರಾಯ ಪಡುವನು, ಷಿಯೆನ್ ಎಂಬುದು ಚೀನಿ ಶಬ್ದ ಸ್ಯಾಮ್ ಎಂಬುದು ಖ್ಮೇರ್ ಶಬ್ದ. ಇವೆರಡು ಸೇರಿಯೇ ಷಿಯೆನ್ ಸ್ಯಾಮ್ ಎಂಬ ಶಬ್ದ ರೂಪುಗೊಂಡಿದೆ. ಇದರಿಂದ ಕಾಲಕ್ರಮೇಣ ಅಹೊಮ್,> ಆಹೋಮ್ > ಅಹೋಮ್ > ಅಸಮ್ > ಅಸಾಮ್ > ಅಸಾಮ್ ಎಂಬ ಬೇರೇ ಬೇರೇ ಶಬ್ದಗಳು ಬೆಳೆದುಬಂದಿರಬಹುದೆಂದು ತೋರುತ್ತದೆ. ಆದರೆ ಇವುಗಳ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಇದೇ ರೀತಿ ಥಾಯ್ ಭಾಷೆಯಲ್ಲಿ ಚಾಮ್ ಎಂಬ ಶಬ್ದ ಇದೆ. ಚಾಮ್ ಅಥವಾ ಚಮ್ ಎಂಬ ಥಾಯ್ ಶಬ್ದಕ್ಕೆ ಆದಿಯಲ್ಲಿ ಅ ಸೇರಿಸಿ ಅಚಾಮ್ ಎಂದು ಕರೆದುಕೊಂಡಿದ್ದರೂ ಇರಬಹುದು. ಈ ಅಚಮ್ ಅಥವಾ ಅಚಾಮ್ ಎಂಬ ಶಬ್ದ ಕಾಲಾನಂತರ ಅಸಮ್ ಇಲ್ಲವೇ ಅಸಾಮ್ ಎಂದಾಗಿ ಬಳಕೆಗೆ ಬಂದಿರಬಹುದಾದ ಸಾಧ್ಯತೆಗಳಿವೆ. ಅಚಾಮ್ ಎಂಬ ಶಬ್ದಕ್ಕೆ ವಿಜಯಿ ಎಂದರ್ಥವಿದೆ. ಅದೇ ರೀತಿ ಅಸಾಮ್ ಎಂಬ ಶಬ್ದಕ್ಕೂ ಸೋಲುಂಟಾಗದ ಎಂಬರ್ಥ ಉಂಟು. ಈ ಪ್ರದೇಶವನ್ನು ತಮ್ಮ ಶೌರ್ಯ ಹಾಗೂ ಪರಾಕ್ರಮದಿಂದ ಗೆದ್ದುಕೊಂಡ ಜನರು ಆ ಕ್ಷೇತ್ರಕ್ಕೆ ವಿಜಯದ ಪ್ರತೀಕವಾಗಿ ಅಸ್ಸಾಮ್ ಎಂದು ಹೆಸರಿಸಿಕೊಂಡಿದ್ದರೂ ಇರಬಹುದೆಂದು ಕಾಣುತ್ತದೆ. ಇದಕ್ಕೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಈ ಕಾರಣದಿಂದ ಅಸ್ಸಾಮ್ ಎಂಬ ಶಬ್ದದ ಉಗಮದ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ.

ಅಸ್ಸಾಮ್ ರಾಜ್ಯದ ಭಾಷೆಯನ್ನು ಅಸ್ಸಾಮಿ ಎಂದು ಕರೆಯಬಹುದಾದರೂ ಈ ಭಾಷೆ ಆಡುವ ಜನರು ಬರ್ಮದಿಂದ ಬಂದ ಶಾನ್ ಅಥವಾ ಷಾನ್ ಜಾತೀಯ ಜನರೇ ಅಥವಾ ಥಾಯ್ ದೇಶದಿಂದ ಬಂದ ನಿಷಾದ್ ಜಾತಿಯ ಜನರೇ ಎಂಬುದು ಇನ್ನು ಅನುಮಾನಾಸ್ಪದವಾಗಿಯೇ ಉಳಿದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಅಸ್ಸಾಮಿ ಅಥವಾ ಅಸ್ಸಾಮ್ ಎಂಬ ಶಬ್ದದ ನಿಷ್ಪತ್ತಿಯೂ ಕೂಡ ಇನ್ನೂ ರಹಸ್ಯ

ವಾಗಿಯೇ ಉಳಿದುಕೊಂಡಿದೆ. ಇದು ಅಹೊಮ್ > ಅಹೋಮ್ > ಅಹಮ್ > ಅಖಮ್ > ಅಚಮ್ > ಅಸಮ್ > ಅಚಾಮ್ > ಅಸಾಮ್ > ಅಸ್ಸಾಮ್ ಎಂದು ಬೆಳೆದುಬಂದಿರಬಹುದೆಂದು ಹೆಚ್ಚು ಜನರ ಅಭಿಪ್ರಾಯ. ಆದರೆ ಅಸ್ಸಾಮ್ ಎಂಬ ಶಬ್ದ ಅಹೊಮ್ ಇಲ್ಲವೇ ಅಚಾಮ್‌ನಿಂದ ಬೆಳೆದುಬಂದಿದ್ದರೂ ಬಂದಿರಲು ಸಾಧ್ಯವಿದೆ ಎನ್ನಬಹುದು.

ಕ್ರಿ.ಶ. 643ರಲ್ಲಿ ಕುಮಾರ ಭಾಸ್ಕರವರ್ಮನ ಕಾಲದಲ್ಲಿ ಚೀನಾಯಾತ್ರಿಕ ಹುಯೆನತ್ಸಾಂಗ್ ಪ್ರಾಚೀನ ಕಾಲದಲ್ಲಿ ಹೆಸರಾಗಿದ್ದ ಕಾಮರೂಪಕ್ಕೆ ಭೇಟಿಕೊಟ್ಟಿದ್ದನು. ಇವನು ತನ್ನ ಗ್ರಂಥದಲ್ಲಿ ಕಾಮರೂಪದ ಭಾಷೆ (ಮಾಗಧಿ ಅಪಭ್ರಂಶ) ಮಧ್ಯಭಾರತದ ಭಾಷೆಗಿಂತ ಭಿನ್ನವೆಂದು ಉಲ್ಲೇಖಿಸಿದ್ದಾನೆ. ಕಾಮರೂಪ ಕ್ರಿ.ಪೂ. 200 ರಿಂದ ಕ್ರಿ.ಶ. 200ರ ವರೆಗೆ ಆರ್ಯಜನರಿಂದಲೇ ತುಂಬಿದ್ದಿತು. ಕುಮಾರ ಭಾಸ್ಕರವರ್ಮ ಸಂಸ್ಕೃತ ಮತ್ತು ಪ್ರಾಚೀನ ಭಾರತೀಯ ಸಂಸ್ಕೃತಿಯ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದನು. ಕ್ರಿ.ಶ. ಏಳನೇ ಶತಮಾನದ ಹೊತ್ತಿಗೆ ಅವನು ತನ್ನ ರಾಜ್ಯವನ್ನು ಬಂಗಾಳದವರೆಗೆ ವಿಸ್ತರಿಸಿದ್ದನು. ಕುಮಾರ ಭಾಸ್ಕರನು ಆರ್ಯರ ಹೆಚ್ಚುಗಾರಿಕೆಯಿಂದ ಆರ್ಯಭಾಷೆ ಬೆಳೆಸಲು ಪ್ರೋತ್ಸಾಹ ನೀಡಿರಬಹುದೆಂದು ಕಾಣುತ್ತದೆ. ಆತ ಪೂರ್ವ ಮಾಗಧಿ ಅಪಭ್ರಂಶದಿಂದ ವಿಕಾಸಗೊಂಡ ಕಾಮರೂಪಿ ಇಂದಿನ ಅಸ್ಸಾಮಿ ಭಾಷೆಯ ಬೆಳವಣಿಗೆಗೂ ಪ್ರೋತ್ಸಾಹ ನೀಡಿರಬಹುದೆಂದು ಊಹಿಸಲು ಅವಕಾಶವಿದೆ. ಅಸ್ಸಾಮಿ ಬಂಗಾಳಿ ಮತ್ತು ಒರಿಯ ಭಾಷೆಗಳಿಗಿಂತ ಬೇರೆ. ಇದು ವಿಶಿಷ್ಟವಾದ ರೂಪರಚನೆಗಳಿಂದ ಕೂಡಿದೆ. ಧ್ವನಿ, ರೂಪ, ಪದ, ವಾಕ್ಯ ಮುಂತಾದುವುಗಳು ಬಂಗಾಳಿ ಇಲ್ಲವೇ ಒರಿಯ ಭಾಷೆಗಿಂತ ಭಿನ್ನವಾಗಿವೆ. ಅಸ್ಸಾಮಿ ಭಾಷೆ ಆ ಕಾಲಕ್ಕಾಗಲೇ ಸಾಕಷ್ಟು ಬೇರೆಯಾಗಿ ಬೆಳೆದಿದ್ದಿತು. ಇದರ ಪ್ರಾಚೀನ ರೂಪ ಹೇಮ ಸರಸ್ವತಿ ಬರೆದಿರುವ ಪ್ರಹ್ಲಾದ ಚರಿತೆಯಲ್ಲಿ ದೊರೆಯುತ್ತದೆ. ಈ ಹೊಸ ಬದಲಾವಣೆಯಿಂದ ಹೊರಬಂದ ಅಸ್ಸಾಮಿ ಭಾಷೆಯ ಲಕ್ಷಣಗಳು ಆರ್ಯ ಭಾಷೆಗಳನ್ನೇ ಹೆಚ್ಚು ಹೋಲುತ್ತವೆ. 15–16ನೇ ಶತಮಾನಗಳಲ್ಲಿ ಅಹೋಮ್ ದೊರೆಗಳು ಗುಡ್ಡಗಾಡಿನ ಬಹುಭಾಗ ಪ್ರದೇಶವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡು ಆ ಅಹೋಮ್ ಜನರು ಅಸ್ಸಾಮಿ ಭಾಷೆಯನ್ನು ತಮ್ಮ ರಾಜ್ಯದ ಭಾಷೆಯನ್ನಾಗಿ ಬಳಸಿಕೊಂಡರು. ಕ್ರಿ.ಶ. 5ನೇ ಶತಮಾನದ ಪ್ರಾಚೀನ ಅಸ್ಸಾಮ್ ದೊರೆಗಳು ಹಲವಾರು ತಾಮ್ರಶಾಸನಗಳನ್ನು ಪ್ರಾಚೀನ ಅಸ್ಸಾಮಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಬರೆಸಿದ್ದರು. ಇವುಗಳಲ್ಲಿ ಕೆಲವು ಸಂಸ್ಕೃತದಲ್ಲಿಯೂ ಮತ್ತೆ ಕೆಲವು ಪ್ರಾಚೀನ ಕಾಮರೂಪ ಭಾಷೆಯಲ್ಲಿಯೂ ದೊರೆಯುತ್ತವೆ. ಇಂದಿನ ಅಸ್ಸಾಮಿ ಭಾಷೆಯ ಅನೇಕ ಧ್ವನ್ಯಾತ್ಮಕ ಮತ್ತು ರೂಪಾತ್ಮಕ ಲಕ್ಷಣಗಳು ಈ ತಾಮ್ರಶಾಸನಗಳಲ್ಲಿ ಕಂಡು ಬರುತ್ತವೆ. ಸಂಸ್ಕೃತದ ಕಂಠ್ಯ ವ್ಯಂಜನಗಳನ್ನು ಉಚ್ಚಾರದಲ್ಲಿ ಊಷ್ಮಧ್ವನಿಗಳನ್ನಾಗಿ ಬಳಸಲಾಗುತ್ತಿದ್ದಿತು. ಈ ಲಕ್ಷಣ ಈಗಲೂ ಅಸ್ಸಾಮಿ ಭಾಷೆಯಲ್ಲಿ ದೊರೆಯುವುದು.

ಸಂಸ್ಕೃತದ ದಂತ್ಯ ಮತ್ತು ಮೂರ್ಧನ್ಯ ಸ್ಪರ್ಶವ್ಯಂಜನಗಳು ವರ್ತ್ಸ್ಯ ಸ್ಪರ್ಶವ್ಯಂಜನಗಳಲ್ಲಿ ಐಕ್ಯವಾಗುವುದು, ಹಾಗೆಯೇ ತಾಲವ್ಯ ಮತ್ತು ಅನುಘರ್ಷ ವ್ಯಂಜನಗಳು ವರ್ತ್ಸ್ಯದಲ್ಲಿ ಐಕ್ಯವಾಗುವುದು, ಊಷ್ಮೀಕರಣ ಮುಂತಾದುವು ಇವುಗಳಲ್ಲಿ ಕಂಡು ಬರುತ್ತವೆ.

ಅಸ್ಸಾಮಿ ಭಾಷೆಯ ಪ್ರಾಚೀನತಮ ಉದಾಹರಣೆಗಳು ಚಾರ್ಯ ಎಂಬ ಬೌದ್ಧ ಸಿದ್ಧಾಚಾರ್ಯರು ರಚಿಸಿರುವ ದೋಹಗಳಲ್ಲಿ ಕಂಡುಬರುತ್ತವೆ. ಈ ದೋಹಗಳು ಪೂರ್ವಭಾರತದ ಬೇರೆ ಬೇರೆ ಭಾಗಗಳಿಗೆ ಸೇರಿದ ಬೇರೆ ಬೇರೆ ಸಿದ್ಧರು ರಚಿಸಿದವುಗಳು. ಬಾಗ್ಚಿ ಎಂಬಾತನು ಕ್ರಿ.ಶ. 8ನೇ ಶತಮಾನದಿಂದ 10ನೇ ಶತಮಾನದ ನಡುವೆ ರಚಿತವಾಗಿರಬಹುದೆಂದು ಅವುಗಳಲ್ಲಿ ದೊರೆಯುವ ಕೆಲವು ಉದಾಹರಣೆಗಳ ಸಹಾಯದಿಂದ ಊಹಿಸಿದ್ದಾನೆ. ಈ ದೋಹಗಳ ಭಾಷೆ ಅಪಭ್ರಂಶ. ಇದರಿಂದ ಅನೇಕ ಭಾರತೀಯ ಆರ್ಯಭಾಷೆಗಳು ವಿಕಾಸಗೊಂಡಿವೆ. ಅಂದಿನ ಅಪಭ್ರಂಶದ ಕೆಲವು ಧ್ವನ್ಯಾತ್ಮಕ ಮತ್ತು ರೂಪಾತ್ಮಕ ಲಕ್ಷಣಗಳು ಇಂದಿನ ಅಸ್ಸಾಮಿ ಭಾಷೆಯಲ್ಲಿಯೂ ದೊರೆಯುತ್ತವೆ. ಇಂತಹ ಹಲವಾರು ಲಕ್ಷಣಗಳು ಅಂದಿನಿಂದಲೂ ಇಂದಿನವರೆಗೆ ಅಸ್ಸಾಮಿ ಭಾಷೆಯಲ್ಲಿ ಉಳಿದುಕೊಂಡು ಬಂದಿವೆ. ಅಂದಿನ ಕೆಲವು ನುಡಿಗಟ್ಟುಗಳು ಇಂದಿನ ಅಸ್ಸಾಮಿಯಲ್ಲಿ ಬಳಕೆಯಲ್ಲಿವೆ. ಭಾಷಿಕ ಲಕ್ಷಣಗಳು ಏನೇ ಆಗಿದ್ದರೂ ದೋಹ ಎಂಬ ಸಾಹಿತ್ಯ ಅಸ್ಸಾಮಿ ಭಾಷೆಯಲ್ಲಿ ಬಹಳ ಹಿಂದಿನ ಕಾಲದಲ್ಲಿಯೇ ಆರಂಭವಾಗಿದ್ದಿತು ಎಂಬುದಕ್ಕೆ ಇವು ಸಾಕ್ಷಿಯಾಗಿವೆ. ವೈಷ್ಣವ ಕವಿಗಳು ರಚಿಸಿದ ಬರ್‌ಗೀತೆ ಮತ್ತು ದಿವ್ಯಗೀತೆಗಳು ಹೊರಬರುವುದಕ್ಕೆ ಮೊದಲೇ ಈ ದೋಹಗಳು ಅಸ್ಸಾಮಿ ಭಾಷೆಯಲ್ಲಿ ಹೊರಬಂದಿದ್ದವು.

ಅಸ್ಸಾಮಿ ಲಿಪಿ ಮೈಥಿಲಿ ಮತ್ತು ಬಂಗಾಳಿ ಲಿಪಿಗಳಂತೆಯೇ ಪೂರ್ವನಾಗರಿ ಲಿಪಿಯಿಂದ ವಿಕಾಸಗೊಂಡಿದ್ದು, ಈ ಲಿಪಿಗಳು ಅದರಿಂದ ಬೇರೆ ಬೇರೆ ಕಾಲಗಳಲ್ಲಿ ವಿಕಾಸಗೊಂಡಿವೆ. ಆದ್ದರಿಂದಲೇ ಅವುಗಳಲ್ಲಿ ಸಾಕಷ್ಟು ವ್ಯತ್ಯಾಸವು ಕಂಡುಬರುವುದು. ಅಸ್ಸಾಮಿ ಲಿಪಿ ಬಂಗಾಳಿ ಲಿಪಿಗಿಂತ ಮೈಥಿಲಿ ಲಿಪಿಗೆ ಹೆಚ್ಚು ಹತ್ತಿರವಾದದ್ದು. ಬಂಗಾಳಿಯಲ್ಲಿ ವ್ ಸೂಚಿಸಲು ಪ್ರತ್ಯೇಕವಾದ ಲಿಪಿ ಚಿಹ್ನೆ ಇಲ್ಲ. ಆದಕ್ಕೆ ಅಸ್ಸಾಮಿಯಲ್ಲಿ ಪ್ರತ್ಯೇಕವಾದ ಲಿಪಿ ಚಿಹ್ನೆ ಇದೆ. ಆದರೆ ಬಂಗಾಳಿ ರ್ ಕ್ಕೂ ಅಸ್ಸಾಮಿ ರ್ ಕ್ಕೂ ಉಚ್ಚಾರದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಅಸ್ಸಾಮಿ ಭಾಷೆಯಲ್ಲಿ ಟಿಬೆಟ್ಟು, ಬರ್ಮಿ ಮತ್ತು ಆಸ್ಟ್ರಿಕ್ ಭಾಷೆಗಳ ಅನೇಕ ಶಬ್ದಗಳು, ಹಲವಾರು ನುಡಿಗಟ್ಟುಗಳು, ವಾಕ್ಯರಚನೆಗಳು ಇರುವುದು ಕಂಡುಬರುತ್ತವೆ. ಬಂಗಾಳಿ ಭಾಷೆಯಲ್ಲಿ ಈ ಭಾಷೆಗಳ ಪ್ರಭಾವ ಹೆಚ್ಚು. ಒರಿಯ ಭಾಷೆಯಲ್ಲಿ ಇವುಗಳ ಪ್ರಭಾವ ಬಹಳ ಕಡಿಮೆ. ಅಸ್ಸಾಮಿ ಭಾಷೆಯಲ್ಲಿ ಪೂರ್ವ ಅಸ್ಸಾಮಿ ಮತ್ತು ಪಶ್ಚಿಮ ಅಸ್ಸಾಮಿ ಎಂಬ ಎರಡು ಉಪಭಾಷಾರೂಪಗಳಿವೆ. ಪೂರ್ವದಿಕ್ಕಿನ ನೌಗಾಂಗ್‌ನ ಎಲ್ಲಾ ಜಿಲ್ಲೆಗಳಲ್ಲಿ ಪೂರ್ವ ಅಸ್ಸಾಮಿ ರೂಪವು ವ್ಯಾಪಿಸಿಕೊಂಡಿದ್ದರೆ, ನೌಗಾಂಗ್‌ನ

ಪಶ್ಚಿಮಕ್ಕೆ ಗೋಯಲ್‌ಪಾರ ಜಿಲ್ಲೆಯವರೆಗೆ ಪಶ್ಚಿಮ ಅಸ್ಸಾಮಿ ರೂಪ ವ್ಯಾಪಿಸಿ ಕೊಂಡಿದೆ. ಇವುಗಳಲ್ಲಿ ಹೆಚ್ಚಿನ ಏಕರೂಪತೆ ಕಂಡುಬರುತ್ತದೆ. ಪೂರ್ವ ಅಸ್ಸಾಮಿ ರೂಪವನ್ನು ಶಿಷ್ಯಭಾಷಾರೂಪವೆಂದು ಪರಿಗಣಿಸಿಕೊಳ್ಳುವರು. ಇದು ಅಸ್ಸಾಮಿ ಆಧುನಿಕ ಸಾಹಿತ್ಯದ ಮಾಧ್ಯಮವಾಗಿ ಬಳಕೆಯಲ್ಲಿದೆ. ಮಣಿಪುರ, ಸಿಲಹಟ್, ಕಛಾರ್ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಅಸ್ಸಾಮಿ ಭಾಷಾರೂಪವನ್ನು ಕೆಲವರು ಮಯಾಂಗ್ ಎಂದು ಕರೆದರೆ, ಮತ್ತೆ ಕೆಲವರು ಅದನ್ನು ವಿಷ್ಣುಪುರಿಯ ಎಂತಲೂ ಕರೆಯುವರು. ಈ ರೂಪ ಭೌಗೋಳಿಕವಾಗಿ ಬಂಗಾಳಿ ಭಾಷೆಯ ಪ್ರಭಾವಕ್ಕೆ ಹೆಚ್ಚು ಒಳಗಾಗಿದೆ. ಈ ಕಾರಣದಿಂದಲೇ ಇದನ್ನು ಕೆಲವರು ಬಂಗಾಳಿ ಭಾಷೆಯ ಉಪಭಾಷೆ ಇರಬಹುದೆಂದು ಊಹಿಸುವರು. ಗಾರೋಜೆಟ್ಟಗುಡ್ಡಗಳ ಪ್ರದೇಶದಲ್ಲಿ ಬಂಗಾಳಿ ಮತ್ತು ಗಾರೋ ಮಿಶ್ರಿತರೂಪ ಬಳಕೆಯಲ್ಲಿದೆ. ಈ ರೂಪವನ್ನೇ ಕೆಲವರು ಝರವ ಎನ್ನುವರು. ಅಸ್ಸಾಮಿಯ ಪೂರ್ವರೂಪದಲ್ಲಿ ಪಶ್ಚಿಮರೂಪದಷ್ಟು ಸಾಮ್ಯತೆ, ಏಕ ರೂಪತೆ ಕಂಡುಬರುವುದಿಲ್ಲ. ಪೂರ್ವರೂಪ ಪ್ರಾಚೀನ ಕಾಮರೂಪಿಯನ್ನು ಹೆಚ್ಚು ಹೋಲುತ್ತದೆ. ಪಶ್ಚಿಮ ಅಸ್ಸಾಮಿ ರೂಪದ ಸುತ್ತಮುತ್ತಲ ಪ್ರದೇಶಗಳಲ್ಲಿ ಬಂಗಾಳಿ, ರಾಜಬಾಂಸಿ ಮತ್ತು ಗಾರೋಭಾಷೆಗಳು ಇರುವುದರಿಂದ ಅದರಲ್ಲಿ ಅವುಗಳ ಪ್ರಭಾವವು ಸ್ವಲ್ಪಮಟ್ಟಿಗೆ ಕಂಡುಬರುತ್ತದೆ. ಪ್ರಾಚೀನಕಾಲದ ಅಸ್ಸಾಮಿ ಭಾಷೆಯಲ್ಲಿ ಇಂತಹ ರೂಪ ವ್ಯತ್ಯಾಸವೇನೂ ಇರಲಿಲ್ಲ. ಅದು ಇಡೀ ಪ್ರಾಂತ್ಯದಲ್ಲಿ ಒಂದೇ ರೀತಿಯಲ್ಲಿದ್ದಿತು. ಪ್ರಾಚೀನಕಾಲದ ಸಮಗ್ರ ಸಾಹಿತ್ಯದ ಪದ್ಯ, ಗದ್ಯ, ವೈಷ್ಣವ ಕವಿಗಳ ರಚನೆಗಳು, ಚಾರಿತ್ರಿಕ ರಚನೆಗಳು ಆಗ ಒಂದೇ ರೂಪದಲ್ಲಿದ್ದವು. ಅಸ್ಸಾಮಿ ಭಾಷೆಯಲ್ಲಿ ಕ್ರಿ.ಶ. 13ನೇ ಶತಮಾನದಲ್ಲಿ ರಚಿತವಾದ ಹೇಮ ಸರಸ್ವತಿಯ ಪ್ರಹ್ಲಾದ ಚರಿತೆ ಹೆಚ್ಚು ಪ್ರಾಚೀನ ಸಾಹಿತ್ಯಗ್ರಂಥ. ಈ ಸಾಹಿತ್ಯ ಅಪಭ್ರಂಶದ ಪೋಷಣೆಯಲ್ಲಿ ಬೆಳೆದು ಬಂದಂತೆ ತೋರಿಬರುತ್ತದೆ. ಅಸ್ಸಾಮಿ ಸಾಹಿತ್ಯದ ಕಾಲವನ್ನು ಪೂರ್ವವೈಷ್ಣವ ಕಾಲ, ವೈಷ್ಣವಕಾಲ, ಬುರಂಜಿ ಗದ್ಯಕಾಲ, ಆಧುನಿಕಕಾಲ ಎಂದು ನಾಲ್ಕು ವರ್ಗ ಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಪ್ರಾಚೀನ ಅಸ್ಸಾಮಿ ಸಾಹಿತ್ಯದಲ್ಲಿ ಪೀತಾಂಬರ್, ಶಂಕರದೇವ, ಮಾಧವದೇವ, ಸೂರ್ಯಖರಿ, ಬಲದೇವ ಮುಂತಾದವರು ಮುಖ್ಯರೆನಿಸಿ ಕೊಂಡಿದ್ದಾರೆ. ಕ್ರಿ.ಶ. 14ನೇ ಶತಮಾನದಿಂದ ಆಧುನಿಕಕಾಲದವರೆಗೆ ಅಸ್ಸಾಮಿ ಸಾಹಿತ್ಯ ನಿರಂತರವಾಗಿ ಹರಿದುಬಂದಿದೆ. ಪ್ರಹ್ಲಾದ ಚರಿತೆ ಅಸ್ಸಾಮಿಯ ಮೊತ್ತ ಮೊದಲ ಗ್ರಂಥವಾದ ಕಾರಣ ಹೇಮ ಸರಸ್ವತಿ ಅಸ್ಸಾಮಿ ಭಾಷೆಯ ಮೊತ್ತಮೊದಲ ಕವಿ. 16ನೇ ಶತಮಾನದಲ್ಲಿ ಅಸ್ಸಾಮಿ ಗದ್ಯರಚನೆ ಆರಂಭಗೊಂಡಿದ್ದಿತು. ವೈಷ್ಣವ ಸುಧಾಕರನಾದ ಶ್ರೀ ಶಂಕರದೇವನ ಏಕಾಂಕ ನಾಟಕಗಳಲ್ಲಿ ಇದರ ಮೊತ್ತಮೊದಲ ಶೈಲಿಯು ದೊರೆಯುತ್ತದೆ. ಅನಂತರ ವೈಕುಂಠನಾಥ ಭಟ್ಟಾಚಾರ್ಯ ಉತ್ಕೃಷ್ಟ ವಾದ ಗದ್ಯಶೈಲಿಯಲ್ಲಿ ಸಮಗ್ರ ಭಾಗವತ ಪುರಾಣ ಮತ್ತು ಗೀತಾಗೋವಿಂದ ಎಂಬ ಕಾವ್ಯಗಳನ್ನು ಅಸ್ಸಾಮಿ ಭಾಷೆಗೆ ಅನುವಾದಿಸಿದನು. 17ನೆಯ ಶತಮಾನದ ವೈಷ್ಣವ

ಗುರುಗಳ ಗದ್ಯಾತ್ಮಕ ಜೀವನ ಚರಿತ್ರೆಯಾಗಿರುವ ಕಥಾ ಗುರು ಚರಿತೆ ಮತ್ತು ಬುರಂಜಿಗಳ ಚಾರಿತ್ರಿಕ ಗದ್ಯ ರಚನೆಗಳು ಅಸ್ಸಾಮಿ ಭಾಷೆಯ ಗದ್ಯಕೃತಿಗಳ ಭಂಡಾರಕ್ಕೆ ಹೆಮ್ಮೆಯ ನಿದರ್ಶನಗಳಾಗಿವೆ. ಅಸ್ಸಾಮಿ ಸಾಹಿತ್ಯದಲ್ಲಿ ಗದ್ಯ ಮತ್ತು ಚಾರಿತ್ರಿಕ ವ್ಯವಸ್ಥಿತ ರಚನೆಗಳು ಹೆಚ್ಚು ಪ್ರಾಚೀನ ಕಾಲದಲ್ಲಿಯೇ ಆರಂಭವಾಗಿದ್ದವು ಎಂಬುದಕ್ಕೆ ಇವು ಸಾಕ್ಷಿಯಾಗಿವೆ.

19ನೇ ಶತಮಾನದ ಮಧ್ಯಭಾಗದಲ್ಲಿ ಅಸ್ಸಾಮಿ ಭಾಷೆಯಲ್ಲಿ ಶಿಷ್ಟಸಾಹಿತ್ಯ ಆರಂಭಗೊಂಡಿದ್ದಿತು. ಅಮೆರಿಕದ ಬಾಪ್ಟಿಸ್ಟ್ ಮಿಷನ್ ಅಸ್ಸಾಮಿ ಭಾಷೆಯ ಮೊತ್ತ ಮೊದಲ ಮುದ್ರಣಾಲಯವನ್ನು 1836ರಲ್ಲಿ ಸ್ಥಾಪಿಸಿ ಅಸ್ಸಾಮಿ ಭಾಷೆಯ ಪತ್ರಿಕೆಯನ್ನು ಪ್ರಕಟಿಸಿದರು. ಅಲ್ಲದೆ ಅಸ್ಸಾಮಿ ಭಾಷೆಯ ವ್ಯಾಕರಣ ಮತ್ತು ನಿಘಂಟುಗಳನ್ನು ಮುದ್ರಿಸಿ ಅಸ್ಸಾಮಿ ಸಾಹಿತ್ಯದ ಬೆಳವಣಿಗೆಗೆ ಉತ್ತಮವಾದ ವಾತಾವರಣ ನಿರ್ಮಿಸಿದರು. ಇದರಿಂದ ಅಸ್ಸಾಮಿ ಭಾಷೆ ಮತ್ತು ಸಾಹಿತ್ಯ ಹೆಚ್ಚು ಪ್ರಚಾರಕ್ಕೆ ಬಂದಿತು. ಪೂರ್ವ ಅಸ್ಸಾಮಿ ರೂಪ ಅಸ್ಸಾಮ್ ರಾಜ್ಯದ ಎಲ್ಲಾ ಸಾಹಿತ್ಯಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವೆನಿಸಿಕೊಂಡಿತು. ಹೀಗೆ ಅವರು ಅಸ್ಸಾಮಿ ಭಾಷೆಯ ಶಿಷ್ಟ ಸಾಹಿತ್ಯದ ಪ್ರಗತಿಗೆ ಭದ್ರವಾದ ಅಡಿಪಾಯ ಹಾಕಿಕೊಟ್ಟರು. ಅಸ್ಸಾಮ್‌ನಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿದಂತೆಲ್ಲಾ, ಶೈಕ್ಷಣಿಕ ಚಟುವಟಿಕೆಗಳು ಬೆಳೆದುಬಂದಂತೆಲ್ಲಾ ಪಶ್ಚಿಮ ಅಸ್ಸಾಮಿ ರೂಪದಲ್ಲಿಯೂ ಕೂಡ ಪೂರ್ವ ಅಸ್ಸಾಮಿ ರೂಪದಂತೆಯೇ ಶಿಷ್ಟಸಾಹಿತ್ಯ ಶೈಲಿ ಆರಂಭವಾಯಿತು. ಈ ಎರಡು ರೂಪಗಳು ಎಷ್ಟೇ ಭಿನ್ನವಾಗಿ ತೋರಿಬಂದರೂ ಇವುಗಳ ಸಾಹಿತ್ಯ ಪರಸ್ಪರ ಸಮಾನವಾಗಿದ್ದಿತು. ಅಸ್ಸಾಮಿ ಭಾಷೆಯ ವ್ಯಾಕರಣ ಗ್ರಂಥಗಳಲ್ಲಿ ಈ ಎರಡು ರೂಪಗಳನ್ನು ಜೊತೆಜೊತೆಯಲ್ಲಿಯೇ ವಿವರಿಸಿಕೊಳ್ಳಲಾಗುತ್ತದೆ. ಪೂರ್ವ ಮತ್ತು ಪಶ್ಚಿಮ ರೂಪಗಳು ಧ್ವನಿ, ರೂಪ, ಪದ, ವಾಕ್ಯ ಮುಂತಾದುವುಗಳಲ್ಲಿ ಸಾಕಷ್ಟು ವ್ಯತ್ಯಾಸ ತೋರಿಬರುವುದರಿಂದಲೇ ಈ ಎರಡು ಭಾಷಾ ವರ್ಗಗಳ ಜನ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಸ್ವಲ್ಪ ಕಷ್ಟವಾಗುತ್ತಿದೆ. ಪಶ್ಚಿಮ ರೂಪದಲ್ಲಿ ಪೂರ್ವರೂಪಕ್ಕಿಂತ ಧ್ವನಿ, ಸ್ವರಲಹರಿ, ಪದಕೋಶ ಮುಂತಾದುವುಗಳಲ್ಲಿ ಭಿನ್ನತೆ ಹೆಚ್ಚು.

ಪೂರ್ವ ಅಸ್ಸಾಮಿ ಮತ್ತು ಪಶ್ಚಿಮ ಅಸ್ಸಾಮಿ ಭಾಷಾ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಪೂರ್ವ ಅಸ್ಸಾಮಿಯಲ್ಲಿ ಮಧ್ಯಬಲಾಘಾತವಿದ್ದರೆ, ಪಶ್ಚಿಮ ಅಸ್ಸಾಮಿಯಲ್ಲಿ ಅಗ್ರಬಲಾಘಾತವಿದೆ. ಇದರ ಪರಿಣಾಮವಾಗಿ ಪಶ್ಚಿಮ ಅಸ್ಸಾಮಿ ಭಾಷೆಯಲ್ಲಿ ಪದಗಳು ಬದಲಾಗುವುದು ಹೆಚ್ಚು. ಇಂತಹ ಸಂದರ್ಭಗಳಲ್ಲಿ ಬಲಾಘಾತ ಯುಕ್ತ ಅಕ್ಷರದ ಪರದ ಸ್ವರಗಳು ಹೋಗಿ ಸ್ವರಸಮೇತವಾದ ವ್ಯಂಜನಗಳು ರೂಪುಗೊಳ್ಳುತ್ತವೆ. ಇದಕ್ಕೆ ಕರಿಬ–ಕ್ರಬ (ಮಾಡುವೆ) ಕೊಮೊರ–ಕುಮ್ರ (ಕುಂಬಳ) ಎಂಬ ಉದಾಹರಣೆಗಳನ್ನು ಉದಾಹರಿಸಿಕೊಳ್ಳಬಹುದು. ಸಂಯುಕ್ತ ಸ್ವರಗಳು ಕೆಲವು ವೇಳೆ 3 ಸಂಯುಕ್ತ ಸ್ವರಗಳಾಗಿ ಹಲೋವ–ಹೌಲ (ಉಳುವವನು) ರತಿಯ–

ರೈತ (ಅಂಕಿತನಾಮ) ಕವಲಿಯು–ಕಉಇಲ (ಸಾಧು) ಎಂದು ಬದಲಾಗುತ್ತವೆ. ಕೆಲವು ಅಂತ್ಯ ಸಂಯುಕ್ತ ಸ್ವರಗಳು ಮದೈ–ಮದೆ (ರಾಣಿ) ಕಬೌ–ಕಬೊ (ಜೇಡಿಕೆ) ಎಂದು ಮೂಲ ಸ್ವರಗಳಾಗಿ ಬದಲಾಗುವುದು ಉಂಟು. ಪೂರ್ವ ಅಸ್ಸಾಮಿಯಲ್ಲಿ ಉಚ್ಚತರ ಮಧ್ಯಸ್ವರಗಳಿಗೆ ಬದಲಾಗಿ ಪಶ್ಚಿಮ ಅಸ್ಸಾಮಿಯಲ್ಲಿ ಉಚ್ಚಸ್ವರಗಳೇ ವಿಶೇಷವಾಗಿ ಬಳಕೆಯಲ್ಲಿವೆ. ಇದೇ ರೀತಿ ಕೆಲವು ವೇಳೆ ನಿಮ್ನತರ ಮಧ್ಯಸ್ವರಗಳಿಗೆ ಬದಲಾಗಿ ನಿಮ್ನಸ್ವರಗಳೇ ವಿಶೇಷವಾಗಿ ಬಳಕೆಯಲ್ಲಿವೆ. ಇದಕ್ಕೆ ಕಪೊರ್–ಕಪುರ್ (ಬಟ್ಟೆ) ಮೊಲ್–ಮುಲ್ (ಬೆಲೆ) ನೆಮು–ನಿಮು (ನಿಂಬೆ) ಕರಿಸೆ–ಕರಿಸಿ (ಅವನು ಮಾಡಿದ್ದಾನೆ) ಎಂಬ ಉದಾಹರಣೆಗಳನ್ನು ಉದಾಹರಿಸಿಕೊಳ್ಳಬಹುದು. ಪೂರ್ವ ಅಸ್ಸಾಮಿಯಲ್ಲಿ ನಿಮ್ನತರ ಮಧ್ಯ ಸ್ವರಗಳ ಸ್ಥಾನದಲ್ಲಿ ಪಶ್ಚಿಮ ಅಸ್ಸಾಮಿಯಲ್ಲಿ ಉಚ್ಚತರ ನಿಮ್ನಸ್ವರಗಳು ಬಳಕೆಯಲ್ಲಿವೆ. ಪೂರ್ವ ಅಸ್ಸಾಮಿಯಲ್ಲಿ ಮಹಾಪ್ರಾಣಗಳನ್ನು ಉಚ್ಚಾರದಲ್ಲಿ ತೇಲಿಸುವುದರ ಕಡೆಗೆ ಮುಂದುವರಿಸಿದರೆ ಪಶ್ಚಿಮೀ ಅಸ್ಸಾಮಿಯಲ್ಲಿ ಮಹಾಪ್ರಾಣಗಳ ಬಳಕೆಯೇ ಹೆಚ್ಚು. ಪೂರ್ವ ಅಸ್ಸಾಮಿಯಲ್ಲಿ ಪದಗಳ ಅಕ್ಕಪಕ್ಕದ ವರ್ಣಗಳೊಡನೆ ಎರಡು ಮಹಾಪ್ರಾಣಗಳು ಬರುವುದು ಅಪರೂಪ. ಆದರೆ ಪಶ್ಚಿಮ ಅಸ್ಸಾಮಿಯಲ್ಲಿ ಇದು ತೀರ ಸಾಮಾನ್ಯ. ಇದಕ್ಕೆ ಘಗರಿ–ಘಘ್ರಿ (ನೀರಿನ ಮಡಕೆ) ಫೊಪೂಲ–ಫಫ್ಲ (ಟೊಳ್ಳು) ಎಂಬ ಉದಾಹರಣೆಗಳನ್ನು ಉದಾಹರಿಸಿಕೊಳ್ಳಬಹುದು. ಪೂರ್ವ ಮತ್ತು ಪಶ್ಚಿಮ ಅಸ್ಸಾಮ ರೂಪಗಳಲ್ಲಿ ಸ್ವರಲಹರಿಯ ವಿನ್ಯಾಸ ಬೇರೆ ಬೇರೆಯಾಗಿಯೇ ಕಾಣಿಸಿಕೊಳ್ಳುತ್ತವೆ. ಪೂರ್ವ ರೂಪದಲ್ಲಿ ಮಾತಿನ ವೇಗ ನಿದಾನವಾಗಿದ್ದರೆ ಪಶ್ಚಿಮ ರೂಪದಲ್ಲಿ ಅತಿ ರಭಸವಾಗಿ ಸಾಗುತ್ತದೆ. ಅಸ್ಸಾಮಿ ಭಾಷೆಯಲ್ಲಿ ಮುಖ್ಯವಾಗಿ 23 ವ್ಯಂಜನ ಧ್ವನಿಮಾಗಳು 8 ಸ್ವರ ಧ್ವನಿಮಾಗಳು ಪ್ರಧಾನವಾಗಿ ಬಳಕೆಯಲ್ಲಿವೆ.

ಪಶ್ಚಿಮ ಅಸ್ಸಾಮಿಯಲ್ಲಿ ನಾಮವಾಚಕಗಳ ದ್ವಿತೀಯ ಮತ್ತು ಚತುರ್ಥಿ ವಿಭಕ್ತಿರೂಪಗಳು ಸಮಾನವಾಗಿದ್ದರೆ, ಕಾಲ ಮತ್ತು ಸರ್ವನಾಮ ಸಾಧಿತಗಳು ಈ ಎರಡು ರೂಪಗಳಲ್ಲಿ ಬೇರೆಬೇರೆಯಾಗಿವೆ. ಕತ್ (ಎಲ್ಲಿ) ಜತ್ (ಎಲ್ಲಿ) ತತ್ (ಅಲ್ಲಿ) ಎಂಬ ರೂಪಗಳು ಪಶ್ಚಿಮ ರೂಪದಲ್ಲಿದ್ದರೆ, ಕಹೇಂ–ಕಹಾಂಯ್ (ಎಲ್ಲಿ) ಜಹೇಂ–ಜಹಾಂಯ್ (ಅಲ್ಲಿ) ಎಂಬ ರೂಪಗಳು ಪೂರ್ವರೂಪದಲ್ಲಿವೆ. ಬಹುವಚನ ಪ್ರತ್ಯಯಗಳು ಕೂಡ ಈ ಎರಡು ರೂಪಗಳಲ್ಲಿ ಬೇರೆಬೇರೆಯಾಗಿಯೇ ಬಳಕೆಯಲ್ಲಿವೆ. ಪಶ್ಚಿಮ ಅಸ್ಸಾಮಿ ರೂಪದಲ್ಲಿ–ಗಿಲ,–ಗಿಲನ್,–ಗಿಲರ್ ಎಂಬ ಬಹುವಚನ ಪ್ರತ್ಯಯಗಳಿದ್ದರೆ, ಪೂರ್ವ ಅಸ್ಸಾಮಿ ರೂಪದಲ್ಲಿ–ಬೋರ್,–ಬಿಲರ್ ಎಂಬ ಬಹುವಚನ ಪ್ರತ್ಯಯಗಳಿವೆ. ಪೂರ್ವ ಅಸ್ಸಾಮಿಯಲ್ಲಿ ಕ್ರಿಯಾಪದಗಳಿಗೆ ವರ್ತಮಾನಕಾಲ ಮಧ್ಯಮ ಪುರುಷದ ಅಂತ್ಯದಲ್ಲಿ –ಅ ಎಂಬ ಪ್ರತ್ಯಯವಿದ್ದರೆ, ಪಶ್ಚಿಮ ಅಸ್ಸಾಮಿಯಲ್ಲಿ ಇದಕ್ಕೆ –ಅಹ್ ಎಂಬ ಪ್ರತ್ಯಯವಿದೆ. ಇದಕ್ಕೆ ತಯ್ ಖಇಸ (ತಿನ್ನುತಿದ್ದೀಯೆ) ತಂಯ್ ಖಇಸಹ್ ಎಂಬ ರೂಪಗಳನ್ನು ಉದಾಹರಿಸಿಕೊಳ್ಳಬಹುದು. ಇದೇ ರೀತಿ ಪೂರ್ವ ಅಸ್ಸಾಮಿಯ

ಕ್ರಿಯಾಪದಗಳಲ್ಲಿ ಭೂತಕಾಲಕ್ಕೆ ಪ್ರಥಮ ಪುರುಷದ ಅಂತ್ಯಪ್ರತ್ಯಯ –ಎ ಇದ್ದರೆ ಪಶ್ಚಿಮ ಅಸ್ಸಾಮಿಯಲ್ಲಿ –ಅ ಮತ್ತು –ಅಕ್ ಎಂಬ ಪ್ರತ್ಯಯಗಳಿವೆ. ಇದನ್ನು ಕರಿಲೆ, ಕರಿಲ, ಅಥವಾ ಕರಿಲಕ್, ಕಲ್ಲಕ್ (ಅವನು ಮಾಡಿದನು) ಎಂಬ ಉದಾಹರಣೆಗಳಲ್ಲಿ ಗಮನಿಸಬಹುದು. ಕ್ರಿಯಾರ್ಥಕ ರೂಪಗಳು ಕೂಡ ಈ ಎರಡು ರೂಪಗಳಲ್ಲಿ ಬೇರೆಬೇರೆಯಾಗಿವೆ. ನಾಮಪದಗಳಲ್ಲಿ ಕೆಲವನ್ನು ಬಿಟ್ಟು ಕೆಲವು ಸಂದರ್ಭಗಳಲ್ಲಿ ತೀರಭಿನ್ನವಾದ ಪದಗಳನ್ನು ಬಳಸುವುದು ಉಂಟು. ಇದಕ್ಕೆ ಪೂರ್ವ ಅಸ್ಸಾಮಿಯ ಕುವ (ಬಾವಿ) ಗಮೊಸ (ಟವಲ್) ಅಸರಿ (ಬಾರುಕೋಲು) ಧಪತ್ (ತಂಬಾಕು) ಕ್ರಮವಾಗಿ ಪಶ್ಚಿಮ ಅಸ್ಸಾಮಿಯ ಲಹಣ್ಡಾ, ಫಲಿ, ಲರು ಎಂಬ ಪದಗಳನ್ನು ಗಮನಿಸಬಹುದು.

ಪೂರ್ವ ಮತ್ತು ಪಶ್ಚಿಮ ಅಸ್ಸಾಮಿ ರೂಪಗಳಲ್ಲಿ ವ್ಯಂಜನ ಧ್ವನಿಮಾಗಳು ಸಾಮಾನ್ಯವಾಗಿ ಪದದ ಆದಿ, ಮಧ್ಯ ಮತ್ತು ಅಂತ್ಯದಲ್ಲಿ ಬರುತ್ತವೆ. ಕೆಲವು ವೇಳೆ ಅವು ಸ್ವರಗಳ ಪೂರ್ವದಲ್ಲಿಯೂ ಬರಬಹುದು. ಇಲ್ಲವೇ ಪದದ ಮಧ್ಯ ಮತ್ತು ಕೊನೆಯಲ್ಲಿ ಸ್ವರಗಳ ಅನಂತರವೂ ಬರಬಹುದು. ಇವುಗಳಲ್ಲಿ ಕೆಲವು ಸಂಸ್ವನಿತ ವ್ಯಂಜನಗಳ ಅನಂತರವೂ ಬರುತ್ತವೆ. ಮಹಾಪ್ರಾಣ ವ್ಯಂಜನಗಳು ಪದಗಳ ಆದಿ ಮತ್ತು ಮಧ್ಯದಲ್ಲಿ ಬರುವುದೇ ಹೆಚ್ಚು. ಇವು ಪದಗಳ ಅಂತ್ಯದಲ್ಲಿ ಬಹಳ ಕಡಿಮೆ. ಅಘೋಷ ಧ್ವನಿ(ಮಾ)ಗಳು ಘೋಷ ಧ್ವನಿ(ಮಾ)ಗಳಿಗಿಂತ ಬಹಳ ಕಡಿಮೆ. ಮಹಾಪ್ರಾಣ ಸ್ಪರ್ಶ ವ್ಯಂಜನಗಳು ಪದದ ಆದಿ ಅಥವಾ ಮಧ್ಯದಲ್ಲಿ ವಿಶೇಷವಾಗಿ ಒಂದರ ಅನಂತರ ಇನ್ನೊಂದು ಬರುವುದು ಹೆಚ್ಚು. ಕೆಲವು ವೇಳೆ ಸ್ವರಗಳು ಮತ್ತು ವ್ಯಂಜನಗಳು ಸೇರಿಯೇ ಬರಬಹುದು. ಕೆಲವು ವಿಶೇಷ ಸಂದರ್ಭಗಳಲ್ಲಿ ಮಹಾಪ್ರಾಣ ಸ್ಪರ್ಶಗಳು ಸ್ವಲ್ಪ ದೀರ್ಘಮಾಡಿಕೊಳ್ಳುತ್ತವೆ. ಊಷ್ಮಧ್ವನಿಗಳು ಹೆಚ್ಚು ಕಡಿಮೆ ಯಾವಾಗಲೂ ದೀರ್ಘವಾಗಿರುತ್ತವೆ. ಈ ರೂಪಗಳಲ್ಲಿ ಎಲ್ಲಾ ಸ್ವರಗಳು ಅನುನಾಸಿಕ ಸ್ವರಗಳಾಗಿ ಮಾರ್ಪಾಡು ಮಾಡಿಕೊಳ್ಳುತ್ತವೆಯಾದರೂ ಅವುಗಳಲ್ಲಿ ದೀರ್ಘ ಅನುನಾಸಿಕ ಸ್ವರಗಳು ಬೇರೆ ಬೇರೆ ಧ್ವನಿಮಾಗಳಲ್ಲ. ಅವು ಹ್ರಸ್ವ ಅನುನಾಸಿಕ ಸ್ವರಗಳ ಉಪಧ್ವನಿಗಳಾಗಿರುತ್ತವೆ. ಎಲ್ಲಾ ಸ್ವರಗಳು ಸಂದರ್ಭಕ್ಕೆ ಅನುಗುಣವಾಗಿ ಬೇರೆ ಬೇರೆ ಪ್ರಮಾಣದ ದೀರ್ಘತೆಯನ್ನು ಪಡೆಯುತ್ತವೆ. ದಂತ್ಯ ಮತ್ತು ಮೂರ್ಧನ್ಯ ಸ್ಪರ್ಶಗಳು ಅಸ್ಸಾಮಿ ಭಾಷೆಯಲ್ಲಿ ವರ್ತ್ಸ್ಯದಲ್ಲಿ ಐಕ್ಯವಾಗುವಂತೆ ತಾಲವ್ಯ ಮತ್ತು ಅನುಘರ್ಷಿಗಳು ಕೂಡ ವರ್ತ್ಸ್ಯದಲ್ಲಿ ಐಕ್ಯವಾಗುತ್ತವೆ. ಶ್, ಷ್, ಸ್ ಎಂಬ ಊಷ್ಮ ಧ್ವನಿಗಳು ತಮ್ಮ ಮೂಲ ಉಚ್ಚಾರವನ್ನು ಕಳೆದುಕೊಂಡು ಬೇರೆ ಬೇರೆ ರೀತಿಯ ಉಚ್ಚಾರದಲ್ಲಿ ಬಳಕೆಯಲ್ಲಿವೆ. ದಂತ್ಯ ಮತ್ತು ಮೂರ್ಧನ್ಯಗಳು ವರ್ತ್ಸ್ಯದಲ್ಲಿ ಐಕ್ಯವಾಗುವಿಕೆಗೆ ಇಲ್ಲವೇ ಬಿದ್ದು ಹೋಗುವಿಕೆಗೆ ಅಸ್ಸಾಮಿ ಭಾಷಾ ಪ್ರದೇಶದ ಸುತ್ತಲು ಬಳಕೆಯಲ್ಲಿರುವ ಟಿಬೆಟೊ ಬರ್ಮನ್ ಭಾಷೆಗಳ ಪ್ರಭಾವ ಕಾರಣವೆಂದು ತೋರುತ್ತದೆ.

ಅಸ್ಸಾಮಿ ಭಾಷೆಯ ಶಬ್ದಕೋಶವನ್ನು ಮುಖ್ಯವಾಗಿ ನಾಮವಾಚಕಗಳು, ಸರ್ವನಾಮಗಳು, ಕ್ರಿಯಾರ್ಥಕಗಳು ಮತ್ತು ಅವ್ಯಯಗಳು ಎಂದು ನಾಲ್ಕು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ನಾಮವಾಚಕಗಳಲ್ಲಿ ಸರ್ವನಾಮಗಳು ಮತ್ತು ಗುಣವಾಚಕಗಳು ಸೇರುತ್ತವೆ. ಗುಣವಾಚಕಗಳಿಗೆ ವಿಭಕ್ತಿ ಪ್ರತ್ಯಯಗಳು ಹತ್ತುವುದಿಲ್ಲ. ಹೋಲಿಕೆಯಲ್ಲಿಯೂ ವಿಭಕ್ತಿ ಪ್ರತ್ಯಯಗಳು ಬರುವುದಿಲ್ಲ. ಕೆಲವು ವೇಳೆ ಇದನ್ನು ಅಸ್ಸಾಮಿ ಭಾಷೆಯಲ್ಲಿ ಕೆಲವು ಸ್ವತಂತ್ರ ಪದಗಳ ಸಹಾಯದಿಂದ ವ್ಯಕ್ತಗೊಳಿಸಲಾಗುತ್ತದೆ. ಸರ್ವನಾಮ(ಪದ)ಗಳು ನಾಮಪದಗಳಂತೆ ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಳ್ಳುತ್ತವೆಯಾದರೂ ನಾಮಪದಗಳನ್ನು ಸಂಬಂಧ ಸೂಚಕ ನಾಮಪದಗಳು ಮತ್ತು ಸಾಮಾನ್ಯ ನಾಮಪದಗಳು ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಸಂಬಂಧ ಸೂಚಕ ನಾಮಪದಗಳಲ್ಲಿ ನಾಲ್ಕು ಪುರುಷ ವಾಚಕಗಳಿಗೆ ಪ್ರತ್ಯೇಕವಾದ ವಿಭಕ್ತಿ ಪ್ರತ್ಯಯಗಳು ಹತ್ತುತ್ತವೆ. ಪುರುಷ ವಾಚಕಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವುದು ಆರ್ಯಭಾಷೆಗಳ ಬಹುಮುಖ್ಯ ವಾದ ವಿಲಕ್ಷಣ. ಇದು ಇವುಗಳಲ್ಲಿ ಸರ್ವೇಸಾಮಾನ್ಯವೇನಲ್ಲ. ಇದು ಆರ್ಯೇತರ ಭಾಷೆಗಳ ಮೂಲದಿಂದ ಅಸ್ಸಾಮಿಭಾಷೆಗೆ ಬಂದಿರಬಹುದೆಂದು ಕೆಲವರ ಊಹೆ. ಸಾಮಾನ್ಯ ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳು ಸಾಮಾನ್ಯವಾಗಿ ಹತ್ತುತ್ತವೆ. ಇವು ತಮ್ಮದೇ ಆದ ಪ್ರತ್ಯಯಗಳನ್ನು ಪಡೆದುಕೊಂಡಿವೆ. ಸ್ವರಾಂತ್ಯವಾಗಿರುವ ನಾಮಪದಗಳು ಕೆಲವು ವೇಳೆ ವಿಭಕ್ತಿ ಪ್ರತ್ಯಯಗಳು ಸೇರಿದಾಗ ಅವುಗಳ ಅಂತ್ಯದ ಸ್ವರವನ್ನು ಕಳೆದುಕೊಳ್ಳುವುದು ಸರ್ವೇಸಾಮಾನ್ಯ. ಅಸ್ಸಾಮಿ ಭಾಷೆಗಳಲ್ಲಿ ವಚನ ಗಳಾಗಲಿ ಲಿಂಗಗಳಾಗಲಿ ಪ್ರತ್ಯೇಕವಾಗಿಲ್ಲ. ಅಸ್ಸಾಮಿ ಭಾಷೆಯಲ್ಲಿ (ವ್ಯಾವಹಾರಿಕ ಮತ್ತು ಶಿಷ್ಟ) —ಬೊರ್, —ಬಿಲಕ್, —ಹಂತ್, —ಗಿಲ, —ಗಿಲನ್, —ಗಿಲಕ್ ಎಂಬ ಬೇರೆ ಬೇರೆ ಪ್ರತ್ಯಯಗಳನ್ನು ಸೇರಿಸಿ ಬಹುವಚನವನ್ನು ವ್ಯಕ್ತಗೊಳಿಸಿದರೆ, —ಅ, —ಇ, —ಅನಿ, ಮತ್ತು —ರಿ ಎಂಬ ನಪುಂಸಕಲಿಂಗ ಪ್ರತ್ಯಯಗಳನ್ನು ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸೂಚಿಸಲು ಬಳಸುವರು. ಇದನ್ನು ಮಖುತ (ಪುಂ) ಮಯಕಿ, ಮಃತಿ (ಸ್ತ್ರೀ) ಎಂಬ ರೂಪಗಳಲ್ಲಿ ಗಮನಿಸಬಹುದು. ಕ್ರಿಯಾಪದಗಳಲ್ಲಿ ಎರಡು ಬಗೆ. ಅವುಗಳಲ್ಲಿ ಒಂದು ಸಮಾರ್ಪಕ ಕ್ರಿಯಾಪದಗಳು, ಇನ್ನೊಂದು ಅಸಮಾರ್ಪಕ ಕ್ರಿಯಾಪದಗಳು. ಈ ಸಮಾರ್ಪಕ ಮತ್ತು ಅಸಮಾರ್ಪಕ ಕ್ರಿಯಾಪದಗಳಿಗೆ ಬೇರೆ ಬೇರೆ ಪ್ರತ್ಯಯಗಳು ಹತ್ತುತ್ತವೆ. ಎಲ್ಲಾ ಸಮಾರ್ಪಕ ಕ್ರಿಯಾಪದಗಳಿಗೂ ನಾಲ್ಕು ಪುರುಷಗಳಲ್ಲಿ ಬೇರೆ ಬೇರೆ ಪ್ರತ್ಯಯ ಗಳಿವೆ. ಅಸಮಾರ್ಪಕ ಕ್ರಿಯಾಪದಗಳಿಗೆ ಬೇರೆ ಬೇರೆ ಪುರುಷ ಸೂಚಕ ಪ್ರತ್ಯಯ ಗಳಿಲ್ಲ. ಕಾಲ ಮತ್ತು ಕ್ರಿಯಾಭಾವಗಳ ಅಪೂರ್ಣಕಾಲ, ಭೂತಕಾಲ, ಭವಿಷ್ಯತ್ ಕಾಲ ಸೂಚಿಸಲು ಬೇರೆ ಬೇರೆ ಕಾಲ ವಾಚಕ ರೂಪಗಳನ್ನು ಬಳಸಲಾಗುತ್ತದೆ.

ಅಸ್ಸಾಮಿ ಶಬ್ದಕೋಶದಲ್ಲಿ ತದ್ಭವ ರೂಪಗಳೇ ಹೆಚ್ಚು. ಇವು ಸಾಮಾನ್ಯವಾಗಿ

ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶಗಳಿಂದ ನಿಷ್ಪನ್ನವಾದ ರೂಪಗಳಾಗಿವೆ. ಅಸ್ಸಾಮಿ ಭಾಷೆಯಲ್ಲಿ ಎಷ್ಟೇ ತದ್ಭವ ಶಬ್ದಗಳ ಸಂಖ್ಯೆ ಹೆಚ್ಚಿದ್ದರೂ ಅದರಲ್ಲಿ ಅಷ್ಟೇ ಸಂಖ್ಯೆಯ ತತ್ಸಮ, ಅರ್ಧತತ್ಸಮ ಮತ್ತು ದೇಶೀಯ ಶಬ್ದಗಳು ಇವೆ. ಅಸ್ಸಾಮಿ ಒಂದು ರೀತಿಯಲ್ಲಿ ಸ್ವೀಕರಣ ಅಧಿಕವಾಗಿರುವ ಭಾಷೆ. ಅಸ್ಸಾಮಿಭಾಷೆ ತನ್ನ ಸುತ್ತ ಮುತ್ತಲ ಭಾಷೆಗಳಿಂದ ಆರ್ಯೇತರ ಗುಡ್ಡಗಾಡು ಭಾಷೆಗಳಿಂದ ಅನೇಕ ಶಬ್ದಗಳನ್ನು ಸ್ವೀಕಾರಮಾಡಿಕೊಂಡಿದೆ. ಇಂಡೋ ಆರ್ಯನ್, ಪರ್ಶಿಯನ್, ಅರಬ್ಬಿ ಮುಂತಾದ ಇಂಡೋ ಇರಾನಿಯನ್, ಇಂಗ್ಲಿಷ್, ಪೋರ್ಚುಗೀಸ್ ಮುಂತಾದ ಯುರೋಪಿಯನ್ ಭಾಷೆಗಳು ಇದರ ಶಬ್ದಕೋಶದ ಬೆಳವಣಿಗೆಗೆ ಸಹಾಯಮಾಡಿವೆ. ಕೆಲವು ಸ್ವೀಕೃತ ಶಬ್ದಗಳು ಅಸ್ಸಾಮಿ ಭಾಷೆಯಲ್ಲಿ ಅವುಗಳನ್ನು ಗುರುತಿಸಲು ಸಾಧ್ಯವಾಗದ ರೀತಿಯಲ್ಲಿ ಪರಿವರ್ತನೆಗೊಂಡು ಬೆರೆತುಹೋಗಿವೆ. ಅನ್ಯಭಾಷಾ ಸಂಪರ್ಕದಿಂದ ಬಂದ ಅನ್ಯ ಭಾಷಾ ಶಬ್ದಗಳು ಪ್ರತಿದಿನವೂ ಅಸ್ಸಾಮಿ ಭಾಷೆಯ ಸತ್ವ ಬೆಳೆಯಲು ನೆರವಾಗುತ್ತಿವೆ.

ಸುಮಾರು ಕ್ರಿ.ಶ. ಏಳನೆಯ ಶತಮಾನದಲ್ಲಿ ಕುಮಾರ ಭಾಸ್ಕರವರ್ಮನ ಆಹ್ವಾನದ ಮೇಲೆ ಚೀನಾಯಾತ್ರಿ ಹುಯೆನ್‌ತ್ಸಾಂಗ್ ಅಂದಿನ ಕಾಮರೂಪಕ್ಕೆ ಬಂದಿದ್ದನು. ಇವನು ಕಾಮರೂಪದ ವಿವಿಧ ಮುಖಗಳನ್ನು ವಿವರಿಸುತ್ತಾ ಕಾಮ ರೂಪದ ಭಾಷೆ ಮಧ್ಯಭಾರತದ ಭಾಷೆಗಿಂತ ಸ್ವಲ್ಪ ಭಿನ್ನವಾಗಿರುವಂತೆ ಕಂಡು ಬರುವುದೆಂದು ಉಲ್ಲೇಖಿಸಿದ್ದಾನೆ. ಸುಮಾರು ಎಂಟು ಮತ್ತು ಹನ್ನೆರಡನೆ ಶತ ಮಾನಗಳ ನಡುವೆ ಬೌದ್ಧ ಸಿದ್ಧಾಚಾರ್ಯರು ರಚಿಸಿರುವ ಗೀತೆಗಳಲ್ಲಿಯೂ ಪ್ರಪ್ರಥಮ ಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿ ಸಂಗ್ರಹಿಸಿರುವ ದೋಹಾಕೋಶದಲ್ಲಿಯೂ ಪ್ರಾಚೀನ ಅಸ್ಸಾಮಿ ಭಾಷೆಯ ಮಾದರಿಗಳು ದೊರೆಯುತ್ತವೆ. ಈ ಮಾದರಿ ರೂಪ ಹಿಂದಿನ ಬಂಗಾಳಿ ಭಾಷೆಯನ್ನು ಪ್ರತಿನಿಧಿಸುತ್ತದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಇದು ಮಾಗಧಿ ಅಪಭ್ರಂಶದ ಕೊನೆಯರೂಪವನ್ನು ಪ್ರತಿನಿಧಿಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸುವರು. ಆಧುನಿಕ ಭಾರತೀಯ ಆರ್ಯಭಾಷೆಗಳಲ್ಲಿ ಕೆಲವು ಭಾಷೆಗಳು. ಈ ಮಾಗಧಿ ಅಪಭ್ರಂಶದಿಂದಲೇ ಹುಟ್ಟಿ ಬೆಳೆದು ಬಂದ ಭಾಷೆಗಳು. ಹೀಗೆ ಅಸ್ಸಾಮಿ ಭಾಷೆಯ ಪ್ರಾಚೀನತೆ ಕ್ರಿ.ಶ. ಏಳನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ.

ಹದಿಮೂರನೆಯ ಶತಮಾನದ ಅಂತ್ಯಭಾಗದಲ್ಲಿ ಅಂದು ಅಸ್ಸಾಮ್ ರಾಜ್ಯವನ್ನು ಆಳುತ್ತಿದ್ದ ರಾಜ ನರನಾರಾಯಣನು ಪ್ರಾಚೀನ ಸಾಹಿತ್ಯದ ಬೆಳವಣಿಗೆಗೆ ಭದ್ರವಾದ ತಳಹದಿ ಹಾಕಿಕೊಟ್ಟನು. ಇವನ ಆಸ್ಥಾನ ಕವಿ ಹರಿಹರವಿಪ್ರನೆಂಬುವವನು ಬಭ್ರುಬಾಹನೇರ್ ಯುದ್ಧ ಮತ್ತು ಲವಕುಸಾರ್ ಯುದ್ಧ ಎಂಬ ಎರಡು ಗ್ರಂಥಗಳನ್ನು ಜೈಮಿನಿಭಾರತವನ್ನು ಆಧರಿಸಿ ಬರೆದು ಪ್ರಾಚೀನ ಅಸ್ಸಾಮಿ ಸಾಹಿತ್ಯದ ಬೆಳವಣಿಗೆಗೆ ನೆರವಾದನು. ಹರಿಹರನ ಸಮಕಾಲೀನನಾದ ಹೇಮ ಸರಸ್ವತಿ ಎಂಬ ಕವಿಯು ಪ್ರಹ್ಲಾದ ಚರಿತ ಎಂಬ ಗ್ರಂಥವನ್ನು ಅನಂತರ ಹರಗೌರಿವಿಲಾಸ ಎಂಬ ಗ್ರಂಥವನ್ನು

ರಚಿಸಿ ಅಸ್ಸಾಮಿ ಸಾಹಿತ್ಯದ ಬೆಳವಣಿಗೆಗೆ ಸಹಾಯಕನಾದನು. ಇವನು ಪ್ರಹ್ಲಾದ ಕಥೆಯನ್ನು ವಾಮನಪುರಾಣದಿಂದ ಆಯ್ದುಕೊಂಡಿದ್ದರೆ, ಹರಗೌರಿವಿಲಾಸ ಎಂಬುದಕ್ಕೆ ಅಂದಿನ ಪುರಾಣ ಗ್ರಂಥಗಳಿಂದಲೂ ನಾಡಿನಲ್ಲಿ ಅಂದು ಪ್ರಚಲಿತವಾಗಿದ್ದ ಜಾನಪದ ಕತೆಗಳಿಂದಲೂ ಕಥೆಯನ್ನು ಆಯ್ದುಕೊಂಡಿದ್ದಾನೆ. ಇವನ ಮೊದಲನೆಯ ಗ್ರಂಥ ಕಥನ ರೀತಿಯಲ್ಲಿ ಹೆಚ್ಚು ಆಕರ್ಷಕವಾಗಿಲ್ಲ. ಆದರೂ ಇದು ಭಕ್ತಿಪೂರ್ಣ ಕಾವ್ಯ ವಾಗಿದೆ. ಹರಗೌರಿವಿಲಾಸ ಎಂಬ ಕೃತಿ ಮೊದಲನೆಯದಕ್ಕಿಂತ ದೊಡ್ಡದು. ಇದರಲ್ಲಿ 900 ಪದ್ಯಗಳು ದೊರೆಯುತ್ತವೆ. ಅದರಲ್ಲಿ ಯೋಗಾಭ್ಯಾಸದ ಬಗ್ಗೆ ಕೆಲವು ಪದ್ಯಗಳಿವೆಯಾದರೂ ಅದು ಜನಸಾಮಾನ್ಯರ ತೃಪ್ತಿಗೆತಕ್ಕ ವಸ್ತುವನ್ನು ಒದಗಿಸು ವುದಿಲ್ಲ.

ಹದಿನಾಲ್ಕನೆಯ ಶತಮಾನದಲ್ಲಿ ಕಛಾರಿ ದೊರೆಗಳು ಒಂದು ವಿದ್ಯಾಕೇಂದ್ರವನ್ನು ತೆರೆದು ಅದರ ಮೂಲಕ ಪ್ರಾಚೀನ ಅಸ್ಸಾಮಿ ಸಾಹಿತ್ಯ ಬೆಳೆಯಲು ಅವಕಾಶ ಮಾಡಿ ಕೊಟ್ಟರು. ಮಹಾಮಾಣಿಕ್ಯನ ಆಹ್ವಾನದ ಮೇರೆಗೆ ಅನೇಕ ವೈಷ್ಣವ ಕವಿಗಳು ಇವನ ಆಸ್ಥಾನದಲ್ಲಿದ್ದರು. ಅವರಲ್ಲಿ ಅತಿ ಶ್ರೇಷ್ಠನಾದ ಮಾಧವ ಕಂದಳಿ ಎಂಬುವನು ಸಂಸ್ಕೃತದ ರಾಮಾಯಣ ಮಹಾಕಾವ್ಯವನ್ನು ಅಸ್ಸಾಮಿ ಭಾಷೆಗೆ ಪರಿವರ್ತಿಸುವ ಮಹತ್‌ಕಾರ್ಯವನ್ನು ಕೈಗೊಂಡನು. ಇವನು ಮಹಾಮಾಣಿಕ್ಯನ ಆಸ್ಥಾನದ ಹೆಸರಾಂತ ಕವಿ. ಕವಿರಾಜ ಕಂದಳಿ ಎಂಬುದು ಇವನ ಬಿರುದು. ಇವನು ಸಂಸ್ಕೃತದ ದೊಡ್ಡ ವಿದ್ವಾಂಸ. ಇವನು ತನ್ನ ಕೃತಿಗಳಲ್ಲಿ ತನ್ನನ್ನು ಕುರಿತ ವಿಚಾರವೇನನ್ನೂ ಹೇಳಿಕೊಂಡಿಲ್ಲ. ಇದೇ ರೀತಿ ಅಸ್ಸಾಮಿ ಸಾಹಿತ್ಯಕ್ಕೆ ಮಹಾಸ್ಫೂರ್ತಿಯನ್ನು ತಂದು ಕೊಟ್ಟ ಶಂಕರದೇವ ಕವಿ ಇವನ ಭಾವಪೂರ್ಣವಾದ ರಾಮಾಯಣದ ಭಾಷಾಂತರಕ್ಕೆ ಮಾರುಹೋದನು. ಮಾಧವ ಕಂದಳಿಯ ರಾಮಾಯಣದ ಶೈಲಿಯು ಶ್ರೀಮಂತವೂ ಸುಂದರವೂ ಆಗಿದ್ದಿತು. ಇವನ ಶೈಲಿ ಶಂಕರದೇವನ ಮೇಲೂ ಮುಂದಿನ ಪೀಳಿಗೆಯ ಮೇಲೂ ಸಾಕಷ್ಟು ಪ್ರಭಾವವನ್ನುಂಟುಮಾಡಿತು. ಸರ್ಪವನ್ನು ಪೂಜಿಸುವ ಸಂಪ್ರದಾಯ ಅಸ್ಸಾಮ್‌ನಲ್ಲಿ ಬಹಳ ಹಿಂದಿನಕಾಲದಿಂದಲೂ ನಡೆದುಬಂದದ್ದು. ಇದು ಮನಸಾ ದೇವಿ ಎಂಬ ಹೆಸರಿನಿಂದ ನಡೆಯುತ್ತಿದ್ದಿತು. ಈ ಸಂಪ್ರದಾಯ ಮೊದಲಿಗೆ ಆರ್ಯೇತರರಿಂದ ಬಂದಿದ್ದು. ಇದು ಕಾಲಕ್ರಮೇಣ ಆರ್ಯರ ಆಚರಣೆ ಯಲ್ಲಿ ಸೇರಿಹೋಯಿತು. ಈ ಸರ್ಪ ಪೂಜಾವಿಧಿಗೆ ಸಂಬಂಧಿಸಿದಂತೆ ಅದರ ಮಹತ್ವ ವನ್ನು ಸಾರುವ ಕಥನಕವನಗಳು ಹುಟ್ಟಿಕೊಂಡವು. ಈಗಲೂ ಅಸ್ಸಾಮಿಯಲ್ಲಿ ಇವನ್ನು ಜನ ಹಾಡುತ್ತಾರೆ.

ಹದಿನಾಲ್ಕು ಮತ್ತು ಹದಿನೈದನೆಯ ಶತಮಾನಗಳಲ್ಲಿ ಭಾರತದ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಕ್ರಾಂತಿ ನಡೆಯಿತು. ಭಕ್ತಿಯ ಪಂಥದ ತಳಹದಿಯ ಮೇಲೆ ಒಂದು ಹೊಸ ಧರ್ಮವೇ ಸ್ಥಾಪಿತವಾಯಿತು. ಹೊಸ ಧರ್ಮವನ್ನು ಪ್ರಚಾರಕ್ಕೆ ತರಲು ಅನೇಕ ಮಂದಿ ಸಾಧು ಸಂತರು ಸಂಸ್ಕೃತದ ಅನೇಕ ಪುರಾಣ ಗ್ರಂಥಗಳನ್ನು

ದೇಶಭಾಷೆಗಳಿಗೆ ಭಾಷಾಂತರಿಸಿದರು. ಅಸ್ಸಾಮಿ ಸಾಹಿತ್ಯ ಕ್ಷೇತ್ರದಲ್ಲಿ ಯುಗ ಪುರುಷನೂ ಬಹುಗುಣ ಭೂಷಿತನೂ ಆದ ಶಂಕರದೇವನು ಆ ದೇಶದ ಜನರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಜೀವನ ಶಾಶ್ವತವಾಗಿ ನಿಲ್ಲುವಂತೆ ಶ್ರಮಿಸಿದವರಲ್ಲಿ ಮುಖ್ಯನೆನಿಸಿಕೊಂಡಿದ್ದಾನೆ. ಇವನು ಕಾಯಸ್ಥ ಜಾತೀಯ ಸಾಧುಕವಿ. ಇವನ ಧಾರ್ಮಿಕ ಹಾಗೂ ಸಾಮಾಜಿಕ ಚಳುವಳಿ ಜನರಲ್ಲಿ ಹೆಚ್ಚು ಪರಿಣಾಮವನ್ನುಂಟುಮಾಡಿತು. ಇದು ಅಸ್ಸಾಮಿ ಸಾಹಿತಿಗಳಿಗೆ ತುಂಬ ಸ್ಫೂರ್ತಿಯನ್ನು ತಂದುಕೊಟ್ಟಿತು. ಶಂಕರದೇವ ತಾನು ಸಂಸ್ಕೃತದ ದೊಡ್ಡ ಪಂಡಿತ ನಾಗಿದ್ದರೂ ಅವನು ಅಸ್ಸಾಮಿ ಭಾಷೆಯಲ್ಲಿಯೇ ಕಾವ್ಯರಚಿಸಿದನು. ಸಂಸ್ಕೃತದ ಜ್ಞಾನಭಂಡಾರವನ್ನು ಅವಿದ್ಯಾವಂತ ಜನರ ಮುಂದೆ ತೆರೆದಿಡುವುದು ಅವನ ಮುಖ್ಯ ಉದ್ದೇಶವಾಗಿದ್ದಿತು. ಇವನು ತನ್ನ ಮತವನ್ನು ಹರಡುವುದಕ್ಕಾಗಿ ಅನೇಕ ಗ್ರಂಥ ಗಳನ್ನು ಅನೇಕ ಭಾಷ್ಯಗಳನ್ನು ಭಾಷಾಂತರಗಳನ್ನು ರಚಿಸಿದನಲ್ಲದೆ ಅವನು ಮುಟ್ಟಿದ್ದೆಲ್ಲ ಬಂಗಾರವಾಯಿತು. ಈತನ ಪ್ರತಿಭೆ ಬಹುಮುಖವಾದದ್ದು. ಇವನು ಅನೇಕ ಪದ್ಯಗಳನ್ನು, ಗೀತೆಗಳನ್ನು ಮತ್ತು ನಾಟಕಗಳನ್ನು ರಚಿಸಿ ಜನರು ತಮ್ಮ ಕರ್ತವ್ಯಗಳನ್ನು ಇವುಗಳಿಂದ ತಿದ್ದಿ ಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾನೆ.

ಶಂಕರದೇವನು ತನ್ನ ಸ್ಫೂರ್ತಿಯನ್ನು ಚಿರಸ್ಮರಣೀಯವಾದ ಜನಪ್ರಿಯ ಪುರಾಣ ಕಥೆಗಳ ವೇದಾಂತ ದರ್ಶನದ ಸಾರಸರ್ವಸ್ವವನ್ನು ಭಾಗವತ ಗ್ರಂಥದಿಂದ ಪಡೆದುಕೊಂಡು ಅದನ್ನು ಅವನು ಅಸ್ಸಾಮಿ ಭಾಷೆಗೆ ಪರಿವರ್ತಿಸಿದನು. ಪ್ರೌಢ ಭಾಷೆಯ ಉದ್ದಾಮ ಶೈಲಿಯಲ್ಲಿ ಆ ಪವಿತ್ರ ಗ್ರಂಥವನ್ನು ದೇಶೀಯ ಭಾಷೆಗೆ ಪರಿವರ್ತಿಸುವ ಕಾರ್ಯ ಅವನಿಗೆ ದಿಟ್ಟ ಹಾಗೂ ಅಸಾಧಾರಣ ಕೆಲಸವಾಗಿದ್ದಿತು.

ಶಂಕರದೇವನು ರಚಿಸಿದ ಕೀರ್ತನೆಗಳು ಇಂದಿಗೂ ಅಸ್ಸಾಮಿ ಭಾಷೆಯಲ್ಲಿ ಹೆಚ್ಚು ಜನಪ್ರಿಯವಾಗಿವೆ. ಇದು ಅಸ್ಸಾಮಿ ಜನರ ಭಕ್ತಿಭಾವವನ್ನು ಪ್ರದರ್ಶಿಸುತ್ತದೆ. ಉತ್ತರ ಭಾರತದಲ್ಲಿ ತುಳಸೀದಾಸನ ರಾಮಚರಿತಮಾನಸವನ್ನು ಜನರು ಯಾವ ಪೂಜ್ಯಭಾವದಿಂದ ಕಾಣುತ್ತಿದ್ದರೋ ಅದೇ ಪೂಜ್ಯಭಾವದಿಂದ ಅಸ್ಸಾಮಿ ಜನರು ಈ ಕೀರ್ತನೆಗಳನ್ನು ಕಾಣುತ್ತಿದ್ದಾರೆ. ಈ ಗ್ರಂಥದ ಹಸ್ತಲಿಖಿತಪ್ರತಿ ಇಲ್ಲವೇ ಅಚ್ಚಾದ ಪ್ರತಿ ಇಲ್ಲದ ಹಿಂದೂಗಳ ಮನೆ ಅಸ್ಸಾಮಿನಲ್ಲಿಲ್ಲ. ಹಬ್ಬದ ದಿನಗಳಲ್ಲಿ ವಿಶೇಷವಾಗಿ ರೋಗರುಜಿನಗಳಿಗಿರುವ ಮನೆಯಲ್ಲಿ ಈ ಗ್ರಂಥದ ಕೆಲವು ಕೀರ್ತನೆಗಳನ್ನು ಪೂಜ್ಯ ಭಾವದಿಂದ ಅಸ್ಸಾಮಿ ಜನರು ಈಗಲೂ ಹಾಡುವುದನ್ನು ಕಾಣಬಹುದು.

ಶಂಕರದೇವನು ಅಸ್ಸಾಮಿ ಸಾಹಿತ್ಯದ ಮತ್ತೆರಡು ಕ್ಷೇತ್ರಗಳಲ್ಲಿ ತನ್ನ ಕೀರ್ತಿ ಸ್ತಂಭವನ್ನು ನೆಟ್ಟು ಹೋಗಿದ್ದಾನೆ. ಮನುಷ್ಯನ ಇಂದ್ರಿಯ ಮತ್ತು ಬುದ್ಧಿಗಳನ್ನು ತುಷ್ಟಿಗೊಳಿಸಲು ಅಂಕಿಯ ನಾಟ್‌ಗಳು ರಚಿತವಾದವು. ಆ ಕಾಲದಲ್ಲಿ ಅಂಕಿಯ ನಾಟ್‌ಗಳು ಜನಸಾಮಾನ್ಯರಿಗೆ ಬೇಕಾಗುವ ಸಂತೋಷವನ್ನು ಒದಗಿಸುತ್ತಿದ್ದವು. ವೈಷ್ಣವ ಸಂಸ್ಕೃತಿಯನ್ನು ಜನರಲ್ಲಿ ಹರಡಲು ಈ ನಾಟ್ ಅಥವಾ ನಾಟಕಗಳು ಹೆಚ್ಚು

ಪ್ರಭಾವವನ್ನು ಬೀರಿದವು. ಇವು ರಾಷ್ಟ್ರೀಯ ನಾಟಕ ರಂಗಭೂಮಿಯ ಬೆಳವಣಿಗೆಗೆ ಮತ್ತು ಸಂಗೀತ ನರ್ತನಗಳ ಅಭಿವೃದ್ಧಿಗೆ ದಾರಿಮಾಡಿಕೊಟ್ಟವು. ಶಂಕರದೇವನು ರಚಿಸಿರುವ ಅನೇಕ ನಾಟಕಗಳಲ್ಲಿ ಕಾಳಿಯ ದಮನ, ಪತ್ನಿ ಪ್ರಸಾದ, ರಾಸಕ್ರೀಡಾ, ರುಕ್ಮಿಣೀಹರಣ, ಪಾರಿಜಾತಹರಣ ರಾಮವಿಜಯ ಎಂಬ ನಾಟಕಗಳು ಮಾತ್ರ ದೊರೆತಿವೆ. ಉಳಿದ ಯಾವ ನಾಟಕಗಳು ದೊರೆಯುವುದಿಲ್ಲ. ವೈಷ್ಣವ ಮತ ಪ್ರಚಾರದ ಉದ್ದೇಶದಿಂದ ಶಂಕರದೇವನು ಅಂಕಿಯ ನಾಟಕ (ಏಕಾಂಕ ನಾಟಕ) ಗಳನ್ನು ರಚಿಸಿದನು. ಶಂಕರದೇವ ಮುಖ್ಯವಾಗಿ ಉಪದೇಶಕ, ಕತೆಗಾರ ಆದರೂ ಇವನು ನಾಟಕಕಾರನೂ ಆಗಿದ್ದಾನೆ. ಇವನು ಕೆಲವು ಕತೆಗಳ ಮೂಲಕ ಹೊಸ ಕ್ಷೇತ್ರವನ್ನು ನಿರ್ಮಿಸಿ ಅವು ಅಸ್ಸಾಮಿ ಜನರ ಜೀವನದ ಮೇಲೆ ಹೆಚ್ಚು ಪರಿಣಾಮ ವನ್ನುಂಟುಮಾಡುವಂತೆ ಮಾಡಿದ್ದಾನೆ.

ಶಂಕರದೇವನು ಅಸ್ಸಾಮಿ ಭಾಷೆಯಲ್ಲಿ ಅನೇಕ ಸುಂದರವಾದ ಬರ್ ಗೀತೆಗಳನ್ನು ರಚಿಸಿ ಅವು ಹೆಚ್ಚು ಕಾವ್ಯಮಯವಾಗುವಂತೆ ಮಾಡಿದ್ದಾನೆ. ಸಂಗೀತದಲ್ಲಿ ಜನರ ಆಸಕ್ತಿ ಮತ್ತು ಪ್ರೀತಿ ಹೆಚ್ಚಿದ್ದುದರಿಂದ, ಭಕ್ತಿಗೀತೆಗಳು ಅವರಿಗೆ ತುಂಬ ಇಷ್ಟ ವಾಗಿದ್ದುದರಿಂದ ಶಂಕರದೇವನು ಬರ್ ಗೀತೆಗಳನ್ನು ಅಸ್ಸಾಮಿ ಭಾಷೆಯಲ್ಲಿ ರಚಿಸಿದನು. ಇವನ ಬರ್ ಗೀತೆಗಳಲ್ಲಿ ವಿಶೇಷವಾಗಿ ಮತೀಯ ಹಾಗೂ ಆಧ್ಯಾತ್ಮಿಕ ಅನುಭವಗಳು, ಹುಟ್ಟು ಸಾವುಗಳ ದಾರ್ಶನಿಕ ಚಿಂತನೆಗಳು, ಮರ್ಮಸ್ಪರ್ಶಿಯಾದ ಆತ್ಮಾವಲೋಕನ, ಜೀವನಜ್ಞಾನ ಲಾಭಕ್ಕಾಗಿ, ಅಹಂಕಾರ ಖಂಡನೆಗಾಗಿ, ದೇವರಿಗಾಗಿ, ದೇವರಿಗೂ ಮನುಷ್ಯನಿಗೂ ಇರುವ ಸಂಬಂಧ ಮುಂತಾದುವು ಈ ಬರ್ ಗೀತೆಗಳ ವಸ್ತುಗಳಾಗಿವೆ. ಉಳಿದ ಗೀತೆಗಳು ಹರಿನಾಮವನ್ನು ಸ್ಮರಿಸಿರಿ, ರಾಮಧ್ಯಾನ ಮಾಡುತ್ತಾ ಅವನ ಪಾದದ ಮೇಲೆ ನಿಮ್ಮ ತಲೆ ಇರಿಸಿ, ಐಹಿಕ ಸುಖಗಳ ಭ್ರಾಂತಿಯನ್ನು ತೊರೆಯಿರಿ, ಗೋವಿಂದನ ಮೇಲೆ ಭಕ್ತಿ ಇಡಿ ಮುಂತಾದ ಉಪದೇಶಗಳನ್ನು ಕೊಟ್ಟಿದ್ದಾನೆ. ಬರ್ ಗೀತೆಗಳಲ್ಲಿ ಗೋವಿಂದನ ಚರಣವೇ ಶರಣು ಎಂಬ ಮೊರೆಯಿಂದ ಸಂಕಟಗಳಿಂದ ಪಾರಾಗುವ ಅರಿಕೆಯಲ್ಲಿ ಮುಗಿಯುತ್ತದೆ.

ಶಂಕರದೇವನ ಅತ್ಯುನ್ನತ ಭಾವನೆಗಳು ಬರ್ ಗೀತೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸರಳವೂ ಸುಂದರವೂ ಆದ ಭಾಷೆಯಲ್ಲಿ ದಾರ್ಶನಿಕತತ್ವಗಳನ್ನು ನಿರೂಪಿಸಿದ್ದಾನೆ. ಮನಸ್ಸನ್ನು ಸೆರೆಹಿಡಿದು ಸಂತೋಷಗೊಳಿಸುವ ಅನೇಕ ಉತ್ಪ್ರೇಕ್ಷೆಗಳು, ಉಪಮೆಗಳು, ಅಲಂಕಾರಗಳು ಈ ಬರ್‌ಗೀತೆಗಳಲ್ಲಿ ತುಂಬಿ ಹೋಗಿವೆ. ಇದರಿಂದಾಗಿ ಬರ್ ಗೀತೆಗಳ ಮೇಲೆ ಜನರ ಪ್ರೀತಿ ವಿಶ್ವಾಸ ಬಹುಬೇಗ ಬೆಳೆಯಲು ಕಾರಣವಾಗಿದೆ. ಮುಂದೆ ಬಂದ ಬೇರೆ ಬೇರೆ ಕವಿಗಳು ಇಂತಹ ಗೀತೆಗಳನ್ನು ಹೆಚ್ಚಾಗಿ ರಚಿಸಿಕೊಂಡರು. ಅವುಗಳಲ್ಲಿ ಸಂಗೀತನಿಪುಣನಾಗಿದ್ದ ಮಾಧವದೇವ ಕವಿಯ ರಚನೆಗಳು ಅತ್ಯುತ್ತಮವಾಗಿವೆ.

ಶಂಕರದೇವನ ಪ್ರೀತಿಯ ಶಿಷ್ಯ ಮಾಧವದೇವನು ವೈಷ್ಣವ ಕವಿಗಳ ಸಾಲಿನಲ್ಲಿ ಎರಡನೇ ಮಹಾನ್ ವ್ಯಕ್ತಿ. ಈ ಮಹಾಪುರುಷನ ಕೃತಿಗಳಿಗೆ ಅಸ್ಸಾಮಿನ ಜನರು

ಮಾರುಹೋದರು. ಕ್ರಿ.ಶ. 1492ರಲ್ಲಿ ಲಖೀಮ್‌ಪುರದ ಲೆಟಿಪುಖುಜರಿ ಎಂಬ ಗ್ರಾಮದಲ್ಲಿ ಇವನು ಜನಿಸಿ ಗಗನಮಂಡಲದಲ್ಲಿ ಒಂದು ನವಜ್ಯೋತಿಯನ್ನೇ ಬೆಳಗಿದನು. ಇವನು ಮೂಲತಃ ಶಾಕ್ತ. ಇವನಿಗೆ ಶಂಕರದೇವನ ಸಂಪರ್ಕ ಉಂಟಾದ ಮೇಲೆ ಇವನು ವೈಷ್ಣವ ಪಂಥವನ್ನು ಅನುಸರಿಸಿದನು. ಕಲಾನಿಪುಣನಾದ ಮಾಧವದೇವ ಶಂಕರದೇವನ ನೆರಳನ್ನೇ ಅನುಸರಿಸಿ ಬೆಳೆಯತೊಡಗಿದನು. ಇವನ ಮತ ಪರಿವರ್ತನೆ ಯಿಂದ ವೈಷ್ಣವ ಮತ ಬಹುಬೇಗ ಪ್ರಚಾರಕ್ಕೆ ಬರಲು ಅವಕಾಶವಾಯಿತು. ಈತನಲ್ಲಿ ಬುದ್ಧಿ ಸಾಮರ್ಥ್ಯದ ಜೊತೆಗೆ ಮತ ಪ್ರವರ್ತಕ ಮತ್ತು ಸಮಾಜ ಸುಧಾರಕನಿಗೆ ಇರಬಹುದಾದ ಸದ್ಗುಣಗಳು ಇದ್ದವು. ಇವನು ಸಾಂಪ್ರದಾಯಿಕ ವಿದ್ಯೆಯಲ್ಲಿ ಪಂಡಿತ ನಾಗಿದ್ದರೂ ಸುಮಧುರ ಗಾಯಕನು ಆಗಿದ್ದನು. ಶಂಕರದೇವನ ಇಷ್ಟಕ್ಕೆ ವಿರುದ್ಧವಾಗಿ ಮಾಧವದೇವ ಬ್ರಹ್ಮಚಾರಿಯಾಗಿದ್ದನು. ಇವನ ನಿಷ್ಠೆ ಅಜನ್ಮ ಬ್ರಹ್ಮಚಾರಿ ಪಂಥ ವೊಂದನ್ನು ಹುಟ್ಟುಹಾಕಿತು. ಶಂಕರದೇವನ ಅನಂತರ ಈತನೇ ಮಠಾಧಿಪತಿ ಯಾದನು. ಅನೇಕ ವರ್ಷ ಧನ್ಯ ಜೀವನ ನಡೆಸಿದ ಇವನು ಕ್ರಿ.ಶ. 1596ರಲ್ಲಿ ಕೂಚ್ ಬಿಹಾರಿನಲ್ಲಿ ದೈವದೀನನಾದನು.

ಅಸ್ಸಾಮಿ ಭಾಷೆಯ ಸ್ತೋತ್ರ ಸಾಹಿತ್ಯದಲ್ಲಿ ಮಾಧವದೇವ ಅತ್ಯುಚ್ಚ ಸಿದ್ಧಿ ಯನ್ನು ಸಾಧಿಸಿತೋರಿಸಿದ್ದಾನೆ. ಈ ನಾಮ ಘೋಷ ಅಥವಾ ಹಜಾರಿಘೋಷ ಎಂಬ ಗ್ರಂಥವನ್ನು ಅಸ್ಸಾಮಿನ ಅನೇಕ ಜನ ಓದುತ್ತಾರೆಯಲ್ಲದೆ ಅವುಗಳನ್ನು ಕಂಠಪಾಠ ಮಾಡಿ ಧಾರ್ಮಿಕ ಪ್ರವಚನಗಳಲ್ಲಿ ಪ್ರಮಾಣ ವಾಕ್ಯಗಳಂತೆ ಉದ್ಧರಿಸುವುದು ಉಂಟು. ಇದು ವೈಷ್ಣವ ಮತಕ್ಕೆ ಸ್ಥಿರ ಹಾಗೂ ಶಾಶ್ವತವಾದ ಊರುಗೋಲಾಗಿದೆ. ಪಶ್ಚಾತಾಪ, ಬೇಡಿಕೆ, ಆತ್ಮಸಂಯಮ, ಆತ್ಮಾನುತಾಪ, ದೇವರಲ್ಲಿ ಶ್ರದ್ಧೆ ಮತ್ತು ಭಕ್ತಿ ಶರಣಾಗತಿಗಳ ಮಹಾತ್ಮ್ಯ ಮುಂತಾದುವುಗಳನ್ನು ಕೀರ್ತಿಸುವ ಅನೇಕ ಸ್ತೋತ್ರಗಳು ಈ ನಾಮ ಘೋಷದಲ್ಲಿವೆ. ಪ್ರತಿ ಸ್ತೋತ್ರದಲ್ಲಿಯೂ ಭಾವದ ತೀವ್ರ ಘೋಷವಿದೆ. ಇವು ಸಮಸ್ತ ಜನರ ಮನಮುಟ್ಟುವಂತಹವುಗಳು. ಇದರ ವಸ್ತು ನೀತಿಬೋಧೆ, ಗೀತ ಉಪನಿಷತ್ತುಗಳ ಉದಾತ್ತ ಸಾಹಿತ್ಯಕ್ಕೆ ಸಮಾನವಾದದ್ದು. ಆಳವಾದ ಭಾವನೆಗಳು, ಕಾಣ್ಕೆಗಳು ಮಧುರ ವಾಗ್‌ವಿಲಾಸ ಮುಂತಾದುವುಗಳಿಂದ ನಾಮಘೋಷ ಒಂದು ಅತ್ಯಂತ ಶ್ರೇಷ್ಠ ಕಲಾಕೃತಿಯಾಗಿ ಇದು ಕವಿಯ ಪ್ರತಿಭೆಗೆ ಚಿರಂತನ ಸಾಕ್ಷಿಯಾಗಿ ನಿಂತಿದೆ.

ಮಾಧವದೇವನ ಬರ್‌ಗೀತೆಗಳು ಅಸ್ಸಾಮಿ ಸಾಹಿತ್ಯದಲ್ಲಿ ಹೆಚ್ಚು ಜನಪ್ರಿಯತೆ ಯನ್ನು ಗಳಿಸಿಕೊಂಡಿವೆ. ಇವನ ಭಕ್ತಿಗೀತೆಗಳಲ್ಲಿ ಆತನ ಮತನಿಷ್ಠೆ ಎದ್ದು ಕಾಣುತ್ತದೆ. ಶ್ರೀಕೃಷ್ಣನನ್ನು ಕೇಂದ್ರ ವ್ಯಕ್ತಿಯನ್ನಾಗಿಟ್ಟುಕೊಂಡು ಬೃಂದಾವನದ ಸೊಬಗನ್ನು, ಶ್ರೀಕೃಷ್ಣನ ಬಾಲ್ಯ ಮತ್ತು ನವತಾರುಣ್ಯವನ್ನು ಇವುಗಳಲ್ಲಿ ಸುಂದರ ವಾಗಿ ವರ್ಣಿಸಿದ್ದಾನೆ. ಎಲ್ಲಾ ಬಾಲಕರಿಗೂ ಎಲ್ಲಾ ತರುಣರಿಗೂ ಸಹಜವಾಗಿ ಮೂಡುವ ಭಾವನೆಗಳು ಇದರಲ್ಲಿ ಪ್ರತಿಫಲಿತವಾಗಿವೆ. ಇವುಗಳಲ್ಲಿ ಶ್ರೀಕೃಷ್ಣನು

ಅಸಾಧಾರಣ ವ್ಯಕ್ತಿಯೂ, ತುಂಬ ಸರಳನೂ, ಮಾನವೀಯನೂ ಆಗಿ ಕಂಗೊಳಿಸು ತ್ತಿದ್ದಾನೆ. ಶ್ರೀಕೃಷ್ಣನ ಬಾಲಲೀಲೆಗಳು ಪ್ರಕೃತಿ ಸೌಂದರ್ಯಗಳೊಡನೆ ಹೆಚ್ಚು ಜೀವಂತವಾಗಿ ಇವುಗಳಲ್ಲಿ ಚಿತ್ರಿತವಾಗಿವೆ. ದಿನನಿತ್ಯದ ಪ್ರಸಂಗಗಳು ಮಾಧವದೇವನ ಲೇಖನಿಯಿಂದ ಹೊಸ ಅರ್ಥ ಮತ್ತು ಹೊಸ ಹರುಷವು ವ್ಯಕ್ತವಾಗುತ್ತವೆ. ಬಾಲಕೃಷ್ಣನ ಬಾಲ್ಯ ಸ್ವಭಾವಗಳು ಮತ್ತು ಬಾಲಕೃಷ್ಣನು ಸರಳನೂ ಮತ್ತು ಮಂದಸ್ಮಿತನೂ ಆಗಿ ಆ ಕಾಲದ ಮಕ್ಕಳಂತೆ ಚಿತ್ರಿತವಾಗಿದ್ದಾನೆ.

ಭಾಗವತದ ತರುವಾಯ ವೈಷ್ಣವ ಪ್ರಸ್ಥಾನ ಎಂಬ ಮಹಾಕಾವ್ಯ ವೈಷ್ಣವ ಕವಿಗಳ ಮೇಲೆ ತುಂಬ ಪರಿಣಾಮವನ್ನುಂಟುಮಾಡಿತು. ವೈಷ್ಣವರು ಈ ಗ್ರಂಥವನ್ನು ತಮ್ಮ ಮತ ಪ್ರಚಾರಕ್ಕೆ ಒಂದು ಸಾಧನವನ್ನಾಗಿ ಬಳಸಿಕೊಂಡರು. ಮಹಾಭಾರತದ ಒಂದು ಕತೆಯನ್ನು ತೆಗೆದುಕೊಂಡು ಅದರ ಮೂಲಕ ವೈಷ್ಣವರ ಧ್ಯೆಯೋದ್ದೇಶ, ತ್ಯಾಗ, ಸರಳಜೀವನ, ದಯೆ, ದಾನ, ಶ್ರದ್ಧೆ, ಸತ್ಯ, ಯಾತ್ರೆ, ಭೂತ ಆರಾಧನೆ, ಸಾಧುಸಂತರ ಸಾಹಿತ್ಯಾಧ್ಯಯನ ಮುಂತಾದುವುಗಳು ಜನರ ಮನಸ್ಸಿನಲ್ಲಿ ನಿಲ್ಲುವಂತೆ ಅನೇಕ ಕವಿಗಳು ತಮ್ಮ ಕಾವ್ಯ ರಚನೆಮಾಡಿದರು. ಮಹಾಭಾರತದ ಒಂದು ಕತೆ ಯನ್ನು ಆಧರಿಸಿ ರಾಮಸರಸ್ವತಿ ಎಂಬ ಕವಿ ಬಹಳ ಸುಂದರವಾಗಿ ಚಿತ್ರಿಸಿದ್ದಾನೆ. ರಾಮಸರಸ್ವತಿಯೊಬ್ಬ ಮಹಾಕವಿ. ಆ ಕವಿಗಳ ಸಾಲಿನಲ್ಲಿ ಇವನೇ ಅಗ್ರಗಣ್ಯ. ಇವನು ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ರಾಜನರನಾರಾಯಣನ ಆಶ್ರಯಕ್ಕೆ ಎಲ್ಲಾ ಸಮಕಾಲೀನ ಕವಿಗಳನ್ನು ತಂದು ಸಾಹಿತ್ಯ ರಚನೆ ನಡೆಯುವಂತೆ ಮಾಡಿದ ಖ್ಯಾತಿ ಇವನದು. ಮಹಾಭಾರತದ ಭಾಷಾಂತರ ಅಸ್ಸಾಮಿ ಭಾಷೆ ಮತ್ತು ಸಾಹಿತ್ಯ ಬೆಳೆಯುವಂತೆ ಮಾಡಿತು. ಕಟ್ಟುಕಥೆಗಳು, ಶೃಂಗಾರ ಕಥೆಗಳು, ಸಾಂಕೇತಿಕ ಕಥೆಗಳು, ಪೌರಾಣಿಕ ಕಥೆಗಳು ಇದರಿಂದ ಹೊರಬಂದವು. ಅಸ್ಸಾಮಿ ಭಾಷೆಯ ಆಧುನಿಕ ಸಾಹಿತಿಗಳು ಇದರ ಜ್ಞಾನದಿಂದ ತಮ್ಮ ಸ್ಫೂರ್ತಿಯನ್ನು ಪಡೆಯು ತ್ತಿದ್ದಾರೆ. ಗ್ರಾಮವಾಸಿಗಳಿಗೆ ಮಹಾಭಾರತ ಒಂದು ಮನೋರಂಜಕ ಕಾವ್ಯವಾಗಿರದೆ ಕಾಲ ಜ್ಞಾನದ ಪ್ರಮಾಣ ಗ್ರಂಥವಾಗಿದೆ. ಈ ಗ್ರಂಥಗಳು ಧಾರ್ಮಿಕ ಹಾಗೂ ನೈತಿಕ ಹಾರೈಕೆಗಳನ್ನು ಅರ್ಥ, ಕಾಮ, ಮೋಕ್ಷ, ಪುರುಷಾರ್ಥವನ್ನು ಸಾಧಿಸಿ ಕೊಡುತ್ತವೆ.

ಅಸ್ಸಾಮ್‌ನ ವೈಷ್ಣವ ಪಂಥ ಅಖಿಲ ಭಾರತೀಯ ವೈಷ್ಣವ ಪಂಥದ ಒಂದು ಅಂಗ. ಅಸ್ಸಾಮ್‌ನ ವೈಷ್ಣವ ಪಂಥ ಭಕ್ತಿ ಮತ್ತು ಶರಣಾಗತಿಗಳನ್ನು ಹೇಳುತ್ತಿದ್ದುದ ರಿಂದ ಮತ ತತ್ವಕ್ಕೆ ಸಂಬಂಧಿಸಿದ ಗ್ರಂಥಗಳು ಬೆಳೆಯಲು ಅವಕಾಶ ದೊರೆಯಲಿಲ್ಲ. ಶಂಕರದೇವನ ಭಕ್ತಿ ರತ್ನಾವಳಿ, ಭಕ್ತಿ ಪ್ರದೀಪ ಎಂಬ ಗ್ರಂಥಗಳು ವೈಷ್ಣವ ತತ್ವ ಗಳನ್ನು ಕುರಿತ ಗ್ರಂಥಗಳಾಗಿವೆ. ಈ ಭಕ್ತ ರತ್ನಾವಳಿಯ ಜೊತೆಗೆ ಮಾದವದೇವನ ನಾಮಘೋಷವು ವೈಷ್ಣವ ಸಿದ್ಧಾಂತದ ಪ್ರಮಾಣ ಗ್ರಂಥವಾಗಿದೆ. ಸಂಸ್ಕೃತದಲ್ಲಿರುವ ಭಟ್ಟದೇವನ ಭಕ್ತಿವಿವೇಕ ಮತ್ತು ಭಕ್ತಿಸಾರಗಳು, ರಾಮಚರಣ ಠಾಕೂರರ ಭಕ್ತಿ

ರತ್ನ, ನರೋತ್ತಮ ಠಾಕೂರನ ಭಕ್ತಿ ಪ್ರೇಮಾವಳಿ, ಗೋಪಾಲ ಮಿಶ್ರನ ಘೋಷಾ ರತ್ನ ಇವು ಅಸ್ಸಾಮಿ ವೈಷ್ಣವ ಧರ್ಮದಲ್ಲಿ ಗಣ್ಯಸ್ಥಾನ ಪಡೆದುಕೊಂಡಿವೆ.

ವೈಷ್ಣವ ಲೇಖಕರು ಭಗವದ್ಗೀತೆಯ ಮೇಲೆ ಪದ್ಯ ಮತ್ತು ಗದ್ಯ ಎರಡರಲ್ಲಿಯೂ ಅನೇಕ ವ್ಯಾಖ್ಯೆಗಳನ್ನು ರಚಿಸಿದರು. ಶಂಕರದೇವ ಮತ್ತು ಮಾಧವದೇವ ಎಂಬಿಬ್ಬರು ಸಾಧುಗಳು ತಮ್ಮ ಭಕ್ತಿ, ಮುಕ್ತಿ ಮತ್ತು ಅವತಾರತತ್ವಗಳನ್ನು ನಿರೂಪಿಸಲು ಭಗವದ್ಗೀತೆಯ ಹಲವಾರು ಪದ್ಯಗಳನ್ನು ಅಸ್ಸಾಮಿ ಭಾಷೆಗೆ ಅನುವಾದಿಸಿದರು. ಆಗಿನ ಕಾಲದಲ್ಲಿ ಗೀತೆಗಳನ್ನು ಸಮಗ್ರವಾಗಿ ಭಾಷಾಂತರಿಸಿರುವ ಯಾವ ಗ್ರಂಥಗಳು ಇರಲಿಲ್ಲ. ಆದ್ದರಿಂದ ಶ್ರೀಧರ ಸ್ವಾಮಿಯ ವ್ಯಾಖ್ಯಾನವನ್ನು ಅನುಸರಿಸಿ ಈ ಗ್ರಂಥ ವನ್ನು ಗದ್ಯದಲ್ಲಿ ಸಮಗ್ರವಾಗಿ ಅನುವಾದಿಸುವ ಕಾರ್ಯವನ್ನು ಭಟ್ಟದೇವನು ಮೊತ್ತ ಮೊದಲಿಗೆ ಕೈಗೊಂಡನು. ಇದರ ಪದ್ಯಾನುವಾದವನ್ನು ಕಾಮರೂಪದ ವಾಸಿಯಾದ ಗೋವಿಂದ ಮಿಶ್ರನು ಮಾಡಿಮುಗಿಸಿದನು. ಈ ಭಾಷಾಂತರದಲ್ಲಿ ಅವನ ಕಾವ್ಯ ಗುಣವೂ ಸಮರ್ಥ ಭಾಷಾಗುಣವೂ ಎದ್ದು ಕಾಣುತ್ತದೆ. ಈತನ ಭಾಷೆ ನೆನಪಿನಲ್ಲಿಡಲು ಸರಳವೂ, ಸುಂದರವೂ, ಸುಲಭವೂ ಆಗಿದೆ. ಭಟ್ಟನು ಈ ಗದ್ಯಾನುವಾದದ ಜೊತೆಗೆ ಕಥಾಭಾಗವತ ಮತ್ತು ಕಥಾಗೀತಗಳನ್ನು ರಚಿಸಿದನು. ಇವೆಲ್ಲವೂ ಗದ್ಯದಲ್ಲಿಯೇ ಇವೆ. ಕಥಾಗೀತ ಬಹಳ ಹಿಂದೆಯೇ ರಚಿಸಿದ ಗ್ರಂಥ. ಇದೊಂದು ಅನರ್ಘ್ಯರತ್ನ. ಹದಿನಾರನೆಯ ಶತಮಾನದಲ್ಲಿ ಅಸ್ಸಾಮಿ ಗದ್ಯಸಾಹಿತ್ಯ ಜಗತ್ತಿನ ಯಾವ ಸಾಹಿತ್ಯ ದಲ್ಲಿಯೂ ಕಂಡುಬಾರದ ಸಮಯದಲ್ಲಿ ಕಂಡುಬರುತ್ತದೆ. ಭಕ್ತರಿಗೆ ಧಾರ್ಮಿಕ ಭಾವನೆಗಳು ಉಂಟಾಗಲೆಂದು ಅವರು ಸಾಧುಸಂತರ ಜೀವನ ಚರಿತ್ರೆಗಳನ್ನು ರಚಿಸಿದರು. ಕಥಾಗುರು ಚರಿತದ ಪ್ರಕಾರ ಈ ಸಂಪ್ರದಾಯವನ್ನು ಮೊದಲು ಮಾಧವ ದೇವ ತನ್ನ ಗುರುವಿನ ಚರಿತ್ರೆಯನ್ನು ರಚಿಸಿ ಅದನ್ನು ಪ್ರತಿದಿನವೂ ಪಾರಾಯಣ ಮಾಡುವ ಸಂಪ್ರದಾಯ ಬೆಳೆಯುವಂತೆ ಮಾಡಿದನು.

ಅಸ್ಸಾಮಿ ಸಾಹಿತ್ಯದಲ್ಲಿ ವೈಷ್ಣವ ಧರ್ಮದ ಪುನರುಜ್ಜೀವನ ಒಂದು ಹೊಸ ಯುಗವನ್ನು ಆರಂಭಿಸಿತು. ಜನರು ಸಾಧುಸಂತರ ದರ್ಶನಮಾಡಿ ತಮ್ಮ ಮನಸ್ಸಿನ ಕ್ಲೇಶಗಳನ್ನು ಪರಿಹರಿಸಿಕೊಳ್ಳಲು ತೀರ್ಥಯಾತ್ರೆ ಮಾಡುತ್ತಿದ್ದರು. ಎಲ್ಲಾ ಶ್ರೇಷ್ಠ ಕವಿಗಳಿಗೆ ಆಗಿನ ಕಾಲದಲ್ಲಿ ರಾಜಾಶ್ರಯ ದೊರೆಯುತ್ತಿತ್ತು. ಕೋಚ್ ದೊರೆಗಳು ಕಲೆ ಮತ್ತು ಸಂಸ್ಕೃತಿಯ ಪೋಷಕರಾಗಿದ್ದರು. ರಾಮ ಸರಸ್ವತಿಯು ರಾಜ ನರನಾರಾಯಣನ ಬಗ್ಗೆ ಬರೆದಿರುವುದನ್ನು ಗಮನಿಸಿದರೆ ಆಗಿನ ಕಾಲದಲ್ಲಿ ರಾಜಾಶ್ರಯ ಹೇಗಿದ್ದಿತು ಎಂಬುದು ತಿಳಿದುಬರುತ್ತದೆ.

ಅಹೋಮ್ ಎಂಬ ದಾಳಿಕೋರರ ತಂಡ ಈ ದೇಶದ ಪೂರ್ವಭಾಗವನ್ನು ಜಯಿಸಿ ಸಂಪೂರ್ಣವಾಗಿ ಆರುನೂರು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಈ ಅಹೋಮ್ ಪ್ರಭುತ್ವ ಸಮರ್ಥವಾದ ಆಡಳಿತವನ್ನು ಅಸ್ಸಾಮಿಗೆ ತಂದುಕೊಟ್ಟಿತು. ಇದು ಮುಸಲ್ಮಾನರ ಅನೇಕ ದಾಳಿಗಳನ್ನು ಎದುರಿಸಿ ದೇಶದಲ್ಲಿ ಶಾಂತಿನೆಲಸುವಂತೆ ಮಾಡಿತು.

ಅಸ್ಸಾಮ್‌ನಲ್ಲಿದ್ದ ಅನೇಕ ಪಾಳೆಪಟ್ಟುಗಳು ನಿರ್ಮೂಲನವಾದವು. ಅಹೋಮ್ ರಾಜ್ಯಭಾರ ದೇಶದ ರಾಜಕೀಯ, ಸಮಾಜ, ಸಂಸ್ಕೃತಿ ಮತ್ತು ಭಾಷೆಗಳಲ್ಲಿ ಐಕ್ಯ ಮೂಡುವಂತೆ ಮಾಡಿತು.

ಅಹೋಮ್ ರಾಜರು ಗಾರ್‌ಗಾಂವ್, ರಂಗಪುರ, ಜೋರ್‌ಹಾತ್, ಗೌಹತಿ, ಮುಂತಾದ ಸ್ಥಳಗಳಲ್ಲಿ ನಿರ್ಮಿಸಿದ ಚಿಕ್ಕ ದೊಡ್ಡ ನಗರಗಳು ಹೊಸದೊಂದು ನಾಗರಿಕ ಸಂಸ್ಕೃತಿಯನ್ನು ತಂದುಕೊಟ್ಟಿತು. ಅಹೋಮ್ ಶ್ರೀಮಂತ ವರ್ಗದವರು, ನಗರವಾಸಿಗಳು ತಮ್ಮ ಜೀವನಕ್ಕೆ ಮತ್ತು ವಿದ್ಯೆಗಳಲ್ಲಿ ತಮ್ಮ ನಾಗರಿಕ ಸಂಸ್ಕೃತಿಯನ್ನು ಪ್ರಕಟಪಡಿಸಿದರು. ಈ ಹೊಸ ಸಂಸ್ಕೃತಿ ಹಳೆಯ ರೀತಿಯಲ್ಲಿ ಬದುಕುತ್ತಿದ್ದ ಸಂಪ್ರದಾಯನಿಷ್ಠ ಗ್ರಾಮವಾಸಿಗಳಿಂದ ಅವರು ಬೇರೆಯಾಗಲು ಅವಕಾಶಮಾಡಿಕೊಟ್ಟಿತು. ಹೊಸ ನಾಗರಿಕ ಸಮಾಜ ಚಿಕ್ಕದಾಗಿದ್ದರೂ ನಾಗರಿಕ ಜೀವನದ ಉನ್ನತ ಸ್ತರಗಳಲ್ಲಿ ಬೆಳಗುವ ಕಲೆ, ಸಾಹಿತ್ಯ, ಸಂಗೀತ ಮುಂತಾದುವುಗಳಲ್ಲಿ ಜನರು ಆಸಕ್ತರಾಗುವಂತೆ ಮಾಡಿತು. ರಾಜರು, ಮಂತ್ರಿಗಳು, ಶ್ರೀಮಂತರು, ಕವಿಗಳಿಗೆ ಮತ್ತು ಲೇಖಕರಿಗೆ ಭೂಮಿಯನ್ನು ಕೊಟ್ಟು ಪೋಷಿಸುತ್ತಿದ್ದರು. ಹೀಗೆ ಆಶ್ರಯಪಡೆದ ಕವಿಗಳು ತಮ್ಮ ಆಶ್ರಯದಾತನನ್ನು ತಮ್ಮ ಕವಿತೆಗಳಲ್ಲಿ ಹಾಡಿ ಹೊಗಳುತ್ತಿದ್ದರು. ಹೀಗಾಗಿ ರಾಜರ, ಶ್ರೀಮಂತರ, ಅಧಿಕಾರಿಗಳನ್ನು ಸ್ತುತಿಸುವ ಕವಿತೆಗಳು ಹೊರಬಂದವು. ರಾಮಮಿಶ್ರ, ಕವಿರಾಜ ಚಕ್ರವರ್ತಿ, ರುಚಿನಾಥ ಕಂದಲಿ, ವಿದ್ಯಾಚಂದ್ರ, ಕವಿಶೇಖರ ಮುಂತಾದವರ ಸ್ತುತಿ ಕಾವ್ಯಗಳು ಮುಖ್ಯವಾಗಿವೆ. ಸ್ತುತಿ ಕವಿತೆಗಳು ಆ ವರ್ಗದ ಜನರ ಅಭಿರುಚಿಗೆ ತಕ್ಕಂತೆ ರಚಿತವಾಗಿದ್ದವು. ಒಟ್ಟಿನಲ್ಲಿ ಅಹೋಮ್ ರಾಜಾಸ್ಥಾನ ವೈಭವಯುಕ್ತವಾಗಿದ್ದಿತು. ಈ ಕಾರಣದಿಂದ ಆ ಕಾಲದ ಕವಿತೆಗಳಲ್ಲಿ ಕೃತಕತೆ ತಲೆದೋರಿತು. ವೈಷ್ಣವ ಸಾಹಿತ್ಯಕ್ಕೆ ಮಾರುಹೋಗಿದ್ದ ಜನರನ್ನು ಅಹೋಮ್ ಪರಿವಾರ ಅಡಗಿಸಿತು. ಪ್ರಣಯಕ್ಕೂ ಪ್ರೇಮವಿಲಾಸಕ್ಕೂ ರಾಜಾಸ್ಥಾನ ಆಕರವಾಗಿದ್ದಿತು. ರಾಜರಾಣಿಯರು ಭಕ್ತಿಗೀತೆಗಳಿಗಿಂತ ಹೆಚ್ಚಾಗಿ ಶೃಂಗಾರ ಕವಿತೆಗಳಿಗೆ ಮಾರುಹೋದರು. ಇದರಿಂದ ಕವಿಗಳು ಲೇಖಕರು ಕಾಲ್ಪನಿಕ ಕವಿತೆಗಳನ್ನು ರಚಿಸತೊಡಗಿದರು. ಅಹೋಮ್ ರಾಜರು ಪುರಾಣಗಳು ಪ್ರಣಯಕಥೆಗಳನ್ನು ಅಸ್ಸಾಮಿ ಭಾಷೆಗೆ ಪರಿವರ್ತಿಸಲು ಕವಿಗಳನ್ನು ಪ್ರೇರೇಪಿಸುತ್ತಿದ್ದರು. ಹೀಗಾಗಿ ವೈಷ್ಣವ ಯುಗಕ್ಕೂ ಅಹೋಮ್ ಯುಗಕ್ಕೂ ವ್ಯತ್ಯಾಸ ಕಾಣಿಸಿಕೊಂಡಿತು. ಮೊದಲನೆಯದಕ್ಕೆ ದೇವರು ಕೇಂದ್ರವಸ್ತುವಾದರೆ, ಎರಡನೆಯದಕ್ಕೆ ಮನುಷ್ಯನ ನಿತ್ಯಜೀವನ ಕೇಂದ್ರವಸ್ತು. ಸಾಮಾನ್ಯ ಮನುಷ್ಯರು ಸ್ತ್ರೀಯರು ಕವಿಗಳ ಗಮನವನ್ನು ಕವಿತೆಗಳಲ್ಲಿ ಕಾಲ್ಪನಿಕ ಕಥೆಗಳಲ್ಲಿ ತಮ್ಮತ್ತ ಸೆಳೆಯುತ್ತಿದ್ದರು.

ಅಹೋಮ್ ರಾಜಾಸ್ಥಾನದ ಪ್ರಸಂಗಗಳನ್ನು ಚಿತ್ರಿಸುವ ಬುರಂಜಿಗಳು ಅಸ್ಸಾಮಿ ಸಾಹಿತ್ಯ ಕ್ಷೇತ್ರಕ್ಕೆ ಸುವರ್ಣಾಧ್ಯಾಯವನ್ನು ಒದಗಿಸಿಕೊಟ್ಟವು. ಆಗಿನ ಕಾಲದಲ್ಲಿ ರಾಜರ, ರಾಜ್ಯದ ಉನ್ನತಾಧಿಕಾರಿಗಳ, ಸಾಮಂತರ ಅನುಮತಿ ಈ ಬುರಂಜಿಗಳ

ರಚನೆಗೆ ಆಗತ್ಯ ವಾಗಿದ್ದಿತು. ಈ ಬುರಂಜಿಗಳ ಮೂಲಕ ಆಧುನಿಕ ಅಸ್ಸಾಮಿ ಗದ್ಯ ಸಂಪೂರ್ಣವಾಗಿ ವೈದಳೆಯಿತು. ಅಸ್ಸಾಮಿಗಳು ಸಾಹಿತ್ಯದ ವಿಚಾರದಲ್ಲಿ ತುಂಬ ಅಭಿಮಾನಿಗಳು. ಇದರಿಂದಾಗಿ ಭಾರತೀಯ ಸಾಹಿತ್ಯದಲ್ಲಿ ಅಸ್ಸಾಮಿ ಸಾಹಿತ್ಯ ಶ್ರೀಮಂತವಾಗಿದೆ. ಐತಿಹಾಸಿಕ ಕೃತಿಗಳಾದ ಬುರಂಜಿಗಳು ಗಾತ್ರದಲ್ಲಿ ತುಂಬ ದೊಡ್ಡವು. ಬುರಂಜಿಗಳ ಸಂಕಲನ ಒಂದು ಪವಿತ್ರವಾದ ಕಾರ್ಯವಾದ ಕಾರಣ ಬರವಣಿಗೆಯನ್ನು ದೇವತಾಸ್ತುತಿಯಿಂದ ಲೇಖಕರು ಆರಂಭಿಸುತ್ತಿದ್ದರು. ರಾಜ್ಯ ವ್ಯವಹಾರವನ್ನು ಚನ್ನಾಗಿ ಬಲ್ಲವರು ಮಾತ್ರ ಬುರಂಜಿಗಳನ್ನು ರಚಿಸುತ್ತಿದ್ದರು. ಆದ್ದರಿಂದ ಇತಿಹಾಸಗಳ ಭಾಷೆ ಬಹಳ ಗಂಭೀರವಾಗಿದೆ ಮತ್ತು ನಾಜೋಕಾಗಿದೆ. ಇವು ವಾಸ್ತವ ಸಂಗತಿಗಳು ಮತ್ತು ವರದಿಗಳು ಆದ್ದರಿಂದ ಇವುಗಳನ್ನು ಸಾಮಾನ್ಯ ಮಾತುಗಳಲ್ಲಿ ರಚಿಸಿಕೊಳ್ಳಲಾಗಿದೆ. ಸರಳವೂ ನೇರವೂ ಆದ ಮಾತುಗಳಲ್ಲಿ ರಚಿತವಾದ ಗ್ರಂಥಗಳು ಸಹಜವಾಗಿ ಜನಪ್ರಿಯತೆಯನ್ನು ಗಳಿಸಿಕೊಂಡವು.

ಗದ್ಯ ಅಥವಾ ಪದ್ಯಗಳಲ್ಲಿ ರಚಿತವಾದ ಮತ್ತೊಂದು ಸಾಹಿತ್ಯ ಪ್ರಕಾರವನ್ನು ವಂಶಾವಳಿ ಎನ್ನುವರು ಇವುಗಳಲ್ಲಿ ರಾಜರ ವಿವಿಧ ವಂಶಾವಳಿಯ ಚರಿತ್ರೆಯನ್ನು ಚಿತ್ರಿಸಲಾಗಿರುತ್ತದೆ. ರಾಜರ, ಶ್ರೀಮಂತರ, ಸಾಮಂತರ, ಅಧಿಕಾರಿಗಳ ಚರಿತ್ರೆಯನ್ನು ಬರೆಯುವುದು ಇವುಗಳ ಮುಖ್ಯ ಉದ್ದೇಶ. ಬುರಂಜಿಗಳಲ್ಲಿ ಕಂಡುಬಾರದ ಸಂಗತಿಗಳನ್ನು ಈ ವಂಶಾವಳಿ ತುಂಬಿಕೊಡುತ್ತದೆ. ಇಂತಹ ಒಂದು ವಂಶಾವಳಿ ಹದಿನೆಂಟನೆಯ ಶತಮಾನದ ಉತ್ತರಾರ್ಧದ ಡರಂಗಿನ ಕೋಖ್‌ರಾಜ ಸಮುದ್ರ ನಾರಾಯಣನ ಆಶ್ರಯದಲ್ಲಿದ್ದ ಸೂರ್ಯಖರಿ ದೈವಜ್ಞನಿಂದ ಪದ್ಯದಲ್ಲಿ ರಚಿತ ವಾಯಿತು. ಇದು ಕೋಖ್ ಪ್ರಭುಗಳ ಇತಿಹಾಸವನ್ನು ತಿಳಿಸುತ್ತದೆ.

ವೈದ್ಯ, ಜೋತಿಷ್ಯ, ಗಣಿತ, ನೃತ್ಯ, ಶಿಲ್ಪ ಮುಂತಾದುವುಗಳಿಗೆ ಸಂಬಂಧಿಸಿದ ಆನೇಕ ಸಂಸ್ಕೃತ ಗ್ರಂಥಗಳು ದೊರೆಗಳ ಆಶ್ರಯದಲ್ಲಿ ಅಸ್ಸಾಮಿ ಭಾಷೆಗೆ ಭಾಷಾಂತರ ಗೊಂಡವು. ಇವುಗಳಲ್ಲಿ ಸುಕುಮಾರಬರ್‌ಕಾತ್ ಎಂಬಾತನ ಹಸ್ತಿವಿದ್ಯಾರ್ಣವ ಎಂಬ ಗ್ರಂಥ ಮುಖ್ಯವಾದದ್ದು. ಇದು 1754ರಲ್ಲಿ ಮಹಾರಾಜ ಶಿವಸಿಂಗ್ ಮತ್ತು ಆತನ ರಾಣಿ ಅಂಬಿಕಾದೇವಿಯ ಅಪ್ಪಣೆಯ ಮೇಲೆ ರಚಿತವಾಯಿತು.

ವೈದ್ಯಶಾಸ್ತ್ರ, ಜೋತಿಷ್ಯ ಮತ್ತು ಭವಿಷ್ಯ ವಿಜ್ಞಾನಗಳ ಬಗ್ಗೆ ಸಂಸ್ಕೃತ ಮತ್ತು ಅಸ್ಸಾಮಿ ಭಾಷೆಗಳಲ್ಲಿ ಗ್ರಂಥಗಳು ರಚನೆಯಾದವು. ಕಾಯಿಲೆಯ ಕಾರಣವನ್ನು ತಿಳಿಯಲು ಅದನ್ನು ಗುಣಪಡಿಸಲು ಭವಿಷ್ಯಜ್ಞಾನವನ್ನು ಜನರು ಆಶ್ರಯಿಸುತ್ತಿದ್ದರು. ಕಾಯಿಲೆ ಗುಣಪಡಿಸಲು ಮಾಟಮಂತ್ರಗಳನ್ನು ಪ್ರಯೋಗಿಸುತ್ತಿದ್ದರು. ಭೂತ ಪ್ರೇತ ಪಿಶಾಚಿ ಬಿಡಿಸಲು, ಹಾವಿನಿ ವಿಷ ಇಳಿಸಲು, ಕೆಟ್ಟ ಕನಸು ಮತ್ತು ಕೇಡುಗಳನ್ನು ತಡೆಗಟ್ಟಲು ವಿಪತ್ತಿನಿಂದ ಪಾರಾಗಲು, ಹೊಲಗದ್ದೆಗಳನ್ನು ಹಾಳುಮಾಡುವ ಕ್ರಿಮಿಕೀಟ ಮೃಗಪಕ್ಷಿಗಳನ್ನು ನಾಶಪಡಿಸಲು, ಮನೆಯ ಏಳಿಗೆ, ದವಸಧಾನ್ಯಗಳ ಸಂವೃದ್ಧಿ ಮುಂತಾದುವುಗಳ ಆಕಾಂಕ್ಷೆಗಳಿಂದ ಮಂತ್ರಗಳನ್ನು ಪ್ರಯೋಗಿಸುತ್ತಿದ್ದರು.

ಅಹೋಮ್ ರಾಜರುಗಳ ಎಷ್ಟೋ ಅಧಿಕಾರಿಗಳು ಮಾಟಮಂತ್ರಗಳಿಂದ ಮರಣ ಹೊಂದಿರುವ ವರದಿಗಳಿವೆ. ಆಳುವರಸನ ಆಡಳಿತವನ್ನು ಮುರಿಯಲು ಸಂಚು ನಡೆಸುವವನನ್ನು ನ್ಯಾಯಾಲಯಕ್ಕೆ ಒಳಪಡಿಸುವುದನ್ನು ಉಲ್ಲೇಖಿಸಲಾಗಿದೆ. ಮಂತ್ರ ತಂತ್ರಗಳ ಮೇಲೆ ಗದ್ಯ ಮತ್ತು ಪದ್ಯ ಎರಡರಲ್ಲಿಯೂ ರಾಶಿ ರಾಶಿ ಬರಹಗಳು ಹೊರ ಬಂದವು. ಸಾಪರ್‌ಧರಣಿ ಮಂತ್ರ, ಸರ್ಪಧಾರ್ ಮಂತ್ರ, ಕಾಮರತ್ನತಂತ್ರ, ಭೂತರ್‌ಮಂತ್ರ, ಖೇತ್ರಮಂತ್ರ ಮುಂತಾದ ಪುಸ್ತಕಗಳು ಅವುಗಳಲ್ಲಿ ಮುಖ್ಯವಾಗಿವೆ. ಮಾಟ ಮಂತ್ರ, ಒಗಟು, ಬೂಟಾಟಿಕೆ ಇವು ಯಾವುವೂ ಸಾಹಿತ್ಯ ಮೌಲ್ಯಗಳುಳ್ಳ ಗ್ರಂಥಗಳಲ್ಲ. ಆದರೆ ಸಮಾಜದ ಜನರನ್ನು ಮರಳುಮಾಡುವ ನಂಬಿಕೆಗಳು, ಮೂಢ ನಂಬಿಕೆಗಳು ಮುಂತಾದುವುಗಳನ್ನು ತಿಳಿಯಲು ಈ ಬರಹಗಳು ಕುತೂಹಲಕಾರಿ ಯಾಗಿವೆ. ಅಹೋಮ್ ಅಳ್ವಿಕೆಯ ಆರುನೂರು ವರ್ಷಗಳಲ್ಲಿ ಜನಜೀವನದ ಎಲ್ಲಾ ಶಾಖೆಗಳು ಬಹುಬೇಗ ಅಭಿವೃದ್ಧಿಹೊಂದಿರುವ ದೃಶ್ಯಗಳು ಗೋಚರಿಸುತ್ತವೆ. ರಾಜಕೀಯ ಸಂಸ್ಥೆಗಳು, ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಕ್ರಮಗಳನ್ನು ಸುವ್ಯಸ್ಥಿತವಾಗಿ ನೆಲೆಗೊಳಿಸಿ, ನಾಡಿನಲ್ಲಿ ಜನಜಾಗ್ರತಿ ಮುಂತಾದುವುಗಳನ್ನು ಬೆಳೆಸಿವೆ. ಆಗಿನ ಕಾಲದಲ್ಲಿ ಜನರ ಮನಸ್ಸು ವಿಚಾರಶೀಲವಾಗಿತ್ತಾದರೂ ಆ ಮನೋಭಾವ ಆ ಕಾಲದ ಕಲೆ ಮತ್ತು ಸಾಹಿತ್ಯದ ಮೇಲೆ ಪ್ರಭಾವಬೀರಿ ಜನಜೀವನವು ಮಧುರ ವಾಗಿದ್ದಿತು. ಆಗಿನ ಕಾಲದ ಅನೇಕ ಕೈಬರಹದ ಪುಸ್ತಕಗಳಿಂದ ಆ ಕಾಲದ ಬುದ್ಧಿ ಮತ್ತು ಕಲೆಗಳ ಸ್ವರೂಪವನ್ನು ತಿಳಿಯಬಹುದು. ಕೈಬರಹದ ಪ್ರತಿಗಳ ತಯಾರಿಕೆಗೆ ಲೇಖನಸಾಮಗ್ರಿಗಳು ಅವಶ್ಯಕವಾಗಿದ್ದವು. ಅವುಗಳ ರಚನೆಯೇ ಆ ಕಾಲದ ಒಂದು ಸಿದ್ಧಿ ಎಂದು ಹೇಳಬಹುದು. ಕೈಬರಹದ ಪ್ರತಿಯನ್ನು ತಯಾರಿಸುವುದು ಕಷ್ಟದ ಕೆಲಸ. ರಾಜಾಸ್ಥಾನದಲ್ಲಿ ತಯಾರಾದ ಕೈಬರಹದ ಪ್ರತಿಯೊಂದು ಗ್ರಂಥವೂ ಅಂದ ವಾಗಿದ್ದವು. ಈ ಕಲೆ ಈಗಲೂ ಕೂಡ ಅಮೂಲ್ಯವಾದ ಕಲಾನಿಧಿ ಎನಿಸಿಕೊಂಡಿದೆ. ಕೈಬರಹಗಳ ಜೊತೆಯಲ್ಲಿಯೇ ವರ್ಣಚಿತ್ರಗಳ ಕಲೆಯೂ ಬೆಳೆಯತೊಡಗಿತು. ಗೀತ ಗೋವಿಂದ, ಶಂಕಾಸುರವಧ, ಭಾಗವತ, ಡರಂಗ ರಾಜವಂಶಾವಳಿ, ಹಸ್ತಿವಿದ್ಯಾರ್ಣವ ಮುಂತಾದ ಗ್ರಂಥಗಳು ಆ ಕಾಲದಲ್ಲಿ ಸುಂದರವಾದ ಚಿತ್ರಗಳಿಂದ ಅಲಂಕೃತವಾದ ಕೈಬರಹದ ಪ್ರತಿಗಳಿದ್ದವು. ಕೈಬರಹದ ಪ್ರತಿಗಳಲ್ಲಿ ವರ್ಣಚಿತ್ರಗಳು, ಧಾರ್ಮಿಕ ಚಿತ್ರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವುಗಳಲ್ಲಿ ರಾಜರು ಮತ್ತು ರಾಜಾ ಸ್ಥಾನದ ಚಿತ್ರಗಳು ಇದ್ದವು.

ಅಸ್ಸಾಮಿ ಸಾಹಿತ್ಯ ಚರಿತ್ರೆಯಲ್ಲಿ ಗದ್ಯ ಮತ್ತು ಲೌಕಿಕ ಸಾಹಿತ್ಯದ ಬೆಳವಣಿಗೆ ಆ ಕಾಲದ ವಿಶೇಷ ಲಕ್ಷಣವಾಗಿದ್ದಿತು. ರಾಜರು ಮತ್ತು ಸಾಧುಗಳನ್ನು ಮೇಲೇರಿಸುವ ಪ್ರವೃತ್ತಿ ಕೌತುಕದಾಯಕವಾದದ್ದು. ಗದ್ಯದ ಜೊತೆಗೆ ವಿವಿಧ ಉಪಯುಕ್ತ ಹಾಗೂ ಬೇರೆ ಬೇರೆ ಕ್ಷೇತ್ರಗಳ ಆಸಕ್ತಿಯೂ ಮೂಡಿಬಂದಿತು. ಗಣಿತ ಮತ್ತು ಶಿಲ್ಪಶಾಸ್ತ್ರಗಳ ಪ್ರಗತಿ ಅವುಗಳ ವ್ಯಾಸಂಗ, ಜ್ಯೋತಿಷ್ಯ ಮತ್ತು ಖಗೋಳ ವಿಜ್ಞಾನದ ಮೂಲಾಂಶಗಳ

ವ್ಯಾಸಂಗ ಮುಂತಾದುವುಗಳು ನಡೆಯುತ್ತಿದ್ದವು ಜ್ಯೋತಿಷ್ಯಗಳು ಗ್ರಹಗತಿಗಳನ್ನು ಪ್ರಕೃತಿಯ ವ್ಯಾಪಾರಗಳನ್ನು ತಮ್ಮ ತಿಳುವಳಿಕೆಯ ಮಿತಿಯಲ್ಲಿ ವರ್ಣಿಸುತ್ತಿದ್ದರು. ಆಯುರ್ವೇದ ಗ್ರಂಥಗಳಲ್ಲಿ ಔಷಧಕ್ಕೆ ಒದಗುವ ಗಿಡಮೂಲಿಕೆಗಳು, ಪ್ರಾಣಿಗಳ ಬಗೆಗೆ ಗೋಚರವಾಗುವ ವಿಚಾರಗಳು ಚಿಕಿತ್ಸಾ ಕ್ರಮಗಳು ಔಷಧಗಳು ವರ್ಣಿತ ವಾಗಿದ್ದವು. ಹೀಗೆ ಅಸ್ಸಾಮಿ ಸಾಹಿತ್ಯಕ್ಷೇತ್ರ ಭಾರತದ ಇತರ ಭಾಗಗಳಲ್ಲಿ ಇತರ ಭಾಷೆಗಳಲ್ಲಿ ಕಾಲ ಕಾಲಕ್ಕೆ ಆಗುವ ಸ್ಫೂರ್ತಿ, ಉತ್ಸಾಹ, ಮತ್ತು ಪ್ರಚೋದನೆಗಳಿಗೆ ತಕ್ಕಂತೆ ದೇಶಿಯ ಪ್ರವೃತ್ತಿಗಳು ಸೇರಿಕೊಂಡು ಬೆಳೆದು ಬಂದಿರುವುದು ಅಸ್ಸಾಮಿ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಕಂಡುಬರುವುದು. ಹಾಗೆಯೇ ಆಧುನಿಕ ಅಸ್ಸಾಮಿ ಸಾಹಿತ್ಯ ಭಾರತದ ಇತರ ಭಾಷೆಗಳ ಸಾಹಿತ್ಯವನ್ನು ಅನುಸರಿಸಿ ವಿಪುಲವಾಗಿ ಬೆಳೆದು ಬಂದಿತು.

ನೀತಿ ಎಂಬುದು ಸಾಧಿಸಬೇಕಾದ ಧರ್ಮವೇ ಹೊರತು ಸಹಜವಾದ ಗುಣವಲ್ಲ.

—ರಾಳಪಳ್ಳಿ ಅನಂತಕೃಷ್ಣ ಶರ್ಮ

ಎಲ್ಲಿ ಅಜ್ಞಾನದಿಂದ ಸುಖವೋ ಅಲ್ಲಿ ಬುದ್ಧಿವಂತನಾಗಿರುವುದು ದಡ್ಡತನ.

—ಥಾಮಸ್ ಗ್ರೇ

ತಾಳಿ ತಾಳಿ ಎನ್ನುವುದೇ ಮಂತ್ರ, ತಾಳ್ಮೆಯಿಲ್ಲದಿರೆ ಬಾಳೇ ಅತಂತ್ರ

—ಪು.ತಿ.ನ.

ಲೋಕೋಪಕಾರದ ಜಾಡಿನಲ್ಲಿ ನಾವು ನಡೆದರೆ ಅದರಿಂದ ನಾವು ಬಯಸಲಿ ಬಿಡಲಿ ನಮಗೂ ಅಷ್ಟಿಷ್ಟು ಒಳ್ಳೆಯದಾಗುತ್ತದೆ.

—ತ.ರಾ.ಸು.

ಕೆಟ್ಟದ್ದನ್ನು ಮಾಡಲೇ ಬೇಕೆಂದವನಿಗೆ ಅವಕಾಶದ ಕೊರತೆ ಇರದು.

—ಪಬ್ಲಿಯಸ್ ಸೈರಸ್

ಪುರುಷೋತ್ತಮ ಬಿಳಿಮಲೆ

ಆಡಳಿತ ಭಾಷೆಯಾಗಿ ಕನ್ನಡ–ಸಮಸ್ಯೆ ಮತ್ತು ಪರಿಹಾರ

ಆಡಳಿತ ಭಾಷೆಯಾಗಿ ಕನ್ನಡವು ಇಂದು ಎದುರಿಸುತ್ತಿರುವ ಸಮಸ್ಯೆಯನ್ನು ಕೇವಲ ವರ್ತಮಾನ ಕಾಲದ ಚೌಕಟ್ಟಿನಲ್ಲಿ ಇರಿಸಿ ವಿಶ್ಲೇಷಿಸಲಾಗದು. ಇತಿಹಾಸದ ತೆಕ್ಕೆಯಿಂದ ಕತ್ತರಿಸಿ ತೆಗೆದು, ಸಮಸ್ಯೆಯನ್ನು ವಿಶ್ಲೇಷಿಸುತ್ತಾ, ನಂತರ ಹಾಗೆ ಅವಕ್ಕೆ ಪರಿಹಾರಗಳನ್ನು ಸೂಚಿಸುವ ಆಧುನಿಕರ ಪರಿಯು ಮೂಲತಃ ಸಮಸ್ಯೆಯ ಪರಿಹಾರದತ್ತ ಯೋಚಿಸದ ಸಿನಿಕತನದ ಪ್ರವೃತ್ತಿಯನ್ನು ಮಾತ್ರ ತೋರಿಸುತ್ತದೆ. ಸಮಕಾಲೀನ ಆಡಳಿತ ಪದ್ಧತಿಯ ಪೂರ್ಣಲಾಭ ಪಡೆಯುತ್ತಿರುವ ಮಂದಿಗಳಿಂದ ಇದಕ್ಕಿಂತ ಹೆಚ್ಚಿನದನ್ನೇನನ್ನೂ ನಿರೀಕ್ಷಿಸಲಾಗದು. ಪ್ರಕೃತ ಪ್ರಬಂಧದಲ್ಲಿ ಆಡಳಿತ ಭಾಷೆಯಾಗಿ ಕನ್ನಡವು ಎದುರಿಸುತ್ತಿರುವ ಸಮಸ್ಯೆಯನ್ನು ಐತಿಹಾಸಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಒಂದೇ ಮಾತಿನಿಂದ ಸ್ಪಷ್ಟಪಡಿಸುವುದಾದರೆ : ಕರ್ನಾಟಕವು ಪ್ರಾಚೀನಕಾಲದಿಂದಲೂ ಜನರಾಡುವ ಮಾತಿನಲ್ಲಿಯೇ ಆಡಳಿತವನ್ನು ನಡೆಸಿಕೊಂಡು ಬಂದಿದೆ. ಕರ್ನಾಟಕದಾದ್ಯಂತ ದೊರಕುವ ಸಾವಿರಾರು ಶಾಸನಗಳಲ್ಲಿ, ವಿವಿಧಮಟ್ಟದ ಅಧಿಕಾರ ಸ್ಥಾನಗಳ ಹೆಸರುಗಳು, ಭೂಮಿ, ತೆರಿಗೆ, ನಾಣ್ಯ, ವಾಣಿಜ್ಯ, ದತ್ತಿ, ಜಲಾಶಯ, ಧರ್ಮಶಾಲೆ, ದೇವಾಲಯ, ಅಪರಾಧ, ಶಿಕ್ಷೆ, ಅನುಗ್ರಹ ಇತ್ಯಾದಿ ವ್ಯವಸ್ಥೆಗಳಿಗೆ ಸಂಬಂಧಿಸಿದ ಖಚಿತವಾದ ಪದಗಳಿವೆ. ಈ ನಿಟ್ಟಿನಲ್ಲಿ ಕನ್ನಡದ ಸಾಮರ್ಥ್ಯವನ್ನು ಯಾರೂ ಶಂಕಿಸುವಂತಿಲ್ಲ. ಕೆಲವು ಉದಾಹರಣೆಗಳನ್ನು ಗಮನಿಸಬಹುದು :

1. " ಕಲ್ಯಾಣದ ನೆಲೆ ವೀಡಿನೊಳ್ ರಾಜ್ಯಂಗೆಯುತ್ತಮಿರೆ " ಎಂಬ ಪದವು 1077ರ ಶಾಸನವೊಂದರಲ್ಲಿ ಬಂದಿದೆ [E.C. XII 274]. ಇಲ್ಲಿ ' ನೆಲೆವೀಡು ' ಎಂಬ ಪದವನ್ನು ' ರಾಜಧಾನಿ ' ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗಿದೆ.

2. ಅರಸುಗಳಿಗೆ ಸಹಾಯಕರಾಗಿರುವ ಮಂತ್ರಿಗಳು ' ಉಪಾಯ ಸಂಪನ್ನ' ರಾಗಿರಬೇಕೆಂಬ ಮಾತು ಹಲವು ಶಾಸನಗಳಲ್ಲಿ ಬಂದಿದೆ. ಇಲ್ಲಿಯ 'ಉಪಾಯ ಸಂಪನ್ನ' ಎಂಬ ಮಾತು ' ಅರ್ಹತೆ 'ಯನ್ನು ಸೂಚಿಸುವ ಸೊಗಸಾದ ಪದ.

3. ಮಂತ್ರಿಮಂಡಲದ ಸಂಖ್ಯೆ 8 ರಿಂದ 20ರ ವರೆಗೆ ಇರುತ್ತಿತ್ತು. ಇವರಲ್ಲಿ ಮಹಾಪ್ರಧಾನಿ, ಪ್ರಧಾನಿ, ದಂಡನಾಥ, ಮಹಾದಂಡನಾಥ, ಸಂಧಿವಿಗ್ರಹಿಗಳೆಂಬ ವರ್ಗೀಕರಣವನ್ನು ಮಾಡಲಾಗಿತ್ತು. ಇದೇ ರೀತಿ ಅರಮನೆಯ ಭಂಡಾರವನ್ನು ನೋಡಿಕೊಳ್ಳಲು 'ಭಂಡಾರಿ', ಸುದ್ದಿಯನ್ನು ಕೊಂಡುಹೋಗಲು 'ದೂತ', ದಾಖಲೆಗಳ ರಕ್ಷಣೆಗೆ 'ಅಕ್ಷಪಟಂಕ'—ಇಂಥ ಹುದ್ದೆಗಳಿದ್ದುವು. ಅಂದರೆ ಆ ಕಾಲದ ಆಡಳಿತ ಪದ್ಧತಿಯು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಹುದ್ದೆಗಳನ್ನು ಸಂಕೇತಿಸಲು ಉಚಿತವಾದ ದೇಸೀ ಪದಗಳಿದ್ದವು.

4. ಸಾಮಂತ ಅರಸರ ಆಡಳಿತ ವಿಧಾನಕ್ಕೆ ಸಂಬಂಧಿಸಿದಂತೆ ಸೊಗಸಾದ ಆಡಳಿತ ಪದಕೋಶವನ್ನು ಸಿದ್ಧಮಾಡಲು ಸಾಧ್ಯವಿದೆ. ಆಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಮಂಡಲ, ನಾಡು, ಊರು, ಎಂಬ ದೇಸೀ ಮಾದರಿಯ ವರ್ಗೀಕರಣ ಇತ್ತು. ಈ ಮಂಡಲೇಶ್ವರರು ಮಾಡುವ ಹೊಸ ಶಾಸನಗಳನ್ನು 'ಆಣೆ'ಗಳೆಂದು ಕರೆಯಲಾಗುತ್ತಿತ್ತು. 1046ರಲ್ಲಿ ಅರಸನೊಬ್ಬ ಮಾಡಿದ ಆಣೆ ಇಂತಿದೆ;

"ಬಯ್ದಂಗೆ ಪಣಮುವೊಂದು, ಪೊಯ್ದಂಗೆ ಆರು, ಪಣಮಿರಿಯೆ ಪನ್ನೆರಡು, ಪಣಂ ಪಾಯರದೆ ಸುರಿಗೆಗೆತ್ತೀರಡೆಯ್ಪಿದವಂಗೆಂಟು, ಪಣವೇದಂಡಂ ನಿರುತಂ, ಆಣೆಯನು ಮಿಕ್ಕು ಪೋದಡೆ ಮಾಣದೆ ಕೊಟ್ಟೆರಡು ಪಣಮಿವಂ ತೆರೆಗಿತ್ತಂ ಕ್ಷೋಣಿಪತಿ ಮಿಕ್ಕದಂಡಂ ಜಾಣೆ ನರಸಿಂಗಿದೂರ್ಗೆ ಮಾಡಿದ ಸಮಯಂ". ಆಡಳಿತ ಕನ್ನಡದ ಶೈಲಿಯನ್ನು 'ತಾಂತ್ರಿಕ ಶೈಲಿ' ಎಂದು ಕರೆಯಬಹುದಾದರೆ, ಆ ತಾಂತ್ರಿಕ ಶೈಲಿಯ ಲಕ್ಷಣವಾದ ನಿಖರತೆ, ಸ್ಪಷ್ಟತೆ, ಸರಳತೆ, ಸಂಕ್ಷಿಪ್ತತೆ, ರೂಢಿಗತತೆ—ಇವೆಲ್ಲವೂ ಇದರಲ್ಲಿದೆ.

5. ಪಟ್ಟಣಗಳ ಆಡಳಿತ, ಅಗ್ರಹಾರಗಳ ಆಡಳಿತ ಮತ್ತು ಹಳ್ಳಿಗಳ ಆಡಳಿತದಲ್ಲಿ ಜನರೇ ಹತ್ತಿರದಲ್ಲಿರುವುದರಿಂದ ಅಲ್ಲಿ ಕನ್ನಡದ ಬಳಕೆ ಅನಿವಾರ್ಯವಾಗಿತ್ತು. ಜನರಿಗೆ ತಿಳಿಯುವಂತೆ ಹೇಳುವುದು ಆಡಳಿತದ ಯಶಸ್ವಿಯ ದೃಷ್ಟಿಯಿಂದ ಅಗತ್ಯವೂ ಆಗಿತ್ತು. ದೇಣವೆ ಎಂಬ ಅಗ್ರಹಾರದ ಗಡಿಗಳನ್ನು ತಿಳಿಸುವ ರೀತಿ ಈ ಕೆಳಗಿನಂತಿದೆ:

"............ ಅಲ್ಲಿಂ ಮೂಡಲ್ ಕಲ್ಲ ಪುಂಜಿಗೆಯ ಮೋಗಣ ಸೀಲೆ ಅಲ್ಲಿಂ ಬಸುರಿಕೊಡಮಾವಿನೋರವೆಯ ತೆಂಕಣ ದಂಡೆಯ ಸಸಿಯಾಲದ ನಟ್ಟಕಲ್ । ಅಲ್ಲಿಂ ಮೂಡಲ್ ತೆರೆಯೇರಿಯ ಮೋಗಣಾಲದ ನಟ್ಟಕಲ್ । ಅಲ್ಲಿಂ ಮೂಡಲ್ ಭಂಡಿದಾರಿ ವಿಡಿದು ತೆಂಕಲೊತ್ತಿ ಮೂಡಲಿರ್ದ ಕಲ್ಲುಜದಾಲದ ನಟ್ಟಕಲ್ । ಅಲ್ಲಿಂ ಮೂಡಲ್ ಮೋಡೆಯ ದಂಡೆ ವಿಡಿದಿರ್ದ ಬೆಟ್ಟದ ನಟ್ಟಕಲ್ । ಅಲ್ಲಿಂ ಮೂಡಲ್ ತಲ್ಪುಂಜದ ಮೋಗಣ ಸೀಲೆ । ಅಲ್ಲಿಂ ಮೂಡಲೊತ್ತಿ ತೆಂಕಲ್ ತಲ್ಪುಂಜ । ಅಲ್ಲಿಂ ಮೂಡಲೊತ್ತಿ ತೆಂಕಲ್ ಪಿರಿಯ ತಲ್ಲೋರೆ । ಅಲ್ಲಿಯ ತೆಂಕಲ್ ನಾಣವೆಯ ಪಡುವಣ ಬೆಟ್ಟದ ಪಡುವಣೇರಿ ...." (Journal of the Bombay Branch of the Royal

Asiatic Society IX : 310) ಶಾಸ್ತ್ರೀಯವಾದ ಬರೆಹದ ಅತ್ಯುತ್ತಮ ಮಾದರಿಯಿದು.

6. ಒಕ್ಕಲು, ಪ್ರಜೆ, ಹತ್ತುಸಮಸ್ತರು, ಗೌಡ, ಆಯಗಾರ, ಬುದ್ಧಿವಂತ, ಮೊದಲಾದ ಅಸಂಖ್ಯ ಪದಗಳು ಕನ್ನಡನಾಡಿನ ಐತಿಹಾಸಿಕ ಆಡಳಿತ ಪದಗಳು. ಆರ್ಥಿಕ ಚಟುವಟಿಕೆ, ಸಾಮಾಜಿಕ ಚಟುವಟಿಕೆಗಳು ಕನ್ನಡದಲ್ಲಿಯೇ ನಡೆಯುತ್ತಿತ್ತಲ್ಲದೆ ಬೇರೆ ಭಾಷೆಗೆ ಅಲ್ಲಿ ಅವಕಾಶ ಇರಲಿಲ್ಲ. ನ್ಯಾಯ ವಿತರಣೆಯ ಕೆಲಸವೂ ಕನ್ನಡದಲ್ಲಿತ್ತು.

ಹೀಗೆ ಕನ್ನಡ ಸಂಸ್ಕೃತಿಯ ಜೀವಶಕ್ತಿಯಾಗಿ ಕನ್ನಡವು ಕೆಲಸ ನಿರ್ವಹಿಸಿದೆ. ಈ ನಾಡಿನ ಪ್ರಖ್ಯಾತ ಅರಸುಮನೆತನಗಳಾದ ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚುರಿಗಳು, ಹೊಯ್ಸಳರು, ಸೇವುಣರು, ವಿಜಯನಗರದ ಅರಸರು, ಕೆಳದಿನಾಯಕರು, ಮೈಸೂರು ಒಡೆಯರು ಮತ್ತು ಶ್ರೀರಂಗಪಟ್ಟಣದ ಅರಸರು ಕನ್ನಡದಲ್ಲಿಯೇ ಆಡಳಿತ ನಡೆಸಿದರು. ಶ್ರವಣಬೆಳಗೊಳದ ಭವ್ಯವಾದ ಗೊಮ್ಮಟೇಶ್ವರ, ಬೇಲೂರು-ಹಳೇಬೀಡಿನ ಶಿಲ್ಪಕಲಾ ಸೌಂದರ್ಯ, 12ನೆಯ ಶತಮಾನದ ಐತಿಹಾಸಿಕ ಕ್ರಾಂತಿ—ಇವೆಲ್ಲವೂ ಸಾಧ್ಯವಾದದ್ದು ದೇಶೀ ಆಡಳಿತದಲ್ಲಿ ಮತ್ತು ಕನ್ನಡದಲ್ಲಿ. ಆ ಕಾಲದ ಒಟ್ಟಾರೆ ವ್ಯವಸ್ಥೆಯು ಪಾಳೇಗಾರೀ ಸ್ವರೂಪದಲ್ಲಿದ್ದರೂ, ಕನ್ನಡದ ಮೂಲಕ ಜನರಿಗೆ ಹತ್ತಿರವಾಗಿತ್ತು.

ಪಾಳೇಗಾರಿ ವ್ಯವಸ್ಥೆಯು ಕನ್ನಡದ ಮೂಲಕ ಬೇರುಬಿಟ್ಟಿರುವ ಹೊತ್ತಿನಲ್ಲಿಯೇ ನಮ್ಮಲ್ಲಿಯ ಅನೇಕ ಜಾತಿಗಳು ತಮ್ಮದೇ ಆದ ಒಳಾಡಳಿತ ಪದ್ಧತಿಯನ್ನು ಹೊಂದಿದ್ದವು. ಈ ಒಳಾಡಳಿತ ಪದ್ಧತಿಯ ವ್ಯವಹಾರವೂ ಕನ್ನಡದಲ್ಲಿಯೇ ಇತ್ತೆಂಬುದನ್ನು ಗಮನಿಸಬೇಕು. ಅಂಥ ಒಳಾಡಳಿತ ವ್ಯವಸ್ಥೆಯ ಎರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

1. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯಪರಿಸರದಲ್ಲಿ ವಾಸಿಸುತ್ತಿರುವ ಗೌಡ ಜನಾಂಗದಲ್ಲಿ ಕುಟುಂಬವು ಪ್ರಾಥಮಿಕ ಘಟಕವಾಗಿದೆ. ಇಂಥ ಹಲವು ಕುಟುಂಬಗಳನ್ನು ನೋಡಿಕೊಳ್ಳಲು ಒಬ್ಬ '**ಊರುಗೌಡ**' ಇರುತ್ತಾನೆ. ಈ ಊರುಗೌಡನ ಅನುಪಸ್ಥಿತಿಯಲ್ಲಿ ಅವನ ಕೆಲಸವನ್ನು ನಿರ್ವಹಿಸಲು ಒಬ್ಬ '**ಒತ್ತುಗೌಡ**' ಇರುತ್ತಾನೆ. ಇವನಿಗೆ '**ಬುದ್ಧಿವಂತ**' ಎಂದೂ ಹೆಸರಿದೆ. ಇಂಥ ನಾಲ್ಕರಿಂದ ಆರು ಮಂದಿ ಊರುಗೌಡರಿಗೆ ಒಬ್ಬ '**ಮಾಗಣೆಗೌಡ**' ಇರುತ್ತಾನೆ. ಇಂಥ ಒಂಬತ್ತು 'ಮಾಗಣೆಗೌಡ'ರನ್ನು ನೋಡಿಕೊಳ್ಳಲು ಒಬ್ಬ '**ಕಟ್ಟೆಮನೆಗೌಡ**' ಇರುತ್ತಾನೆ. ಕಟ್ಟೆಮನೆಗೌಡನು ಶೃಂಗೇರಿಗೂ, ಶೃಂಗೇರಿಯು ಅರಸುಮನೆತನದೊಂದಿಗೂ ಸಂಬಂಧ ಹೊಂದಿರುತ್ತದೆ. (ವಿವರಗಳಿಗೆ ಚಿತ್ರ 1 ನೋಡಿರಿ). ಇವರೆಲ್ಲರ ಮಧ್ಯದ ಆಡಳಿತಾತ್ಮಕ ಸಂಬಂಧಗಳೆಲ್ಲವೂ ಮೊನ್ನೆಮೊನ್ನೆವರೆಗೆ ಕನ್ನಡದಲ್ಲಿಯೇ ಇತ್ತು.[1]

2. ದಲಿತರಲ್ಲಿ ಒಂದು ಪ್ರಭೇಧವಾದ ಪೈಲರಲ್ಲಿ 'ಮುಕಾರ್ವೆ' ಮತ್ತು 'ಮೂಂಡಿಕರೆ' ಎಂಬೆರಡು ಸ್ಥಾನಗಳಿದ್ದು ಅವರ ಮಧ್ಯದ ಸಂಬಂಧವೆಲ್ಲವೂ 'ತುಳು'ವಿನಲ್ಲಿ ನಡೆಯುತ್ತದೆ.[2] ಕರ್ನಾಟಕದಾದ್ಯಂತ ಹರಡಿಕೊಂಡಿರುವ ಜೋಗಿ ಜನಾಂಗದವರಲ್ಲಿ ಕೊಲ್ಕಾರರು, ಬುದ್ಧಿವಂತರು; ಯಜಮಾನರು, ಗುರುಗಳೆಂಬ ಸ್ಥಾನಗಳಿವೆ. ಅವರ ಮಧ್ಯದ ವ್ಯವಹಾರವೆಲ್ಲವೂ ಕನ್ನಡದಲ್ಲಿ ನಡೆಯುತ್ತಿತ್ತು.[3]

ಹೀಗೆ ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆ ಸಮಗ್ರವಾಗಿ ದೇಸೀ ವಿನ್ಯಾಸ ವೊಂದನ್ನು ಹೊಂದಿದ್ದು ಕನ್ನಡವೇ ಅದರ ಸತ್ತ್ವವಾಗಿತ್ತು. ದೇಸೀ ಅವಶ್ಯಕತೆಗಳಿಗೆ ಅನುಗುಣವಾಗಿ ಅದು ರೂಪುಗೊಂಡದ್ದರಿಂದ, ಜನರ ಆಶೋತ್ತರಗಳೊಂದಿಗೆ ಸಂವಾದಿಸುವ ಗುಣವನ್ನು ಮೈಗೂಡಿಸಿಕೊಂಡಿತ್ತು.


ದೇಸೀ ಆಡಳಿತ ವಿನ್ಯಾಸದ ನಾಶ ಮತ್ತು ವಿದೇಶೀ ಆಡಳಿತದ ರಚನೀಕರಣ

ವಿಜಯನಗರದ ಪತನದ ಅನಂತರ ಕರ್ನಾಟಕವು ದೇಸೀ ಆಡಳಿತದ ವಿನ್ಯಾಸ ವನ್ನು ಕಳೆದುಕೊಳ್ಳುತ್ತಾ ಬಂತು. ಮುಸ್ಲಿಂ ಆಡಳಿತಗಾರರ ಕಾಲಾವಧಿಯಲ್ಲಿ ಅದಕ್ಕೆ ಪರ್ಷಿಯನ್ ಭಾಷೆಯ ಸಂಪರ್ಕ ಒದಗಿತು. ಮುಸ್ಲಿಂ ಅರಸರ ರಾಜ್ಯ ವ್ಯವಹಾರ ವೆಲ್ಲವೂ ಕನ್ನಡದಲ್ಲಿಯೇ ನಡೆಯುತ್ತಿದ್ದರೂ, ಆಡಳಿತ ಮೇಲ್ಸ್ತರದಲ್ಲಿ ಪಾರ್ಸಿಯೇ ಬಳಕೆಯಲ್ಲಿತ್ತು. ಇದರಿಂದಾಗಿ ಈ ಕಾಲಾವಧಿಯಲ್ಲಿ ಒಂದು ಬಗೆಯ ಸಂಕೀರ್ಣ ಪರಿಸ್ಥಿತಿ ಉಂಟಾಯಿತು. ಮೆಕೆಂಜಿಯು ಸಂಗ್ರಹಿಸಿದ ಕೈಫಿಯತ್ತುಗಳಲ್ಲಿ ಮತ್ತು ಆಗಿನ ಅರಸರು ಹೊರಡಿಸಿದ 'ಹುಕುಂನಾಮೆ'ಗಳಲ್ಲಿ ಈ ಬಗೆಯ ಸಂಕೀರ್ಣ ವ್ಯವಸ್ಥೆಯ ಸ್ಪಷ್ಟ ಚಿತ್ರ ದೊರೆಯುತ್ತದೆ. ಅಸಲು, ಇನಾಮು, ಇಸವಿ, ಐನು, ಕಚೇರಿ, ಕರಾರು, ಕಲಮು, ಖಜಾನೆ, ಖಾಲಿ, ಖುದ್ದು, ಖುಲಾಸೆ, ಜವಾ, ಜರೂರು, ತಾಕೀತು, ನಿಗದಿ, ಫಿರ್ಯಾದೆ, ಮಾಫಿ, ವಗೈರೆ, ಹಕ್ಕು ಮೊದಲಾದ ಅರೇಬಿಕ್ ಪದಗಳೂ[4], ಅಂದಾಜು, ಉಮೇದು, ಕಾರುಭಾರು, ಜಮೀನು ಜರೂರು, ಜಾಗ, ಜಾಗೀರು, ಜಾಸ್ತಿ, ವರದಿ ಮೊದಲಾದ ಪರ್ಷಿಯನ್ ಪದಗಳೂ[5] ಆಡಳಿತ ಕೋಶಕ್ಕೆ ಸೇರಿಕೊಂಡವು. ಕನ್ನಡ ಮತ್ತು ವಿದೇಶಿ ಪದಗಳು ಸೇರಿಕೊಂಡ ವಾಕ್ಯಗಳು ರಾಜಕೀಯ ಸ್ಥಿತಿಯೊಂದಕ್ಕೆ ಸಂಕೇತವಾಗಿ ನಿಲ್ಲುತ್ತವೆ. 1799ರ ಶಾಸನವೊಂದರ ಸಾಲುಗಳಿವು :

> "ಕೂಲೂಸಪೇಟೆಯಾ ರಾಜೆ ಮಹಾರಾಜೆ ಸಾಹೇಬರವರ್ರು ತಮ್ಮ ದೋಸ್ತರಾದ ಕರ್ನಲ್ ಕೂಲೂಸ ಸಾಹೇಬರವರ ಹೆಸರಿನಲ್ಲಿ ಕಟ್ಟಿಸಿದರ್ರು"
>
> [ಉದ್ಧೃತ, ಜಯತೀರ್ಥ ರಾಜಪುರೋಹಿತ 1977 : 11].

ಮುಸ್ಲಿಂ ಅರಸರು ಆಡಳಿತದ ವಿನ್ಯಾಸವನ್ನು ಹಾಗೇ ಉಳಿಸಿಕೊಂಡು ಅದೇ ವಿನ್ಯಾಸಕ್ಕೆ ಹೊಸಪದಗಳನ್ನು ತುಂಬಿದರು. ಉದಾಹರಣೆಗೆ :

ಗೌಡರ ಒಳಾಡಳಿತ



ಚಿತ್ರ ಸಂಖ್ಯೆ 1

ಪ್ರಧಾನ ಮಂತ್ರಿಗೆ—ವಕೀಲ್-ಉಸ್-ಸುಲ್ತಾನತ್
ಅರ್ಥ ಮಂತ್ರಿ—ಅಮೀರ್-ಇ-ಜುಮ್ಲಾ
ವಿದೇಶ ಮಂತ್ರಿ—ವಜೀರ್-ಇ-ಕುಲ್ಲ್
ಲೆಕ್ಕಪತ್ರ ಬರೆವವನು—ನಾಜೀರ್
ನ್ಯಾಯಾಧೀಶ—ಸಾದರ್-ಇ-ಜಹಾನ್
ಸೇನಾ ಪ್ರಮುಖ—ಅಮೀರ್-ಉಲ್-ಉಮ್ರಾ

ಕನ್ನಡ ಪದಗಳು ನಾಶವಾಗುತ್ತಿರುವ ಸೂಚನೆ ಇಲ್ಲಿದೆ. ಆಳುವ ವರ್ಗವು ತನ್ನ ಆಶೋತ್ತರಗಳಿಗೆ ಅನುಗುಣವಾದ ಆಡಳಿತದ ಪದ್ಧತಿಯನ್ನು ಕಾರ್ಯರೂಪಕ್ಕೆ ತರುತ್ತದೆ. ಇದರ ಸ್ಪಷ್ಟ ರೂಪ ನಮಗೆ ಸಿಗುವುದು ಬ್ರಿಟಿಷ್ ವಸಾಹತೀಕರಣದ ಸಂದರ್ಭದಲ್ಲಿ. 1799ರಲ್ಲಿ ಶ್ರೀರಂಗಪಟ್ಟಣದ ಪತನವಾದ ಅನಂತರ ಮೈಸೂರು ಪ್ರಾಂತವು ನೇರವಾಗಿ ಬ್ರಿಟಿಷರ ಕೈಕೆಳಗೆ ಬಂತು. ಬ್ರಿಟಿಷರು ಆಳತೊಡಗಿದ ತಕ್ಷಣ ಮಾಡಿದ ಕೆಲಸವೆಂದರೆ, ದೇಸೀ ಆಡಳಿತ ವಿಧಾನವನ್ನು ನಾಶಮಾಡಿ, ತಮ್ಮ ರಾಜಕೀಯ ಅಗತ್ಯಕ್ಕನುಗುಣವಾದ ಒಂದು ಆಡಳಿತ ವಿನ್ಯಾಸವನ್ನು ಜಾರಿಗೆ ತಂದದ್ದು. ಈ ಆಡಳಿತ ಕ್ರಮವು ಯಶಸ್ವಿಯಾಗಲು ಬೇಕಾದ ಇಂಗ್ಲಿಷ್ ಶಿಕ್ಷಣ ಕ್ರಮವನ್ನು 1835 ರಿಂದ ಬಳಕೆಗೆ ತರಲಾಯಿತು. ಕಂಪನಿಯ ಆಡಳಿತಯಂತ್ರ ಸುಸೂತ್ರವಾಗಿ ನಡೆಯಲು ಇಂಗ್ಲಿಷ್ ಬಲ್ಲ ಕಾರಕೂನರ ಸೃಷ್ಟಿ ಜೋರಾಗಿಯೇ ನಡೆಯಿತು. ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳು 'ಇಂಗ್ಲಿಷ್ ಕಾರಕೂನ ತಯಾರಿಕಾ ಕೇಂದ್ರ'ಗಳಾದುವು. ತಿಂಗಳ ಸಂಬಳವನ್ನು ನಿಯತ್ತಾಗಿ ಪಡೆವ ಈ ಮಂದಿಗಳು ಉದೀಯಮಾನ ಮಧ್ಯಮ ವರ್ಗದ ಜೀವಿಗಳಾಗಿಬಿಟ್ಟು, ದೇಶೀಯರಿಂದ ಬೇರ್ಪಟ್ಟರು, ಬಹುಮಟ್ಟಿಗೆ ಆಳುವ ವರ್ಗವಾದ ಬ್ರಿಟಿಷರೊಂದಿಗೆ ಸ್ನೇಹಭಾವದಿಂದ ಇದ್ದರು. ಬ್ರಿಟಿಷರ ರಾಜಕೀಯ ಕಾರಸ್ಥಾನದ ಈ ಕುಟಿಲ ಮುಖವು ಅಪಾರ ಯಶಸ್ಸನ್ನು ಕಂಡಿತು. ದೇಶೀಯ ಜನರೇ ದೇಶೀಯ ಭಾಷೆಗಳನ್ನು ದ್ವೇಷಿಸುವ ಹಂತಕ್ಕೆ ಇದು ಬೆಳೆಯಿತು.

ಏನಿದ್ದರೂ ಬ್ರಿಟಿಷರು ತಮ್ಮ ಆಶೋತ್ತರಗಳಿಗೆ ಅನುಗುಣವಾದ ವಸಾಹತು ಆಡಳಿತವೊಂದನ್ನು ಈ ದೇಶದಲ್ಲಿ ಬಳಕೆಗೆ ತಂದರು. ಕರ್ನಾಟಕದಲ್ಲಿ ಇದರ ಚರಿತ್ರೆಯು 1799ರಲ್ಲಿ ಮೈಸೂರಿನ ಕೃಷ್ಣರಾಜರ ಆಸ್ಥಾನದಲ್ಲಿ ನೇಮಿಸಲ್ಪಟ್ಟ 'ರೆಸಿಡೆಂಟ್'ನಿಂದ (Resident) ಆರಂಭವಾಗುತ್ತದೆ. 1831ರಷ್ಟು ಮುಂದೆ ಬಂದಾಗ 'ಕಮಿಶನರ್' ಬರುತ್ತಾನೆ, ಮಾರ್ಕ್ ಕಬ್ಬನ್ ಮತ್ತು ಲ್ಯೂವಿನ್ ಬೌರಿಂಗ್ (Cubbon and Bouring) ಅಂಥ ಆರಂಭಿಕ ಕಮಿಶನರುಗಳು. ಮುಂದೆ ಕಬ್ಬನ್ ಮಹಾಶಯನು ಸಂಸ್ಥಾನವನ್ನು ನಾಲ್ಕು ಭಾಗಮಾಡಿ ಅಲ್ಲಿಗೆ 'ಸೂಪರಿಂಟೆಂಡೆಂಟ್' (Superintendent) ಗಳನ್ನು ನೇಮಕಮಾಡಿದನು. ಬೌರಿಂಗ್‌ನು 'ಡೆಪ್ಯುಟಿ ಕಮಿಷನರ್'ಗಳನ್ನು ತಂದನು. ಹೀಗೆ ಬೆಳೆದುಬಂದ

ಆಡಳಿತ ವ್ಯವಸ್ಥೆಯಲ್ಲಿ 'Legislative Council' 1895ರಲ್ಲಿ ಕಾಣಿಸಿಕೊಂಡಿತು. ಅದೇ ವರುಷ 'Revenue Commissioner' ಕಾಣಿಸಿಕೊಂಡ. ಹಂತಹಂತವಾಗಿ ವಸಾಹತು ಆಡಳಿತ ಇಡೀ ದೇಶವನ್ನು ಅತ್ಯಂತ ವ್ಯವಸ್ಥಿತವಾಗಿ ಆಕ್ರಮಿಸಿಕೊಂಡಿತು. ಆಳುವ ವರ್ಗ ಅದನ್ನು ಮಾಡಿಯೇ ಮಾಡುತ್ತದೆ.

ಹೀಗಿದ್ದರೂ ಆಳಿಸಿಕೊಳ್ಳುವ ವರ್ಗವು 'ದೇಶೀಯವೇ'. ಆದುದರಿಂದ ಕೆಳಮಟ್ಟದಲ್ಲಿಯಾದರೂ ಕನ್ನಡವನ್ನು ಬಳಸಲೇಬೇಕಾದ ಒತ್ತಡ ಬ್ರಿಟಿಷರಿಗಿತ್ತು. ಆ ಹಂತದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಮಿಶ್ರಿತವಾದ ಒಂದು ಶೈಲಿ ರೂಢಿಗೆ ಬಂತು. ಇಲ್ಲಿ ವಾಕ್ಯಗಳು ಇಂಗ್ಲಿಷ್‌ನಲ್ಲಿ ಸಿದ್ಧವಾಗಿ ಅನಂತರ ಕನ್ನಡವಾಗಲು ಹವಣಿಸುತ್ತಿದ್ದವು. ಉದಾಹರಣೆಗೆ :

1. 1858ರಲ್ಲಿ ಪ್ರಕಟಿಸಿದ ಇಸ್ತಿಹಾರನಾಮೆಯೊಂದರಲ್ಲಿ ಸರಕಾರದ ಉದ್ಯೋಗಕ್ಕಾಗಿ ಇರುವ ಪರೀಕ್ಷೆಗೆ ಕುಳಿತುಕೊಳ್ಳಬೇಕಾದವರಿಗೆ ಇರಬೇಕಾದ ಅರ್ಹತೆಯನ್ನು ಈ ರೀತಿಯಲ್ಲಿ ವಿವರಿಸಿತು.

"........ಫೋರ್ಟ್ ಸೇಂಟ್ ಜಾರ್ಜ್ ೧೮೫೮ನೇ ಇಸವಿ ಮಾರ್ಚಿ ತಿಂಗಳು 4ನೇ ತಾರೀಕಿನ ಯಿಸ್ತ್ಯಾರು ನಾಮೆಯ ವಿಷಯದಲ್ಲಿ ಮದ್ರಾಸ್ ಅನ್‌ಕಾವೆನಾಂಟೆಡ್ ಸಿವಿಲ್ ಸರ್ವಿಸ್‌ಯೆಂಬ ನವುಕರಿಯಲ್ಲಿ ಸರ್ಕಾರದ ಉದ್ಯೋಗದ ಬಗ್ಗೆ ಉಮೇದುವಾರಿಗಳಾಗಿರುವ ಸಮಸ್ತ ಜನರಿಗೂ ಇದರ ಮೂಲಕವಾಗಿ ತಿಳಿಸುವುದುಯೇನೆಂದರೆ

1859ನೇ ಇಸವಿ ಪ್ರಥಮ ಅರ್ಥ ಸಂವತ್ಸರೀಯ ಪರೀಕ್ಷೆ ಕಲೆಕ್ಟರೇಟ್ ಎಂಬ ಪ್ರತಿ ಜಿಲ್ಲಾ ವಿನಾ ಹೇಡ್‌ಕ್ವಾರ್ಟರ್ಸ್‌ಯೆಂಬ ಷಹರಿನಲ್ಲೂ ಮದ್ರಾಸು ರಾಜಧಾನಿಯಲ್ಲೂ ಸಹ ಬರುವ ಜನವರಿ ತಿಂಗಳು 31ನೇ ತಾರೀಖಿನಲ್ಲಿ ನಡೆಯುತ್ತದೆ........"

ಈ ಚಿಕ್ಕ ಪ್ರಕಟನೆಯಲ್ಲಿ ಸುಮಾರು 36 ಇಂಗ್ಲಿಷ್ ಪದಗಳಿವೆ. ಮೊದಲು ಇಂಗ್ಲಿಷಿನಲ್ಲಿ ಬರೆಯಲಾದ ಈ ಪತ್ರವನ್ನು ಅನಂತರ ಕನ್ನಡಕ್ಕೆ ಅನುವಾದಿಸಲಾಯಿತು.

2. 1865ರ ಗೆಜೆಟ್ ಪ್ರಕಟಣೆಯೊಂದರಲ್ಲಿ—

"........ಅಂಥಾ ಅರ್ಜಿಗಳನ್ನೆಲಾ ಗವರನ್‌ಮೆಂಟಿನ ಲೆಜಿಸ್ಲೇಟಿವ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿಗೆ ಕಳುಹಿಸತಕ್ಕದ್ದು......"

ಇಲ್ಲಿನ ಪ್ರತ್ಯಯಗಳು ಮಾತ್ರ ಕನ್ನಡದಲ್ಲಿವೆ. ಉಳಿದಂತೆ ಎಲ್ಲವೂ ಇಂಗ್ಲಿಷಿನಲ್ಲಿಯೇ ಇದೆ.

3. 1877ರ ಗೆಜೆಟ್ ಪ್ರಕಟಣೆಯೊಂದರಲ್ಲಿ—

"ಸರ್ಕ್ಯುಲರ್ ನಂ. 1326, ತಾರೀಕು 26ನೇ ಜುಲೈ 1877.

ಡಿಸ್ಟ್ರಿಕ್ಟ್ ವ ತಾಲ್ಲೂಕು ಟ್ರೆಜರೀ ಇನ್‌ಚಾರ್ಜ್ ಆಫೀಸರ್‌ಗಳಿಗೆ—ಸನ್ 1874ನೇ ಸೆಪ್ಟಂಬರ್ 4ನೇ ಮರ್ಕುಂ 1155ನೇ ನಂಬರ್‌ವುಳ್ಳ ಈ ಆಫೀಸ್ ಸರ್ಕ್ಯುಲರ್ ವಿಷಯವನ್ನು ಕುರಿತು ಡೆಪ್ಯುಟಿ ಅಕೌಂಟೆಂಟ್ ಜನರಲ್‌ರವರು

ಟ್ರೆಜರೀಗಳ ಇನ್‌ಚಾರ್ಜ್ ದರೋಬಸ್ತು ಆಫೀಸರ್‌ಗಳಿಗೂ ಜ್ಞಾಪಕಪಡಿಸುವುದೇನೆಂದರೆ......"

ಇಲ್ಲಿಯೂ ಇಂಗ್ಲಿಷ್ ಪದಗಳೇ ವಿಜೃಂಭಿಸಿರುವುದು ಸ್ಪಷ್ಟ.[6] ಆಳುವ ವರ್ಗವು ಆಂಗ್ಲ ಭಾಷೆಯನ್ನು ಮಾತೃಭಾಷೆಯನ್ನಾಗಿ ಉಳ್ಳಾಗ ಇದು ಅತ್ಯಂತ ಸಹಜವಾದ ಬೆಳವಣಿಗೆಯಾಗುತ್ತದೆ. ಬ್ರಿಟಿಷರ ಆಡಳಿತಕಾಲದಲ್ಲಿ ಇಂಥ ಆಡಳಿತ ಭಾಷೆಯೊಂದು ಸಿದ್ಧವಾಯಿತು. ಆಂಗ್ಲೀಕರಣದ ಕನಸುಕಂಡ ಮೆಕಾಲೆ, ಟ್ರೆವಿಲಿಯನ್‌ರಂಥವರಿಗೆ ಇದರಿಂದ ಸಂತೋಷವೂ ಆಗಿರಬೇಕು. ಈ ಆಡಳಿತ ಪದ್ಧತಿಗೆ ಪೂರಕವಾದ ಇಂಗ್ಲಿಷ್ ಶಿಕ್ಷಣ ಪದ್ಧತಿಯು ಜಾರಿಗೆ ಬಂದದ್ದನ್ನು ಹಿಂದೆಯೇ ಸೂಚಿಸಲಾಗಿದೆ. ಇವುಗಳ ಮೂಲಕ ದೇಸೀ ಆಡಳಿತವೊಂದನ್ನು ಪೂರ್ಣವಾಗಿ ನಿಷ್ಕ್ರಿಯಗೊಳಿಸಲಾಯಿತು.

ಸ್ವಾತಂತ್ರ್ಯೋತ್ತರ ಕಾಲ—ವಸಾಹತು ಆಡಳಿತದ ಮುಂದರಿಕೆ

ಬ್ರಿಟಿಷರನ್ನು ಭಾರತದಿಂದ ಹೊರದಬ್ಬಿದ ಮೇಲೆ, ನಾವು ನಮ್ಮ ಅಗತ್ಯಗಳಿಗೆ ಅನುಗುಣವಾದ ದೇಸೀ ಆಡಳಿತ ಕ್ರಮವೊಂದನ್ನು ಪುನರ್ ನಿರ್ಮಿಸಿಕೊಳ್ಳದಿರುವುದೇ ನಮ್ಮೆಲ್ಲ ಆಡಳಿತಾತ್ಮಕ ಸಮಸ್ಯೆಗಳ ಮೂಲ ಎಂಬುದು ನನ್ನ ಗಟ್ಟಿಯಾದ ನಂಬಿಕೆ. ಬ್ರಿಟಿಷ್ ಪೂರ್ವದ ಭಾರತದಲ್ಲಿ ದೇಸೀ ಆಡಳಿತವಿತ್ತು. ಬ್ರಿಟಿಷರ ಕಾಲದಲ್ಲಿ ವಸಾಹತು ಆಡಳಿತವಿತ್ತು. ಬ್ರಿಟಿಷರು ಹೋದ ಮೇಲೆಯೂ ಇರುವುದು ವಸಾಹತು ಆಡಳಿತ ಕ್ರಮವೇ. ನಮಗೆ ಸ್ವಾತಂತ್ರ್ಯ ಬಂದ ದಿನಗಳಲ್ಲೇ ಮಾಡಬೇಕಾಗಿದ್ದ ಅಗತ್ಯದ ಕೆಲಸವದು. ದೇಶದ ರಾಜಕೀಯ ದಿಕ್ಕು ಬದಲಾದಾಗ ಆಡಳಿತದ ದಿಕ್ಕು ಬದಲಾಗಬೇಡವೇ? ಬ್ರಿಟಿಷರಿಗೆ ಕೇವಲ ಆಳುವುದು ಹೇಗೆ ಮುಖ್ಯವಾಯಿತೋ ಹಾಗೇ ಆನಂತರ ಬಂದ ಅಧಿಕಾರಿಗಳಿಗೂ ಆಳುವುದೇ ಮುಖ್ಯವಾಯಿತೇ? ದೇಶದ ಬಡಜನರನ್ನು ಹೊಸ ರಾಜಕೀಯ ಪರಿಕಲ್ಪನೆಯ ಕನಸುಗಳಲ್ಲಿ ಪಾಲುದಾರರನ್ನಾಗಿಸುವುದು ಇವರಿಗೆ ಅಗತ್ಯವೆಂದು ಕಾಣಲಿಲ್ಲವೇ? ಆಳುವವರ ತೊಗಲಿನ ಬಣ್ಣ ಬದಲಾದದ್ದು ಮಾತ್ರ ನಮಗೆಲ್ಲ ಸಾಕಾಯಿತೇ? ಜಾಂಬಿಯಾ, ಕೆನ್ಯಾ, ಬೋಟ್ಸ್‌ವಾನಾ, ಕ್ಯೂಬಾ, ಮೊದಲಾದ ದೇಶಗಳಿಗೆ ಸಾಧ್ಯವಾದದ್ದು, ಭಾರತಕ್ಕೆ ಯಾಕೆ ಸಾಧ್ಯವಾಗಲಿಲ್ಲ? ಇವೆಲ್ಲವನ್ನು ನೋಡಿದಾಗ ಒಂದು ವಿಚಾರ ಖಚಿತವಾಗುತ್ತದೆ: ಆಡಳಿತ ಭಾಷೆಯಾಗಿ ಕನ್ನಡವು ಎದಿರುಸುತ್ತಿರುವ ಸಮಸ್ಯೆಯ ಮೂಲ ನೆಲೆಗಳು, ಸ್ವಾತಂತ್ರ್ಯೋತ್ತರ ಭಾರತದಲ್ಲೂ ಮುಂದುವರಿದುಕೊಂಡು ಬರುತ್ತಿರುವ ವಸಾಹತು ಆಡಳಿತ ಪದ್ಧತಿಯಲ್ಲಿದೆ. ಹಾಗಾದುದರಿಂದಲೇ ಇಂಗ್ಲಿಷಿನಲ್ಲಿ ಯೋಚಿಸಿ ಕನ್ನಡಕ್ಕೆ ಅನುವಾದಿಸುವ ಪದ್ಧತಿ ನಮಗೆ ಅನಿವಾರ್ಯವಾಗಿದೆ. ವಾಸ್ತವ ತಿರುಗು–ಮುರುಗಾಗಬೇಕಿತ್ತು. ಕನ್ನಡದಲ್ಲಿ ಯೋಚಿಸಿ ಇಂಗ್ಲಿಷಿಗೆ ಅನುವಾದಿಸುವಂತಾಗಬೇಕಿತ್ತು. ಹಾಗೆ ಆಗಲು ದೇಸೀ ಆಡಳಿತ ವಿನ್ಯಾಸವೊಂದನ್ನು ನಾವು ರೂಪಿಸಿಕೊಳ್ಳ

ಬೇಕಾಗುತ್ತದೆ. ಅದು ನಮ್ಮಿಂದ ಸಾಧ್ಯವಿಲ್ಲ ಎಂದಾದರೆ, ಅಲ್ಲಿಯವರೆಗೆ ನಾವು ಈಗಣ ಇಂಗ್ಲಿಷ್ ಮರ್ಜಿಯನ್ನೇ ಸ್ವೀಕರಿಸಬೇಕಾಗುತ್ತದೆ. ಅಂದರೆ ಇಂದಿನ ಸಮಸ್ಯೆಯು ಕೇವಲ ಪದಗಳದ್ದಲ್ಲ, ಬದಲು ಪದಗಳನ್ನು ನಿರ್ಮಾಣಮಾಡುವ ವ್ಯವಸ್ಥೆಯದ್ದು.

ಬ್ರಿಟಿಷ್ ಪೂರ್ವ ಆಡಳಿತ ವ್ಯವಸ್ಥೆಯು ಫ್ಯೂಡಲ್ ಆಗಿದ್ದುದು ಸ್ಪಷ್ಟ. ಆ ನೆಲೆಯಲ್ಲಿಯೇ ಅದು ಜನಾನುರಾಗವನ್ನು ಪಡೆಯಲು ಬದ್ಧವಾಗಿತ್ತು. 1811ರ ಸುಮಾರಿಗೆ ಕೊಡಗನ್ನು ಆಳುತ್ತಿದ್ದ ಲಿಂಗರಾಜನು ತನ್ನ ಆಡಳಿತವನ್ನು ಬಲಪಡಿಸಲು 54 'ಹುಕುಂ'ಗಳನ್ನು ಹೊರಡಿಸಿದ. ಅವು ಇಂದು 'ಲಿಂಗರಾಜನ ಹುಕುಂ ನಾಮೆ' ಎಂದು ಪ್ರಸಿದ್ಧವಾಗಿವೆ.[7] ಅದರ ಪ್ರಕಾರ ಅರಸನ ಅಧಿಕಾರಿಗಳು ತಮ್ಮ ಕಚೇರಿಯನ್ನು ಪೂರ್ವಾಹ್ನ 5.30ಕ್ಕೆ ತೆರೆಯಬೇಕಾಗಿತ್ತು. ಬೆಳಗ್ಗೆ 8.30ರ ವರೆಗೆ ರೈತರಿಗೆ ಸಂಬಂಧಿಸಿದ ಕೆಲಸಮಾಡುವ ಅವರು ಅನಂತರ ಸಾಯಂಕಾಲ 6 ಗಂಟೆಯಿಂದ ರಾತ್ರಿ ಒಂಬತ್ತರವರೆಗೆ ಕೆಲಸಮಾಡಬೇಕಾಗಿತ್ತು. ಈ ಸಮಯದಲ್ಲಿ ರೈತರು ಅವರನ್ನು ಭೇಟಿಮಾಡಬೇಕಾಗಿತ್ತು. ಇಲ್ಲಿ ಅರಸನ ಉದ್ದೇಶವು ಸ್ಪಷ್ಟ. ಹಗಲು ಹೊತ್ತಿನಲ್ಲಿ ತಮ್ಮ ಕೃಷಿಕೆಲಸ ಮಾಡುವ ರೈತನು, ತನ್ನ ಬಿಡುವಿನ ವೇಳೆಯಾದ ಪೂರ್ವಾಹ್ನ ಮತ್ತು ಸಾಯಂಕಾಲಗಳಲ್ಲಿ ಅಧಿಕಾರಿಗಳನ್ನು ಭೇಟಿಮಾಡಲು ಅವಕಾಶವಿತ್ತು. ಇದರಿಂದ ರೈತನ ದೈನಂದಿನ ಕೃಷಿಕೆಲಸಗಳಿಗೆ ಏನೂ ತೊಂದರೆಯಾಗುತ್ತಿರಲಿಲ್ಲ. ಬ್ರಿಟಿಷರು ಈ ವ್ಯವಸ್ಥೆಯನ್ನು ಬದಲಾಯಿಸಿ ತಮಗೆ ಅಗತ್ಯವಾದ ಕಚೇರಿ ಸಮಯವನ್ನು ನಿಗದಿಮಾಡಿದರು. ಏಕೆಂದರೆ ಬ್ರಿಟಿಷರಿಗೆ ಅಂತಿಮವಾಗಿ ಭಾರತೀಯ ರೈತರ ಹಿತರಕ್ಷಣೆ ಮಾಡಬೇಕೆಂಬ ಉದ್ದೇಶವೇನೂ ಇರಲಿಲ್ಲ. ಅದೇ ಆಡಳಿತ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುವ ಇಂದಿನ ಅಧಿಕಾರಿಗಳಿಗೆ ಜನರ ಹಿತದೃಷ್ಟಿಯ ಕಡೆಗೆ ಗಮನ ಇದೆಯೆಂದು ಹೇಗೆ ಹೇಳೋಣ ? ಇಂದಿಗೆ ರೈತನಾಗಲೀ, ಅಥವಾ ಇತರರು ಯಾರೇ ಆಗಲೀ, ಕಚೇರಿಗಳಿಗೆ ಹೋಗಬೇಕೆಂದರೆ ತಮ್ಮ ನೈಜ ಕೆಲಸವನ್ನು ಕೈಬಿಡಬೇಕೆಂದೇ ಅರ್ಥ. ರೈತರ ಕಚೇರಿ ಅಲೆದಾಟಗಳಿಂದ, ಅವರ ಕೃಷಿ ಕೆಲಸದ ಮೇಲೆ ಮತ್ತು ಆ ಮೂಲಕ ಅವರ ಒಟ್ಟು ಉತ್ಪಾದನೆಯ ಮೇಲೆ ಆಗುವ ಪರಿಣಾಮಗಳನ್ನು ವಿವೇಚಿಸಿದರೆ ದಿಗ್ಭ್ರಮೆ ಆಗುತ್ತದೆ.

ಸ್ವಲ್ಪ ವಿಷಯಾಂತರ ಅಂತನ್ನಿಸಿದರೂ ಈ ಚರ್ಚೆ ನನ್ನ ಒಟ್ಟು ವಾದವನ್ನು ಬಲವಾಗಿ ಸಮರ್ಥಿಸುತ್ತದೆ. ಈ ಕಾಲ ಘಟ್ಟದಲ್ಲಿ ನಾವು ಆಡಳಿತದಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಟೊಳ್ಳು ಮಾತುಗಳನ್ನೇ ಆಡುತ್ತಾ ಬಂದು, ಆತ್ಮವಂಚನೆ ಮಾಡುತ್ತಿದ್ದೇವೆ. ಮಾಡುತ್ತಿರುವುದು ತಪ್ಪೆಂದು ತಿಳಿದೂ ಒಪ್ಪಿಕೊಳ್ಳದೆ ಮುಂದೆ ಸಾಗುತ್ತಿದ್ದೇವೆ. ಗುರಿಯ ಸ್ಪಷ್ಟ ಚಿತ್ರವಿಲ್ಲದೆ ನಡೆಯುತ್ತ ದಿಕ್ಕೆಟ್ಟವರಾಗುತ್ತಿದ್ದೇವೆ. ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವದ ಯಶಸ್ಸಿಗೂ, ಆಡಳಿತ ಪದ್ಧತಿಗೂ ಸಂಬಂಧವೇ ಇಲ್ಲವೆಂಬಂತೆ ನಾವು ವರ್ತಿಸುತ್ತಿದ್ದೇವೆ. ಇತಿಹಾಸದಿಂದ ಪಾಠ ಕಲಿಯ

ದವರು ಇಂಥ ತಪ್ಪುಗಳನ್ನು ಪುನರಾವರ್ತಿಸುತ್ತಲೇ ಇರುತ್ತಾರೆ. ಇಂದಿನ ಆಡಳಿತ ವಿಧಾನದಲ್ಲಿ ಸೂಚಿತವಾಗುವ ಸರಕಾರದ ಗುರಿಯಾವುದು ? ಎಂಬ ಪ್ರಶ್ನೆಗೆ ಲಂಡನ್‌ನಿಂದ ಉತ್ತರ ಪಡೆಯಬೇಕಾದ ದಯನೀಯ ಸ್ಥಿತಿ ಇದು.

ಇಷ್ಟಿದ್ದರೂ ನಮ್ಮ 'ಆಡಳಿತ ಜನಪದ' ಎಂದು ತೋರಿಸಿಕೊಳ್ಳದೇ ಹೋದರೆ ರಾಜಕಾರಣಿಗಳಿಗಾಗಲೀ ಆಡಳಿತಗಾರರಿಗಾಗಲೀ ಉಳಿಗಾಲವಿಲ್ಲದ್ದರಿಂದ, ಆಡಳಿತ ವ್ಯವಸ್ಥೆಗೆ ದೇಸೀ ಪದಗಳನ್ನು ಠಂಕಿಸುವ ಕೆಲಸವನ್ನು ಆಗಾಗ ಮಾಡುತ್ತಾ ಬಂದಿದ್ದೇವೆ. ಇಂಥ ಕಡೆ ವಸಾಹತು ಆಡಳಿತ ಕ್ರಮವು ಸಹಜವಾಗಿ ಅಪೇಕ್ಷಿಸುವ ಪದಗಳನ್ನು ಒತ್ತಾಯದಿಂದ ಮರೆಗೆ ತಳ್ಳಿ, ಕೃತಕವಾದ ದೇಸೀ ಪದಗಳನ್ನು ಅಂಟಿಸಲಾಗುತ್ತಿದೆ. ಸಾಮಾನ್ಯವಾಗಿ ವಸಾಹತು ಆಡಳಿತ ಪದ್ಧತಿಯ ಪೂರ್ಣಲಾಭ ಪಡೆದ ಬ್ರಾಹ್ಮಣ ವರ್ಗವು, ಆಡಳಿತದ ಮೇಲ್ತುದಿಯಲ್ಲಿ ಕುಳಿತುಕೊಂಡು ಇಂಥ ಪದ ಅಂಟಿಸುವ ಕೆಲಸವನ್ನು ಮಾಡುತ್ತಾ ಬಂದಿದೆ. ಈ ಬ್ರಾಹ್ಮಣರಿಗೆ 'ದೇಸೀ' ಅಂದರೆ 'ಸಂಸ್ಕೃತ'. ಆದುದರಿಂದ ಒಂದೇ ಸಮನೆ ಸಂಸ್ಕೃತ ಪದಗಳು ಬಳಕೆಗೆ ಬಂದವು. ಗ್ರಾಹ್ಯ, ಅಧಿನಿಯಮ, ಪ್ರಮಾಣ, ಶಾಖೆ, ಉದ್ಘೋಷಣೆ, ಅಭಿಯಂತರ, ಪ್ರತ್ಯಾಯೋಜಿತ ಅಧಿಕಾರ, ಪ್ರತ್ಯಾಯೋಜನ, ಪ್ರಪತ್ರ, ವಿಧಿಬದ್ಧ, ಅಧಿಷ್ಠಿತ, ಪ್ರಖ್ಯಾಪನ, ಮೊದಲಾದ ಪದಗಳು ಚಲಾವಣೆಗೆ ದೂಡಲ್ಪಟ್ಟವು. ಇಂದು ಕನ್ನಡದ ಹೆಸರಲ್ಲಿ ಆಡಳಿತ ಕೋಶಕ್ಕೆ ಸೇರಿದ ಪದಗಳಲ್ಲಿ ಇಂಥ ಸಂಸ್ಕೃತ ಪದಗಳ ಸಂಖ್ಯೆ ನೂರಕ್ಕೆ ಸುಮಾರು ಎಪ್ಪತ್ತರಷ್ಟಿದೆ. ಜನರಿಗೆ ಬಾಣಲೆಯಿಂದ ಬೆಂಕಿಗೆ ಬಿದ್ದ ಅನುಭವ.

ಇಂಥ ಸ್ಥಿತಿಯಲ್ಲಿ ನಮಗಿರುವ ದಾರಿಗಳು ಕೇವಲ ಎರಡು.

1. ಇಡೀ ದೇಶದ ಆಡಳಿತ ವಿಧಾನವನ್ನು ದೇಸೀ ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾಯಿಸುವುದು. ಹಾಗೆ ಮಾಡುವುದು ಸುಲಭದ ಕೆಲಸ ಅಲ್ಲ. ಅಂತಿಮವಾಗಿ ಅದು ರಾಜಕೀಯ ಮಾರ್ಪಡಿನೊಂದಿಗೆ ಸಂಬಂಧ ಹೊಂದಿದೆ. ಆದುದರಿಂದ ಕನ್ನಡಳಿತದಲ್ಲಿ ಆಡಳಿತ ಮಾಡಬಯಸುವವರು ತಮ್ಮ ರಾಜಕೀಯ ಧೋರಣೆಯನ್ನು ಖಚಿತಪಡಿಸಿ, ರಾಜಕೀಯ ಪರಿವರ್ತನೆಗೆ ಸಿದ್ಧರಾಗಬೇಕಾಗುತ್ತದೆ. ಈಗಲೂ ಆಡಳಿತ ವ್ಯವಸ್ಥೆಯಿಂದ ಲಾಭ ಪಡೆವ ಮಂದಿಗಳು ಇದಕ್ಕೆ ಮುಂದಾಗುವ ಸ್ಥಿತಿಯು ಊಹನೆಗೂ ಮೀರಿದುದು.

2 ಹಾಗಾದುದರಿಂದಲೇ ಯಥಾಸ್ಥಿತಿ ಮುಂದುವರೆಯುತ್ತಿದೆ. ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು ಇಂಗ್ಲಿಷ್ ಪದಗಳಿಗೆ ಕನ್ನಡ ಪ್ರತ್ಯಯಗಳನ್ನು ಅಂಟಿಸುತ್ತಲೋ, ಇಂಗ್ಲಿಷ್ ಪದಗಳನ್ನು ಸ್ವರಾಂತ್ಯ ಮಾಡಿಕೊಂಡು ಬಳಸುತ್ತಲೋ ಇರಬೇಕಾಗುತ್ತದೆ.

ಇವೆರಡರಲ್ಲಿ ನಮ್ಮ ಆಯ್ಕೆ ಯಾವುದೆಂಬುದು ಭಾರತದ ಭವಿಷ್ಯವನ್ನು ನಿರ್ಧರಿಸುತ್ತದೆ.[8]

ಕೊನೆ ಟಿಪ್ಪಣಿಗಳು

1. ಈ ವಿಧದ ಆಡಳಿತಾತ್ಮಕ ಪದಗಳು ಕನ್ನಡದಲ್ಲಿಯೇ ಇರುವುದಕ್ಕೆ ನೋಡಿರಿ—ಬಿ. ಪುರುಷೋತ್ತಮ 1985 : 138–144.
2. ಮೈಲರ ಒಳಾಡಳಿತದ ಬಗೆಗೆ ನೋಡಿರಿ—ಪುರುಷೋತ್ತಮ ಬಿಳಿಮಲೆ 1990 : 142.
3. ಜೋಗಿಗಳ ಒಳಾಡಳಿತದ ಬಗೆಗೆ ನೋಡಿರಿ—ಪುರುಷೋತ್ತಮ ಬಿಳಿಮಲೆ 1990 : 132.
4. ಕೈಫಿಯತ್ತುಗಳಲ್ಲಿ ದೊರೆಯುವ ಅರೆಬಿಕ್ ಪದಗಳಿಗಾಗಿ ನೋಡಿರಿ—ಪುರುಷೋತ್ತಮ ಬಿಳಿಮಲೆ 1985 : 91, 92.
5. ಕೈಫಿಯತ್ತುಗಳಲ್ಲಿ ದೊರೆಯುವ ಪರ್ಶಿಯನ್ ಪದಗಳಿಗಾಗಿ ನೋಡಿರಿ—ಪುರುಷೋತ್ತಮ ಬಿಳಿಮಲೆ 1985 : 92-93.
6. ಇಂಥ ಆಂಗ್ಲೀಕೃತ ಪತ್ರಗಳಿಗಾಗಿ ನೋಡಿರಿ—ಚಂದ್ರಹಾಸಗುಪ್ತ 1986.
7. ಲಿಂಗರಾಜನ ಹುಕುಂನಾಮೆಗಾಗಿ ನೋಡಿರಿ—ಪುರುಷೋತ್ತಮ ಬಿಳಿಮಲೆ 1986.
8. ಈ ಪ್ರಬಂಧವನ್ನು ದಿನಾಂಕ 15-2-1991ರಂದು, ಮಂಗಳೂರಿನ ಕನ್ನಡ-ಸಂಸ್ಕೃತಿ ಇಲಾಖೆಯವರು ಮಂಗಳೂರಿನಲ್ಲಿ ನಡೆಸಿದ 'ಜಿಲ್ಲಾ ಮಟ್ಟದ ಕನ್ನಡ ಆಡಳಿತ ಭಾಷಾ ಏಕದಿನ ಕಾರ್ಯಾಗಾರ'ದಲ್ಲಿ ಮಂಡಿಸಲಾಯಿತು.

ಆಧಾರ ಗ್ರಂಥಗಳು

1. ಚಂದ್ರಹಾಸ ಗುಪ್ತ (ಸಂ), ಸ್ವಾತಂತ್ರ್ಯ ಪೂರ್ವದಲ್ಲಿ ಆಡಳಿತ ಕನ್ನಡ; ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ 1986.
2. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಮೈಸೂರು: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ 1979.
3. ಜಯತೀರ್ಥ ರಾಜಪುರೋಹಿತ, ಕನ್ನಡ ತೀರ್ಪುಗಳು; ಮೈಸೂರು ವಿಶ್ವವಿದ್ಯಾನಿಲಯ: ಕನ್ನಡ ಅಧ್ಯಯನ ಸಂಸ್ಥೆ 1977.
4. ಪುರುಷೋತ್ತಮ ಬಿಳಿಮಲೆ, ಮೆಕೆಂಜಿ ಕೈಫಿಯತ್ತುಗಳು; ಮಂಗಳ ಗಂಗೋತ್ರಿ, 1985.
5. ಪುರುಷೋತ್ತಮ ಬಿಳಿಮಲೆ, ಲಿಂಗರಾಜನ ಹುಕುಂನಾಮೆ; ಪುತ್ತೂರು: ಸಮೀರ ಪ್ರಕಾಶನ, 1986.
6. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ; ಮಂಗಳಗಂಗೋತ್ರಿ 1990.
7. ಪುರುಷೋತ್ತಮ ಬಿ., ಸುಳ್ಯ ಪರಿಸರದ ಗೌಡ ಜನಾಂಗ: ಒಂದು ಸಾಂಸ್ಕೃತಿಕ ಅಧ್ಯಯನ [ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಪಿಎಚ್.ಡಿ. ಪ್ರಬಂಧ–ಅಪ್ರಕಟಿತ] ಮಂಗಳಗಂಗೋತ್ರಿ, 1985.
8. Kedilaya A. S., Foreign Loan words in Kannada; Madras: University of Madras, 1970.

ಒಳ್ಳೆಯತನವನ್ನು ಕಂಡಾಗ ಅನುಕರಿಸಿ, ಕೆಟ್ಟದ್ದನ್ನು ಕಂಡಾಗ ಆತ್ಮ ಪರಿಶೀಲನೆ ಮಾಡಿಕೊಳ್ಳಬೇಕು.

—ಬೈಬಲ್

ಆಸೆ ಇಲ್ಲದವನಿಗೆ ಜಗತ್ತೇ ತೃಣಸಮಾನ.

—ಕಾಳಿದಾಸ

ಅಸ್ಪೃಶ್ಯತೆ ಎಂಬುದು ಅಸ್ಪೃಶ್ಯರಿಗೆ ಅಂಟಿಕೊಂಡಿರುವ ಜಾಡ್ಯವಲ್ಲ. ಸ್ಪೃಶ್ಯರಿಗೆ ಹಿಡಿದಿರುವ ರೋಗ.

—ರಾಜಾಜಿ

ಅತ್ಯುತ್ತಮ ಪ್ರತೀಕಾರವೆಂದರೆ ಕ್ಷಮಿಸುವುದು.

—ಥಾಮಸ್ ಫುಲ್ಲರ್

ಕಷ್ಟವನ್ನು ಎದುರಿಸದೆ ಮನುಷ್ಯ ಮಂಗಳವನ್ನು ಕಾಣಲಾರ.

—ಮಹಾಭಾರತ

ಆರ್. ರಾಜಣ್ಣ

ಕೆಳದಿ ನಾಯಕರ ಕಾಲದ ಗ್ರಾಮಗಳಲ್ಲಿ ಮಠಗಳ ಸ್ಥಾಪನೆ ಮತ್ತು ಪೋಷಣೆ

ಕೆಳದಿ ಕಾಲದ ಗ್ರಾಮ ಜೀವನದಲ್ಲಿ ಧರ್ಮ, ಸಂಪ್ರದಾಯ, ರೂಢಿ ಮತ್ತು ಕಟ್ಟಳೆಗಳು ಅತ್ಯಂತ ಪ್ರಭಾವಪೂರ್ಣ ಪಾತ್ರವನ್ನು ನಿರ್ವಹಿಸುತ್ತಿದ್ದವು. ಗ್ರಾಮಸ್ಥರ ಜನಜೀವನದ ಮೇಲೆ ಮೂರು ರೀತಿಯ ಸ್ಪಷ್ಟ ಪ್ರಭಾವಗಳು ಇದ್ದವು. ಒಂದನೆಯದು ದೇವಾಲಯಗಳು, ಎರಡನೆಯದು ಮಠಗಳು, ಮೂರನೆಯದಾಗಿ ಪುರೋಹಿತ ವರ್ಗ. ಕೆಳದಿಯ ಆಳರಸರು ಈ ಮೂರು ಸಂಸ್ಥೆಗಳನ್ನು ಪೋಷಿಸಿ ಕೊಂಡು ಬಂದರು, ಕೆಳದಿಯ ನಾಯಕರು ಮಠಗಳ ಸ್ಥಾಪನೆ ಮತ್ತು ಪೋಷಣೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದು ಅವರ ಶಾಸನಗಳಿಂದ ಗೊತ್ತಾಗುತ್ತದೆ.[1] ಅರಸರಲ್ಲದೆ ಅವರ ಅಧೀನದಲ್ಲಿದ್ದ ಸಣ್ಣಪುಟ್ಟ ಪಾಳೆಯಗಾರರು ಮತ್ತು ಶ್ರೀಮಂತ ವರ್ಗದವರು ಗ್ರಾಮಗಳಲ್ಲಿ ಮಠಗಳನ್ನು ಕಟ್ಟಿಸುತ್ತಿದ್ದರು. ಈ ರೀತಿ ಸ್ಥಾಪಿಸಲ್ಪಟ್ಟ ಮಠಗಳು ಗ್ರಾಮಜೀವನದ ಸಂಘಟನೆಯಲ್ಲಿ ಪರೋಕ್ಷವಾಗಿ ತಮ್ಮದೇ ಆದ ಪಾತ್ರ ವನ್ನು ನಿರ್ವಹಿಸುತ್ತಿದ್ದವು. ಮಠಗಳ ಸ್ಥಾಪನೆಯನ್ನು ಕುರಿತಂತೆ ಕೆಲವರ ಉದಾಹರಣೆಗಳನ್ನು ಪರಿಶೀಲಿಸಬಹುದು.

ಸದಾಶಿವರಾಯ ಕೆಳದಿ ಅರಸರಲ್ಲಿ ಮುಖ್ಯನಾದವನು. ಕ್ರಿ.ಶ. 1545ರ ಕನ್ನಡ ಶಾಸನವನ್ನು ಇಲ್ಲಿ ಪರಿಶೀಲಿಸಬಹುದು. ಈ ಶಾಸನ ಶಿವಮೊಗ್ಗ ಜಿಲ್ಲೆಯ ನಗರದಲ್ಲಿ ದೊರಕಿದೆ. ಸದಾಶಿವರಾಯನ ಅಧೀನರಾಗಿದ್ದ ಪತಿಪತ್ನಿಯರ ಹೆಸರು ಈ ಶಾಸನದಲ್ಲಿ ಬರುತ್ತದೆ. ಪತಿಯ ಹೆಸರು ಬಂಕಿಯ ಅರಸ. ಪತ್ನಿಯ ಹೆಸರು ಶಂಕರದೇವಿಯಮ್ಮ. ಇವರ ಆಡಳಿತದ ವ್ಯಾಪ್ತಿಯಲ್ಲಿ ಹರಿಗಾರು ಎಂಬ ಗ್ರಾಮವಿತ್ತು. ಅಲ್ಲಿ ನೀರಶಿಮಠ ಸ್ಥಾಪಿಸಿದ್ದು ಅದರ ಕೆಲಸ ಕಾರ್ಯಗಳಿಗೆ ಆ ಗ್ರಾಮದ ಭೂಮಿಯ ಒಟ್ಟು ಉತ್ಪಾದನೆ ಯಲ್ಲಿ ಒಂದು ವರಹವನ್ನು ಇವರು ಬಿಟ್ಟುಕೊಟ್ಟರು.[2]

ವಿಜಯನಗರದ ಅಧೀನಕ್ಕೆ ಒಳಪಟ್ಟ ಕೆಳದಿ ಅರಸರು ಆ ಸಾಮ್ರಾಜ್ಯದ ಅಮರ ನಾಯಕರಾಗಿ 16ನೇ ಶತಮಾನದಲ್ಲಿ ಆಡಳಿತವನ್ನು ನಡೆಸುತ್ತಿದ್ದರು. 1562ರಲ್ಲಿ ವಿಜಯನಗರದ ಸದಾಶಿವರಾಯನು ಆಳುತ್ತಿದ್ದನು. ಅವನು ಅರಗ, ಗುತ್ತಿ,

ಮುವತ್ತೂರು, ಕಂಪಣತುಳು ರಾಜ್ಯ, ಬಾರಕೂರು, ಮಂಗಳೂರು ಮುಂತಾದವುಗಳನ್ನು ಅಮರಮಗಣಿಯಾಗಿ ನೀಡಿದನು. ಇದೊಂದು ಕೆಳದಿ ಸದಾಶಿವನಾಯಕನ ರಾಜಕೀಯ ಜೀವನದಲ್ಲಿ ಪ್ರಮುಖ ಘಟನೆಯಾಗಿತ್ತು. ಇಂತಹ ಸುದಿನವನ್ನು ಹೇಗಾದರೂ ಶಾಶ್ವತಗೊಳಿಸಬೇಕೆಂದು ಬಯಸಿದನು. ಜೊತೆಗೆ ತನ್ನ ತಂದೆ ಚೌಡಪ್ಪನಿಗೂ ತಾಯಿ ತಿರುಮಮ್ಮನಿಗೂ ಕೈಲಾಸಪದವಿಯಾಗಬೇಕೆಂಬುದು ಅವನ ಇಚ್ಛೆಯಾಗಿತ್ತು. ಈ ಆಸೆಯನ್ನು ಪೂರೈಸುವುದಕ್ಕೋಸ್ಕರ ದಕ್ಷಿಣ ಕನ್ನಡ ಜಿಲ್ಲೆಯ ಶಂಕರನಾರಾಯಣ ಗ್ರಾಮದಲ್ಲಿ ಶಂಕರನಾರಾಯಣ ಸನ್ನಿಧಿಯಲ್ಲಿ ವಿರೂಪಾಕ್ಷ ದೇವರಿಗೆ ಒಂದು ಮಠವನ್ನು ಕಟ್ಟಿಸಿದನು ಮತ್ತು ಅದರ ಆಡಳಿತಕ್ಕೋಸ್ಕರ ಅವನು ಕುಪರ ಕೇಶವ ಹೆಬ್ಬಾರನ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ಮಠಕ್ಕೆ ನೀಡಿದ್ದನು. ಶಾಸನದಲ್ಲಿ ಭೂಮಿಯನ್ನು ಮಠದ ಬೀಕ್ಷಣೆಗಾಗಿ ನೀಡಲಾಯಿತೆಂದು ತಿಳಿಸಲಾಗಿದೆ.[3]

ಮೇಲಿನ ಶಾಸನ ತುಂಬ ಅರ್ಥಪೂರ್ಣವಾಗಿದೆ, ಗ್ರಾಮದಲ್ಲಿ ರಾಜನಿಗೆ ಸಲ್ಲುವ ಭೂಮಿ ಇಲ್ಲದಿದ್ದಾಗ ಸಮಾಜಕಾರ್ಯಕ್ಕೆ ರಾಜನು ಭೂಮಿಯನ್ನು ದುಡ್ಡು ಕೊಟ್ಟು ಕೊಂಡಿದ್ದು. ಖಾಸಗಿ ಒಡೆತನಕ್ಕೆ ಕೆಳದಿನಾಯಕರು ತೋರಿಸುತ್ತಿದ್ದ ಗೌರವಕ್ಕೆ ಸಂಕೇತವಾಗಿದೆ. ಮಠದ ಬೀಕ್ಷಣೆ ಎಂಬ ಮಾತನ್ನು ಗಮನಿಸಬೇಕು ಅಂದರೆ ಸವಾಶಿವರಾಯ ಕಟ್ಟಿಸಿದ ಈ ಮಠ ಬೀಕ್ಷಾಮಠವಾಗಿತ್ತು ಎಂಬುದು ಗೊತ್ತಾಗುತ್ತದೆ. ಮಠಗಳು ಗ್ರಾಮದ ಭೂಮಿಯ ಒಡೆತನವನ್ನು ಹೊಂದಿದ್ದವು ಎಂಬುದು ಇದರಿಂದ ತಿಳಿಯುತ್ತದೆ.

ಗ್ರಾಮಗಳಲ್ಲಿದ್ದ ಮಠಗಳಲ್ಲಿ ದೇವರ ವಿಗ್ರಹಗಳನ್ನು ಸ್ಥಾಪನೆ ಮಾಡುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಚೌಳಿಕೇರಿ ಎಂಬ ಗ್ರಾಮದಲ್ಲಿ ಒಂದು ಮಠವಿತ್ತು. ಅದನ್ನು ಮುದ್ದಹೆಗ್ಗಡೆ ಎಂಬ ಗ್ರಾಮ ಮುಖಂಡನು ಕಟ್ಟಿಸಿದ್ದ ಮಠದಲ್ಲಿ ವಿಘ್ನೇಶ್ವರ ದೇವರ ಸಂಸ್ಥಾಪನೆಯಾಗಿತ್ತು. ಆ ದೇವರ ಕಾರ್ಯಕ್ಕೆ ಭೂದಾನವನ್ನು ಮುದ್ದಹೆಗ್ಗಡೆಯು 1577ರಲ್ಲಿ ಕೊಟ್ಟನೆಂದು ಶಾಸನವೊಂದು ತಿಳಿಸುತ್ತದೆ.[4]

ಕೆಳದಿಯ ಅರಸರ ಕಾಲದಲ್ಲಿ ಮಹಾಮಹತ್ತಿನ ಮಠ, ಮಠ ಎಂಬ ಒಂದು ವರ್ಗದ ಮಠವಿತ್ತು, ಇವುಗಳು ವೀರಶೈವರ ಆಳ್ವಿಕೆಗೆ ಒಳಪಟ್ಟಿತ್ತು. ಉದಾಹರಣೆಗೆ ಕವಲೇದುರ್ಗದಲ್ಲಿ ಇಂತಹ ಮಹಾಮಹತ್ತಿನ ಮಠವಿತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ.[5] ಈ ಮಠಗಳನ್ನು ದುರ್ಗದ ತಿಮ್ಮಣ್ಣನು ಕಟ್ಟಿಸಿದನು, ಇದಕ್ಕೆ ದಾನವನು ನೀಡಲಾಗಿತ್ತು. ಅಂತಹ ದಾನವನ್ನು ರಾಣಿ ಚೆನ್ನಮ್ಮಾಜಿಯು ನವೀಕರಿಸಿದ ಉಲ್ಲೇಖ ಶಾಸನದಲ್ಲಿ ಬಂದಿದೆ.[6]

ಕೆಳದಿಯ ಕಾಲದಲ್ಲಿ ಆಳರಸರಲ್ಲದೆ ವ್ಯಾಪಾರ ವರ್ಗದವರು ಸಹ ಮಠಗಳನ್ನು ಕಟ್ಟಿಸುತ್ತಿದ್ದರು. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಕೇರಿಯಲ್ಲಿ ನಾರಾಯಣಸೆಟ್ಟಿ ಕಟ್ಟಿಸಿದ ಮಠ ಮತ್ತು ಅದರ ಗಡಿಯ ವಿವರಗಳು ಬಂದಿವೆ.[7]

ಹೀಗೆ ಕೆಳದಿಯ ಕಾಲದಲ್ಲಿ ಆಳರಸರು ಪಾಳೆಯಗಾರರು ಮತ್ತು ಶ್ರೀಮಂತ ವರ್ಗದವರು ಗ್ರಾಮಾಂತರ ಪ್ರದೇಶಗಳಲ್ಲಿ ಮಠಗಳನ್ನು ಕಟ್ಟಿಸುತ್ತಿದ್ದರು. ಕೆಳದಿ ಕಾಲದ ಶಾಸನಗಳನ್ನು ಪರಿಶೀಲಿಸಿದಾಗ ಸಾಗರ, ಬಾರಕೂರು, ಭದ್ರಪುರ, ಆಂಡಿಗೆ, ಕೆರಳಕೊಪ್ಪ, ಚಕ್ಕೋಡು, ಮುಡುಬ, ಬಸರೂರು, ಅರಗ, ಹುಲಿಕಲ್ಲು, ಹೊಸಂಗಡಿ, ಬಿದರೂರು, ಕೋಟೇಶ್ವರ, ಕಡೆಕೊಪ್ಪ, ಉಳಿವಿ, ಎಡೆಹಳ್ಳಿ, ಆಗುಂಬೆ, ಮಂಡಲಿ, ತೀರ್ಥರಾಜಪುರ, ಕೂಡೂರು, ಕಾರಗಲ್ಲು, ಕವಲೇದುರ್ಗ ಮುಂತಾದ ಗ್ರಾಮಗಳಲ್ಲಿ ಮಠಗಳು ಸ್ಥಾಪಿಸಲ್ಪಟ್ಟದ್ದು ಗೊತ್ತಾಗುತ್ತದೆ.[8] ಶಾಸನ ಅಧ್ಯಯನದಿಂದ ಮೂಡಿ ಬಂದ ಗ್ರಾಮಾಂತರ ಪ್ರದೇಶಗಳ ಮಠಗಳ ಪಟ್ಟಿಯನ್ನು ಈ ಕೆಳಗೆ ಸೂಚಿಸಬಹುದು.

ಮಠದ ಹೆಸರು	ಗ್ರಾಮದ ಹೆಸರು	ಸ್ಥಾಪಕ ಅಥವಾ ದಾನಿ
1	2	3
ವಿರೋಪಾಕ್ಷದೇವರ ಮಠ	ಶಂಕರನಾರಾಯಣ	ಸದಾಶಿವನಾಯಕ
ಸೋಮನಾಥದೇವರ ಮಠ	ಮೂಡುಕೇರಿ	ನಾರಣಸೆಟ್ಟಿ
ಮಹಾಮಹತ್ತಿನ ಮಠ	ಆನಂದಪುರ (ಚಂಪಾಕಸರಸು)	ವೆಂಕಟಪ್ಪನಾಯಕ
ಮಠ	ಇಕ್ಕೇರಿ (ಭತ್ತದಪೇಟೆ)	ಹಿರಿಯವೆಂಕಟಪ್ಪನಾಯಕ
ಮಹತ್ತಿನ ಮಠ	ಸದಾಶಿವಸಾಗರ	ಶ್ರೀರಂಗಪಟ್ಟಣದ ಹೋಳಿನ ಹಿರಿಯ ಹಂಪಯ್ಯ ಕಟ್ಟಿಸಿದ
ಹೊಸಪೇಟೆ ಮಠ	ಇಕ್ಕೇರಿ	ವೀರಭದ್ರನಾಯಕ
ಮಠ	ಇಕ್ಕೇರಿ (ರಾಮಾಂಜಕೂಟ)	ವೆಂಕಟಪ್ಪನಾಯಕ
ಮಹತ್ತಿನ ಮಠ	ಚಟ್ಟನಹಳ್ಳಿ	ವೆಂಕಟಪ್ಪನಾಯಕ
ಮಠ	ಬಾರಕೂರು	ವೆಂಕಟಪ್ಪನಾಯಕರ ಮೊಮ್ಮಗ ಸದಾಶಿವನಾಯಕ
ಮಹತ್ತಿನ ಮಠ	ಬಾರಕೂರು	ವೆಂಕಟಪ್ಪನಾಯಕ
ಮಹತ್ತಿನ ಮಠ	ಸಂಗಮೇಶ್ವರಕರೆ (ಕವಲೆದುರ್ಗ)	ಸಿದ್ದಲಿಂಗಣ್ಣ

1	2	3
ಮಠ	ನಿವುದಾನಿವಾಸದ ಮಾರಿಮನೆ	ಶ್ರೀಣಾವುಲಿಸಿದ್ಧಬಸವರಾಜದೇವ
ಮಠ	ಪುಟಗುಪ್ಪೆ	ಮನೆವಾರ್ತೆ ವೆಂಕಣ್ಣ ಕಟ್ಟಿಸಿದ ಮಠ ಮತ್ತು ಈ ಮಠಕ್ಕೆ ವೀರ ಭದ್ರನಾಯಕದಾನ ಕೊಟ್ಟಿರು ತ್ತಾನೆ
ಮಠ	ಪುಟಗುಪ್ಪೆ	ಮನೆವಾರ್ತೆವೆಂಕಣ್ಣ
ಮಹತ್ತಿನ ಮಠ ಮತ್ತು ವಿರಕ್ತಮಠ	ಭದ್ರಾಪುರ	ಸಿದ್ದಣಕಟ್ಟಿಸಿದ ಮಠಕ್ಕೆ ವೀರಭದ್ರನಾಯಕರು ದಾನ ನೀಡಿದ್ದಾರೆ.
ಮಹತ್ತುಮಠ	ಶಿವಗಂಗೆಮೇಲಣ ಮಠ	ಸಿದ್ದವ್ಮಾಜಿ ಹೆಸರಿನಲ್ಲಿ ಸೋಮೇಶ್ವರನು ಕಟ್ಟಿಸಿದ ಮಠ
ಮಠ	ಶಿವಗಂಗೆಮೇಲಣ ಮಠ	ವೀರಭದ್ರನಾಯಕ
ಮಠ	ಮುದನೂರು	ಕಪ್ಪಗಳಲಿ ಬಸವನು ಕಟ್ಟಿಸಿದ ಮಠಕ್ಕೆ ವೀರಭದ್ರನಾಯಕನು ದಾನ ಕೊಟ್ಟಿರುತ್ತಾನೆ.
ಮಹತ್ತಿನ ಮಠ	ಅಂಡಿಗೆ	ವೀರಭದ್ರನಾಯಕರ ಮಾವನಾದ ರೇವಣ್ಣವೊಡೆಯರು ಕಟ್ಟಿಸಿದ ಮಠ
ಮಹತ್ತಿನ ಮಠ	ಕೆರೆಕೊಪ್ಪ	ಬನದಮ್ಮನು ಕಟ್ಟಿಸಿದ ಮಠಕ್ಕೆ ವೀರಭದ್ರನಾಯಕನು ದಾನ ಕೊಟ್ಟಿರುತ್ತಾನೆ.
ವಿರಕ್ತಮಠ	ಚಿನಿಕಟ್ಟೆ	ಈ ಮಠಕ್ಕೆ ವೀರಭದ್ರನಾಯಕರ ಮಂತ್ರಿ ಕಲ್ಲಿನ ಭಾವಿಯನ್ನು ಒಪ್ಪಿಸಿದ್ದಾನೆ.
ಮಹತ್ತು ಮಠ	ಹಚ್ಚಿಸಿವಾಡಿ	ವೀರಭದ್ರನಾಯಕ (ದಾನಿ)
ಮಹತ್ತು ಮಠ	ಚಿಕ್ಕೋಡು	ತಪ್ಪಗಳಲಿ ಬಸವಣ್ಣನು ಕಟ್ಟಿಸಿದ ಮಠ

1	2	3
ಮಹತ್ತು ಮಠ	ಸಾಗರದ ಎಲ್ಲೆಯಲ್ಲಿ	ಮರಡ ಬಸೆಟ್ಟಿ ಕಟ್ಟಿಸಿದ
ಮಹತ್ತು ಮಠ	ಭದ್ರಾಪುರ	ದುರ್ಗದ ತಿಮ್ಮಣ್ಣ ಕಟ್ಟಿಸಿದ
ಮಹತ್ತಿನ ಮಠ	ಮುಡುಬ	ಹಾರುವ ವೆಂಕಟಯ್ಯ ಕಟ್ಟಿಸಿದ
ಮಠ	ಮಳೆಯ ಕುಡಿಹೇರ	ವೀರಭದ್ರನಾಯಕ
ಮಹತ್ತಿನ ಮಠ	ಕವಲೇದುರ್ಗಾ ಸಂಗಮೇಶ್ವರ ಕೊಳದ ಬಳಿ	ಸಿದ್ದಲಿಂಗಣ್ಣ ಕಟ್ಟಿಸಿದ
ಮಹತ್ತಿನ ಮಠ	ಅರಗಪೇಟೆ	ದುರ್ಗದ ತಿಮ್ಮಣನು ಕಟ್ಟಿಸಿದ
ಮಹತ್ತಿನ ಮಠ	ಮಂಡಲಿ	ವೀರಭದ್ರನಾಯಕ (ದಾನಿ)
ಮಹತ್ತಿನ ಮಠ	ಅರಗ	ಸೋಮಶೇಖರನಾಯಕ (ದಾನಿ)
ಮಹತ್ತಿನ ಮಠ	ಕಂದಡಿಗನ ಮಾನಿ	ಭದ್ರಪ್ಪನಾಯಕ (ದಾನಿ)
ಚೆನ್ನಬಸವೇಶ್ವರ	ಉಡುಗಣಿ	ವೀರಭದ್ರನಾಯಕ (ದಾನಿ)
ಮಹತ್ತಿನ ಮಠ	ಹುಲಿಕಲ್ಲು	ಚೆನ್ನಮಲ್ಲಸೆಟ್ಟಿ ಕಟ್ಟಿಸಿದ
ಮಠ	ಸೇಖರಿಸಿ	ಕೋಶಾಧಿಕಾರಿ ಲೋಕಯ್ಯನು ಬಸವಲಿಂಗದೇವರಿಗೆ ಮಠ ಕಟ್ಟಲು ನೀಡಿದ ದಾನ
ಮಠ	ಸಿದ್ಧಾಪುರ	ದೊಡ್ಡವೆಂಕಟಯ್ಯ ಕಟ್ಟಿಸಿದ
ಮಹತ್ತಿನ ಮಠ	ಹೊಸಂಗಡಿ	ಚೆನ್ನಣ್ಣ ಕಟ್ಟಿಸಿದ
ಮಠ	ಮುನಿವೃಂದ	ವೆಂಕಟಪ್ಪನಾಯಕ (ದಾನಿ)
ಮಠ	ತಾಳಗುಪ್ಪ	ವೆಂಕಟಪ್ಪನಾಯಕ (ದಾನಿ)
ಮಠ	ಶೃಂಗೇರಿ	ಚಂದ್ರಮೌಳೀಶ್ವರ ದೇವರ ಎದುರಿಗಿರುವ ಮಠ ಭದ್ರಪ್ಪನಾಯಕ
ಮಹತ್ತಿನ ಮಠ	ಅರುನಾಡ ಸೀಮೆ ತಂದಡಿಗಳ ಮನೆ	ಭದ್ರಪ್ಪನಾಯಕ (ದಾನಿ)
ಮಠ	ತೀರ್ಥಮತ್ತೂರು	ಭದ್ರಪ್ಪನಾಯಕ (ದಾನಿ)
ಮಹತ್ತಿನ ಮಠ	ಶಿವರಾಜಪುರ	ಸೋಮಶೇಖರನಾಯಕ (ದಾನಿ)
ಮಹಾ ಮತ್ತಿನ ಮಠ	ಆನಂದಪುರ ಚಂಪಕಾ ಸರಸ್ಸಿನಲ್ಲಿರುವ ಮಠ	ಸೋಮಶೇಖರನಾಯಕ (ದಾನಿ)

1	2	3
ಮಹತ್ತಿನ ಮಠ	ಬಿದರೂರು	ಸೋಮಶೇಖರನಾಯಕ (ದಾನಿ)
ಮಹತ್ತಿನ ಮಠ	ಕೋಟೇಶ್ವರ	ಪರಮೇಶ್ವರ ಅಮ್ಮಾಜಿ ಕಟ್ಟಿಸಿದ ಮಠ
ಮಹತ್ತಿನ ಮಠ	ಕೂಡವಳಿ	ಶಿವಪ್ಪನಾಯಕರ ಅರ್ಜಿ ನಾಗಮ್ಮಾಜ ಕಟ್ಟಿಸಿದ ಮಠ
ಮಹತ್ತಿನ ಮಠ	ಹೊಂಬುಜಾ ಸೀಮೆಯಲ್ಲಿಯ ಸಿದ್ದಾಪುರ	ಸಿದ್ದಮ್ಮಾಜಿ ಕಟ್ಟಿಸಿದ ಮಠ
ಮಹತ್ತಿನ ಮಠ	ಕಡೆಕೊಪ್ಪ	ಹಿರಿಯ ಸೋಮಶೇಖರನಾಯಕ
ಮಹತ್ತಿನ ಮಠ	ಕಳಪಿ ಮತ್ತು ಅಂಬಲಿ ಗೊಳದ ಮಧ್ಯ ಇರುವ ಮಠ	ಅರಮನೆ ಸಾಂತಯ್ಯ ಕಟ್ಟಿಸಿದ
ಮಹತ್ತಿನ ಮಠ	ಜಾಡಿಕೋಪ್ಪ	ಸೋಮಶೇಖರನಾಯಕ (ದಾನಿ)
ಮಹತ್ತಿನ ಮಠ	ದುರ್ಗ	ಶಿವಮ್ಮಣ್ಣ ಕಟ್ಟಿಸಿದ
ಮಹತ್ತಿನ ಮಠ	ಉಳವಿ	ಹಿರಿಯ ಸೋಮಶೇಖರ ನಾಯಕ
ಮಠ	ಶರವತಿತೀರ (ಎಡಹಳ್ಳಿ)	ಆಲಡಿಮಠದ ಬಸವಪ್ರಭುದೇವರು ಕಟ್ಟಿಸಿದರು
ಮಹತ್ತಿನ ಮಠ	ಪುಟ್ಟ ಗುಪ್ಪೆ	ಹೊಳೆಯಮ್ಮ (ದಾನಿ)
ಮಠ	ಕೂಡಲಿ	ಸೋಮಶೇಖರನಾಯಕ
ಮಠ	ಕೂಡಲಿ	ಚೆನ್ನಮ್ಮಾಜಿ (ದಾನಿ)
ಮಠ	ಬಿದರೂರು	ಹಿರಿಯ ಸೋಮಶೇಖರನಾಯಕ
ಮಠ	ಸೋಮಪುರ	ಚೆನ್ನಮ್ಮಾಜಿ (ದಾನಿ)
ಮಠ	ಸಾತಗೆರೆ	ಬಸವಲಿಂಗಮ್ಮಾಜಿ ಕಟ್ಟಿಸಿದ ಮಠ
ಮಹತ್ತಿನ ಮಠ	ಉಳುವಿ	ಚೆನ್ನಮ್ಮಾಜಿ (ದಾನಿ)
ಮಹತ್ತಿನ ಮಠ	ಶಿವರಾಜಪುರ	ಚೆನ್ನಮಾಜಿ (ದಾನಿ)
ಮಹತ್ತಿನ ಮಠ	ಮುದಗೊಪ್ಪ	ಶಾಂತವೀರಪ್ಪ ಕಟ್ಟಿಸಿದ ಮಠ
ಮಠ	ಮುಳಬಾಗಿಲು	ವೆಂಕಟಪ್ಪನಾಯಕರು ಕೊಟ್ಟ ದಾನವನ್ನು ಚೆನ್ನಮ್ಮಾಜಿ ಮುಂದುವರಿಸಿದ್ದಾರೆ

1	2	3
ಮಠ	ರಾಮಾಂಜಿ ಕೂರ	ಅಲ್ಲಿ ಒಂದು ಕಟ್ಟಡ ಕಟ್ಟಿಸಲು ಚೆನ್ನಮ್ಮಾಜಿ ಕೊಟ್ಟ ದಾನ
ಮಹತ್ತಿನ ಮಠ	ಯುವನಿಗ್ರಾಮ	ಜಂಬುಖಂಡಿ ಚೆನ್ನಿ ಕಟ್ಟಿಸಿದ ಮಠ
ಮಹತ್ತಿನ ಮಠ	ಎಡಹಳ್ಳಿ	ಪುಟ್ಟಣ ಕಟ್ಟಿಸಿದ
ಮಹತ್ತಿನ ಮಠ	ಹೊಸಹಳ್ಳಿ	ಚೆನ್ನಮ್ಮಾಜಿ (ದಾನಿ)
ಕಾಶಿಪೀಠ ಮಠ	ಕೆಳದಿ	ಚೆನ್ನಮ್ಮಾಜಿ (ದಾನಿ)
ಮಠ	ಸಿದ್ದಗಿರಿ	ಚೆನ್ನಮ್ಮಾಜಿ (ದಾನಿ)
ಮಹತ್ತಿನ ಮಠ	ಆಗುಂಬೆ	ಚೆನ್ನಮ್ಮಾಜಿಯ ತಾಯಿ ಪಾರ್ವತಿ ಅಮ್ಮನವರು ಕಟ್ಟಿಸಿದ ಮಠ
ವಿರಕ್ತ ಮಠ	ಕವಲೇದುರ್ಗ (?)	ಚೆನ್ನಮ್ಮಾಜಿ
ಮಹತ್ತಿನ ಮಠ	ಭುವನಗಿರಿ	ದುರ್ಗತಿಮ್ಮಣ್ಣ ಕಟ್ಟಿಸಿದ ಮಠಕ್ಕೆ ಚೆನ್ನಮ್ಮಾಜಿಯು ಕೊಟ್ಟ ದಾನ
ಮಹತ್ತಿನ ಮಠ	ಭುವನಗಿರಿದುರ್ಗ	ದುರ್ಗದ ತಿಮ್ಮಣ್ಣ ಕಟ್ಟಿಸಿದ ಮಠ
ಮಠ	ಶೃಂಗೇರಿ	ಶೃಂಗೇರಿ ಮಠಕ್ಕೆ ಹೋಗುವ ಪದಾರ್ಥಗಳಿಗೆ ತೆರಿಗೆಯನ್ನು ಚೆನ್ನಮ್ಮಾಜಿಯು ಮನ್ನಾ ಮಾಡಿದ್ದಾರೆ
ಮಠ	ಬಸವರಾಜಪುರ	ಬಸವಪ್ಪನಾಯಕ (ದಾನಿ)
ವಶೀಕೃತ ಮಠ	ಉಪ್ಪುವಳಿ ಅಥವಾ ವೀರಭದ್ರಾಪುರ	ಗುರುವಪ್ಪ ಒಡೆಯ ಕಟ್ಟಿಸಿದ ಮಠ
ಮಹತ್ತಿನ ಮಠ	ಶಿವರಾಜಪುರ	ಬಸವಪ್ಪನಾಯಕ (ದಾನಿ)
ಮಹತ್ತಿನ ಮಠ	ಚೋರಡಿ	ಮಲಸೆಟ್ಟಿ ಕಟ್ಟಿಸಿದ ಮಠ
ಮಹತ್ತಿನ ಮಠ	ತೀರ್ಥರಾಜಪುರ	ವೀರಮ್ಮಾಜಿ ಕಟ್ಟಿಸಿದ ಮಠ
ಮಹತ್ತಿನ ಮಠ	ಕೋಡೂರು	ವೀರಮ್ಮನು ತನ್ನ ಮಗ ಭದ್ರಯ್ಯನ ಹೆಸರಿನಲ್ಲಿ ಕಟ್ಟಿಸಿದ ಮಠ
ಮಹತ್ತಿನ ಮಠ	ತೀರ್ಥರಾಜಪುರ	ವೀರಮ್ಮಾಜಿ
ಮಹತ್ತಿನ ಮಠ	ಮಂಡಳಿ	ಬಸವಪ್ಪನಾಯಕ (ದಾನಿ)

1	2	3
ಮಹತ್ತಿನ ಮಠ	ಮುಂಗಿನಾಡ ಸೀಮೆಯ ಮುಡಗೊಪ್ಪ ಗ್ರಾಮ	ಶಾಂತವೀರಪ್ಪನು ಕಟ್ಟಿಸಿದ
ಮಹತ್ತಿನ ಮಠ	ಆನಂದಪುರದ ಚಂಪಕಾಸರಸ್ಸಿನಲ್ಲಿರುವ ಮಠ	ಹಿರಿಯ ಬಸವಪ್ಪನಾಯಕ (ದಾನಿ)
ಶೃಂಗೇರಿ ಮಠ	ಶೃಂಗೇರಿ	ಇಮ್ಮಡಿ ಸೋಮಶೇಖರನಾಯಕ (ದಾನಿ)
ವಿರಕ್ತಮಠ	ಬಿಲಗುಂಜಿ	ಸೋಮಶೇಖರನಾಯಕರ ಅಳಿಯ ಮಲ್ಲಿಸೆಟ್ಟರು ಕಟ್ಟಿಸಿದರು
ವಿರಕ್ತಮಠ	ಹರಕರೆ	ಬಸವಯ್ಯನ ಭಕ್ತ ಕಟ್ಟಿಸಿದ
ಮಹತ್ತಿನ ಮಠ	ಬಿದರೂರಿಂದ ಅರಗಕ್ಕೆ ಹೋಗುವ ದಾರಿಯಲ್ಲಿ	ಬೂಕಸ್ತನದ ಬಸವಯ್ಯನ ಹೆಂಡತಿ ವೀರಮ್ಮ ಕಟ್ಟಿಸಿದರು.
ಮಹತ್ತಿನ ಮಠ	ಸಿಂಗನ ಬಿದರೆ	ಸೋಮಶೇಖರನಾಯಕ (ದಾನಿ)
ಕೂಡಲಿ ಕಲ್ಲುಮಠ	ಕೂಡಲಿ	ಸೋಮಶೇಖರನಾಯಕ (ದಾನಿ)
ವಿರಕ್ತಮಠ	ಸೋಮವಾರಪೇಟೆ	ಬಸವಪ್ಪನಾಯಕರು ಕಟ್ಟಿಸಿದರು
ಕಲ್ಲಿನ ಮಠ	ಅನವಟ್ಟಿ ಗ್ರಾಮ (ತುಪನೂರ ಸೀಮೆ)	ಹಂಚಿನ ಸಿದ್ದನು ಕಟ್ಟಿಸಿದ ಮಠ
ಗದ್ದಿಗೆ ಮಠ	ಚಟ್ನಹಳ್ಳಿ	ಇಮ್ಮಡಿ ಬಸವಪ್ಪನಾಯಕ
ವಿರಕ್ತಮಠ	ಉಡುಗಣಿ	ಕೈಗೂಡಿ ಬಸವ ಕಟ್ಟಿಸಿದನು

ಮಠಗಳಿಗೆ ಕೇವಲ ಭೂಮಿಯನ್ನು ಮಾತ್ರ ದಾನ ಮಾಡುತ್ತಿರಲಿಲ್ಲ, ಎತ್ತಿನ ಮಾನ್ಯ ಎಂಬ ಆರ್ಥಿಕ ಸಹಾಯವನ್ನು ಕೆಳದಿಯ ನಾಯಕರು ನೀಡುತ್ತಿದ್ದರು ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಬಸವಪ್ಪನಾಯಕನು ಕ್ರಿ.ಶ. 1932ರಲ್ಲಿ ಎರಡು ದಂಡದ ಮಠದ ಪಟ್ಟದ ಗುರುಬಸವ ಪ್ರಭುದೇವರಿಗೆ ಯೆತ್ತಿನ ಮಾನ್ಯದ ಧರ್ಮಶಾಸನವನ್ನು ಮರಿಯಪ್ಪ ಎಂಬುವನು ಕೇಳಿಕೊಂಡಿದ್ದರಿಂದ ನೀಡಿದನು. ಅದರ ವಿವರ ಹೀಗಿದೆ :

'ಯೀ ಮಠದ ಧರ್ಮಕ್ಕೆ ಬಿಟ್ಟ ಮಾನ್ಯದ ಯೆತ್ತು ನಡೆ 15 ಹದಿನೈದು ಯೆತ್ತಿನ ಮಾನ್ಯವನು ಶಿವಾರ್ಪಿತವಾಗಿ ಬಿಟ್ಟಿವಾಗಿ ಯೀ ಯೆತ್ತಿನ ಮೇಲೆ ಅಡಕೆ ಮೆಣಸು ಝುಲ್ಲಿ ಪಟ್ಟೆಕವಾಡ ಮುಂತಾದ ಘಟಿಸಿನ ಸರಕು ಹೊರತಾಗಿ ಹೋರಿ ಕೊಂಬ ಜಿನಿಸು ಅಕ್ಕಿ ಭತ್ತ ರಾಗಿ ಉಪ್ಪುಹುಳಿ ವಿಡಳ ಬೂಸ ಯೆಂಣೆತುಪ್ಪ ಕಾಯಿ ಬೆಲ್ಲ ಕಾಚು ಖೊಬರಿ ಕತ್ತ ಕಬ್ಬಿನ ಉತ್ತುತ್ತೆ ಖರ್ಜೂರ ಅರಿಸಿನ ಶುಂಠಿ ಉಳ್ಳಿ ಮುಂತಾದ ಜಿನಿಸಲು ದುರ್ಗಯಿಕ್ಕೇರಿ ಘಟ್ಟದ ಕೆಳಗಣ ಹೋಬಳಿ ಸುಂಕದಲ್ಲಿ ಸಹ ಯೆತ್ತುಗಳ ವರ್ಗ ವಯಸ್ಸನು ಬರಸಿ ಯೀ ಪ್ರಮಾಣು ಜಿನಿಸನು ಹೇರಿಕೊಂಡು ಷಡ್ವರುಶನಕ್ಕೂ ನಿಡಿ ಮಾಡಿಕೊಂಡು ನಿಂಮ ಶಿಶ್ಯ ಪಾರಂಪರ್ಯ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂ ಮಠದ ಧರ್ಮವ ನಡಸಿಕೊಂಡು ಬಾಹದೆಂದು ಬರಸಿಕೊಟ್ಟ ಯೆತ್ತಿನ ಮಾನ್ಯದ ಧರ್ಮಶಾಸನ'

ಸ್ತ್ರೀಯರು ಮಠಗಳನ್ನು ಕಟ್ಟಿಸುತ್ತಿದ್ದರು ಎಂಬುದಕ್ಕೆ ಶಾಸನಗಳಲ್ಲಿ ಬರುವ ಬನದಮ್ಮ ಎಂಬ ದಾನಿ ಶಿವಲಿಂಗಿ ಮತ್ತು ಪುಟ್ಟತಾಯಿ, ಜಂಬುಕೇಡಿ ಚೆನ್ನಿ ಎಂಬ ನೃತ್ಯಗರ್ತಿಯರು ಕಟ್ಟಿಸಿದ ಮಠಗಳೇ ಸಾಕ್ಷಿ. ಕೆಲವು ವೇಳೆ ಸರ್ಕಾರದಿಂದ ಭೂಮಿಯನ್ನು ಕೊಂಡು ಮಠಕ್ಕೆ ದಾನ ಮಾಡುತ್ತಿದ್ದರು. ಹೆಚ್ಚಿನ ಮಠಗಳು ವೀರಶೈವ ಧರ್ಮದ ಪ್ರಚಾರದಲ್ಲಿ ತೊಡಗಿದ್ದವು. ವೀರಶೈವರು ಕೆಳದಿ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಇರುತ್ತಿದ್ದುದೆ ಇದಕ್ಕೆ ಕಾರಣವೆಂದು ಹೇಳಬಹುದು. ಮೇಲಿನ ವಿವರಗಳನ್ನು ಪರಿಶೀಲಿಸಿದಾಗ ಕೆಲವು ತೀರ್ಮಾನಗಳನ್ನು ಮಾಡಬಹುದು. ಒಂದನೆಯದಾಗಿ, ಕೆಳದಿಯ ಕಾಲದ ಗ್ರಾಮಜೀವನದಲ್ಲಿ ವಿವಿಧ ಪಂಥಗಳಿಗೆ ಸೇರಿದ ಮಠಗಳು ಪ್ರಧಾನ ಪಾತ್ರವನ್ನು ವಹಿಸುತ್ತಿದ್ದವು. ಆಯಾಯಾ ಪಂಥದ ಅನುಯಾಯಿಗಳಿಗೆ ಈ ಮಠಗಳು ಮತೀಯ ಸ್ಫೂರ್ತಿಯನ್ನು ನೀಡುತ್ತಿದ್ದವು. ವಿವಿಧ ಪಂಥದ ಅನುಯಾಯಿಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕವಾಗಿ ಸಂಘಟಿಸುವ ಕಾರ್ಯದಲ್ಲಿ ಇವುಗಳು ತೊಡಗಿದ್ದವೆಂದು ಹೇಳಬಹುದು. ಎರಡನೆಯದಾಗಿ ವೀರಶೈವ ಮಠಗಳು ಸಂಖ್ಯೆಯಲ್ಲಿ ಹೆಚ್ಚಾಗಿದ್ದವು. ಇವುಗಳಲ್ಲಿ ನಾನಾ ವಿಧಗಳು ಇದ್ದವು ಉದಾ: ಮಹತ್ತಿನ ಮಠ, ಮಹಾಮಹತ್ತಿನ ಮಠ, ಬೀಕ್ಷ ಮಠ ಮತ್ತು ವಿರಕ್ತ ಮಠಗಳು ಇದ್ದವು. ಮಹತ್ತಿನ ಮಠಗಳು ವೀರಶೈವ ಗುರುಗಳನ್ನು ಮುಖ್ಯಾಧಿಕಾರಿಗಳಾಗಿ ಹೊಂದಿದ್ದವು. ಗ್ರಾಮಗಳಲ್ಲಿ ವೀರಶೈವ ಧರ್ಮವನ್ನು ಪ್ರಚಾರ ಮಾಡುವುದು ಇವುಗಳ ಆದ್ಯಕರ್ತವ್ಯವಾಗಿತ್ತು. ಬೀಕ್ಷ ಮಠಗಳು ಅನ್ನದಾಸವನ್ನು ಪ್ರಧಾನ ಗುರಿಯಾಗಿ ಇಟ್ಟುಕೊಂಡಿದ್ದವು. ಗ್ರಾಮಗಳಿಗೆ ಹೊರಗಡೆಯಿಂದ ಬಂದ ಜನರಿಗೆ ಊಟ ಉಪಚಾರವನ್ನು ಇಂತಹ ಮಠಗಳು ಒದಗಿಸಿಕೊಡುತ್ತಿದ್ದವು. ಹೆಸರೇ ಸೂಚಿಸುವಂತೆ ವಿರಕ್ತ ಮಠಗಳು ವೀರಶೈವ ಧರ್ಮದ ತಾತ್ವಿಕ ಅಧ್ಯಯನಕ್ಕೆ ಹೆಚ್ಚಿನ ಗಮನವನ್ನು

ನೀಡುತ್ತಿದ್ದವು. ಮೂರನೆಯದಾಗಿ ಇಂತಹ ಮಠಗಳು ಗ್ರಾಮಾಂತರ ಪ್ರದೇಶದ ಜನಗಳನ್ನು ಕೆಳದಿ ಅರಸರ ಪ್ರಭುತ್ವಕ್ಕೆ ಬಂಧಿಸುವ ಕೊಂಡಿಗಳಾಗಿದ್ದವು ಎಂದು ಹೇಳಬಹುದು. ಗ್ರಾಮಗಳಲ್ಲಿದ್ದ ಮಠಗಳಿಗೆ ದತ್ತಿಯನ್ನು ಕೊಡುವುದರ ಮೂಲಕವು ಮತ್ತು ಹೊಸದಾಗಿ ಮಠಗಳನ್ನು ಸ್ಥಾಪಿಸುವುದರ ಮೂಲಕವು ಕೆಳದಿಯ ಅರಸರು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ರಾಜಕೀಯ ಪ್ರಭಾವವನ್ನು ವ್ಯಕ್ತಪಡಿಸುತ್ತಿದ್ದರು. ಮಠಗಳ ಆಡಳಿತಗಾರರ ಮೂಲಕ ಗ್ರಾಮಸ್ಥರ ನಿಷ್ಠೆಯನ್ನು ಸಂಪಾದಿಸುತ್ತಿದ್ದರು. ನಾಲ್ಕನೆಯದಾಗಿ ಕೆಳದಿಯ ಕಾಲದ ಮಠಗಳ ಸ್ಥಾಪನೆಯಲ್ಲಿ ಶ್ರೀಮಂತ ವರ್ಗದವರು ಸ್ತ್ರೀಯರು, ಮತ್ತು ವರ್ತಕರು ಪಾಲುಗೊಳ್ಳುತ್ತಿದ್ದುದನ್ನು ನೋಡಿದರೆ. ಈ ವರ್ಗಗಳಲ್ಲಿ ಹೇಗೆ ಸಮಾಜದಲ್ಲಿ ತಮ್ಮ ಹೆಸರನ್ನು ಶಾಶ್ವತಗೊಳಿಸಲು ಪ್ರಯತ್ನಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಕೊನೆಯದಾಗಿ ಈ ಕಾಲದ ಗ್ರಾಮಾಂತರ ಪ್ರದೇಶದ ಮಠಗಳು ಶೈವ ಮತ್ತು ವೀರಶೈವ ಧರ್ಮದ ಪ್ರಚಾರದ ಜೊತೆಗೆ ವಿದ್ಯಾಭ್ಯಾಸದ ಕೇಂದ್ರಗಳು ಆಗಿದ್ದು, ವಿವಿಧ ಪಂಥಗಳ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದವೆಂದು ಹೇಳಬಹುದು. ಒಟ್ಟಿನಲ್ಲಿ ಮಠಗಳು ದೇವಾಲಯಗಳಂತೆ ಕೆಳದಿ ರಾಜ್ಯದ ಗ್ರಾಮಗಳ ಜೀವನಾಡಿಗಳಾಗಿದ್ದವು.

ಅಡಿ ಟಿಪ್ಪಣಿಗಳು

1. ನೋಡಿ : ಕೆಳದಿ ಅರಸರು 'ಕವಲೇದುರ್ಗ'—ಕೆ. ಮೊಹಮ್ಮದ್ ಶರೀಫ್, ಪ್ರಬುದ್ಧ ಕರ್ನಾಟಕ ಸಂಪುಟ 71, ಸಂಚಿಕೆ 2, 4. ಅನುಬಂಧ ಪುಟ 28-30.
2. ಮೈ.ಪು.ವ. 1943, ಸಂಖ್ಯೆ 30.
3. ಎಸ್.ಐ.ಐ. ಸಂಪುಟ 9, ಭಾಗ 2, ಸಂಖ್ಯೆ 674.
4. ಆ್ಯ.ರಿ.ಸಾ.ಇ.ಎ. 1931–32, ಸಂಖ್ಯೆ 262.
5. ಎಪಿ.ಕ. 8–40–99, ಮೈ.ಪು.ವ. 1943 ಸಂಖ್ಯೆ 35–45.
6. ಎಪಿ.ಕ. 8–4, ತೀರ್ಥಹಳ್ಳಿ–46
7. ಎಸ್.ಐ.ಐ. ಸಂ. 7, ಸಂಖ್ಯೆ 321, ಕ್ರಿ.ಶ. 1585.
8. ನೋಡಿ : ಅ ಸುಂದರ ಕೆಳದಿ ವಾಸ್ತುಮೂರ್ತಿಶಿಲ್ಪ, ಸಂಪುಟ 1, ಮೈಸೂರು 1986, ಪುಟ 139–150.
9. ಎಸ್.ಐ.ಐ.—ಸಂ. 7, 321, ಸಂ. 9, 674,
   ಮೈ.ಪು.ವ. 1916-111, 114, 116; 1919-96; 1923, 63, 95, 96, 98, 99, 101, 102, 104, 108, 1927-153, 154, 1933–28. 1936–96 1943–37, 38, 40, 41,
   ಎ.ಆರ್.ಐ.ಇ. 1970–71, ಸಂ. 25.
   ಎಪಿ.ಕ. ಸಂಪುಟ 6—ಕೊಪ್ಪ 61 ; 7—ಹೊನ್ನಾಳಿ 62; ಶಿಕಾರಿಪುರ 27, 42; ತೀರ್ಥಹಳ್ಳಿ 96 ; ಶಿವಮೊಗ್ಗ 28, 98 ; 8—ತೀರ್ಥಹಳ್ಳಿ 6, 40, 42, 43, 45, 46, 47, 48, 49, 53, 54, 56, 61, 62, 63, 64, 66, 68, 73, 75, 77, 79, 80, 81, 82, 83, 91, 92, 94, 95. 98, 99, 145, 165, 180, 185, 187, 8—ಸೊರಬ 354 ; ಹೊನ್ನಾಳಿ 74 ; ನಗರ, 32, 79 ; ಸಾಗರ 44, 53, 158 ; ಕೊಪ್ಪ 61.
10. ನೋಡಿ: ಕೆಳದಿ ಅರಸರ ಮೂರು ಹೊಸ ತಾಮ್ರ ಶಾಸನಗಳು—ಕೆ. ಮೊಹಮ್ಮದ್ ಶರೀಫ್ ಮಾನವಿಕ ಕರ್ಣಾಟಕ, ಸಂಪುಟ 10, ಸಂಚಿಕೆ 1, ಮೈಸೂರು ವಿಶ್ವವಿದ್ಯಾನಿಲಯ (1979)

ಎರಡು ಕೆಲಸಗಳನ್ನು ಏಕಕಾಲದಲ್ಲಿ ಮಾಡುವುದೆಂದರೆ ಯಾವುದನ್ನೂ ಮಾಡದಿರುವುದೆಂದೇ ಅರ್ಥ.

—ಸೈರಸ್

ಉತ್ತಮ ಗುಣ ನೀರಿನಂತೆ. ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತದೆ. ಕೆಳಮಟ್ಟದಲ್ಲಿ ನಿಲ್ಲುತ್ತದೆ.

—ಲೋಟ್ಸ್

ಯಾವ ತಪ್ಪೂ ಸಿಕ್ಕದ ರೀತಿಯಲ್ಲಿ ಯಾವುದೂ ಪರಿಪೂರ್ಣ ಆಗಿರುವುದಿಲ್ಲ.

—ಈಸೋಪ್

ಪುರುಷನಿಗೆ ತನ್ನದೇ ಆದ ಭಾಗ್ಯ ಅವನಿಗೆ ಮದುವೆಯಾಗುವವರೆಗೆ ಮಾತ್ರ. ಅಲ್ಲಿಂದ ಮುಂದೆ ಅದು ಕೈ ಹಿಡಿದವಳ ಭಾಗ್ಯ.

—ಕೆ. ವಿ. ಅಯ್ಯರ್

ಡಾ. ಹು. ಲ. ಚಂದ್ರಶೇಖರ

ಪುನರುಜ್ಜೀವನ ಕಾಲದ ತಾತ್ತ್ವಿಕರು ಮತ್ತು ಜಗತ್ತು

ಸಾಂಸ್ಕೃತಿಕ ಪುನರುಜ್ಜೀವನದ ಆರಂಭದಲ್ಲಿ ತಾತ್ತ್ವಿಕರು ಪುರಾತನನೂತನತೆಗಳ ವಿಚಿತ್ರಮಿಲನವನ್ನು ಪ್ರದರ್ಶಿಸಿದರು. ಕ್ಯೂಸದ **ನಿಕೊಲಸ್** (1401-1464) ಮೂಲತಃ ಅನುಭಾವಿಯಾದ್ದರಿಂದ ಆತನ ಚಿಂತನೆಯಲ್ಲಿ ನಾವು ಯಾವ ತಾರ್ಕಿಕ ಮೆರಗನ್ನೂ ಕಾಣಲಾರೆವು. ಹೀಗಾಗಿ ಜಗತ್ತಿನ ಬಗ್ಗೆ ಆತನು ಮೂರು ಸಿದ್ಧಾಂತಗಳನ್ನು ಮಂಡಿಸುತ್ತಾನೆ. ಮೊದಲನೆಯದು ವಿಶ್ವದೇವೈಕ್ಯವಾದ (Pantheism), ಎಂದರೆ ನಿಕೊಲಸ್ ಪ್ರಕಾರ ಈ ಜಗತ್ತು ಈಶ್ವರನಲ್ಲದೇ ಬೇರೆಯಲ್ಲ. ಇದರ ಪ್ರತಿಯೊಂದು ವಸ್ತುವೂ ಈಶ್ವರನ ಅಂಗವಾಗಿದ್ದು ಅದರಲ್ಲಿ ಆತನು ಅವ್ಯಕ್ತವಾಗಿ ನೆಲೆಸಿರುವನು. ಈಶ್ವರನು ಎಲ್ಲ ವಸ್ತುಗಳನ್ನೂ ಒಳಗೊಂಡಿದ್ದಾನೆಂಬ ಅರ್ಥದಲ್ಲಿ ಆತನು ಸ್ಥೂಲ ಈ ಎಲ್ಲ ವಸ್ತುಗಳಲ್ಲೂ ತನ್ನ ಪೂರ್ಣಶಕ್ತಿಯೊಂದಿಗೆ ನೆಲೆಸಿರುವನು ಎಂಬ ಅರ್ಥದಲ್ಲಿ ಆತನು ಸೂಕ್ಷ್ಮನೂ ಹೌದು. ಎರಡನೆಯದಾಗಿ ಈಶ್ವರನ ಆಲೋಚನೆಯ ಅಪೂರ್ಣ ನಕಲು ಎನ್ನುವಲ್ಲಿ ನಾವು ಸ್ವಲ್ಪಮಟ್ಟಿಗೆ ಆತನಲ್ಲಿ ಪ್ಲೇಟೋ ಪ್ರಭಾವವನ್ನೂ ಕಾಣಬಹುದು. ಕಡೆಯದಾಗಿ ವಸ್ತುಗಳ ಸತ್ತ್ವ ಮತ್ತು ಈಶ್ವರನ ಸತ್ತ್ವ ಒಂದೇ ಅಲ್ಲ ಎಂಬ ವಿಷಯದಲ್ಲಿ ಆತನು ಈಶ್ವರ ಪ್ರಪಂಚಗಳ ಭಿನ್ನತೆಯನ್ನು ಎತ್ತಿಹಿಡಿದನು. ಇವಲ್ಲದೇ ನಿಕೊಲಸ್ ಕಕ್ಷೆಯಲ್ಲಿ ಭೂಮಿಯ ಸುತ್ತುವಿಕೆ, ಪರಮಾಣುವಾದ, ಚಲನೆಯ ಸಾಪೇಕ್ಷತೆ—ಈ ವಾದಗಳಿಗೂ ಪ್ರಸಿದ್ಧ.

ಲ್ಯುಡೊವಿಕೊ ವೈವ್ಸ್‌ಗೆ (1492–1540) ಅಭೌತಸೃಷ್ಟಿಕೋನಕಿಂತಲೂ ವೈಜ್ಞಾನಿಕ ದೃಷ್ಟಿಕೋನವೇ ಮುಖ್ಯವಾಯಿತು. ಪೂರ್ವಸಿದ್ಧಾಂತಗಳಿಂದ ವಿಮುಖರಾಗಿ ಜಗತ್ತನ್ನು ನಮ್ಮ ಅನುಭವಕ್ಕೆ ದತ್ತವಾಗಿರುವಂತೆ ಅಧ್ಯಯನ ಮಾಡಬಯಸಿದವರಿಗೆ ಆತನು ಒಂದು ಮಾದರಿಯಾಗಿದ್ದ. ಇತರರ ಅಭಿಪ್ರಾಯಗಳನ್ನು ಅವಲಂಬಿಸದೇ ಮತ್ತು ಯಾವುದೇ ರೀತಿಯ ಬಾಹ್ಯಪ್ರಭಾವಕ್ಕೆ ಒಳಗಾಗದೇ ಜಗತ್ತನ್ನು ಸ್ವತಃ ಅವಲೋಕನ ಪ್ರಯೋಗಗಳ ಮೂಲಕ ಅಧ್ಯಯನ ಮಾಡುವುದು ಆತನ ವೈಜ್ಞಾನಿಕತೆಯ ಮುಖ್ಯ ಲಕ್ಷಣ.

ಕಾಲವು ಬದಲಾದಂತೆಲ್ಲಾ ಜಗತ್ತಿನ ಬಗ್ಗೆ ವಿಚಿತ್ರವಾದಗಳು ಹುಟ್ಟಿಕೊಂಡವು. ಉದಾಹರಣೆಗೆ ಮಂತ್ರವಿದ್ಯೆ ಮತ್ತು ರಸತಂತ್ರಗಳು (Alchemy) ಸ್ವಿಸ್‌ಜನ್ಯನಾದ ಪ್ಯಾರಾಸೆಲ್ಸಸ್‌ನಲ್ಲಿ (1493-1541) ಸಮರ್ಥ ಪ್ರತಿಪಾದಕನನ್ನು ಕಂಡುಕೊಂಡವು. ಈತ ನೈಸರ್ಗಿಕ ಮತ್ತು ಅತಿನೈಸರ್ಗಿಕ ಕಲ್ಪನೆಗಳ ಅದ್ಭುತ ಮಿಶ್ರಣವನ್ನು ತನ್ನ ಚಿಂತನೆಯಲ್ಲಿ ಪ್ರದರ್ಶಿಸಿದ. ಇವನ ಪ್ರಕಾರ ಜಗತ್ತು ಈಶ್ವರ ಸಂಕಲ್ಪದ ವಿಕಾಸ. ಈಶ್ವರನ ಸತ್ತ್ವವು (Essence) ವಿಭಜಿಸಿ ಸೃಷ್ಟಿತತ್ತ್ವಗಳು ಸಂಖ್ಯೆಯಲ್ಲಿ ವೃದ್ಧಿಸುವ ಮೂಲಕ ಸೃಷ್ಟಿಕಾರ್ಯವು ನಡೆಯುತ್ತದೆ. ಈ ವಿಕಾಸದ ಮೊದಲ ತತ್ತ್ವ ಖಿಯೋಸ್ ಎನ್ನಲ್ಪಡುವ ಪ್ರಕೃತಿ. ಎಲ್ಲ ವಸ್ತುಗಳೂ ತಮ್ಮ ರಚನೆಗೆ ಈ ನಿರಾಕಾರ ಮೂಲಸಾಮಗ್ರಿಯನ್ನೇ ಆಶ್ರಯಿಸಿವೆ ಅನಂತರ ಇದರಿಂದ ಮೂರು ತತ್ತ್ವಗಳು ಹೊರಹೊಮ್ಮುತ್ತವೆ. ಸಾಲ್ (Sal) ಎಲ್ಲ ಘನವಸ್ತುಗಳ ಮೂಲತತ್ತ್ವವಾದರೆ ಪಾದರಸವು ದ್ರವಗಳ ಮೂಲತತ್ತ್ವ, ಹಾಗೆಯೇ ಗಂಧಕವು ಇಂಧಕ ವಸ್ತುಗಳ ಮೂಲತತ್ತ್ವ. ಈ ಮೂರು ತತ್ತ್ವಗಳು ಪುನಃ ಪೃಥ್ವಿ ಅಪ್, ತೇಜ ಮತ್ತು ವಾಯು ಎಂಬ ನಾಲ್ಕು ಭೂತಗಳಾಗಿ ಪ್ರತ್ಯೇಕಗೊಳ್ಳುತ್ತವೆ. ಅನಂತರ ಈ ನಾಲ್ಕು ಭೂತಗಳು ತಮಗೆ ಸಂಬಂಧಿಸಿದ ಸ್ಥೂಲವಸ್ತುಗಳನ್ನು ಹೊರಹೊಮ್ಮಿಸುತ್ತವೆ. ಪ್ರತಿಯೊಂದು ತತ್ತ್ವವೂ ಚೇತನಾತ್ಮಕವೆಂಬುದು ಪ್ಯಾರಾಸೆಲ್ಸಸ್ ಅನ್ನು ವಿಜ್ಞಾನದಿಂದ ಪ್ರತ್ಯೇಕಿಸುವ ಅಂಶವಾಗಿದೆ. ಆತನ ಪ್ರಕಾರ ಜಗತ್ತಿನ ಅತ್ಯಂತ ಸೂಕ್ಷ್ಮ ಕಣದಿಂದ ಹಿಡಿದು ಅತ್ಯಂತ ಸ್ಥೂಲವಸ್ತುವಿನವರೆಗೆ ಎಲ್ಲ ವಸ್ತುಗಳೂ ಚೈತನ್ಯ ಅಥವಾ ಆತ್ಮದ ನೆಲೆಯಾಗಿವೆ ಈ ಜೈವಿಕ ನಿಸರ್ಗವು ವಿಚಿತ್ರಶಕ್ತಿಗಳ ನೆಲೆಯಾಗಿದ್ದು ಅದರ ನಿಯಂತ್ರಣವು ಈ ಶಕ್ತಿಗಳ ನಿಯಂತ್ರಣದಲ್ಲಿದೆ. ಪ್ಯಾರಾಸೆಲ್ಸಸ್ ಪ್ರಕಾರ ಈ ಶಕ್ತಿಗಳನ್ನು ಮಂತ್ರಗಳಿಂದ ವಶಪಡಿಸಿಕೊಳ್ಳಬಹುದು.

ಕ್ರಮೇಣ ತಾತ್ತ್ವಿಕರು ಜಗತ್ತು ಶಕ್ತಿಗಳ ಆಕರ್ಷಣೆ ಮತ್ತು ವಿಕರ್ಷಣೆಗಳ ಕೇಂದ್ರವೆಂಬುದನ್ನು ಮನಗಂಡರು. **ಬರ್ನಾರ್ಡಿನೊ ಟೆಲೆಸಿಯೋ** (1508-1588) ಪ್ರಕೃತಿಜ್ಞಾನವನ್ನು ಅವಲೋಕನ ತಳಹದಿಯ ಮೇಲೆ ನಿರ್ಮಿಸಲೆತ್ನಿಸಿದ. ಈ ಜಗತ್ತು ಸ್ಥಿರಪ್ರಮಾಣದಲ್ಲಿರುವ ಪ್ರಕೃತಿ ಮತ್ತು ಶಕ್ತಿಗಳಿಂದ ಕೂಡಿದೆಯೆಂಬ ಆತನ ವಾದದಲ್ಲಿ ಸ್ಟೋಯಿಕರ ಚಿಂತನೆಯ ಕುರುಹನ್ನು ನಾವು ಕಾಣಬಹುದು. ಈಶ್ವರಜನ್ಯ ಪ್ರಕೃತಿಯು ಎಲ್ಲ ಕಾಲಗಳಲ್ಲೂ ಇರುವಂತಹುದು, ಶಕ್ತಿಗೆ ಶೀತ ಮತ್ತು ಉಷ್ಣವೆಂಬ ಎರಡು ರೂಪಗಳಿವೆ. ಉಷ್ಣವು ಪ್ರಕೃತಿಯನ್ನು ಚಲಿಸಿದರೆ ಅಥವಾ ವಿಕಾಸಗೊಳಿಸಿದರೆ ಶೀತವು ಅದನ್ನು ಸ್ಥಾಯಿಗೊಳಿಸುತ್ತದೆ ಇಲ್ಲವೆ ಸಾಂದ್ರಗೊಳಿಸುತ್ತದೆ, ಜಗತ್ತಿನ ಎಲ್ಲ ವಸ್ತುಗಳೂ ಶಕ್ತಿಯ ಈ ಎರಡು ರೂಪಗಳಲ್ಲಿ ಒಂದರ ಪರಿಣಾಮವಾಗಿರುತ್ತದೆ.

ಅನಂತರ ಜಗತ್ತಿನ ಬಗ್ಗೆ ಅತಿಮಾನುಷ ನಿರೂಪಣೆಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಂಡವು. ಈ ಹಂತದಲ್ಲಿ ತಾತ್ತ್ವಿಕರು ಯಾವುದೇ ರೀತಿಯ ಆಧ್ಯಾತ್ಮಿಕ

ನಿರೂಪಣೆಗೆ ಮೊರೆಹೋಗದೇ ಜಗತ್ತಿನ ಬಗ್ಗೆ ಶುದ್ಧ ಯಾಂತ್ರಿಕ ಇಲ್ಲವೇ ಭೌತಿಕ ವಿವರಣೆಯನ್ನು ನೀಡಲೆತ್ನಿಸಿದರು. ವಿಶ್ವವೆಂಬ ಪುಸ್ತಕವು ಗಣಿತದ ಭಾಷೆಯಲ್ಲಿ ಲಿಖಿತವಾಗಿದೆಯೆಂದು ಸಾರಿದ ಇವರು ಜಗತ್ತಿಗೆ ಸಂಖ್ಯಾತ್ಮಕ ವಿವರಣೆಯನ್ನು ನೀಡಿದ ಪೈಥಾಗೊರಾಸ್ ಯತ್ನವನ್ನು ಮುಂದುವರೆಸಿದರು. ಗಣಿತವೊಂದೇ ಇವರಿಗೆ ಅತಿ ಶ್ರೇಷ್ಠ ವಿಜ್ಞಾನವಾಯಿತು, ಇವರ ದೃಷ್ಟಿಯಲ್ಲಿ ಅಳತೆಗೆ ಸಿಗುವುದು ಸ್ವೀಕಾರಾರ್ಹವಾದರೆ ಅಳತೆಗೆ ನಿಲುಕದ್ದು ತಿರಸ್ಕಾರ ಯೋಗ್ಯವಾಯಿತು. ಇವರು ನಿಸರ್ಗದ ಘಟನೆಗಳೆಲ್ಲವೂ ನಿರ್ದಿಷ್ಟನಿಯಮಗಳಿಗೆ ಅಧೀನವಾದ ಕಾಯಗಳ (Bodies) ಚಲನೆಯಿಂದ ಸಂಭವಿಸುವುದೆಂಬುದನ್ನು ಮನಗಂಡರು. ಉದಾಹರಣೆಗೆ **ಲಿಯೊನೊರ್ಡೊ ಡಾವಿಂಚಿ** (1452–1519) ಖಗೋಳಶಾಸ್ತ್ರದ ಬಗ್ಗೆ ಅನೇಕ ಅಂಶಗಳನ್ನು ಮುಂದಿಟ್ಟ. ಅನಂತರ **ಕೊಪರ್ನಿಕಸ್** (1473–1543) ಸೂರ್ಯ ಕೇಂದ್ರಿಕ ಸಿದ್ಧಾಂತವನ್ನು ಪ್ರತಿಪಾದಿಸಿದ. ಇದನ್ನು ರೋಮನ್ ಕ್ಯಾಥೊಲಿಕ್ ಚರ್ಚ್ ತನ್ನ ಮತಕ್ಕೆ ಮಾರಕವೆಂದು ಪರಿಗಣಿಸಿ ಈ ಕುರಿತ ಸಾಹಿತ್ಯವನ್ನು 1616 ರಲ್ಲಿ ನಿಷಿದ್ಧಗ್ರಂಥಗಳ ಪಟ್ಟಿಯಲ್ಲಿ (The Index) ಇರಿಸಿತು.

ಅನಂತರ **ಗೆಲಿಲಿಯೋ** (1564–1642) ವಿಕಾರವು ಅಣು ಅಥವಾ ಭಾಗಗಳಲ್ಲಿ ಮಾತ್ರ ಎಂಬ ಡೆಮೊಕ್ರೈಟಸ್ ವಾದದಿಂದ ಪ್ರಭಾವಿತನಾದ. ಆತನ ಪ್ರಕಾರ ವಾಸ್ತವವಾಗಿ ವಸ್ತುಗಳಿಗೆ ಉತ್ಪತ್ತಿಯೂ ಇಲ್ಲ, ನಾಶವೂ ಇಲ್ಲ, ಎಲ್ಲ ಘಟನೆಗಳಿಗೂ ಅಣುಗಳ ಚಾಲನೆಯೇ ಕಾರಣ. ಗೆಲಿಲಿಯೋ ಕೊಪರ್ನಿಕಸ್‌ನ ಸೂರ್ಯಕೇಂದ್ರಿಕ ಸಿದ್ಧಾಂತವನ್ನು ಸಮರ್ಥಿಸಿದ. ಇದು ರೋಮನ್ ಕ್ಯಾಥೊಲಿಕರಿಗೆ ಅಶಾಸ್ತ್ರೀಯವಾಗಿ ಅವರು ಆತನನ್ನು ನ್ಯಾಯಸ್ಥಾನದಲ್ಲಿ (The Inquisition) 1633ರಲ್ಲಿ ಹಾಜರುಪಡಿಸಿದರು. ಬಲಾತ್ಕಾರದಿಂದ ಗೆಲಿಲಿಯೋ ತಾನು ಮಾಡಿಲ್ಲದ ತಪ್ಪನ್ನು ಒಪ್ಪಿಕೊಂಡು ತನ್ನ ಅಭಿಪ್ರಾಯವನ್ನು ತ್ಯಜಿಸಿರುವುದಾಗಿ ಶಪಥಮಾಡಿದ ನಾದರೂ ಎದ್ದು ನಿಲ್ಲುವಾಗ ತನ್ನೊಳಗೆ ''E Pur Si muove'' ಅಂದರೆ ''ಹಾಗಿದ್ದರೂ ಅದು (ಭೂಮಿ) ಸುತ್ತುತ್ತದೆ'' ಎಂದನಂತೆ. ಅವನ ಟೆಲಿಸ್ಕೋಪ್ ಚಂದ್ರನ ಬೆಳಕಿನ ಪ್ರತಿಫಲನ ಲಕ್ಷಣ, ಸೌರವ್ಯೂಹದ ಅತಿದೊಡ್ಡಗ್ರಹವಾದ ಜ್ಯುಪಿಟರ್‌ನ (ಗುರು) ಚಂದ್ರಗಳು, ವೀನಸ್‌ನ (ಶುಕ್ರ) ಹೊರವೈ, ಶನಿಯ ಉಂಗುರಗಳು, ಸೂರ್ಯನ ಕಲೆಗಳು (ಸನ್‌ಸ್ಪಾಟ್ಸ್) ಮತ್ತು ಕಕ್ಷೆಯಲ್ಲಿ ಸೂರ್ಯನ ಸುತ್ತುವಿಕೆ—ಇವೇ ಮುಂತಾದ ವೈಜ್ಞಾನಿಕ ಅಂಶಗಳನ್ನು ಬಯಲಿಗೆಳೆಯಿತು. ಗೆಲಿಲಿಯೋ ಯಂತ್ರ 'ಅಥವಾ ಚಲನಶಾಸ್ತ್ರದ ಪ್ರಯೋಗಗಳಿಗೆ ಹಾಗೂ ಗತಿವೃದ್ಧಿ (Acceleration) ಮತ್ತು ಲೋಲಕತತ್ತ್ವಗಳಿಗೂ ಪ್ರಸಿದ್ಧ.

ಅನಂತರ **ಕೆಪ್ಲರ್** (1571–1630) ಸೂರ್ಯಕೇಂದ್ರಿಕ ಸಿದ್ಧಾಂತವನ್ನು ಮತ್ತೊಮ್ಮೆ ಖಚಿತಪಡಿಸಿ ಗ್ರಹಗಳ ಪಥವು ಅಂಡಾಕಾರವೆಂಬ ಸಂಶೋಧನೆಯಿಂದ ಟಾಲೆಮಿಯ ವರ್ತುಲವಾದವನ್ನು ಚೂರ್ಣಗೊಳಿಸಿದ, ಧೂಮಕೇತುಗಳನ್ನು

ಅಧ್ಯಯನವಮಾಡಿದ ಆತನು ಸಮುದ್ರದ ಉಬ್ಬರಕ್ಕೆ ಚಂದ್ರನನ್ನು ಹೊಣೆಯಾಗಿಸಿದ. ಸೂರ್ಯನಿಂದ ಹೊರಹೊಮ್ಮುವ ಆಯಸ್ಕಾಂತೀಯ ಪ್ರಭಾವವೇ ಗ್ರಹಗತಿಗೆ ಕಾರಣವೆಂಬ ತನ್ನ ವಾದದಲ್ಲಿ ನ್ಯೂಟನ್ನಿನ ಗುರುತ್ವಾಕರ್ಷಣ ನಿಯಮವನ್ನು ಮುಂಭಾವಿಸಿದ. ಅನಂತರ ನ್ಯೂಟನ್ (1642–1727) ಗೆಲಿಲಿಯೋ ಮತ್ತು ಕೆಪ್ಲೆರ್ ಸಮರ್ಥಿಸಿದ ಸೂರ್ಯಕೇಂದ್ರದ ಸಿದ್ಧಾಂತವನ್ನು ನಿಸ್ಸಂದೇಹಗೊಳಿಸಿದ.

ವಿಶಾಲವಿಶ್ವದ ಅಗಾಧತೆಯನ್ನು ಕಂಡು ದಿಗ್ಭ್ರಮೆಗೊಂಡ ಬ್ರೂನೋ (1548–1600) ತಾರೆಗಳೂ ಸ್ಥಿರವೆಂದೂ ಮತ್ತು ಅವೂಕೂಡ ನಮ್ಮ ರೀತಿಯ ಗ್ರಹವ್ಯವಸ್ಥೆಗಳೆಂದು ಭಾವಿಸಿದ. ಸ್ಟೋಯಿಕರ ಜರ್ಮ್ ಸಿದ್ಧಾಂತವನ್ನು ನೆನಪಿಗೆ ತರುವ ಆತನ ಪರಮಾಣುವಾದವು ಅನಂತರ ಲಿಬ್ನಿಜನ ಮೊನಾಡುಗಳ ಸಿದ್ಧಾಂತಕ್ಕೆ ಎಡೆಮಾಡಿಕೊಟ್ಟಿತು. ಆದರೆ ಲಿಬ್ನಿಜನು ಮೊನಾಡುಗಳು ಕೇವಲ ಮಾನಸಿಕ ವೆನ್ನುವನು. ಆದರೆ ಬ್ರೂನೋ ಮೊನಾಡುಗಳಲ್ಲಿ ಭೌತಿಕ ಮತ್ತು ಮಾನಸಿಕಗಳೆಂಬ ಪ್ರಭೇದವನ್ನು ಗುರುತಿಸುವನು. ಬ್ರೂನೋ ಪ್ರಕಾರ ಜಗತ್ತು ಇಂತಹ ಅಸಂಖ್ಯಾತ ಮೊನಾಡು ಅಥವಾ ಸೂಕ್ಷ್ಮ ಘಟಕಗಳಿಂದ ರಚಿತವಾಗಿದೆ. ಆದ್ಯಂತಗಳಿಲ್ಲದ ಇವು ವಿವಿಧರೀತಿಯಲ್ಲಿ ಸಂಯೋಜಿಸಿ ಇದರಿಂದ ಕಾಯಗಳು ತನ್ಮೂಲಕ ಜಗತ್ತಿನ ವಿವಿಧ ವಸ್ತುಗಳು ಉತ್ಪನ್ನವಾಗುತ್ತವೆ. ವಿಕಾರವಿರುವುದು ಅಣುಗಳ ಸಂಯೋಗ ವಿಯೋಗದಲ್ಲೇ ಹೊರತು ಮೂಲತಃ ಅಣುಗಳಲ್ಲಿ ಅಲ್ಲ. ಈ ಜಗತ್ತು ರೂಪ ಮತ್ತು ಪ್ರಕೃತಿಗಳ ಮಿಲನದ ಫಲವೆನ್ನುವಲ್ಲಿ ಅರಿಸ್ಟಾಟಲನ ಪ್ರಭಾವವನ್ನು ನಾವು ಕಾಣ ಬಹುದು. ಆತ್ಮವು ನಿತ್ಯಪರಮಾಣು, ಈಶ್ವರನು ಪರಮಾಣುಗಳ ಪರಮಾಣು. ಬ್ರೂನೋ ಪ್ರಕಾರ ಈಶ್ವರನು ದ್ವೈತರಹಿತನೂ ಹೌದು, ಅನೇಕಸಹಿತನಾದ ಏಕನೂ ಹೌದು.

ಬ್ರೂನೋ, ವಿಶ್ವವು ಜೈವಿಕವೆಂಬ ವಿಭಿನ್ನವಾದವನ್ನೂ ಮುಂದಿಡುತ್ತಾನೆ. ಅವನ ಪ್ರಕಾರ ಭೌತಾಣುಗಳಿಂದ ಕೂಡಿರುವ ಪ್ರತಿಯೊಂದು ವಸ್ತುವಿಗೂ ಒಂದು ಆತ್ಮವಿದೆ ವಿಶ್ವೇಶ್ವರರನ್ನು ಐಕ್ಯಗೊಳಿಸುವಲ್ಲಿ ಆತನು ವಿಶ್ವದೇವೈಕ್ಯವಾದವನ್ನೂ ಮುಂದಿಸುತ್ತಾನೆ. ಈ ವಾದದ ಪ್ರಕಾರ ಈಶ್ವರ ಪ್ರಕೃತಿಗಳು ಒಂದೇ ಒಂದೇ ತತ್ತ್ವವು ವಿಭಿನ್ನದೃಷ್ಟಿಕೋನಗಳಿಂದ ಸೃಷ್ಟಿಸುವ ಈಶ್ವರ ಮತ್ತು ಸೃಷ್ಟಿಸಲ್ಪಡುವ ವಿಶ್ವ ವಾಗುತ್ತದೆ. ಕಾರಣದೃಷ್ಟಿಯಿಂದ, ಎಂದರೆ, ಅದರಿಂದಲೇ ಎಲ್ಲವೂ ಹೊರಹೊಮ್ಮಿ ಮತ್ತು ವಿಶ್ರಾಂತಸ್ಥವಾದ ಅದರಲ್ಲೇ ಎಲ್ಲವೂ ಉಜ್ಜೀವಿಸುವುದೆಂಬ ಅರ್ಥದಲ್ಲಿ ಅದು ಈಶ್ವರ (Natura Naturane). ಕಾರ್ಯದೃಷ್ಟಿಯಿಂದ, ಎಂದರೆ ಅದು ತಳೆಯುವ ವಿವಿಧ ಸ್ಥೂಲರೂಪಗಳ ದೃಷ್ಟಿಯಿಂದ ಅದು ವಿಶ್ವವೂ ಹೌದು (Natura Naturata). ಜಗತ್ತನ್ನು ಕುರಿತ ಬ್ರೂನೋನ ಈ ತಾತ್ತ್ವಿಕ ನಿರೂಪಣೆಯನ್ನು ಅನಂತರ ಸ್ಪಿನೋಜ ತನ್ನ ಚಿಂತನೆಯಲ್ಲಿ ಅಳವಡಿಸಿಕೊಂಡ. ಬ್ರೂನೋ ಚಿಂತನೆಯ ತಾರ್ಕಿಕ ಪರಿಣಾಮ ವೇನೇ ಇರಲಿ, ಮತಾಂಧರಿಗೆ ಆತನು ತೆತ್ತಬೆಲೆ ದುಬಾರಿಯಾಗಿತ್ತು. ಆತನು ತನ್ನ

ಜೀವವನ್ನೇ ತೆರಬೇಕಾಯಿತು. ರೋಮನ್ ಕ್ಯಾಥೊಲಿಕ್ ಚರ್ಚ್ ಈತನ ಸಿದ್ಧಾಂತವನ್ನು ಪಾಷಂಡಿತನವೆಂದು ಪರಿಗಣಿಸಿ 1592ರಲ್ಲಿ ಅವನನ್ನು 7 ವರ್ಷಗಳ ಕಾಲ ಸೆರೆಮನೆಯಲ್ಲಿರಿಸಿತು. ಅನಂತರ ಅವನು ತನ್ನ ಅಭಿಪ್ರಾಯವನ್ನು ಬದಲಿಸಿಕೊಳ್ಳದ ಕಾರಣ ಅವನನ್ನು 1600ರಲ್ಲಿ ರೋಮನ್ ಸುಡುಗಂಬಕ್ಕೆ ಕಟ್ಟಿ ಸಜೀವವಾಗಿ ಸುಡಲಾಯಿತು.

ಫ್ರಾನ್ಸಿಸ್ ಬೇಕನ್ನನು (1561–1626) ಜಗತ್ತಿನ ಬಗ್ಗೆ ವ್ಯವಸ್ಥಿತವಾದ ಯಾವ ಸಿದ್ಧಾಂತವನ್ನೂ ಮಂಡಿಸಲಿಲ್ಲವಾದರೂ ಇತರರಿಗೆ ಆ ನಿಟ್ಟಿನಲ್ಲಿ ದಾರಿ ತೋರಿದನು. ಆತನು ಪಾಂಡಿತ್ಯವಾದಿಗಳ ಪ್ರಾಬಲ್ಯವನ್ನು ಹಿಮ್ಮೆಟ್ಟಿಸಿ ಆಧುನಿಕ ವಿಜ್ಞಾನದ ಪಿತನೆನಿಸಿದನು. ಆತನ ಪ್ರಕಾರ ಮತಧರ್ಮವನ್ನು ಬೌದ್ಧಿಕವಾಗಿ ಸಮರ್ಥಿಸುವ ನಮ್ಮೆಲ್ಲ ಯತ್ನವೂ ವ್ಯರ್ಥ. ಆತನು ತತ್ತ್ವಶಾಸ್ತ್ರ ಮತ್ತು ಮತಧರ್ಮದ ಎಲ್ಲೆಗಳನ್ನು ಪ್ರತ್ಯೇಕಿಸಿದ. ಆತನ ಪ್ರಕಾರ ಜಗತ್ತಿನ ರಹಸ್ಯವನ್ನು ಭೇದಿಸುವ ಏಕೈಕ ಸಾಧನವೆಂದರೆ ನಿಗಮನ (Induction). ಈ ವಿಧಾನದಲ್ಲಿ ನಾವು ವಸ್ತುಗಳ ಸಾದೃಶ್ಯ ವೈದೃಶ್ಯಗಳ ಜಾಗರೂಕ ಅಧ್ಯಯನದ ಮೂಲಕ ಅವುಗಳ ಹಿನ್ನೆಲೆಯಲ್ಲಿ ಕೆಲಸಮಾಡುವ ನಿಯಮಗಳನ್ನು ಕಂಡುಹಿಡಿಯುತ್ತೇವೆ. ಅನಂತರ ಜಗತ್ತನ್ನು ನಮ್ಮ ವಶದಲ್ಲಿಟ್ಟುಕೊಳ್ಳಲು ಈ ನಿಯಮಗಳನ್ನು ಸನ್ನೆಗೋಲುಗಳಾಗಿ ಬಳಸುತ್ತೇವೆ. ಬೇಕನ್ನಿನ ಪ್ರಕಾರ ಜಗತ್ತಿನಲ್ಲಿ ಈ ನಿಯಮಗಳಿಗೆ ಅಧೀನವಾಗಿ ವರ್ತಿಸುವ ಬಿಡಿಕಾಯಗಳ ಹೊರತಾಗಿ ಮತ್ತೇನೂ ಇಲ್ಲ.

ಪಾಂಡಿತ್ಯವಾದಿಗಳಿಂದ (Scholastics) ಸಂಪೂರ್ಣ ವಿಮುಖನಾಗಿ ಈ ಜಗತ್ತಿಗೆ ಗಣಿತಶಾಸ್ತ್ರೀಯ ಮತ್ತು ಭೌತಿಕನಿರೂಪಣೆ ನೀಡುವಲ್ಲಿ ಥಾಮಸ್ ಹಾಬ್ಸ್ (1588–1679) ಪೈಥಾಗೊರಾಸ್ ಮತ್ತು ಗೆಲಿಲಿಯೋರ ಪರಂಪರೆಯನ್ನು ಮುಂದುವರೆಸಿದ. ಆತನು ಯಾವ ಸಮರ್ಥನೆಯನ್ನೂ ನೀಡದೆ ಈ ಜಗತ್ತು ನಿರಂತರ ಚಲನೆಯಲ್ಲಿರುವ ಅನೇಕ ಕಾಯಗಳಿಂದ ಕೂಡಿದೆಯೆನ್ನುತ್ತಾನೆ. ದೇಶವನ್ನು ವ್ಯಾಪಿಸುವ ಈ ಕಾಯಗಳಿಗೆ ಚಲನೆಯಲ್ಲದೇ ಸ್ಥಾಯಿ, ಬಣ್ಣ, ದೃಢತೆ—ಇವೇ ಮುಂತಾದ ಲಕ್ಷಣಗಳಿವೆ. ಇವುಗಳಿಗೆ ಪರ್ಯಾಯಗಳೆಂದು (Accidents) ಹೆಸರು. ಕಾಯದ (Body) ಸ್ಥಾನಪಲ್ಲಟವೇ ಚಲನೆ ಕಾಯಗಳಲ್ಲಿ ಅನ್ಯೋನ್ಯ ಪರಿಣಾಮವಿದೆ. ಕಾರಣನಿಯಮವೆನ್ನಲ್ಪಡುವ ಈ ಪರಿಣಾಮವು ಪರ್ಯಾಯವೊಂದರ ಜನ್ಮ ಇಲ್ಲವೇ ನಾಶವನ್ನು ಸೂಚಿಸುತ್ತದೆ. ಉದಾಹರಣೆಗೆ ಒಂದು ನಿರ್ದಿಷ್ಟಸ್ಥಳದಲ್ಲಿ ಸ್ಥಿರವಾಗಿರುವ ಕಾಯದ ಮೇಲೆ ಚಲನೆಯಲ್ಲಿರುವ ಮತ್ತೊಂದು ಕಾಯವು ಪ್ರಭಾವಬೀರಿದಾಗ ಅದು ತನ್ನ ಸ್ಥಾಯಿತ್ವವನ್ನು ಕಳೆದುಕೊಂಡು ಚಲನೆಯೆಂಬ ಮತ್ತೊಂದು ಪರ್ಯಾಯವನ್ನು ಪಡೆದುಕೊಳ್ಳುತ್ತದೆ. ಮೂಲತಃ ಭೌತವಾದಿಯಾದ ಹಾಬ್ಸ್ ಈಶ್ವರನನ್ನು ಅಂಗೀಕರಿಸುವುದು ಒಂದು ವಿಶೇಷ. ಹಾಬ್ಸ್ ಪ್ರಕಾರ ಕಾಯಗಳಿಗೆ ಚಲನೆಯು ಸೃಷ್ಟಿಕಾಲದಲ್ಲಿ ದತ್ತವಾಗುವುದು ಈಶ್ವರನಿಂದ. ಮತ್ತೊಂದು ವಿಚಿತ್ರವೆಂದರೆ ಹಾಬ್ಸ್

ತನ್ನ ಈ ಭೌತವಾದವನ್ನು ದೇವರಿಗೂ ಅನ್ವಯಿಸುತ್ತಾನೆ. ಆತನ ಪ್ರಕಾರ ದೇವರು ಕೂಡ ಚಲನೆಯಲ್ಲಿರುವ ಒಂದು ಭೌತವಸ್ತು. ಚಲನೆಯೆಂಬ ಶಬ್ದವನ್ನು ನಾವು ಕ್ರಿಯಾಶೀಲತೆಯೆಂದು ಅರ್ಥೈಸಿದರೂ ಈಶ್ವರನು ಯಾವ ಅರ್ಥದಲ್ಲಿ ಭೌತ ಮತ್ತು ಯಾವ ಅಂಶವು ಆತನನ್ನು ಈಶ್ವರನನ್ನಾಗಿಸುತ್ತದೆ ಎಂಬುದು ಹಾಬ್ಸ್‌ನ ವಿಚಾರ ಧಾರೆಯಲ್ಲಿ ಸ್ಪಷ್ಟವಿಲ್ಲ.

ಡಾ. ಮಾಲತಿ ಠಂಡನ್

ಬ್ರಜಮಂಡಲ

ಉತ್ತರ ಭಾರತದ ಪ್ರಸಿದ್ಧ ಯಾತ್ರಾಸ್ಥಳವಾದ ಬ್ರಜಮಂಡಲವು ಬಹು ಪ್ರಾಚೀನವಾದ ಇತಿಹಾಸವನ್ನು ಹೊಂದಿದೆ. ಅನಂತಕಾಲದಿಂದ ನಮ್ಮ ನಾಡಿನಲ್ಲಿ ನೆಲೆಗೊಂಡಿರುವ ಈ ಧಾರ್ಮಿಕ ಕೇಂದ್ರ ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ.

ಶ್ರೀಕೃಷ್ಣನು ಜನ್ಮವೆತ್ತಿದ ಪ್ರದೇಶವನ್ನು ಬ್ರಜಮಂಡಲವೆಂದು ಕರೆಯುತ್ತಾರೆ. ಬ್ರಜವೆಂದರೆ ಹಸುಗಳು ಮೇಯುವ ಸ್ಥಳ. ಆದ್ದರಿಂದ ಇದರ ಇನ್ನೊಂದು ಹೆಸರು ಗೋಲೋಕ ಎಂದು. 'ವ್ರಜನ್ತಿ ಗಾವೊ ಯಸ್ಮಿನ್ನಿತಿ ವ್ರಜಃ'.

'ವ್ರಜ' ಎಂಬ ಪದದ ವ್ಯುತ್ಪತ್ತಿಯನ್ನು ಹಿಂದಿ ಭಾಷೆಯ ಪ್ರಸಿದ್ಧ ಭಾಷಾ ತಜ್ಞರಾದ ಡಾ. ಧೀರೇಂದ್ರವರ್ಮರು ಕೊಟ್ಟಿದ್ದಾರೆ. ಸಂಸ್ಕೃತದಲ್ಲಿ 'ಬ್ರಜ'ವನ್ನು ಅವರಂತೆ 'ವ್ರಜ'ವೆಂದು ಉಚ್ಚರಿಸುತ್ತಾರೆ. ಸಂಸ್ಕೃತದಲ್ಲಿ 'ವ್ರಜ' ಧಾತುವಿಗೆ 'ಹೋಗು' ಎಂಬ ಅರ್ಥವಿದೆ. ಮೊತ್ತಮೊದಲು ಈ ಪದವನ್ನು ಋಗ್ವೇದ ಸಂಹಿತೆಯಲ್ಲಿ ಬಳಸಲಾಗಿದೆ. ಅದು ಋಗ್ವೇದದ ಮಂತ್ರಗಳಲ್ಲಿ ಕಂಡುಬರುತ್ತದೆ. ಮಂ. 2, ಸೂ. 38, ಮಂ. 38, ಮಂ. 5, ಸೂ. 35, ಮಂ. 4, ಮಂ. 10 ಇತ್ಯಾದಿ. ಆದರೆ ಕೆಲವು ಹಸುಗಳ ಗುಂಪುಗಳು ಮೇಯುವ ಸ್ಥಳ ಅಥವಾ ಕೊಟ್ಟಿಗೆ ಎಂದು ಅಲ್ಲಿ ಅದರ ಅರ್ಥ. ಅಲ್ಲಿ ಇದರ ಅರ್ಥ ಒಂದು ಭೂಭಾಗ ಅಥವಾ ಪ್ರದೇಶವಲ್ಲ. 'ವ್ರಜ' ಪದವು ಪಟ್ಟಣ ಅಥವಾ ಪ್ರದೇಶ ಎಂಬ ಅರ್ಥದಲ್ಲಿ ಮಹಾಭಾರತ ಅಥವಾ ರಾಮಾಯಣದಲ್ಲಿಯೂ ಉಪಯೋಗಿಸಿಲ್ಲ. ಆದರೆ 'ಹರಿವಂಶ ಪುರಾಣ'ದಲ್ಲಿ ಉಲ್ಲೇಖಿತವಾಗಿರುವ 'ವ್ರಜ' ಶಬ್ದವು ನಂದನಿಗೆ ಸೇರಿದ ಹಸುಗಳು ಮೇಯುವ ಸ್ಥಳ ಅಥವಾ 'ನಂದನ ವ್ರಜ' ಎಂಬ ಅರ್ಥ ಕೊಡುತ್ತದೆ. ಕಾಲಾನುಕ್ರಮದಲ್ಲಿ ಈ ಭೂಭಾಗದಲ್ಲಿನ ಭಾಷೆಯೂ 'ಬ್ರಜಭಾಷೆ' ಎಂದು ಕರೆಯಲ್ಪಡಲಾರಂಭಿಸಿತು.

ಕೃಷ್ಣಭಕ್ತ ಸೂರದಾಸನ ಪದ್ಯಗಳ ಒಂದು ವೈಚಿತ್ರ್ಯವೆಂದರೆ ವ್ರಜ ಪ್ರದೇಶದಿಂದ ಮಥುರೆಗೆ ಕೃಷ್ಣನನ್ನು ಕರೆದುಕೊಂಡು ಹೋದವನು ಅಕ್ರೂರ. ಇಲ್ಲಿ ಕವಿಯ ವರ್ಣನೆಗಳಲ್ಲಿಯೂ ಬ್ರಜ ಪ್ರದೇಶದ ಪರಿಸರವೆಂದರೆ ಒಂದು ವಿಸ್ತೃತವಾದ ಭೂಭಾಗ.

ಇಲ್ಲಿ 'ಬ್ರಜಪ್ರದೇಶ ಮತ್ತು ಮಥುರಾ ಬೇರೆ ಬೇರೆ ಪ್ರದೇಶಗಳೆಂಬಂತೆ ತೋರುತ್ತದೆ. ವ್ರಜಮಂಡಲದ ಕೇಂದ್ರವಾದ ಮಥುರೆಗೆ ವ್ರಜವು ಯಾವ ರೀತಿಯಲ್ಲೂ ಸಂಬಂಧ ಪಟ್ಟಿಲ್ಲ ಎಂಬಂತೆ ಕಂಡುಬರುತ್ತದೆ. ಇದಕ್ಕೆ ಕಾರಣವು ಹೀಗಿರಬಹುದು : ಮಥುರೆಯ ರಾಜ ಕ್ರೂರ ಕಂಸ. ಅವನು ತನ್ನ ಕ್ರೂರಕೃತ್ಯಗಳಿಂದಾಗಿ ಕುಪ್ರಸಿದ್ಧನಾಗಿದ್ದ. ಆದುದರಿಂದ ಪ್ರಾಯಶಃ ಆಹೀರರೆಂಬ ಗೊಲ್ಲರೂ ಮತ್ತು ವ್ರಜಪ್ರದೇಶದ ಸಾಧಾರಣ ಜನರು ಮಥುರೆಗೆ ಹೋಗುತ್ತಿರಲಿಲ್ಲ. ಸಾರ್ವಜನಿಕ ಸಂಚಾರಕ್ಕೆ ಮಥುರೆಯಲ್ಲಿ ಜನಗಳಿಗೆ ಬಹಳ ವ್ಯತ್ಯಾಸವಿತ್ತು. ಮಥುರೆಯ ನಾಗರಿಕರು ಗೊಲ್ಲರು ಇರುವ ಸ್ಥಳ ದಿಂದ ದೂರವಿರುತ್ತಿದ್ದರು. ಆದುದರಿಂದ ಅವರನ್ನು ವ್ರಜವಾಸಿಗಳೆಂದು ಕರೆಯು ತ್ತಿರಲಿಲ್ಲ. ವ್ರಜವಾಸಿ ಎಂದರೆ ವ್ರಜಪ್ರದೇಶದಲ್ಲಿ ವಾಸಿಸುವ ಜನರು. ಮಥುರೆಯ ನಿವಾಸಿಗಳನ್ನು ಎಂಟು ಕವಿಗಳ ಕೂಟವಾದ 'ಅಷ್ಟಛಾಪ' ಕವಿಗಳು 'ಮಧುಬನಿಯಾ' ಎಂದರೆ ಮಧುವನದಲ್ಲಿ ವಾಸಿಸುವರೆಂದು ಕರೆದಿದ್ದಾರೆ. ಮಥುರೆಯ ಜನರು ನಾಗರಿಕರೆಂದು ವ್ರಜದ ಜನಗಳು ಹಳ್ಳಿಯವರೆಂದೂ ಅವರು ಭಾವಿಸಿದ್ದಾರೆ. ಕವಿಗಳ ಇಂತಹ ವರ್ಣನೆಗಳಿಂದ ಮಥುರಾ ಮತ್ತು ವ್ರಜಪ್ರದೇಶ ಬೇರೆ ಬೇರೆ ಎರಡು ಭೂಭಾಗ ಎಂಬಂತೆ ಕಂಡುಬರುತ್ತದೆ. ಆದರೆ ಮಥುರೆ ಬ್ರಜಮಂಡಲದ ಕೇಂದ್ರನಗರ ಎಂಬುದು ಭೌಗೋಳಿಕ ಸತ್ಯ.

ಸೂರದಾಸನ ಕಾವ್ಯದಲ್ಲಿ ವ್ರಜಮಂಡಲದ ವಿಸ್ತೃತ ವರ್ಣನೆ ಇದೆ. ಅವರ ನಡೆ ನುಡಿ, ಪರ್ವ–ಪರಂಪರೆ, ಧಾರ್ಮಿಕ ನಂಬಿಕೆಗಳು, ಹಬ್ಬ ಹುಣ್ಣಿಮೆಗಳು, ಉತ್ಸವ–ಜಾತ್ರೆಗಳು ಸಾಹಿತ್ಯ, ಸಂಸ್ಕೃತ ಭಿನ್ನ ಭಿನ್ನ ಋತುಗಳಲ್ಲಿ ವ್ರಜಮಂಡಲದ ಅಸಾಧಾರಣ ಸೌಂದರ್ಯದ ಮಹಿಮೆ ಎಲ್ಲವೂ ವರ್ಣಿಸಲ್ಪಟ್ಟಿವೆ. ಹಿಂದುಗಳು ಮಾತ್ರವಲ್ಲದೆ ಮುಸ್ಲಿಂ ಕವಿಗಳು ಮತ್ತೆ ಮತ್ತೆ ವ್ರಜದಲ್ಲಿಯೇ ಜನ್ಮಪಡೆಯಬೇಕೆಂಬ ಆಸೆಯನ್ನು ತೋರಿಸಿದ್ದಾರೆ. ಮುಸ್ಲಿಮ ಕವಿ ರಸಖಾನ್‌ನ ನುಡಿ ಶ್ರೀಕೃಷ್ಣನ ಬಗ್ಗೆ ಅವನ ಸಮರ್ಪಣಭಾವವನ್ನು ಹೀಗೆ ವರ್ಣಿಸಿದೆ : "ನಾನು ಮನುಷ್ಯನಾಗಿ ಹುಟ್ಟಬೇಕಾಗಿ ಬಂದರೆ ವ್ರಜದ ಗೋಕುಲ ಗ್ರಾಮದ ಗೊಲ್ಲರೊಡನೆ ವಾಸಿಸಬೇಕು". ಕೃಷ್ಣನು ಕೊಳಲು ಮತ್ತು ಕಂಬಳಿಯ ದರ್ಶನಕ್ಕಾಗಿ ಮೂರು ಲೋಕದ ಸಾಮ್ರಾಜ್ಯವನ್ನು ಬಿಟ್ಟುಕೊಡಲು ಸಿದ್ಧನಾಗಿದ್ದೇನೆ—ಎಂಬುದು ಆತನ ಭಕ್ತಿಯ ಪರಾಕಾಷ್ಠೆ. ಇದೇ ರೀತಿಯ ಭಾವನೆಗಳನ್ನು ರಹೀಮ ಮತ್ತು ಆಲವರ್ ಕವಿಗಳು ವ್ಯಕ್ತಪಡಿಸಿದ್ದಾರೆ.

ವ್ರಜಪದನ ವ್ಯಾಖ್ಯೆಗಳಿಗೆ ಮೇಲ್ಕಂಡ ವರ್ಣನೆ ಸಾಕ್ಷಿಯಾಗಿವೆ. ಈಗ 'ಮಂಡಲ'ವೆಂಬ ಪದವನ್ನು ಪರಿಶೀಲಿಸಬೇಕು. ಮಂಡಲವೆಂದರೆ ಒಂದು ಬೃಹದಾಕಾರದ, ಗೋಲಾಕಾರದ ಒಂದು ಭೂಭಾಗ. ಸಂಪೂರ್ಣ ಬ್ರಜಮಂಡಲದ ವಿಸ್ತಾರವೆಂದರೆ ಎಂಬತ್ತನಾಲ್ಕು ಕೋಸ. ಕೋಸದ ಅಳತೆಯು ಎರಡು ಮೈಲಿ ಅಥವಾ ಸಾವಿರದ ಐನೂರ ಇಪ್ಪತ್ತು ಗಜಗಳಾಗುವುದರಿಂದ 84 ಕೋಸಗಳಿಗೆ ನೂರ ಅರವತ್ತೆಂಟು (168) ಮೈಲಿಗಳಾಗುತ್ತವೆ. ಪ್ರಸಿದ್ಧ ಚರಿತ್ರಕಾರರಾದ ಗ್ರಾಸರ

ಅಭಿಪ್ರಾಯದಲ್ಲಿಯೂ, ಮಥುರೆ ನಗರ ವ್ರಜಮಂಡಲದ ಮಧ್ಯಸ್ಥಳ. ಮಥುರೆಯ ಸುತ್ತಲೂ ಎಂಬತ್ತನಾಲ್ಕು ಕಾಡುಗಳು. ಆದರಲ್ಲಿ ಪ್ರಸಿದ್ಧವಾದ ಕಾಡುಗಳು ಹನ್ನೆರಡು ಮತ್ತು ಇಪ್ಪತ್ತನಾಲ್ಕು ಉದ್ಯಾನಗಳು. ಇವುಗಳ ಹೆಸರುಗಳು ಹೀಗಿವೆ : ಮಧುವನ, ತಾಳವನ, ಕುಮುದವನ, ಬಹುಕುಲವನ, ಕಾಮವನ, ಖಾದಿರವನ, ವೃಂದಾವನ, ಭಾದ್ರವನ, ಭಾಂಡೀರವನ, ಬೇಲ್‌ವನ, ಲೋಹವನ, ಮತ್ತು ಮಹಾವನ. ಉದ್ಯಾನಗಳ ಹೆಸರುಗಳು ಹೀಗಿವೆ—ಗೋಕುಲ, ಗೋವರ್ಧನ, ಬರಸಾನ, ಸಂಕೇತ, ಪರಂಮಂದ್ರ, ಸಂದಗಾಂವ್ರ ಅರೀಂಗ, ಶೇಷಶಾಹಿ, ಮಾಟ, ಊಂಚಗಾಂವ, ಖೇಲವನ, ಶ್ರೀಕುಂಡ, ಗಂಧರ್ವವನ, ಪಾರಸೋಲಿ ಚಿಲಮೆ, ಚಿಲಫಬಚವನ, ಆದಿವದ್ರಿ ಕರಹಲಾ, ಆಜನೊಖ, ಪಿಯಾಸಾವನ, ಕೋಕಿಲವನ, ದಧಿವನ, ಕೋಟವನ ಮತ್ತು ರಾಹಲವನ.

ಇಲ್ಲಿ ವ್ರಜಮಂಡಲದ ಚರಿತ್ರೆಯ ಹಿನ್ನೆಲೆಯನ್ನು ನೋಡುವಾಗ ಒಂದು ಭೌಗೋಳಿಕ ಸತ್ಯವನ್ನು ಒಪ್ಪಬೇಕಾಗುತ್ತದೆ. ಏನೆಂದರೆ ಮೇಲೆ ಸೂಚಿಸಿರುವ ಕಾಡು ಮತ್ತು ಉದ್ಯಾನಗಳು ಮೊದಲಿನ ಜಾಗದಲ್ಲಿ ಇಲ್ಲವಾಗಿವೆ. ಅವು ಸರ್ಕಾರದಿಂದ ಸಾಗುವಳಿಗಾಗಿ ಸ್ವಚ್ಛವಾಗಿವೆ. ಆದರೆ ಹಳ್ಳಿಗಳು ಅಲ್ಲಿದ್ದ ಕಾಡುಗಳ ಹೆಸರನ್ನೇ ಹೊಂದಿವೆ. ಹಾಗೆಯೇ ಯಮುನಾ ನದಿಯೂ ಶ್ರೀಕೃಷ್ಣನ ಕಾಲದಲ್ಲಿ ಹರಿಯುತ್ತಿದ್ದ ಜಾಗದಿಂದ ತನ್ನ ದಾರಿ ಈಗ ಬದಲಾಯಿಸಿದೆ. ಇದು ಪ್ರಾಕೃತಿಕ ನಿಯಮ. ವಜ್ರಮಂಡಲದ ಹನ್ನೆರಡು ಪ್ರಸಿದ್ಧವಾದ ಕಾಡುಗಳ ಹೆಸರುಗಳನ್ನು ಸೂರದಾಸರು ತಮ್ಮ ಸೂರಸಾಗರ ಎಂಬ ಗ್ರಂಥದಲ್ಲಿಯೂ ಸೂಚಿಸಿದ್ದಾರೆ. ಅವು ಹೀಗಿವೆ: ಧಾಮ, ಮಥವನ ಅಥವಾ ಕುಮುದವನ, ಸುಂದರವನ, ಬಹುಲಾವನ, ಅಭಿರಾಮ, ಸಂದಗಾಂವ, ನಂದಗ್ರಾಮ, ಸಂಕೇತ, ಖಿದರ, ಕಾಮವನ, ಲೋಹವನ, ಮಾಟ, ಬೇಲವನ, ಭಾದ್ರವೃಹದ ಬನಗ್ರಾಮ. ಸೂರದಾಸರೂ ಹನ್ನೆರಡೇ ಕಾಡುಗಳ ಹೆಸರು ಸೂಚಿಸಿರುವುದರಿಂದ ಬಹುಶಃ ಅವರ ಕಾಲದಲ್ಲಿ ಎಂಬತ್ತನಾಲ್ಕು ಕೋಸ ವಿಸ್ತೃತವಾಗಿದ್ದ ವ್ರಜಮಂಡಲದ 84 ಕಾಡುಗಳು 168 ಮೈಲುಗಳ ಪರಿಸರದಲ್ಲಿ ಹನ್ನೆರಡು ಕಾಡುಗಳಾಗಿ ಉಳಿದಿರಬಹುದು. ಸೂರದಾಸರು ಬಾಲಮೋಹನ ಎಂಭತ್ತನಾಲ್ಕು ಕೋಸದ ವ್ರಜಪ್ರದೇಶದಲ್ಲಿ ಆಡುತ್ತಿದ್ದಾನೆಂದು ಸಾಮವೇದ, ಋಗ್ವೇದ, ಯಜುರ್ವೇದಗಳು ನಿರಂತರವಾಗಿ ಹಾಡುತ್ತವೆ ಎಂದು ಒಂದು ದ್ವಿಪದಿಯಲ್ಲಿ ವರ್ಣಿಸಿದ್ದಾರೆ. ವ್ರಜಮಂಡಲದ ಭೌಗೋಳಿಕ ವೈಶಾಲ್ಯವನ್ನು ತಿಳಿಸುವ ಒಂದು ದ್ವಿಪದಿ ಬಹಳ ಪ್ರಸಿದ್ಧವಾಗಿದೆ. ಅದು ಹೀಗಿದೆ.

ಇತ ಬರಹದ ಇತ ಸೊನಹದ, ಉತ ಸೂರಸೇನ ಕೊ ಗಾಮ.
ಬ್ರಜ ಚೌರಾಸಿ ಕೋಷಮೆ, ಮಥರಾಮಂಡಲ ಮಾಹ.

ಇದರ ಅರ್ಥವೇನೆಂದರೆ ಎಂಭತ್ತನಾಲ್ಕು ಕೋಸ ವಿಸ್ತೀರ್ಣವುಳ್ಳ ವ್ರಜಮಂಡಲದ

ಒಂದು ಕಡೆ ಬರಹದವೂ ಸೋನಹದವೂ ಉಂಟು, ಇನ್ನೊಂದು ಕಡೆ ಶೂರಸೇನನ ಊರು ಮತ್ತು ವ್ರಜದ ಎಂಬತ್ತನಾಲ್ಕು ಕೋಶದಲ್ಲಿ ಮಥುರಾಮಂಡಲವು ಉಂಟು.

ಮಥುರಾ ಮ್ಯೆಮೋರದಲ್ಲಿ (ಮೂರನೆಯ ಪುಸ್ತಕ--ಪುಟ 79) ಗ್ರೌಸರು ಈ ವಿಷಯವನ್ನು ಹೀಗೆ ವಿವರಿಸಿದ್ದಾರೆ.

ವ್ರಜದ ಒಂದು ಅಂಚು ಬಾರವರೆಗೆ ಹೋಗುತ್ತದೆ, ಎರಡನೆಯ ಕಡೆ ಶೋಣ ನದಿಯೂ ಹರಿಯುತ್ತದೆ, ಮೂರನೆಯ ಕಡೆ ಯಮುನಾ ನದಿಯ ದಡದಲ್ಲಿರುವ ಶೂರಸೇನ ಎಂಬ ಊರು ಇದೆ. ಅದೇ ಈಗಿನ ಬಟೇಶ್ವರ ಎಂಬ ಊರು. ಶೋಣನದಿಯು ಅಂಚು ಗುರಗಾಂ ಎಂಬ ಊರನ್ನು ಮುಟ್ಟುತ್ತದೆ. ಈಗ ಗುರಗಾಂ ಹರಿಯಾಣ ಪ್ರಾಂತ್ಯದಲ್ಲಿದೆ. 1553ರಲ್ಲಿ 'ವ್ರಜವಿಲಾಸ'ವೆಂಬ ಪುಸ್ತಕವು ಸಂಸ್ಕೃತದಲ್ಲಿ ರಚಿತ ವಾಗಿದೆ. ಇದರಲ್ಲಿ ವ್ರಜದ ಯಾತ್ರೆಯ ವಿವರವನ್ನು ಬರೆಯಲಾಗಿದೆ. ಇದರ ಪ್ರಕಾರ ವ್ರಜಪ್ರದೇಶದ 133 ಕಾಡುಗಳಲ್ಲಿ 91 ಯಮುನಾ ನದಿಯ ಬಲದಂಡೆಯಲ್ಲಿ ಮತ್ತು 91 ಕಾಡುಗಳು ಎಡದಂಡೆಯಲ್ಲಿ ಇವೆ. ಇದೇ ಪುಸ್ತಕದಲ್ಲಿ ವ್ರಜಮಂಡಲದ ವ್ಯಾಪ್ತಿಗೆ ಸಂಬಂಧಿಸಿದ ಒಂದು ದ್ವಿಪದಿಯು ಬರುತ್ತದೆ. ಅದು ಹೀಗಿದೆ :

> ಪೂರ್ವ ಹಾಸ್ಯವನನೀಯ ಪಶ್ಚಿಮಸ್ಯೋಪಹಾರಿಕಂ,
> ದಕ್ಷಿಣೆ ಜಹನು ಸಂಜ್ಞಾಕಂ ಭವನಾಖ್ಯಂ ತಥೊತ್ತರೆ.

ಗ್ರೌಸರು ಈ ದ್ವಿಪದಿಯನ್ನು ಹೀಗೆ ವಿವರಿಸಿದ್ದಾರೆ. ಅಲಿಗಢ ಜಿಲ್ಲೆಯಲ್ಲಿರುವ ಈ ಹಾಸ್ಯವನವು ಬರಹದವನವಾಗಿದೆ, ಪಶ್ಚಿಮದಲ್ಲಿರುವ ಉಪಹಾರವನವು ಗುರಗಾಂ ಜಿಲ್ಲೆಯಲ್ಲಿ ಶೋಣ ನದಿಯ ತೀರದಲ್ಲಿದೆ, ದಕ್ಷಿಣದ ಜಹಾನವನವೇ ಬಟೇಶ್ವರದ ಹತ್ತಿರದಲ್ಲಿರುವ ಶೂರಸೇನನ ಊರು ಮತ್ತು ಉತ್ತರದಲ್ಲಿ ಭೂವನವನ ಅಥವಾ ಭೂಷಣವನ ಮಥುರಾ ಜಿಲ್ಲೆಯಲ್ಲಿ ಛಾತಾ ತಹಸೀಲದಲ್ಲಿ ಶೇರಗಢವೆಂಬ ಊರಿನ ಹತ್ತಿರದಲ್ಲಿದೆ. ಆದರೆ ಈ ದ್ವಿಪದಿಯ ಪ್ರಾಮಾಣಿಕತೆ ಸಂಶಯಾಸ್ಪದವಾಗಿದೆ. ಏಕೆಂದರೆ ಮೇಲ್ಕಂಡ ಜಿಲ್ಲೆಗಳನ್ನು ಇತ್ತೀಚೆಗೆ ಎಂಭತ್ತು ನಾಲ್ಕು ಕೋಶದ ಸುತ್ತಲು ಹೋಗುವ ಯಾತ್ರಿಕರು ಮುಟ್ಟುವುದಿಲ್ಲ. ಆದರೆ ಈ ದ್ವಿಪದಿಯು ಮಥುರೆಯು ವ್ರಜಮಂಡಲದ ಕೇಂದ್ರಸ್ಥಳವೆಂದು ತೋರಿಸುತ್ತದೆ. ಹಳೆಯ ಕಾಲದಿಂದ ಮಥುರೆಯ ಇನ್ನೊಂದು ಹೆಸರು ಶೌರಸೇನ ಪ್ರದೇಶ. ಶೂರಸೇನನು ಶ್ರೀಕೃಷ್ಣನಿಗೆ ತಾತಾ ಆಗಿದ್ದ. ಚರಿತ್ರಕಾರರೂ ಮಥುರೆಯು ಶೂರಸೇನ ಪ್ರದೇಶದ ರಾಜಧಾನಿ ಯಾಗಿತ್ತೆಂದು ಹೇಳಿದ್ದಾರೆ. ಆದರೆ ಒಂದು ಸಂದೇಹ ಉಂಟು. ಗ್ರೌಸರು ಈಗಿನ ಬಟೇಶ್ವರವನ್ನು ಶೂರಸೇನದ ಗ್ರಾಮವೆನ್ನುತ್ತಾರೆ. ಆದರೆ ಆಗ್ರಾ ಗೆಜೆಟಿಯರ ಪ್ರಕಾರ ಬಟೇಶ್ವರದ ಇನ್ನೊಂದು ಹೆಸರು ಸೂರಜಪುರ ಅದು ಶೂರಸೇನ ಅಲ್ಲ. ಹಾಗಿದ್ದರೆ ಬಟೇಶ್ವರವನ್ನು ಶೂರಸೇನದ ಒಂದು ಹಳ್ಳಿಯಾಗಿ ಹೇಗೆ ಪರಿಗಣಿಸಲಾಗು ತ್ತದೆ. ಇನ್ನೊಂದು ಅಭಿಪ್ರಾಯದಂತೆ ಗ್ರೌಸರು ಹೇಳುವ ಹಾಗೆ ವ್ರಜಮಂಡಲದ

ಗಡಿಯನ್ನು ಬಟೇಶ್ವರ ಅಥವಾ ಶೂರಸೇನನ ಗ್ರಾಮದವರೆಗೆ ತಂದರೆ ಮಂಡಲದ ಆಕಾರವು ಸರಿಹೋಗುವುದಿಲ್ಲ. ಅಂದರೆ ಮಂಡಲವೆಂಬ ಪದದ ಅರ್ಥವಾದ ಗುಂಡು ಆಕೃತಿಯನ್ನು ಅದು ಉಳಿಸಿಕೊಳ್ಳುವುದಿಲ್ಲ.

ಮಥುರೆಯ ಸುತ್ತಲೂ ಇರುವ ಈಗಿನ ಗಡಿಯ ಪ್ರಕಾರ ಎಂಭತ್ತನಾಲ್ಕು ಕೋಶಗಳ ಪ್ರದೇಶದಲ್ಲಿ ಎಂಬತ್ತನಾಲ್ಕು ಕಾಡುಗಳಲ್ಲಿ ಹನ್ನೆರಡು ಕಾಡುಗಳೂ, ಇಪ್ಪತ್ನಾಲ್ಕು ಉದ್ಯಾನಗಳೂ ಮುಖ್ಯವಾದುದು. ಈ ಮಂಡಲದ ಉತ್ತರದಲ್ಲಿ ಗುರಗಾಂವನ ಗಡಿ ಭೂವನವನ ಮತ್ತು ಕೋಟವನಗಳಿವೆ. ಪಶ್ಚಿಮದಲ್ಲಿ ಭರತಪುರದ ಕಾಮವನ ಮತ್ತು ಚರಣಗಿರಿ ಪ್ರಸಿದ್ಧವಾಗಿವೆ. ವ್ರಜಮಂಡಲದ ಪ್ರದಕ್ಷಿಣೆ ಮಾಡಿರುವ ಯಾತ್ರಿಗಳು ಈ ತುದಿಯವರೆಗೆ ಹೋಗುತ್ತಾರೆ. ಪೂರ್ವದ ಅಲಿಗಢ ಜಿಲ್ಲೆಯ ಬರಹದ ಮತ್ತು ಹಾಸ್ಯವನವರೆಗೆ (ಈಗಿನ ಹಸ್ಯೆನ್) ಬರುತ್ತದೆ. ದಕ್ಷಿಣ ಗಡಿ ಆಗ್ರಾವನ್ನು ಮುಟ್ಟುತ್ತದೆ.

ನಂದಲಾಲ ದೇವರ ಅಭಿಪ್ರಾಯದ ಪ್ರಕಾರ ಆ ಗ್ರಾಮದ ಹಳೆಯ ಹೆಸರು ಅಗ್ರವನ. ಇದು ವ್ರಜಮಂಡಲದ ಹಳೆಯ ಕಾಡುಗಳಲ್ಲಿ ಒಂದು. ಈಗ ಈ ಸ್ಥಳಗಳನ್ನು ಮುಟ್ಟುತ್ತ ಮಥುರೆಯ ಸುತ್ತಲೂ ಒಂದು ವೃತ್ತವನ್ನು ಎಳೆದರೆ ಇದು ಎಂಬತ್ತನಾಲ್ಕು ಕೋಸ ಅಥವಾ ನೂರ ಅರವತ್ತೆಂಟು ಮೈಲಿಗಳಷ್ಟು ವಿಸ್ತಾರವಾಗುತ್ತದೆ. ಹೀಗೆ 'ಮಂಡಲ' ಎಂಬ ಶಬ್ದಕ್ಕೆ ಸರಿಹೋಗುವ ಅರ್ಥ ಬರುತ್ತದೆ. ವ್ರಜದ ಎಲ್ಲ ಪ್ರಸಿದ್ಧವಾದ ಸ್ಥಾನಗಳು ಈ ವೃತ್ತದಲ್ಲಿ ಸೇರುತ್ತವೆ. ಯಾತ್ರಿಕರು ಈ ವೃತ್ತದ ಪ್ರದಕ್ಷಿಣೆ ಮಾಡುತ್ತಾರೆ. ಇದರ ವೈಶಿಷ್ಟ್ಯವೆಂದರೆ ಪ್ರದಕ್ಷಿಣೆಯ ಪುಣ್ಯದಿಂದ ದುಃಸ್ಸಾಧ್ಯವಾದ ವೈಕುಂಠವಾಸ ಸುಲಭವಾಗುತ್ತದೆ ಎಂಬ ಗಾಢ ನಂಬಿಕೆ. ಆದರೆ ಎಂಬತ್ತನಾಲ್ಕು ಕೋಸದ ಪ್ರದಕ್ಷಿಣೆ ತೀರ ಕಷ್ಟವಾದ ಕೆಲಸ.

ವ್ರಜಮಂಡಲವು ಒಂದು ಬೃಹತ್ ಕ್ಷೇತ್ರವಾಗಿ ಹಬ್ಬಿದೆ. ಈ ಪ್ರದೇಶದ ಸಮಗ್ರ ಅಧ್ಯಯನ ಮಾಡಬೇಕಾದರೆ ವಿದ್ವಾಂಸರ ಒಂದು ಮಂಡಲಿ ವಿವರವಾಗಿ ಸಂಶೋಧನೆಯ ಒಂದು ಯೋಜನೆಯನ್ನು ಹಾಕಿಕೊಂಡು ಅಧ್ಯಯನ ನಡೆಸಿದರೆ ಈ ಪ್ರದೇಶದ ಸಂಸ್ಕೃತಿಯನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಾಗಬಹುದು.

ಯಾರ ಸಂತೋಷಕ್ಕೂ ಧಕ್ಕೆ ತರದಂತಹ ಸತ್ಯ ಸ್ವಾಗತಾರ್ಹವಾದದ್ದು.

—ಥಾಮಸ್ ಹಾಬ್ಸ್

ದಬ್ಬಾಳಿಕೆಯ ವಿರುದ್ಧ ಸತ್ಯ ಎಂದೆಂದೂ ಗೆಲ್ಲುತ್ತದೆ ಎನ್ನುವುದು ಒಂದು ಹಿತಕರವಾದ ಸುಳ್ಳು ಎಂಬುದನ್ನು ಅನುಭವ ತೋರಿಸುತ್ತದೆ.

—ಜೆ. ಎಸ್. ಮಿಲ್

ಒಂದು ಪಕ್ಷ ಗಣನೀಯ ಪ್ರಮಾಣದಲ್ಲಿ ಇತರ ಪಕ್ಷಗಳ ಮೇಲಿನ ದ್ವೇಷದಿಂದ ಬದುಕುತ್ತದೆ.

—ಅರ್ನೆಸ್ಟ್ ಬಾರ್ಕರ್

ಜನತೆ ತಪ್ಪು ಮಾಡಿದಾಗ ಅದು ಜನತೆಯ ಲೋಪವೇ ಹೊರತು ಅಪರಾಧವಲ್ಲ.

—ಎಡ್ಮಂಡ್ ಬರ್ಕ್

ಯಾರೂ ಯಾರ ಮಿತ್ರರಲ್ಲ, ಯಾರೂ ಯಾರ ಶತ್ರುಗಳೂ ಅಲ್ಲ. ಕಾರಣಾಂತರ ಗಳಿಂದ ಮಿತ್ರರೂ ಆಗುವರು, ಶತ್ರುಗಳೂ ಆಗುವರು.

—ಕಥಾಸರಿತ್ಸಾಗರ

ಎಫ್. ಟಿ. ಹಳ್ಳಿಕೇರಿ

ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀಯ ಸ್ಥಾನಮಾನಗಳು*

ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀಯರು ಯಾವುದೇ ಪುರುಷನಿಗಿಂತ ಕಡಿಮೆ ಯಿರಲಿಲ್ಲವೆಂಬುದನ್ನು ಅನೇಕ ಶಾಸನಗಳು, ಗ್ರಂಥಗಳು ಸ್ಪಷ್ಟಪಡಿಸುತ್ತವೆ.

> 'ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ
> ಪೆಣ್ಣಲ್ಲವೆ ಪೊರೆದವಳು
> ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
> ಕಣ್ಣು ಕಾಣದ ಗಾವಿಲರು'1

ಎಂದು ಹದಿಬದೆಯ ಧರ್ಮದಲ್ಲಿ ಹೇಳಿದೆ.

ವೈದಿಕಯುಗದಲ್ಲಿ ಸ್ತ್ರೀಯರು ಬಹುದೊಡ್ಡ ವಿದ್ಯಾವತಿಯರಾಗಿ, ಸಾಧಕರಾಗಿ, ಪುರುಷರಿಗೆ ಸಮಾನವಾದ ಸ್ಥಾನವನ್ನು ದೊರಕಿಸಿಕೊಂಡು ತಾವು ವೈದಿಕ ಮಂತ್ರ ಗಳನ್ನು ರಚಿಸಿದಂತೆ ತಿಳಿದುಬರುತ್ತದೆ. ವೇದ ಋಷಿಗಳ ಸಾಲಿನಲ್ಲಿ ಲೋಪಮುದ್ರಾ, ಅಪಲಾ, ಶದ್ರಾ, ವಿಶ್ವವಾರಾ, ಪೌಲೋಮಿ ಹಾಗೆಯೇ ಉಪನಿಷತ್ ಕಾಲದಲ್ಲಿ ಯಾಜ್ಞವಲ್ಕ್ಯನ ಪತ್ನಿ ಮೈತ್ರೇಯಿ ಹಾಗೂ ಬೃಹದಾರಣ್ಯದಲ್ಲಿ ಯಜ್ಞವಲ್ಕ್ಯನ ಜೊತೆಗೆ ಚರ್ಚಿಸಿದ ಗಾರ್ಗಿ ಇನ್ನು ಮೊದಲಾದ ಸ್ತ್ರೀಯರ ಉಲ್ಲೇಖವುಂಟು.

ಇತಿಹಾಸಗಳ ಯುಗದಲ್ಲಿಯೂ ಸ್ತ್ರೀಯರು ವೇದಾಧ್ಯಾಯಿಗಳಾಗಿದ್ದರೆಂಬುದಕ್ಕೆ ರಾಮಾಯಣದಲ್ಲಿ ಬರುವ ಕನ್ನಡನಾಡಿನ ಕಿಷ್ಕಿಂದೆಯಲ್ಲಿಯ ವಾಲಿಯ ಹೆಂಡತಿ ತಾರೆ ವಿದ್ಯಾವತಿಯಾಗಿದ್ದಳಲ್ಲದೆ ಮಂತ್ರಗಳನ್ನು ಉಚ್ಚರಿಸುತ್ತ ಧರ್ಮಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತಿದ್ದಳೆಂಬ, ಉಲ್ಲೇಖವುಂಟು. ಚಾರಿತ್ರಿಕ ಯುಗಕ್ಕೆ ಬಂದರೆ ಶಾತವಾಹನ ಕಾಲದಲ್ಲಿಯೂ ಸ್ತ್ರೀಯ ವಿದ್ಯಾಭ್ಯಾಸಕ್ಕೆ ಸಾಕಷ್ಟು ಅನುಕೂಲತೆ ಇತ್ತೆಂಬುದಕ್ಕೆ ಹಾಲನ 'ಗಾಥಾಸಪ್ತಸತಿ' ಯಲ್ಲಿ ರೇವಾ, ರೋಹಾ, ಮಾಧವಿ,

* ಆಕಾಶವಾಣಿ ಧಾರವಾಡ ಕೇಂದ್ರದಿಂದ ಪ್ರಸಾರವಾದ ಭಾಷಣ.

1. ಸಂ : ಡಿ. ಚಂಪಾಬಾಯಿ ಹದಿಬದೆಯ ಧರ್ಮ 5–7

ಶಶಿಪ್ರಭಾ ಮುಂತಾದ ಕವಯತ್ರಿಯರ ಹೆಸರು ಬರುತ್ತವೆ. ಕಾಲಕ್ರಮೇಣವಾಗಿ ಸ್ತ್ರೀಯರು ಹಿಂದೆ ಬಿದ್ದು ಕಡೆಗಣಿಸಲ್ಪಟ್ಟರು.

'ನಸ್ತ್ರೀ ಸ್ವಾತಂತ್ರ್ಯಂ ಅರ್ಹಂತಿ' ಎಂದು ಮನು ಸಾರಿದ ಈ ಒಂದು ನುಡಿಯೇ ಸ್ತ್ರೀಯರ ಆದರ್ಶಸ್ಥಾನಮಾನಕ್ಕೆ ಕೊಡಲಿಯೇಟನ್ನು ಕೊಟ್ಟಂತಾಯಿತು. ಆತನ ಪ್ರಕಾರ ಅವಳಿಗೆ ಗಂಡನ ಮನೆಯೇ ಗುರುಕುಲವಾಸ, ಸ್ತ್ರೀಯು ಉತ್ತಮ ಗೃಹಿಣಿಯೂ, ಆದರ್ಶ ಮಾತೆಯೂ ಆಗಿದ್ದರೆ ಸಾಕು. ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀ ವಿದ್ಯಾಭ್ಯಾಸ ಚಿತ್ರಣವು ಶೋಚನೀಯವಾದುದು. ಕರ್ನಾಟಕದ ಯಾವ ಪ್ರಾಚೀನ ವಿದ್ಯಾಕೇಂದ್ರಗಳಲ್ಲಿ ವಿದ್ಯಾರ್ಥಿನಿಯು, ಪಂಡಿತೆಯ ಹೆಸರು ಕಂಡು ಬರುವುದಿಲ್ಲ. ಬೌದ್ಧರಲ್ಲಿ ಸ್ತ್ರೀಯರಿಗೆ ಭಿಕ್ಷುಣಿಗಳಾಗಲು ಅನುಮತಿಯಿರಲಿಲ್ಲವಾದರೂ ಅಶೋಕನು ತನ್ನ ಕಾಲಕ್ಕೆ ಅನುಮತಿಯಿತ್ತನು. ಅದೇ ರೀತಿ ಜೈನ ವೈದಿಕರಲ್ಲಿಯೂ ಸ್ತ್ರೀಯರನ್ನು ವಿದ್ಯಾಭ್ಯಾಸದಿಂದ ಹಿಂದಕ್ಕಿಟ್ಟಂತೆ ಕಾಣುತ್ತದೆ. ಆದರೂ ರಾಜಮನೆತನದ ಸ್ತ್ರೀಯರೂ, ಪ್ರಧಾನಮಂತ್ರಿ, ದಂಡನಾಯಕ ಮುಂತಾದ ದೊಡ್ಡ ಅಧಿಕಾರಿಗಳ ಮನೆ ಹೆಣ್ಣುಮಕ್ಕಳು ತಕ್ಕಮಟ್ಟಿಗೆ ವಿದ್ಯಾವಂತರಾಗಿರುತ್ತಿದ್ದರು. ಅಂತಹ ಕೆಲವರಲ್ಲಿ ಎರಡನೆಯ ಪುಲಕೇಶಿಯ ಮಗ ಚಂದ್ರಾದಿತ್ಯನ ಹೆಂಡತಿ ವಿಜ್ಜೆಯು ಮೊದಲು ವಿದ್ಯಾಭ್ಯಾಸ ಕಲಿತು ಅನಂತರ ಸಂಸ್ಕೃತ ಶ್ಲೋಕಗಳನ್ನು ರಚಿಸಿ ತನ್ನನ್ನು 'ಕಪ್ಪು ವರ್ಣದ ಸರಸ್ವತಿ' ಎಂದು ಕರೆದುಕೊಂಡಿದ್ದಾಳೆ. 1090ರ ಶಾಸನದ ಪ್ರಕಾರ ತ್ರಿಭುವನಮಲ್ಲದೇವನ ಪಟ್ಟದರಾಣಿ ಹಿರಿಯ ಕೇತಲದೇವಿಯು ಅನೇಕ ದೇಶ ಭಾಷೆಗಳ ಸಂಗೀತ ವಿದ್ಯಾಧರಿಯಾಗಿದ್ದಳು. ಕ್ರಿ. ಶ. 1123ರ ಶಾಸನವು ವಿಷ್ಣುವರ್ಧನನ ಹೆಂಡತಿ ಶಾಂತಲೆ ಒಬ್ಬ ಅತ್ಯಪೂರ್ವವ್ಯಕ್ತಿ ಎಂದು ಬಣ್ಣಿಸಿದೆ.

ಮಹಾಸಾಮಂತ ಶೂದ್ರಕಾಂತನ ಹೆಂಡತಿ ಜಕ್ಕಿಸುಂದರಿ 'ಸಹಜ ಸರಸ್ವತಿ' ಎಂದು ಕ್ರಿ.ಶ. 968ರ ಶಾಸನದಿಂದ ತಿಳಿದು ಬಂದರೆ, ಕ್ರಿ.ಶ. 1090ರ ಶಾಸನವೊಂದು ರವಿದೇವ ದಂಡಾಧೀಶನ ಪತ್ನಿ ರಬ್ಬಲದೇವಿಯನ್ನು 'ಪ್ರತಿಭಾ ಸರಸ್ವತಿ' ಎಂದು ವರ್ಣಿಸಿದೆ.

ಸಾಮಾನ್ಯಸ್ತ್ರೀಯರೂ ವಿದ್ಯಾಭ್ಯಾಸ ಪ್ರವೀಣರಾದ ಉಲ್ಲೇಖಗಳು ಕಡಿಮೆ. ಕ್ರಿ.ಶ. 900ರ ಶಾಸನವೊಂದು ನಾಗಾರ್ಜುನಯ್ಯ ಮತ್ತು ಸಾಮಿನಿರ್ಮಡಿ ಎಂಬಾಕೆಯು ಸರ್ವಶಾಸ್ತ್ರ ಪ್ರಸಿದ್ಧಿಯಾಗಿದ್ದಳು. ದೇವದಾಸಿಯರು ಕಲಾ ಪರಿಣಿತರಾಗಿದ್ದರೆಂಬ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ ಸನ್ಯಾಸಿನಿ ವ್ರತವನ್ನು ಕೈಕೊಂಡು ವಿದ್ಯಾಭ್ಯಾಸ ಪರಿಣಿತರಾದವರಲ್ಲಿ ಕಂತಿ, ಅಕ್ಕಮಹಾದೇವಿ, ಮುಕ್ತಾಯಕ್ಕ ಹೆಸರು ಪ್ರಮುಖವಾದರೆ,ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ತಮ್ಮ ವಿದ್ವತ್ ಪ್ರದರ್ಶನ ಮಾಡಿದ 12ನೆಯ ಶತಮಾನದ ವಚನಕಾರ್ತಿಯರು ಕೆಲವರುಂಟು. ಅವರಲ್ಲಿ ನೀಲಾಂಬಿಕೆ, ಮೋಳಿಗೆಯ ಮಾದೇವಿ, ಗಂಗಾಂಬಿಕೆ, ಹಡಪದ ಲಿಂಗಮ್ಮ ಮುಂತಾದವರು.

ಚಾರಿತ್ರಿಕ ಯುಗದಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರಬಲ ಪ್ರತಿರೋಧಗಳು

ಬಂದರೂ ಇದಕ್ಕೆ ಪ್ರತಿರೋಧವೆಂಬಂತೆ ವಿದ್ಯಾಭ್ಯಾಸಕ್ಕೆ ಆಸ್ಪದವನ್ನೀಯುವ ಕಹಳೆಯ ಮೊಳಗನ್ನು ಮೊಳಗಿಸಿದ ಕೀರ್ತಿ ಹನ್ನೆರಡನೆಯ ಶತಮಾನದ ವಚನಕಾರ ಮತ್ತು ವಚನಕಾರ್ತಿಯರಿಗೆ ಸಂದರೂ ತದನಂತರ ಮತ್ತೆ ಪೂರ್ವದ ಸ್ಥಿತಿಯಲ್ಲೇ ಮುಂದುವರೆಯಿತು. ಆದರೆ ಅವರು ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಕಲೆಯ ಕ್ಷೇತ್ರಗಳಲ್ಲಿ ಪ್ರವಿಷ್ಠ ತಮ್ಮದೇ ಆದ ಉಜ್ವಲ ಕಾಣಿಕೆಯನ್ನು ಕರ್ನಾಟಕದ ಸಂಸ್ಕೃತಿಗೆ ಸಲ್ಲಿಸಿದ್ದಾರೆಂಬುದನ್ನು ಗಮನಿಸಬೇಕು.

ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀಯರು ಯಾವುದೇ ಪುರುಷನಿಗಿಂತ ದಾನವಲ್ಲಿ ಕಡಿಮೆಯಿರಲಿಲ್ಲವೆಂದು ಅನೇಕ ಶಾಸನಗಳು ಸ್ಪಷ್ಟಪಡಿಸುತ್ತವೆ. ವಿದ್ಯಾಭ್ಯಾಸ ಕೇಂದ್ರಗಳಿಗೆ, ದೇವಸ್ಥಾನಗಳಿಗೆ ಅರವಟ್ಟಿಗೆ ಮುಂತಾದ ಸಾರ್ವಜನಿಕ ಕ್ಷೇತ್ರಗಳಿಗೆ ದಾನಬಿಟ್ಟ ಉಲ್ಲೇಖಗಳು ಸಿಗುತ್ತವೆ. ಕ್ರಿ.ಶ. 1022ರ ಅಕ್ಕಾದೇವಿಯು ಪೆರೂರಿನ ಅಗ್ರಹಾರದಲ್ಲಿ 500 ಜನ ವಿದ್ಯಾರ್ಥಿಗಳಿಗೆ ದಾನದತ್ತಿಬಿಟ್ಟಿದ್ದಾಳೆ. ಅದೇ ರೀತಿ ಚಾವುಂಡನೆಂಬ ವ್ಯಾಪಾರಿಯ ಹೆಂಡತಿ ದೇವಿಯಕ್ಕನು ಹಾಗೂ ಆದಿಗಾವುಂಡನ ಹೆಂಡತಿ ಗಾವುಂಡಿ ಭೀತರಿಗೆ ಆಶ್ರಯ ಕೊಟ್ಟು ಔಷಧಿ, ಆಗಮಗ್ರಂಥಗಳ ದಾನವನ್ನು ಹಾಗೂ ಹಸಿದವರಿಗೆ ಅನ್ನವನ್ನು ಕೊಡುತ್ತಿದ್ದರು ಎಂಬುದಕ್ಕೆ ಶ್ರವಣಬೆಳ್ಗೊಳ ಹಾಗೂ ಬೇಲೂರಿನ ಶಾಸನಗಳು ಸಾಕ್ಷಿಯಾಗಿವೆ. ಬೊಪ್ಪಣನಾಯಕನ ಹೆಂಡತಿ ಸಿರಿದೇವಿ 'ಕ್ಷಿತಿರೂಹನೋಂಪಿ' ಅಂದರೆ ವನಮಹೋತ್ಸವ ವ್ರತವನ್ನು ಕೈಕೊಂಡು ಮಾವು, ಈಳೆ, ದಾಳಿಂಬೆ, ತೆಂಗು ಇತ್ಯಾದಿಗಳನ್ನು ನೆಡಿಸಿದ ಉಲ್ಲೇಖ ಒಂದು ಶಾಸನದಲ್ಲಿ ಬರುತ್ತದೆ. ದಾನಚಿಂತಾಮಣಿ ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಜಿನಾಲಯವೊಂದನ್ನು ನಿರ್ಮಿಸಿ ಪೊನ್ನನ 'ಶಾಂತಿನಾಥ ಪುರಾಣ'ದ ಒಂದು ಸಾವಿರ ಪ್ರತಿಮಾಡಿಸಿ ಗ್ರಂಥದಾನ ಮಾಡಿದುದನ್ನು ಈ ಕೆಳಗಿನ ಪದ್ಯದಿಂದ ತಿಳಿಯಬಹುದು.

> ಎಸೆಯದೆ ಪೂಟ್ಟಿ ಕೆಟ್ಟಪುದು ಶಾಂತಿಪುರಾಣಮುದಂ ನೆಗಟ್ಟುವೆಂ
> ವಸುಧೆಯೊಳನ್ನ ತಂದೆಯ ಪರೋಕ್ಷದೊಳೀದು ಸಹಸ್ರ ಪುಸ್ತಕ
> ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆವೇಟ್ಟಿ ಪೆಂ
> ಪಸದಳವದ್ವಿತೀಯ ಮಸಮಂ ಸಲೆಬಾವಿಸಲೆಯ್ದೆ ಬಣ್ಣಿಸಲ್[2]

ಪರೋಪಕಾರ ದೃಷ್ಟಿಯಿಂದ ಇಷ್ಟು ಸಂಖ್ಯೆಯಲ್ಲಿ ಗ್ರಂಥ ಬರೆಸಿದ, ಗ್ರಂಥದಾನ ಮಾಡಿದ ಸ್ತ್ರೀ ಬಹುಶಃ ಜಗತ್ತಿನಲ್ಲಿ ಇನ್ನೂ ಹುಟ್ಟಿಲ್ಲ ಎಂಬ ಡಾ. ಎಂ. ಎಂ. ಕಲಬುರ್ಗಿಯವರ ಮಾತು ಸಮಂಜಸವಾದುದಾಗಿದೆ.

ಪುರುಷರಂತೆ ಸ್ತ್ರೀಯರೂ ಸಮಯ ಬಂದಾಗ ರಣಚಂಡಿಯರಾಗಿ ಅಸ್ತ್ರವನ್ನು ಹಿಡಿದು ಹೋರಾಡಲು ಹಿಂಜರಿಯುತ್ತಿರಲಿಲ್ಲ. ಅಸುವಳಿದರೂ ಅಳುಕದೆ ಹೋರಾಡ ಬಲ್ಲಂಥಹ ವೀರರಮಣಿಯರಿದ್ದರೆಂಬುದಕ್ಕೆ ಶಿಕಾರಿಪುರ ತಾಲೂಕಿನ 'ಹಿರಿಯಕ್ಕನ

---

2. ಸಂ : ಹಂಪನಾಗರಾಜಯ್ಯ, ಶಾಂತಿಪುರಾಣ ಅನುಬಂಧ-1. ಪದ್ಯ–2

ವೀರಗಲ್ಲು' ಸಾಕ್ಷಿಯಾಗಿದೆ. ಇತ್ತೀಚಿನ ವೀರರಮಣಿಯರ ಕನ್ನಡ ಕಣ್ಮಣಿಗಳ ಹೆಸರು ಕಿತ್ತೂರ ಚೆನ್ನಮ್ಮ.

ಜೈನಧರ್ಮವು ತನ್ನ ಧಾರ್ಮಿಕ ಕ್ರಿಯೆಗಳಲ್ಲಿ ಸ್ತ್ರೀಯರಿಗೂ ಹೆಚ್ಚಿನ ಸ್ಥಾನ ವನ್ನು ಕೊಟ್ಟಿತ್ತು. ಈ ಧರ್ಮದಲ್ಲಿ ನಮಗೆ ಕಾಣುವ ಸ್ತ್ರೀ ವ್ಯಕ್ತಿಗಳು ಕಂತಿಯರು ಇವರು ಸನ್ಯಸನ ವಿಧಿಯಿಂದ ಮರಣವನ್ನು ಹೊಂದಿದಂತೆ ಅನೇಕ ಶಾಸನಗಳು ತಿಳಿಸುತ್ತವೆ. ಅದರಲ್ಲಿ ಕ್ರಿ.ಶ. 1170ರ ಪೋಚಿಕಬ್ಬೆ, ಜಕ್ಕಿಯಬ್ಬೆ, ಕಿ.ಶ. 1062ರ ಚಾಗಲದೇವಿ ಇನ್ನೂ ಮೊದಲಾದವರು ಕಾಣುತ್ತಾರೆ. ಹೀಗೆ ಪ್ರಾಚೀನ ಕರ್ನಾಟಕ ದಲ್ಲಿ ಸ್ತ್ರೀಯರಲ್ಲಿ ಜೈನಧರ್ಮದ ಅನುಯಾಯಿಗಳು ಹೆಚ್ಚು ಜಾಗ್ರತರಾಗಿದ್ದಂತೆ ಧಾರ್ಮಿಕ ವಿಷಯದಲ್ಲಿ ಇತರರಿಗಿಂತ ಹೆಚ್ಚಾಗಿ ಭಾಗವಹಿಸಿದಂತೆ ಕಾಣುತ್ತದೆ. ಪ್ರಾಚೀನ ಕರ್ನಾಟಕವು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಅತ್ತಿಮಬ್ಬೆ-ಶಾಂತಲೆಯಿಬ್ಬರೂ ಜೈನಧರ್ಮದ ಕೊಡುಗೆಗಳು.

ಜೈನಧರ್ಮದಲ್ಲಿದ್ದಂತೆ ಹೆಚ್ಚು ಸಂಖ್ಯೆಯಲ್ಲಿ ಹಿಂದೂ ಧರ್ಮದಲ್ಲಿ ಸನ್ಯಾಸಿ ನಿಯರಿದ್ದಿಲ್ಲವೆಂದು ಕಾಣುತ್ತದೆ. ಕಿ.ಶ. 1005ರ ಶಾಸನ ರೇವಬ್ಬೆಗೊರವಿ ಎಂಬ ಒಬ್ಬ ಹಿಂದೂ ಸನ್ಯಾಸಿನಿಯ ಹೆಸರನ್ನು ಉಲ್ಲೇಖಿಸುತ್ತದೆ. ಹಿಂದೂ ಧರ್ಮದ ಧಾರ್ಮಿಕ ಚಟುವಟಿಕೆಗಳಲ್ಲಿಯೂ ಸ್ತ್ರೀಯರೂ ಗಮನಾರ್ಹ ಪಾತ್ರವನ್ನು ವಹಿಸಿದ್ದಾರೆ. ಮಾಚಕ್ಕ ಎನ್ನುವವಳು ಸ್ವಯಂಭುಕಲಿದೇವಸ್ವಾಮಿಯ ನೈವೇದ್ಯಕ್ಕೆ ಬಿಟ್ಟ ದಾನವನ್ನಿಲ್ಲಿ ಹೆಸರಿಸಬಹುದು. ವಿಷ್ಣುವರ್ಧನನ ಪತ್ನಿ ಬಮ್ಮಲ ದೇವಿಯು ನಾಗಮಂಗಲದಲ್ಲಿ ಶಂಕರನಾರಾಯಣ ದೇವಾಲಯವನ್ನು ಕ್ರಿ.ಶ. 1135ರಲ್ಲಿ ನಿರ್ಮಿಸಿದರೆ, ಅಕ್ಕಾದೇವಿಯು ಕ್ರಿ.ಶ. 1022ರಲ್ಲಿ ಸರ್ವಧರ್ಮಗಳಿಗೆ ಪ್ರೋತ್ಸಾಹ ವನ್ನಿತ್ತು 'ತ್ರೈಪುರುಷ' ದೇವಾಲಯವನ್ನು ನಿರ್ಮಿಸಿದಳು.

ಕನ್ನಡ ನಾಡಿನ ಹೆಸರಾಂತ ಧಾರ್ಮಿಕ ಸ್ತ್ರೀ ಮಹಿಳಾಮಣಿಯಾದ ದಾನ ಚಿಂತಾಮಣಿ ಅತ್ತಿಮಬ್ಬೆ 1500 ಜಿನಪ್ರತಿಮೆಗಳನ್ನು ದಾನಮಾಡಿದ್ದಾಳೆ ಜೊತೆಗೆ ರನ್ನಕವಿಗೆ ಆಶ್ರಯದಾತಳಾಗಿದ್ದಳು. ಅತ್ತಿಮಬ್ಬೆಯಂತೆ ಶಾಂತಲೆ ಸರ್ವಧರ್ಮ ಗಳಿಗೂ ಪ್ರೋತ್ಸಾಹವಿತ್ತಿದ್ದರೂ ಒಲವು ಜೈನಧರ್ಮದತ್ತ ಇತ್ತು. ಕ್ರಿ.ಶ. 1123 ರಲ್ಲಿ ಶ್ರವಣಬೆಳ್ಗೊಳದಲ್ಲಿ ಬಸದಿಯನ್ನು ಕಟ್ಟಿಸಿದುದಲ್ಲದೆ ಅದಕ್ಕೆ 'ಸವತಿಗಂಧವಾರಣ ಜಿನಾಲಯ'ವೆಂದು ಹೆಸರಿಸುತ್ತಾಳೆ. ಅದೇ ರೀತಿ ಕ್ರಿ.ಶ. 1117ರಲ್ಲಿ ವಿಷ್ಣುವರ್ಧನ ಕಟ್ಟಿಸಿದ ಚೆನ್ನಕೇಶವ ದೇವಾಲಯದ ಪಕ್ಕದಲ್ಲಿ ಕಪ್ಪೆ ಚೆನ್ನಿಗರಾಯ ದೇವಾಲಯವನ್ನು ಕಟ್ಟಿಸುತ್ತಾಳೆ.

ಆರನೆಯ ವಿಕ್ರಮಾದಿತ್ಯನ ಹೆಂಡತಿ ಕೇತಲದೇವಿಯು ಒಂದು ಅಗ್ರಹಾರದ ಆಡಳಿತ ನೋಡಿಕೊಳ್ಳುವುದಲ್ಲದೆ ಚೆಂಕಿ ರಾಜನೆಂಬವನಿಗೆ ಶಾಂತಿನಾಥ, ಪಾರ್ಶ್ವನಾಥ, ಸುಪಾರ್ಶ್ವನಾಥರ ಜಿನಾಲಯಗಳನ್ನು ಕಟ್ಟಿಸಲು ಪ್ರೇರಣೆ ನೀಡಿದಳೆಂದು ಕ್ರಿ.ಶ. 1054ರ ಸೊರಟೂರ ಶಾಸನವು ಹೇಳುತ್ತದೆ. ಬಳ್ಳಿಗಾವೆಯ ಬಾದ್ಧ

ವಿಹಾರಗಳಲ್ಲಿ ಬೌದ್ಧಯೋಗಿನಿಯರಿದ್ದುದನ್ನು ಶಿಕಾರಿಪುರ ಶಾಸನ ಹೇಳಿದರೆ, ಶ್ರವಣ ಬೆಳ್ಗೊಳದ ಶಾಸನ ಜೈನ ಸನ್ಯಾಸಿನಿಯರು ಸಲ್ಲೇಖನ ವ್ರತದಿಂದ ಮುಡುಪಿದ ವಿಷಯ ತಿಳಿಸುತ್ತವೆ.

'ನಸ್ತ್ರೀ ಸ್ವಾತಂತ್ರ ಮರ್ಹಂತಿ' ಎಂದು ಮನು ಮುಂತಾದ ಸ್ಮೃತಿಕಾರರು ಕಟ್ಟುಪ್ಪಣೆಯನ್ನು ವಿಧಿಸಿದ್ದರೂ ಕರ್ನಾಟಕದ ಮೇಲುವರ್ಗದ ಸ್ತ್ರೀಯರು ಬೇರೆ ಬೇರೆ ಭಾಗಗಳಲ್ಲಿ ರಾಜ್ಯವನ್ನು ಆಳಿದ್ದಲ್ಲದೆ ದೇವಸ್ಥಾನಗಳಿಗೆ, ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ ಉಲ್ಲೇಖಗಳು ಅನೇಕ ಶಾಸನಗಳಲ್ಲುಂಟು. ಯಾವ ಶಾಸನದಲ್ಲಿಯೂ ಸ್ತ್ರೀಯರನ್ನು ಅವಹೇಳನ ಮಾಡಿಲ್ಲ. ಅವರನ್ನು ದಾಸಿಯರಂತೆ ಕಡೆಗಣಿಸಿಲ್ಲ.

ಚಾಲುಕ್ಯ ಜಯಸಿಂಹನ ಸಹೋದರಿ ಅಕ್ಕಾದೇವಿಯು ಸಮಗ್ರ 44 ವರ್ಷಗಳವರೆಗೆ ತೊರಗಲ್-60, ಮಾಸಿಯವಾಡಿ-140, ಬಾಗಡಿಗೆ-20, ಕಿಸುಕಾಡು-20ನ್ನು ಆಳಿದುದಲ್ಲದೆ ರಣಭೈರವಿಯಾಗಿ ಹೋರಾಡಿ ಗೋಕಾಕನ್ನು ಗೆದ್ದಳು. ಜಕ್ಕಿಯಬ್ಬೆ ಪತಿಯ ಮರಣಾನಂತರ ನಾಗರಖಂಡ-20ನ್ನು ಆಳುತ್ತಿದ್ದು ಇವಳು ತನ್ನ ಆರೋಗ್ಯ ಕಳೆದುಕೊಂಡಾಗ ನಾಗರಖಂಡದ ಆಡಳಿತವನ್ನು ತನ್ನ ಮಗಳಿಗೆ ವಹಿಸಿ ಕೊಟ್ಟ ವಿಷಯ ಶಿಕಾರಿಪುರಶಾಸನದಿಂದ ತಿಳಿದುಬರುತ್ತದೆ.

ವಿದ್ಯಾಭ್ಯಾಸ, ರಾಜಕೀಯ, ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ಮುಂದುವರೆದಂತೆ, ಸಾಹಿತ್ಯ ಕ್ಷೇತ್ರದಲ್ಲಿಯೂ ಸ್ತ್ರೀಯು ಪ್ರಾಚೀನ ಕರ್ನಾಟಕದಲ್ಲಿ ಗಣನೀಯ ಸೇವೆಸಲ್ಲಿಸಿ ಸಾಧನೆಗೈದ ವಿಷಯ ತಿಳಿಯುತ್ತದೆ. ಆದರೂ ಸ್ತ್ರೀಯರು ಕಾವ್ಯ ರಚಿಸಿದ್ದು ವಿರಳವಾದುದು. 6ನೆಯ ಶತಮಾನದ ವಿಜ್ಞತೆ ಸಂಸ್ಕೃತದಲ್ಲಿ ಅನೇಕ ಪದ್ಯಗಳನ್ನು ರಚಿಸಿ ತನ್ನನ್ನು 'ಕಪ್ಪು ಬಣ್ಣದ ಸರಸ್ವತಿ' ಎಂದು ಹೊಗಳಿಕೊಂಡಿದ್ದಾಳೆ. 12ನೆಯ ಶತಮಾನದ ಸುಮಾರಿಗೆ ಬರುವ ಕಂತಿ-ಕವಯತ್ರಿಯರಿಗೂ, ನಾಗಚಂದ್ರನಿಗೂ ಕಾವ್ಯಸ್ಪರ್ಧೆ ನಡೆದುದು ಈಚಿಯ ಗ್ರಂಥಗಳಿಂದ ತಿಳಿದುಬರುತ್ತದೆ. 12ನೆಯ ಶತಮಾನದ ಉತ್ತರಾರ್ಧದಲ್ಲಿ ಅಕ್ಕಮಹಾದೇವಿಯಂಥ ವಚನಕಾರ್ತಿಯರು ಬರುವವರೆಗೆ ಸ್ತ್ರೀಯರು ಹೆಚ್ಚಾಗಿ ಸಾಹಿತ್ಯಸೃಷ್ಟಿಗೆ ಕೈಹಾಕಲಿಲ್ಲವೆಂದು ಕಾಣುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಕ್ಕಮಹಾದೇವಿಯ ಹೆಸರು ಅಚ್ಚಳಿಯದೆ ಉಳಿದಿದೆ, ಸಾಮಾನ್ಯ ಜನರಿಗೂ ತಿಳಿಯುವಂತೆ ವಚನಗಳನ್ನು ರಚಿಸಿದ್ದಾಳೆ. ಮಹಾಶಿವ ಶರಣೆಯಾದ ಅಕ್ಕಮಹಾದೇವಿಯನ್ನು ಅನೇಕ ಶರಣರು, ಕವಿಗಳೂ ನಿರ್ಭರ ಭಕ್ತಿಯಿಂದ ಸ್ತುತಿಸಿರುವರು. ಉದಾಹರಣೆಗಾಗಿ ಅಕ್ಕನ ಒಂದು ವಚನವನ್ನು ನೋಡಬಹುದು—

ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ
ಅದೇ ಬಲ್ಲವರೊಡನೆ ಸಂಗವ ಮಾಡಿದಡೆ

ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚೆನ್ನಮಲ್ಲಿಕಾರ್ಜುನ, ನಿಮ್ಮ ಶರಣರ ಸಂಗವ
ಮಾಡಿದಂತೆ ಕರ್ಪೂರದ ಗಿರಿಯನುರಿಕೊಂಬಂತೆ.[3]

ಮುಂತಾದ ನೀತಿ–ಪರವಾದ ವಚನಗಳನ್ನು ರಚಿಸಿದ್ದಾಳೆ.

ಹದಿನೇಳನೆಯ ಶತಮಾನದಲ್ಲಿ ಜನಪ್ರಿಯ ಕವಯಿತ್ರಿಯಾದ 'ಹದಿಬದೆಯ ಧರ್ಮ' ಎಂಬ ಕಾವ್ಯವನ್ನು ರಚಿಸಿದ ಕೀರ್ತಿ ಸಂಚಿಯ ಹೊನ್ನಮ್ಮನಿಗೆ ಸಲ್ಲುತ್ತದೆ. ಇನ್ನೊಬ್ಬ ಗಮನಾರ್ಹ ಕವಯಿತ್ರಿ ಹೆಳವನಕಟ್ಟೆ ಗಿರಿಯಮ್ಮ ಮೊದಲಾದವರು ಪ್ರಮುಖರಾಗಿದ್ದಾರೆ.

ಹೀಗೆ ಸ್ತ್ರೀ ಕರ್ನಾಟಕದ ಸಂಸ್ಕೃತಿಯಲ್ಲಿ ತನ್ನದೇ ಆದ ವಿಶಿಷ್ಟ ಗೃಹಿಣಿ ಜೀವನವನ್ನು ಪಾಲಿಸಿಕೊಳ್ಳುತ್ತ ನಡುನಡುವೆ ಕಾರ್ಯೋಡದ ಮಧ್ಯದ ಮಿಂಚಿನಂತೆ ಖಡ್ಗಾಯುಧವನ್ನಿಡಿದು ವೀರಳಂತೆ ಹೋರಾಡಿದ್ದಾರೆ, ಇನ್ನು ಕೆಲವಡೆ ವಿದ್ವತ್ ಜನರ ವಿದ್ವತ್ ಗೋಷ್ಠಿಗಳಲ್ಲಿ ವಾದಕ್ಕಿಳಿದಿದ್ದಾಳೆ. ಇದೂ ಅಲ್ಲದೆ ಧಾರ್ಮಿಕ ರಂಗದಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿ ದಾನದತ್ತಿಯನ್ನು ಸಂಸ್ಕೃತಿಗೆ ಸ್ತ್ರೀಕೊಟ್ಟ ಕಾಣಿಕೆಯಾಗಿದೆ.

3. ಸಂ: ಆರ್. ಸಿ. ಹಿರೇಮಠ, ಮಹದೇವಿಯಕ್ಕನ ವಚನಗಳು. ವ. ಸಂ–87.

ಟಿ. ಶಂಭುಲಿಂಗಪ್ಪ

ಕಾಟಿಗನೆರೆ ಶಾಸನ

ತರೀಕೆರೆ ತಾಲ್ಲೂಕಿನ ಅಜ್ಜಂಪುರ ಹೋಬಳಿಗೆ ಸೇರಿದ ಕಾಟಿಗನೆರೆಯಲ್ಲಿ ಇತ್ತೀಚೆಗೆ ಹೊಯ್ಸಳರ ಕಾಲಕ್ಕೆ ಸೇರಿದ ಅಪ್ರಕಟಿತ ಶಾಸನವೊಂದು ದೊರಕಿದೆ. ಊರಿನ ಕೆರೆಯ ಏರಿಯ ಬಳಿ ಈ ಶಾಸನವು ಹೂತುಹೋಗಿದ್ದಿತು. ಈ ಸ್ಥಳದಲ್ಲಿ ದೇವಾಲಯದ ಅವಶೇಷಗಳೂ ವಿಗ್ರಹಗಳೂ ಸಿಕ್ಕಿವೆ. ಈ ಶಾಸನವು ಹೊಯ್ಸಳ ಯುಗದ ರಾಜಕೀಯ ಹಾಗೂ ಧಾರ್ಮಿಕ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಇದು ನಂದನ ಸಂವತ್ಸರದ (ವಿಕ್ರಮಕಾಲ) ಚೈತ್ರ ಬಹುಳ ಗುರುವಾರ ಅಂದರೆ ಮಾರ್ಚ್ 1172 (ಕ್ರಿ.ಶ.)ರಂದು ಸ್ಥಾಪಿಸಲ್ಪಟ್ಟಿತು.

ಶಾಸನ ಸಾರಾಂಶ ಹೀಗಿದೆ :

ದೋರಸಮುದ್ರದಲ್ಲಿ ವಿಷ್ಣುವರ್ಧನನ ಮಗನಾದ ಪ್ರತಾಪ ನರಸಿಂಹನೃಪನು ರಾಜ್ಯಪರಿಪಾಲನೆ ಮಾಡುತ್ತಿರಲು, (ಶಾಲ ಶಾಲಿವಾಹನ ಶಕ 1094) ಅಸಂದಿನಾ ದೊಳಗಣ-500) ಬೊಮ್ಮರಸನೆಂಬ ಮಾಂಡಳಿಕನ ವಶದಲ್ಲಿರುತ್ತದೆ. ಗಂಗ ಕುಲಾನ್ವಯನಾದ ವೈಜರನನು, ಆತನ ಮಗನು .... ನಾಡರಸನು, ಆ ನಾಡರಸನ ಮಗನು ವೈಜರಸನು, (ಇಮ್ಮಡಿ) ಅವನ ಮಗನಾದ ಬೊಮ್ಮರಸನು ಆಸಂದಿಯನ್ನು ಆಳುತ್ತಿರುತ್ತಾನೆ. ಅವನ ನೇತೃತ್ವದಲ್ಲಿ ಕಾಟಿಗನೆರೆಯ ಸಾಳ್ವಪ್ರಭು ಸೋವಣ್ಣನೆಂಬುವನು ಊರ ಅಧಿಕಾರಿ. ಶೇಕರಗಾವುಂಡ ಮತ್ತು ಜಕ್ಕವೆಗೌಡಿಗೆ ಹುಟ್ಟಿದವನೆ ಕುಲದೀಪಕನಪ್ಪ ಜಕ್ಕಗಾವುಂಡ. ಆ ಜಕ್ಕಗಾವುಂಡನ ಸಹಧರ್ಮಿಣಿ ಮಾಳಗೌಡಿ. ಅವರ ಮಗನೆ ಸೋವಂಣ.

ಸೋವಂಣನು "ಚಾಳುಕ್ಯ ವಿಕ್ರಮ ಕಾಲದ ನಂದನ ಸಂವತ್ಸರದ ಚೈತ್ರ ಬಹುಳ ಬೃಹವಾರದಂದು "—(ಗುರುವಾರ) ಎಂದರೆ ಶಾ.ಶ 1094ರಲ್ಲಿ (ಕ್ರಿ.ಶ. 1172) ಕಾಟಿಗನೆರೆ ಗ್ರಾಮದಲ್ಲಿ ಶ್ರೀ ಸೋಮೇಶ್ವರ ದೇವಾಲಯವೊಂದನ್ನು ಹಾಗು ಒಂದು ಕೆರೆಯನ್ನು ಕಟ್ಟಿಸಿ ಊರ ಸುತ್ತಮುತ್ತಲಿನ ಭೂಮಿಯನ್ನು ದೇವಾಲಯಕ್ಕೆ ದತ್ತಿ ಬಿಡುತ್ತಾನೆ. ಆ ಸಮಯದಲ್ಲಿ ಲಾಕುಳ ಶೈವಪಂಥಕ್ಕೆ ಸೇರಿದ 'ಶಕರಾಸಿ ಪಂಡಿತ'ರೆಂಬುವರು ಜೀವಿಸಿರುತ್ತಾರೆ. ಅವರ ಕಾಲಂಕರ್ಚಿ (ಧಾರಾಪೂರ್ವಕವಾಗಿ)

ದತ್ತಿ ಬಿಟ್ಟ ಗದ್ಯ, ಹೊಲ—ಇತ್ಯಾದಿ ವರ್ಣನೆಗಳು ಶಾಸನದಲ್ಲಿ ಉಲ್ಲೇಖ ಗೊಂಡಿವೆ.

ಈ ಶಾಸನವನ್ನು ಬರೆದವನು ಸೇನಬೋವ ಲಕ್ಕಯ್ಯನೆಂಬುವನು. ಕಂಡರಣೆಕಾರ ಅಥವಾ ರೂವಾರಿ ಶಿವಭಕ್ತ ಭೂವೋಜನೆಂಬುವನು.

ಸ್ಥಳೀಯ ಗೌಡರ (ಸಾಳ್ವಪ್ರಭು) ಚರಿತ್ರೆಯನ್ನು ತಿಳಿಯಲು ಈ ಶಾಸನ ತುಂಬಾ ಸಹಾಯಕವಾಗುವುದು. ವೈಜರಸ ಬೊಮ್ಮರಸ—ಈ ಮಾಂಡಳಿಕರ ಅನ್ವಯಾವತಾರವನ್ನು ಈ ಶಾಸನದ ಮೂಲಕ ತಿಳಿಯಬಹುದು.

ಶಾಸನದ ಪಾಠ

ಕಾಟಿಗನೆರೆ ಶಾಸನ

ಕಾಟಿಗನೆರೆ ಗ್ರಾಮದ ಚನ್ನಬಸಪ್ಪನ ಮನೆಯ ಹಿತ್ತಲಲ್ಲಿ ನೆಟ್ಟ ಕಲ್ಲು

ಪ್ರಮಾಣ : 4′.1″ × 1′.10″

(1) ನಮಸ್ತುಂಗ ಶಿ ....
(2) ಶ್ರೀ ಸ್ವಸ್ತಿ ಸಮಧಿಗತ ಪ× ×ಮಹಾ×ಬ್ದ ...
(3) ಯಾದವ .... ವಲ
(4) ಕ×ಜರ× × ....
(5) ತ್ರಿಭುವನ ಮಲ್ಲ×ತ× ×ಗೊ×ನಂ×ಗೊಂಡ ಭು
(6) ಜಬಳ (ತಾ)ರ ಗಂಗ ಹೊಯ್ಸಳ ಪ್ರತಾಪ ನಾರಸಿಂಹ ದೇವರು ದೋರ ಸಮುದ್ರಾದಿ ನೆಲೆ ದಿ
(7) ಡಾಗಿ ಗಂಗವಾಡಿ ತೊಂಭತ್ತಾರು ಸಾಸಿರಮಂದುಷ್ಟ ನಿಗ್ರಹ ನಿಷ್ಟ ಪ್ರತಿ ಪಾಳನದಿಂ ನಾಚಂ
(8) ದ್ರಾರ್ಕ ತಾರಂಬರಂ ರಾಜ್ಯಂ ಸಲುತ್ತಮಿರೆ ॥ ಸ್ವಸ್ತಿ ಸತುಕುಳ ಕೊಂಗುಳಿವಮ್ಮದ್ದರ್ಮಮಹಾರಾಜಾ
(9) ದಿ ರಾಜಂ ವಂದಿಜನ ಕಲ್ಪಭುಜಂ ಕೋಟಾಲಪುರವರಾಧೀಶ್ವರ ಪ್ರತಾಪ ಮಹೇಶ್ವರಂ ನಂದ ಗಿರೀಶನ
(10) ಡಂದನುಜ ಮಾನ್ಧಾತ ನನಿಯ ಗಂಗ ಜಯದುತ್ತರಂಗ ಮದಗಜ ಶ್ರೀ ಲಾಂಚನಂವಿನಯೋ
(11) ಗ ಕಾಂಚನ ಪದ್ಮಾವತೀಲಬ್ಧವರ ಪ್ರಸಾದಂ ಶ್ರೀ ವ್ಮಿಗಮದಾನೋದ ರಿಪುನಿವಹ ಕಂಜವನ ಕುಂ
(12) ಜರ ಗಂಗಕುಳ ಕಮಳ ಮಾರ್ತಾಣ್ಡ ಅಣಿಯೊಡೆಗಂಣ್ಡ ಕೋದಂಡ ಪಾರ್ಥ ರಣರಂಗನೀಜ ಬಿಲ್ಲಂ

(13) ಕಕಾಜಿಂ ಪರಮಂಡಲ ಸೂರೆಕಾರಂ ಎಸುವ ರಾದಿತ್ಯ ಕಣ್ಣಾ(ಂ)ಬಿನಾತಂ ಆಹವಜತ್ತಲಿಟ್ಟ

(14) ವೈರಿ ಘರಟ್ಟ ಶರಣಾಗತ ವಜ್ರ ಪಂಜರ ವೈರಿ ದಿಕ್ಕಂಜರಂ ಕ್ಷತ್ರಿಯ ಪವಿತ್ರ ಮನುಜ

(15) ಮಾನ್ಧಾತ ಪರಬಳ ಭಯಂಕರಂ ಸತ್ಯ ರತುನಾಕರಂ ಬಂಟರ ಭಾವಂ ಮರೆಯು

(16) ಗೆ ಕಾವಂ ತಪ್ಪೆ ತಪ್ಪುಮನನ್ತು ಹೊಪ್ಪುವಾ ಮಾಡಿ ಸಮಸ್ತ ಪ್ರಸಸ್ತಿ ಸಹಿತಂ

(17) ಶ್ರೀ ಮನ್ಮಾಹ ಮಂಡಳಿಕಂ ವೈಜರಸ ವೈಜರಸನ ಮಗಂ ನಾಡರಸರ ನಾಡರಸನ ಮಗಂ ವೈಜ

(18) ರಸ ವೈಜರಸನ ಮಗಂ ಬಮ್ಮರಸರು ಅಸಂದಿಯ ನೆಲೆವೀಡಾಗಿ ಸುಖ ಸಂಕಥ ವಿನೋದದಿಂ

(19) ರಾಜ್ಯಂಗೆಯ್ಯುತ್ತಮಿರೆ || ಸ್ವಸ್ತಿ ಸಮಸ್ತ ಗುಣ ಸಂಪನ್ನ ನುಡಿದು ಮತೆನ್ನ ಪರನಾರಿ ಪುತ್ರ

(20) ಸತ್ಯರತ್ನಾಕರ ಸಿವಗಣಾವತಾರ ಗೋತ್ರಪವಿತ್ರನುದಾರ ಮಹೇಶ್ವರ ಪ್ರಜೆ ಮೆಚ್ಚಿಗಂಡ

(21) ದಾಯಿಗ ಬೇಂಟೆಕಾಜಿ ಸಿವಪಾದಸೇಖರ ಸೋವಗಾವುಂಡಂಗಂ ಜಕ್ಕವೆ ಗೌಡಿಗಂಪುಟ್ಟಿದ

(22) ಸುಪುತ್ರ ಕುಲದೀಪಕನಪ್ಪ ಜಕ್ಕ ಗಾವುಂಡಂನಾತನ ಮದವಳಿಗೆ ಮಾರ ಗೌಡಿಯುಂ ಅ

(23) ವರ ಮಗಂ ಸೋವಣ್ಣ ಚಾಳುಕ್ಯ ವಿಕ್ರಮ ಕಾಲದ ನಂದನ ಸಂವತ್ಸರದ ಚೈತ್ರ ಬ

(24) ಹುಳ ೫ ಭೃಹವಾರದಂದು ಶ್ರೀ ಸೋಮೇಶ್ವರ ದೇವರ್ಗೆ ಪ್ರತಿಷ್ಠೆಯಂ ಮಾಡಿ ಕೆರೆಯಂ

(25) ಕಟ್ಟಿಸಿ ಆ ದೇವರಂಗಬೋಗಕ್ಕಂ ನಿವೇದ್ಯಕಂ ಸಕರಾಶಿ ಪಂಡಿತರ ಕಾಲಂ ಕಚ್ಚಿ ಧಾರಾಪೂ

(26) ರ್ವಕಂ, ‘ಮಾಡಿ ಬಿಟ್ಟ ಗದ್ದೆ ದೇವಾಲ್ಯದಲ್ಲಿ ಖ ೧ ಹಾಳಕೆಯಿ ಮಣಲಕೆಯಿ ಮತ್ತ ೧ ಯರೆಯ

(27) ಕೆಯಿ ಮತ್ತ ೨ ಗೌಡರ ಉಂಬಳಿ ಗದ್ದೆ ಮತ್ತ ೧ ಬೆದ್ದಲಿ ಮತ್ತ ೧೨ ಊರಿಂದಂ ಹಡವಣ ಕೆರೆ ೧

(28) ಇನ್ತಿ ಧರ್ಮವನಳಿದವಂಗೆ ಗಂಗೆಯ ತಡಿಯಲು ಸಾಯಿರ ಕವಿಲೆಯ ವಧಿಸಿದ

(29) ಪಾತಕ ॥ ಇಸ್ತಿ ಧರ್ಮವಂ ಪ್ರತಿ ಪಾಳಿಸಿದವಂಗೆ ಗಂಗೆಯು ತಡಿಯಲು ಸಾಸಿರ ಕವಿಲೆ
(30) ಯ ವೇದೋತ್ತಮರಪ್ಪ ಸಬ್ರಾಹ್ಮಣರ್ಗೆ ದಾನಂ ಮಾಡಿದ ಫಲಮಕ್ಕು॥ ಸ್ವದತ್ತಂ ಪರದತ್ತಂ ವಾ
(31) ಯೋ ಹಿರೇತಿ ವಸುಂಧರಾ ಸಾಸಿರುವರಿಸ ಸಹಶ್ರಾಣಿ ವಿಷ್ಠಾಂಜಾಯತೇ ಕ್ರಿಮಿ ಉ
(32) ಅದೆ ನಿಜ ಧರ್ಮವಂ ದಣು ಕು ಪಿಂಡಂ ಪರಧರ್ಮವಂ ಮೆಣಳಿವಂತೆರೆ
(33) ಗೊಳುವಂ ಪುಳುರೊಂದದೊಳ ಅವತ್ತು ಸಹಸ್ರ ವರಿಸ ಮುಡುಭವಿಸಿಕ್ಕು ॥ ಶ್ರೀ
(34) ಈ ದೇವಾಲ್ಯದ ಕಲುಗೆಲಸ ಇಟ್ಟಿಗೆ ಸೋರ್ಕೆಲಸ ಸಾಸನದ ಕೆಲಸ ವಿನಿಸವಂ
(35) ಸಿವಭಕ್ತ ಬೂವೋಜ ಗೆಯ್ದ ॥ ವಿನಯುದ ಕದಯುದಧಿ ದೀಪ ದ್ವಿಜೋತ್ತಮರ
(36) ಚರಣಂ ವಿಪ್ರಣಾಣೋನಮಳ ಚರಿತ್ರಾಂಜನ ಸುತನೆನಿಸಿ ನೆಗಳ್ದ ವನಿತಳ ದೊ
(37) ಳು ಸೇನಬೋವ ಲಕ್ಷುಮಯ್ಯ ॥ ಈ ಸಾಸನಂವಂ ಬರೆದಂ ಸೇನ ಬೋವ ಲಕ್ಷ್ಮಯ್ಯ ॥ ಶ್ರೀ

ಈ ಶಾಸನವನ್ನು ಓದಿದವರು :
ಟಿ. ಶಂಭುಲಿಂಗಪ್ಪ ಮತ್ತು ಬೀರೂರಿನ ಇಸ್ಮಾಯಿಲ್

ಶ್ರೀ ಶಿವಸ್ವಾಮಿ

ಬಾದಾಮಿ ಚಾಲುಕ್ಯರ ಕೆಲವು ವಾಸ್ತುಶಿಲ್ಪಗಳಲ್ಲಿ ಶೈವಧರ್ಮ

ಬಾದಾಮಿ ಚಾಲುಕ್ಯರು ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶಿಷ್ಟ ವಾದ ಕೊಡುಗೆಯನ್ನಿತ್ತಿದ್ದಾರೆ. ಧಾರ್ಮಿಕವಾಗಿ ಹೇಳುವುದಾದರೆ ಚಾಲುಕ್ಯರ ಕಾಲದಲ್ಲಿ ವೈದಿಕ ಧರ್ಮ, ಜೈನ ಧರ್ಮ, ವೈಷ್ಣವ ಧರ್ಮ ಮತ್ತು ಶೈವ ಧರ್ಮ ಗಳಲ್ಲಿ ಪ್ರಗತಿಯನ್ನು ಬಹುತೇಕವಾಗಿ ಗುರುತಿಸಬಹುದು. ಅದರಲ್ಲೂ ಪ್ರಮುಖವಾಗಿ ಶೈವ ಧರ್ಮದ ವಿಕಾಸವನ್ನು ವಿಶೇಷವಾಗಿ ಕಾಣಬಹುದು. ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪಗಳಲ್ಲಿ ಅಂದರೆ ಶೈವ ದೇವಾಲಯಗಳಲ್ಲಿ ಶುದ್ಧ ದ್ರಾವಿಡ, ರೇಖಾ ನಾಗರ ಮತ್ತು ವೇಶರ ಶೈಲಿಗಳನ್ನು, ಚಾಲುಕ್ಯರ ಪ್ರಮುಖ ಕ್ಷೇತ್ರಗಳಾದ ಬಾದಾಮಿ, ಪಟ್ಟದಕಲ್ಲು, ಐಹೊಳೆ ಮತ್ತು ಮಹಾಕೂಟದಲ್ಲಿ ಕಾಣಬಹುದು.

ಬಾದಾಮಿಯ ಶೈವ ದೇಗುಲಗಳು :

ಬಾದಾಮಿಯ 4 ಗುಹೆಗಳಲ್ಲಿ[1] ಒಂದನೇ ಗುಹೆಯಲ್ಲಿ ಶೈವ ಶಿಲ್ಪಗಳಿವೆ. ಅವುಗಳೆಂದರೆ 18 ಕೈಗಳುಳ್ಳ ನಟರಾಜನ[2] ವಿಗ್ರಹ, ಬಲಗಡೆಗೆ ನಂದಿ ಮತ್ತು ಗಣಪತಿ ಹಾಗೂ ಮಹಿಷಾಸುರಮರ್ಧಿನಿ ಜೊತೆಗೆ ಷಣ್ಮುಖ ಮೂರ್ತಿಗಳು ಇವೆ. ಇಲ್ಲಿನ ಮೊಗಸಾಲೆಯಲ್ಲಿ ಎತ್ತರವಾದ ಅರ್ಧನಾರೀಶ್ವರ ವಿಗ್ರಹವಿದೆ. ಈ ಗುಹೆಯ ಹೊರ ಮೊಗ್ಗುಲಲ್ಲಿ ತ್ರಿಶೂಲಧಾರಿಯಾದ ದ್ವಾರಪಾಲಕರಿದ್ದಾರೆ. ಮೇಲ್ಭಾಗದಲ್ಲಿ ನಂದಿ ಮೇಲೆ ಕುಳಿತ ಶಿವ ಪಾರ್ವತಿ ಮತ್ತು ಗಜ, ವೃಷಭಮೂರ್ತಿಗಳಿವೆ. ಗುಹೆಯ ಮಧ್ಯದಲ್ಲಿ ಗರ್ಭಗುಡಿಯ ಪೀಠದ ಮೇಲೆ ಶಿವಲಿಂಗವಿದೆ, ಜೊತೆಗೆ ನಂದಿ ವಿಗ್ರಹವನ್ನು ಗರ್ಭಗುಡಿಯ ಮುಂದೆ ಇಟ್ಟಿದೆ. ಈ ಗುಹೆಯ ಕಾಲ ಕ್ರಿ.ಶ. 620 ಎಂದು ಹೇಳಲಾಗಿದೆ.[3]

ಇಲ್ಲಿನ ಕಂಭಗಳ ಸಂಖ್ಯೆ ಒಂದರಲ್ಲಿ ಶಿವನು ಸೋಮಪಾನ ಮಾಡಿದ ಪಾರ್ವತಿ ಯನ್ನು ಎತ್ತಿಹಿಡಿದಂತೆ ತೋರಿಸಿದೆ. ಎರಡನೇ ಕಂಭದಲ್ಲಿ 3ನೇ ಮೊಗ್ಗುಲಿಗೆ ಶಿವ ಪಾರ್ವತಿಯರು ಮತ್ತು ಪಾರ್ವತಿ ಕಾರ್ತಿಕೇಯನನ್ನು ಕಾಣಬಹುದು. 6ನೇ

ಕಂಭದಲ್ಲಿ 3ನೇ ಬದಿಗೆ ಶಿವ ಪಾರ್ವತಿ ನಿಂತಿರುವುದು ಕಂಡುಬರುತ್ತದೆ. ಮೊಗಸಾಲೆ ಪಶ್ಚಿಮ ಗೋಡೆಯಲ್ಲಿ ನರಸಿಂಹನ ಬಲಗಡೆಯ ಗೋಡೆಯ ಮೇಲೆ ಎತ್ತರವಾದ ಹರಿಹರ ಮೂರ್ತಿಯಿದೆ. 3ನೆಯ ಗುಹೆಯ ಗೋಡೆಯ ಮೇಲೆ ಹರಿಹರ ವಿಗ್ರಹ ಕಂಡುಬಂದಿದೆ. ಇಲ್ಲಿನ ಛತ್ತಿನಲ್ಲಿ ನಂದಿಯನ್ನೇರಿದ ಶಿವನಿದ್ದಾನೆ, ಭೋದುಗೆ ಶಿಲ್ಪಗಳಲ್ಲಿ ಶಿವ ಪಾರ್ವತಿ, ಅರ್ಧನಾರೀಶ್ವರ ಹಾಗೂ ಮತ್ತಿತರ ವಿಗ್ರಹಗಳಿವೆ.[4]

ಮಲ್ಲಿಕಾರ್ಜುನ ಗುಡಿ ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪದ ಮಾದರಿಯಾಗಿದೆ.[5] ಇದರ ತಳ ವಿನ್ಯಾಸ ನಕ್ಷತ್ರಾಕಾರವಾಗಿದೆ. ಈ ಗುಡಿಯೊಳಗೆ 3 ದೇವಾಲಯಗಳಿವೆ. ಗುಡಿಯ ಎಡಭಾಗದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ, ಇದಕ್ಕೆ ಮಂಟಪ, ಗರ್ಭಗುಡಿಯಿದೆ. ಈ ಗರ್ಭಗುಡಿಯಲ್ಲಿ ಮಲ್ಲಿಕಾರ್ಜುನ ಲಿಂಗವಿದೆ. ವೀರಭದ್ರನ ಗುಡಿಯ ಮುಂದೆ ಮನುಷ್ಯಾಕೃತಿಯ ಎರಡು ಶೈವದ್ವಾರಪಾಲಕರಿದ್ದಾರೆ.

ಭೂತನಾಥಗುಡಿಗಳ ಗುಂಪು ಒಂದರಲ್ಲಿ ಅರ್ಧಮಂಟಪ, ಗರ್ಭಗುಡಿ, ದ್ರಾವಿಡ ಶಿಲ್ಪದ ವಿಮಾನವಿದೆ. ಇಲ್ಲಿನ ಒಂದು ಚಿಕ್ಕ ಗುಡಿಯಲ್ಲಿ ಶೈವದ್ವಾರಪಾಲಕರು ಮತ್ತು ಗಣಪತಿ ವಿಗ್ರಹಗಳಿವೆ. ಗರ್ಭಗುಡಿಯ ಒಳಗೆ ಎದುರಿನ ಗೋಡೆಯ ಮೇಲೆ ಲಿಂಗ ಮತ್ತು ನಂದಿಗಳಿವೆ. ಕ್ರಿ.ಶ. 10ನೇ ಮತ್ತು 11ನೇ ಶತಮಾನದ ಗುಡಿಯಿದೆ. ಇದರ ಗರ್ಭಗುಡಿಯಲ್ಲಿ ಒಡೆದ ಲಕುಲೀಶನ ವಿಗ್ರಹವಿದೆ, ಮತ್ತು ಒಂದು ದೊಡ್ಡ ಬಂಡೆಗಲ್ಲಿನ ಮೇಲೆ ಲಿಂಗಗಳು, ಶಿವ ಗಣಪತಿ ವಿಗ್ರಹಗಳನ್ನು ಕೆತ್ತಿದ್ದಾರೆ.[6]

ಭೂತನಾಥ ಗುಡಿಗಳ ಗುಂಪು ಎರಡರಲ್ಲಿ ನಾಲ್ಕು ಗುಡಿಗಳಿವೆ. ಅವುಗಳಲ್ಲಿ ದೊಡ್ಡ ಗುಡಿಯು ದ್ರಾವಿಡ ವಾಸ್ತು ಶೈಲಿಯಲ್ಲಿದ್ದು ಗರ್ಭಗುಡಿಯೊಳಗೆ ಲಿಂಗವಿದೆ. ಅದು ಇತ್ತೀಚಿನದೆಂದು ಅಭಿಪ್ರಾಯ ಮಾಡಲಾಗಿದೆ. ಆದರೆ ಇದು ಮೊದಲು ವೈಷ್ಣವ ದೇವಾಲಯವಾಗಿತ್ತೆಂದು ಹೇಳಬಹುದಾಗಿದೆ. ಏಕೆಂದರೆ ಪೀಠದ ಮೇಲೆ ಗರುಡನಿರುವುದು. ಹಾದಿಗುಂಟೆ ಗುಡ್ಡದ ಮೇಲೆ ಎರಡು ಶೈವ ದೇವಾಲಯಗಳಿವೆ.[7]

ಮಾಲಗಿತ್ತಿ ಶಿವಾಲಯವು ಶುದ್ಧ ದ್ರಾವಿಡ ಶೈಲಿಯಾಗಿದ್ದು,[8] ಮುಖ ಮಂಟಪ, ಸಭಾಮಂಟಪ ಮತ್ತು ಚೌಕಾಕಾರದ ಗರ್ಭಗುಡಿಯಿದೆ. ಈ ಗುಡಿಯ ಹೊರಗಿನ ದಕ್ಷಿಣ ಗೋಡೆಯ ಮೇಲೆ ಶಿವನ ವಿಗ್ರಹವಿದೆ, ಜೊತೆಗೆ ಮೀಸೆವುಳ್ಳ ಒಬ್ಬ ಭಕ್ತನಿದ್ದಾನೆ, ಇಲ್ಲಿನ ಗರ್ಭಗುಡಿಯಲ್ಲಿ ಲಿಂಗವಿದೆ. ಹಿಂದೆ ಇದು ಒಂದು ಸೂರ್ಯ ದೇವಾಲಯವಾಗಿತ್ತು, ಇದರ ಶಿಖರ ಅಷ್ಟಕೋನಾಕೃತಿಯಲ್ಲಿದೆ. ಇದರ ಕಾಲ ಕ್ರಿ.ಶ. 7ನೇ ಶತಮಾನದ ಪ್ರಾರಂಭವೆಂದು ಹೇಳಬಹುದು.

ಜಂಬುಲಿಂಗ ದೇವಾಲಯವು ವಿಜಯಾದಿತ್ಯನ ಕಾಲದ ಒಂದು ಪ್ರಾಚೀನ ಗುಡಿ. ಇದನ್ನು ವಿಜಯಾದಿತ್ಯನ ತಾಯಿಯು ವಿನಯವತಿ ಕ್ರಿ.ಶ. 699ರಲ್ಲಿ ಕಟ್ಟಿಸಿದ್ದಾಳೆಂದು ತಿಳಿಯುತ್ತದೆ.[9] ಇದರಲ್ಲಿ ತ್ರಿಕೂಟ ರಚನೆಯಿದೆ.[10] ಅವುಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಗುಡಿಗಳಿವೆ. ಈ ಗುಡಿಗೆ ಇಟ್ಟಿಗೆಯಿಂದ ಕಟ್ಟಿದ ವಿಮಾನವಿದೆ, ಮತ್ತು ಈ ಎಲ್ಲಾ ಗೃಹಗಳನ್ನೂ ಹೊಂದಿಕೊಂಡು ಸಭಾಮಂಟಪ ಮತ್ತು ಮುಖ ಮಂಟಪ

ವನ್ನೂ ಹೊಂದಿವೆ. ವಿರೂಪಾಕ್ಷ ಗುಡಿಯನ್ನು ಕ್ರಿ.ಶ. 11 ಮತ್ತು 12ನೆಯ ಶತಮಾನದಲ್ಲಿ ಕಟ್ಟಿದಂತಿದೆ. ಇದರ ಗರ್ಭಗುಡಿಯಲ್ಲಿ ವಿರೂಪಾಕ್ಷ ಲಿಂಗವಿರುವುದು.

ಪಟ್ಟದಕಲ್ಲಿನ ಶೈವ ದೇವಾಲಯಗಳು :

ಪಟ್ಟದಕಲ್ಲಿನ ಶೈವ ದೇವಾಲಯದ ಸಂಗಮೇಶ್ವರ[11]. ದೇವಾಲಯವು, ಗರ್ಭ ಗೃಹ, ಪ್ರದಕ್ಷಿಣಾಪಥ, ಸಭಾಮಂಟಪ ಹಾಗೂ ಮುಖ ಮಂಟಪ ಹೊಂದಿದೆ. ಗರ್ಭ ಗೃಹಕ್ಕೆ ಹೊಂದಿದಂತೆ ಸುಕನಾಸಿ ಕಾಣಬಹುದು. ಇದು ದ್ರಾವಿಡ ವಾಸ್ತುಶೈಲಿಯ ಸಾಂತರ ಪ್ರಕಾರಕ್ಕೆ ಸೇರಿದುದಾಗಿದೆ. ಇದರ ಗರ್ಭಗೃಹದ ಮಧ್ಯದಲ್ಲಿ ಎತ್ತರವಾದ ಪೀಠದ ಮೇಲೆ ಕರಿ ಶಿಲೆಯ ಲಿಂಗವಿದೆ. ಗರ್ಭಗುಡಿಯ ಪಶ್ಚಿಮ ಬದಿಯಲ್ಲಿ ನಟರಾಜ, ಎತ್ತರದ ಬದಿಯಲಿ ಗಜಾಸುರ ಮರ್ಧನ ಶಿವನ ಉಬ್ಬು ಚಿತ್ರಗಳಿವೆ. ಚೌಕಟ್ಟಿನ ಬದಿಗಳಲ್ಲಿ ದ್ವಾರಪಾಲಕರಾಗಿರುವ ನಂದಿ ಮತ್ತು ವೀರಭದ್ರ, ಇವರ ದೊಡ್ಡ ಉಬ್ಬು ಚಿತ್ರಗಳಿವೆ. ದಕ್ಷಿಣ ದಿಕ್ಕಿನ ಗೋಡೆಯಲಿ ಶಿವನು ಅಂಧಕಾಸುರನನ್ನು ಸಂಹಾರ ಮಾಡುತ್ತಿರುವ ಹಾಗೂ ಚಿತ್ರಗಜನೆಂಬ ರಾಕ್ಷಸನನ್ನು ನಾಶ ಮಾಡುತ್ತಿರುವ ಶಿವನ ಮೂರ್ತಿಗಳನ್ನೂ ಕಾಣಬಹುದು. ಪಶ್ಚಿಮ ದಿಕ್ಕಿನಲ್ಲಿ ಪೂರ್ತಿಯಾಗಿ ಬಿಡಿಸಿರುವ ಅರ್ಧನಾರೀಶ್ವರ ಭೃಂಗಿ ಸಹಿತ ಶಿವನನ್ನು ಕಾಣಬಹುದು. ಗರ್ಭಗುಡಿಯ ಮೊದಲನೇ ತಳದ ದಕ್ಷಿಣ ಬದಿಯಲ್ಲಿ ಚಿತ್ರ ಲಕೂಳಿಸ, ಗಜಾಸುರ ಮರ್ಧನ ಇವುಗಳು ಜನಪ್ರಿಯ ವಾಗಿವೆ. ಬಾದಾಮಿ ಚಾಲುಕ್ಯರಾಜನಾದ ವಿನಯಾದಿತ್ಯನೂ (ಕ್ರಿ.ಶ. 696–733) ವಿಜಯೇಶ್ವರ ದೇವಾಲಯ ಕಟ್ಟಿಸಿದನೆಂದು ತಿಳಿಸಿದ್ದಾನೆ.[12] ಅಂದರೆ ಇಂದಿನ ಸಂಗಮೇಶ್ವರ ದೇವಾಲಯವಾಗಿದೆ.

ಎರಡನೆಯ ವಿಕ್ರಮಾದಿತ್ಯನು ಮೂರು ಸಲ ಪಲ್ಲವರನ್ನೂ ಸೋಲಿಸಿ ಕಂಚಿ ಯನ್ನು ವಶಪಡಿಸಿಕೊಂಡಿದ್ದರ ಜ್ಞಾಪಕಾರ್ಥವಾಗಿ ಅವನ ಮಹಾರಾಣಿಯರಾದ ಲೋಕ ಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ವಿರೂಪಾಕ್ಷ ಮತ್ತು ತ್ರೈಲೋಕೇಶ್ವರ ದೇವಾಲಯವನ್ನು ಕಟ್ಟಿಸಿದ್ದರು.[13]

ವಿರೂಪಾಕ್ಷ ದೇವಾಲಯದಲ್ಲಿ[14] ನಂದಿ ಮಂಟಪವಿದ್ದು, ಇದರ ಮಧ್ಯದಲ್ಲಿ ಸುಂದರ ವಾದ ನಂದಿಯ ವಿಗ್ರಹವಿದೆ. ಸಭಾಮಂಟಪದ ದ್ವಾರದಲ್ಲಿ ನಂದಿ, ವೀರಭದ್ರರ ಚಿತ್ರ ಗಳಿವೆ, ತಲೆಯ ಹಿಂದೆ ಪ್ರಭಾಮಂಡಲವಿದೆ. ಸಾಮಾನ್ಯವಾಗಿ ಇವರಿಗೆ ಮೂರು ಕಣ್ಣುಗಳಿವೆ, ದಕ್ಷಿಣ ದಿಕ್ಕಿನ ಮುಖ ಮಂಡಪದ ಮತ್ತೊಂದು ಬದಿಯಲಿ ರಾವಣನು ಕೈಲಾಸ ಪರ್ವತವನ್ನೂ ಎತ್ತುತ್ತಿರುವ ದೃಶ್ಯ ಮತ್ತೊಂದು ಕಡೆಯಲಿ ಉಗ್ರ ರೂಪ ತಾಳಿದ ಪಾರ್ವತಿ ವಿಗ್ರಹವಿದೆ. ಉತ್ತರ ದಿಕ್ಕಿನ ಮುಖ ಮಂಟಪದ ಬಲ ಬದಿಯಲ್ಲಿ, ನಟರಾಜನ ದೃಶ್ಯ ಚಿತ್ರವಿದೆ. ಬಲಗಡೆಯ ಗರ್ಭಗುಡಿಯಲಿ ಎತ್ತರದ ಪೀಠದಲ್ಲಿ ಅಗ್ನಿ ಶಿಲೆಯ ಶಿವಲಿಂಗವಿದೆ. ಪೂರ್ವದಿಕ್ಕಿನ ಮುಖ ಮಂಟಪದ ಬಲ ಬದಿಯಲಿ ಲಿಂಗೋದ್ಭವ ಶಿವ, ನಟರಾಜ, ಶಿವಪಾರ್ವತಿ ಮತ್ತು ವಿವಿಧ ಶಿವಲೀಲಾ ಮೂರ್ತಿ

ಗಳಿವೆ. ಜೊತೆಗೆ ಅಂಧಕಾಸುರ ಮರ್ಧನ ಮಾಡುತ್ತಿರುವ ಶಿವನ ಮೂರ್ತಿ, ತ್ರಿನೇತ್ರ, ಶಿವ ಲಕುಳೀಶ್ವರ ಎರಡು ವಿಗ್ರಹಗಳಿವೆ ಮತ್ತು ಹರಿಹರ, ಅರ್ಧನಾರೀಶ್ವರ ರಾವಣನು ಲಿಂಗವನ್ನು ಪೂಜಿಸುತ್ತಿರುವುದು, ಪದ್ಮಾಸನದಲಿ ಕುಳಿತಿರುವ ಹರಿಹರ, ನಟರಾಜ ಹಾಗೂ ನಂದಿ ಮೇಲೆ ಪಾರ್ವತಿ ಪರಮೇಶ್ವರ ಕುಳಿತಿರುವುದು, ಅರ್ಧನಾರೀಶ್ವರ, ಇವುಗಳನ್ನೂ ಚಿತ್ರಗಳಲ್ಲಿ ಕಾಣಬಹುದು.[15] ಮಲ್ಲಿಕಾರ್ಜುನ ದೇವಾಲಯವನ್ನು ಪ್ರಾರಂಭದಲ್ಲಿ ತ್ರೈಲೋಕೇಶ್ವರನೆಂದು ಕರೆಯಲಾಗಿತ್ತು. ಇದು ಪ್ರತ್ಯೇಕ ನಂದಿ ಮಂಟಪದಿಂದ ಕೂಡಿದ್ದು, ಕಟ್ಟಡದ ರಚನೆ ಮತ್ತು ಶೈಲಿಯಲ್ಲಿ ಹಾಗೂ ಮೂರ್ತಿ ಶಿಲ್ಪಗಳಲ್ಲಿ, ವಿರೂಪಾಕ್ಷ ದೇವಾಲಯವನ್ನು ಹೋಲುತ್ತದೆ. ಗಮನಾರ್ಹವಾದ ವ್ಯತ್ಯಾಸವೇನೆಂದರೆ ಶಿಖರದ ಸ್ತೂಪಿಯು ಚೌಕೋನವಾಗಿರದೆ ವರ್ತುಲಾಕಾರವಾಗಿದೆ. ಈ ಶೈಲಿ ಶಿಖರಕ್ಕೆ ವೇಸರ ವಿಮಾನ ಶೈಲಿಯೆಂದು ವಾಸ್ತುಶಿಲ್ಪ ಗ್ರಂಥಗಳಲ್ಲಿ ಹೇಳಿದೆ. ಈ ದೇವಾಲಯದ ಮುಂಭಾಗದಲ್ಲಿ ಮುಖಮಂಟಪ, ಸಭಾಮಂಟಪವಿದೆ. ಇದು ಶೈವ ದೇವಾಲಯವಾಗಿದ್ದರೂ ಲಲಾಟ ಬಿಂಬದಲ್ಲಿ ವಿಷ್ಣು ಮೂರ್ತಿಯಿರುವುದು ಸಹಜ ವಾಗಿದೆ. ಸಭಾಮಂಟಪದಲ್ಲಿನ ಹದಿನೆಂಟು ಕಂಬಗಳ ನಾಲ್ಕು ಸಾಲುಗಳಿವೆ, ನಂದಿ ಸಮೇತರಾದ ಪಾರ್ವತಿ ಪರಮೇಶ್ವರರು ಚಿತ್ರ ಫಲಕಗಳು ಮತ್ತು ಶಿವಪಾರ್ವತಿಯರ ವಿವಿಧ ಚಿತ್ರಗಳನ್ನು ಕಂಭಗಳಲ್ಲಿ ಕಾಣಬಹುದು. ಗರ್ಭಗುಡಿಯ ಬಾಗಿಲು ಚೌಕಟ್ಟಿನ ಎರಡು ಬದಿಗಳ ದ್ವಾರಪಾಲಕರು ಮತ್ತು ಅಡ್ಡ ಜಂತಿಯ ಲಲಾಟ ಬಿಂಬದಲ್ಲಿ ಶಿವ, ನಂದಿ, ಹರಿಹರ, ನಟರಾಜ ಪಾರ್ವತಿಯರ ಚಿತ್ರವಿದೆ. ಒಳಗೆ ಪೀಠದ ಮೇಲೆ ಲಿಂಗವಿದೆ, ದೇವಾಲಯದ ಗೋಡೆಯ ಉತ್ತರದ ಬದಿಯಲಿ ಶಿವ, ನಂದಿ, ಹರಿಹರ, ನಟರಾಜ, ಶಿವ ಪಾರ್ವತಿ ಗಜಸುರನನ್ನು ಸಂಹಾರ ಮಾಡುತ್ತಿರುವ ಶಿವ ಚತುರ್ಭುಜ ಶಿವ, ಲಕುಳೀಶ್ವರ, ಅಷ್ಟ ಭುಜಗಳನ್ನುಳ್ಳ ನಟರಾಜ ಅರ್ಧನಾರೀಶ್ವರ, ನಾಲ್ಕು ಶಿವನ ಲೀಲಾ ಚಿತ್ರಗಳನ್ನು ಕಾಣಬಹುದು.[16]

ಜೈನ ದೇವಾಲಯದ ಗೋಡೆ ಗರ್ಭಗುಡಿಯಲ್ಲಿ ಈಗ ಒಂದು ಶಿವಲಿಂಗವಿದೆ.[17] ಈ ಲಿಂಗವು ಬಾದಾಮಿ ಚಾಲುಕ್ಯರ ಅನಂತರದ ಕಾಲದ್ದು ಎನ್ನಬಹುದು.

ನಾಗರೇಖಾ ಪ್ರಸಾದ ಶೈಲಿಯ ದೇವಾಲಯವಾದ ಪಾಪನಾಥ[18] ತುಂಬಾ ವಿಸ್ತಾರವಾದದ್ದು. ಮುಖಮಂಟಪ, ಸಭಾಮಂಟಪ ವಿಶಾಲವಾದ ಅರ್ಧಮಂಟಪ ಮತ್ತು ಮುಚ್ಚಿರುವ ಪ್ರದಕ್ಷಿಣಾಪಥವುಳ್ಳ ಗರ್ಭಗೃಹಗಳಿಂದ ಕೂಡಿದೆ. ಈ ಮಂಟಪದ ಛತ್ತಿನಲ್ಲಿ ಸುಂದರವಾದ ಪಾರ್ವತಿ ನಟರಾಜನ ಚಿತ್ರವಿದೆ. ಸಭಾ ಮಂಟಪದ ಬಾಗಿಲ ಚೌಕಟ್ಟಿನಲ್ಲಿ ನಂದಿ ಮೇಲೆ ಕುಳಿತ ಶಿವಪಾರ್ವತಿ ಚಿತ್ರಗಳಿವೆ. ಇದರ ಬದಿಗಳಲ್ಲಿರುವ ದ್ವಾರಪಾಲಕರಲ್ಲಿ ನಟರಾಜ ಚಿತ್ರಫಲಕವನ್ನು ನೋಡ ಬಹುದು. ಸಭಾಮಂಟಪದ ಎಡಬದಿಯ ಎರಡು ಕಂಭಗಳ ಮೇಲೆ ಮಹಿಷಾಸುರ ಮರ್ಧಿನಿ ಮತ್ತು ಗಣಪತಿಯ ಉಬ್ಬು ಚಿತ್ರಗಳಿವೆ, ಸಭಾಮಂಟಪದ ಛತ್ತಿಯು ಒಂದು ಜಂತಿಯ ಮೇಲೆ ವಿಷ್ಣು ಗಂಧರ್ವರಿಂದ ಕೂಡಿದ ಶಿವಪಾರ್ವತಿಯ ಚಿತ್ರವು

ಗಮನಾರ್ಹವಾಗಿದೆ, ಅಂತರಾಳದ ಬಾಗಿಲು ಚೌಕಟ್ಟಿನ ಎರಡು ಬದಿಗಳಲ್ಲಿ ಕೋಡುಗಳನ್ನುಳ್ಳ ಮಾನವರೂಪದ ನಂದಿ ಮತ್ತು ವೀರಭದ್ರ, ದ್ವಾರಪಾಲಕರ ಚಿತ್ರಗಳಿವೆ. ಗರ್ಭಗುಡಿಯು ಒಳಗೆ ದೊಡ್ಡ ಪೀಠದ ಮೇಲೆ ನಯವಾಗಿ ಕೆತ್ತಿದ ಲಿಂಗವಿದೆ. ಇದರ ದಕ್ಷಿಣ, ಪಶ್ಚಿಮ ಮತ್ತು ಉತ್ತರ ಗೋಡೆಗಳ ಹೊರ ಮೈಯಲ್ಲಿರುವ ದೇವಕೋಷ್ಟಗಳಲ್ಲಿ ಶಿವನ ಉಬ್ಬು ಚಿತ್ರಗಳಿವೆ ಮತ್ತು ಶೈವ ಸಂಪ್ರದಾಯ ಮೂರ್ತಿಗಳು ಹೆಚ್ಚಾಗಿ ಕಂಡುಬರುತ್ತದೆ. ಪಶ್ಚಿಮದಲ್ಲಿ ನಟರಾಜ ವಿಗ್ರಹವಿದೆ. ಬ್ರಹ್ಮ, ಶಿವ, ಗಜಾಸುರನನ್ನು ಸಂಹಾರ ಮಾಡುತ್ತಿರುವ ಶಿವ, ರಾವಣ ನಟರಾಜ ಮೂರ್ತಿಗಳು ಸಾಮಾನ್ಯವಾಗಿವೆ. ಇದರ ಬಲತುದಿಯಿಂದ ಶಿವ ಪಾರ್ವತಿಯರು, ಹರಿಹರ, ಭೈರವ, ರಾವಣನು ಕೈಲಾಸಪರ್ವತವನ್ನು ಎತ್ತುತ್ತಿರುವುದು, ಕಿರಾತಾರ್ಜುನ ಕಾಳಗದ ದೃಶ್ಯ, ಅರ್ಜುನನಿಗೆ ಪಾಶುಪತಾಸ್ತ್ರವನ್ನು ಅನುಗ್ರಹಿಸುತ್ತಿರುವುದನ್ನು ಕಾಣಬಹುದಾಗಿದೆ.[19]

ಗಳಗನಾಥ ದೇವಾಲಯ ಮುಚ್ಚಿದ ಪ್ರದಕ್ಷಿಣ ಪಥ ಮತ್ತು ಸಭಾಮಂಟಪವನ್ನೂ ಹೊಂದಿದೆ. ಪ್ರದಕ್ಷಿಣಾ ಪಥವನ್ನೇ ಆವರಿಸಿದ ಹೊರಮೈಯಲ್ಲಿ ದಕ್ಷಿಣ, ಪಶ್ಚಿಮ, ಮತ್ತು ಉತ್ತರ ದಿಕ್ಕಿಗೆ ಮೂರು ದೊಡ್ಡ ದೇವ ಕೋಷ್ಟಗಳಿವೆ. ಗರ್ಭಗುಡಿಯು ಮೇಲೆ ಭವ್ಯವಾದ ನಾಗರ ರೇಖಾ ಪ್ರಸಾದ ಶೈಲಿ ಶಿಖರವಿದೆ. ಲಲಾಟ ಬಿಂಭದಲ್ಲಿ ನಟರಾಜನ ಚಿತ್ರಗಳಿವೆ, ಒಳಗೆ ಪೀಠವಿಲ್ಲದೆ ಶಿವಲಿಂಗವಿದೆ. ಪ್ರದಕ್ಷಿಣಾಪಥ ಹೊರಗೋಡೆಯಲ್ಲಿರುವ ದಕ್ಷಿಣ ದೇವಕೋಷ್ಟವಲ್ಲೂ ಬೃಹತ್ ಅಂಧಕಾಸುರ ಸಂಹರಿಸುವ ಶಿವನ ಚಿತ್ರವಿದೆ.[20]

ಜಂಭುಲಿಂಗ ದೇವಾಲಯವೂ ಗಳಗನಾಥ ದೇವಾಲಯದ ಸಮೀಪದ ಹಿಂಬದಿಯಲ್ಲಿವೆ. ಇದು ಒಂದು ಸಣ್ಣ ಪ್ರಮಾಣದ ನಾಗರ ರೇಖಾ ಪ್ರಸಾದ ಶೈಲಿಯ ದೇವಾಲಯ. ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪದಿಂದ ಕೂಡಿದೆ. ಅಂತರಾಳದ ಬಾಗಿಲ ಚೌಕಟ್ಟಿನ ಮೇಲೆ ಎರಡು ಬದಿಗಳಲಿ ಐದು ಸಣ್ಣ ಶೈವ ದ್ವಾರಪಾಲಕ ನಂದಿ ವಿಗ್ರಹಗಳಿವೆ ಮತ್ತು ಬಾಗಿಲು ಚೌಕಟ್ಟಿನ ಮೇಲೆ ಐದು ಸಣ್ಣ ಗೂಡುಗಳಿದ್ದು ಪ್ರತಿಯೊಂದರಲ್ಲಿ ಶಿವಲಿಂಗ ಮೂರ್ತಿ ಚಿತ್ರವಿದೆ. ಗರ್ಭಗೃಹದ ಬಾಗಿಲು ಚೌಕಟ್ಟಿನ ಲಲಾಟ ಬಿಂಭದಲ್ಲಿ ಯಾವುದು ಕಂಡುಬರುವುದಿಲ್ಲ, ಒಳಗಡೆ ಶಿವಲಿಂಗವಿದೆ. ಗರ್ಭಗೃಹ ಗೋಡೆಯು ಹೊರಮೈಯಲ್ಲೇ ದಕ್ಷಿಣ ದೇವ ಕೋಷ್ಟಗಳಲ್ಲಿ ಲಕುಳಿಶ[21] ಪಶ್ಚಿಮದಲ್ಲಿ ಅರ್ಧನಾರೀಶ್ವರ ವಿಗ್ರಹವೆಂದು ಶಂಕಿಸಬಹುದು. ಶಿಖರದ ಸುಕನಾಸಿಯ ಮುಂಭಾಗದಲ್ಲಿ ನಂದಿಸಮೇತ ಪಾರ್ವತಿ, ನಟರಾಜ ಉಬ್ಬು ಚಿತ್ರಗಳಿವೆ.

ಕಾಡ ಸಿದ್ಧೇಶ್ವರ ದೇವಾಲಯವು ಗಾತ್ರದಲ್ಲಿಯೂ ಮತ್ತು ವಾಸ್ತುಶಿಲ್ಪದಲ್ಲೂ ಹಾಗೂ ಮೂರ್ತಿಶಿಲ್ಪಗಳಲ್ಲಿಯೂ ಜಂಭುಲಿಂಗದ ಹಾಗೆ ಇದೆ. ಪ್ರವೇಶದ್ವಾರದ ಎರಡು ಬದಿಗಳಲ್ಲಿ, ಎಡಬದಿಯ ದೇವಕೋಷ್ಟದಲ್ಲಿ ಭಗ್ನ ಲಲಾಟ ಬಿಂಭದಲ್ಲಿ ನಂದಿ

ಮೇಲೆ ಕುಳಿತ ಶಿವಪಾರ್ವತಿ ಉಬ್ಬು ಶಿಲ್ಪಗಳಿವೆ. ಹೊರಮೈಯ ದೇವಕೋಷ್ಠದಲ್ಲಿ ಹರಿಹರ ಮತ್ತು ಅರ್ಧನಾರೀಶ್ವರ ಮೂರ್ತಿಯಿದೆ.

ಕಾಶಿ ವಿಶ್ವೇಶ್ವರ ದೇವಾಲಯವು 8ನೇ ಶತಮಾನದಲ್ಲಿ ರಚಿತವಾಗಿತ್ತೆಂದು ಕಾಣಬಹುದು. ಇದರಲ್ಲಿ ಗರ್ಭಗೃಹ, ಅಂತರಾಳ ಮಾತ್ರ ಉಳಿದಿದೆ. ಅಂತರಾಳದ ಬಾಗಿಲ ಚೌಕಟ್ಟಿನಲ್ಲಿ ಎರಡು ಬದಿಗಳಲ್ಲಿ ಎಡಬದಿಯ ದೇವಕೋಷ್ಠದಲ್ಲಿ ಭಗ್ನವಾದ ತ್ರಿಪುರಾಂತಕ ಮೂರ್ತಿಯಿದೆ. ಪ್ರವೇಶದ್ವಾರದ ಎರಡು ಬದಿಗಳಲ್ಲಿ ಬಲಗಡೆಯೂ ನಂದಿ, ಎಡಗಡೆ ವೀರಭದ್ರನ ಉಬ್ಬು ಚಿತ್ರಗಳಿವೆ. ಕತ್ತಿನ ಸುತ್ತಲೂ ಮಗುವನ್ನು ತೊಡೆಯ ಮೇಲೆ ಇಟ್ಟುಕೊಂಡು ಮಂಚದ ಮೇಲೆ ಕುಳಿತ ಪಾರ್ವತಿ ಮತ್ತು ಪರಮೇಶ್ವರರ ಚಿತ್ರಫಲಕವಿದೆ. ಇದರ ಹಿಂದೆ ನಂದಿ ನಿಂತಿದ್ದಾನೆ, ಗರ್ಭಗೃಹದಲ್ಲಿ ಶಿವಲಿಂಗವಿದೆ. ಉತ್ತರ ಗೋಡೆಯಲಿ ದೇವಕೋಷ್ಠದಲ್ಲಿ ಭೈರವನ ಹಾಗೂ ಅರ್ಧನಾರೀಶ್ವರನ ಚಿತ್ರಗಳಿವೆ. ಸುಕನಾಸಿಯ ಮುಖ ಪಟ್ಟಿಯಲ್ಲಿ ದೈತ್ಯ ಗೂಡಿನೊಳಗೆ ನಟರಾಜನ ಉಬ್ಬು ಚಿತ್ರವಿದೆ.[22]

ಚಂದ್ರಶೇಖರ ದೇವಾಲಯ ಸಂಗಮೇಶ್ವರ ದೇವಾಲಯದ ಎಡಬದಿಯಲ್ಲಿರುವ ಒಂದು ಸಣ್ಣ ದೇವಾಲಯ. ಎರಡನೆಯದರ ಚೌಕಟ್ಟಿನ ಎರಡು ಬದಿಗಳಲ್ಲಿ ಶೈವ ದ್ವಾರಪಾಲಕರ ವಿಗ್ರಹಗಳಿವೆ.[23]

ಮಹಾಕೂಟದ ಶೈವ ದೇವಾಲಯ

ಬಾದಾಮಿ ಚಾಲುಕ್ಯ ರಾಜನಾದ ಮಂಗಳೇಶನಿಂದ ಸುಮಾರು 8ನೇ ಶತಮಾನದಲ್ಲಿ ನಿರ್ಮಿತವಾದ ಮಹಾಕೋಟೇಶ್ವರ ಗುಡಿಯು ಮುಖಮಂಟಪ, ಗರ್ಭಗುಡಿ ಹೊಂದಿದೆ. ಇದರ ಗರ್ಭಗುಡಿಯಲ್ಲಿ ಮಹಾಕೋಟೇಶ್ವರ ಲಿಂಗವಿದೆ.[24] ಈ ಗುಡಿಯ ಹೊರಗೋಡೆಯ ಮೇಲೆ ಶಿವಪಾರ್ವತಿ, ರಾವಣ ಕೈಲಾಸವನ್ನೆತ್ತುತ್ತಿರುವ ದೃಶ್ಯವಿದೆ. ಈ ಗುಡಿಯ ದಕ್ಷಿಣಕ್ಕೆ ವೀರಭದ್ರನ ಗುಡಿಯಿದೆ. ಇದರ ಹಿಂದೆ ಔತ್ತಾರೇಯ ವಿಮಾನವುಳ್ಳ ಶಿವನ ಒಂದು ಸಣ್ಣ ಗುಡಿಯಿರುವುದು, ಈ ಗುಡಿಯ ಹೊರಬದಿಗೆ ಲಕುಳೀಶನ ವಿಗ್ರಹವಿದೆ.

ವಿಷ್ಣು ಪುಷ್ಕರಿಣಿಯಲ್ಲಿನ ಕಲ್ಲಿನ ಮಂಟಪದಲ್ಲಿ ಒಂದು ಚತುರ್ಮುಖ ಲಿಂಗ, ಮತ್ತೊಂದು ಮೂಲೆಯಲ್ಲಿ ಶಂಕರ ಲಿಂಗಗಳಿವೆ. ಈ ಪುಷ್ಕರಿಣಿಯಲ್ಲಿ ಪಶ್ಚಿಮ ಭಾಗದಲ್ಲಿ ಎರಡು ಸಣ್ಣ ಗುಡಿಗಳ ಹೊರಗೋಡೆಗಳ ಮೇಲೆ ಅರ್ಧನಾರೀಶ್ವರ ನಟೇಶ್ವರ ವಿಗ್ರಹಗಳಿವೆ. ಮುಂದೆ ದಕ್ಷಿಣಕ್ಕೆ ಮಲ್ಲಿಕಾರ್ಜುನನ ಗುಡಿ ಇದೆ (ಇದರ ಕಾಲ ಕ್ರಿ.ಶ. 7, 8ನೇ ಶತಮಾನ). ಇದರ ಹೊರಗೋಡೆಯ ಮೇಲೆ ಶಿವ ಮೊದಲಾದ ಮೂರ್ತಿಗಳಿವೆ. ಮಂಟಪದ ಛತ್ತಿನಲ್ಲಿ ನಂದಿ ಸಮೇತನಾದ ಶಿವ ಮತ್ತಿತರ ಮೂರ್ತಿಗಳನ್ನು ಕೆತ್ತಲಾಗಿದೆ. ಹೊಸ ಮಹಾಕೂಟದ ಸಮೀಪದಲ್ಲಿ ಅಪ್ಪಕೇಶ್ವರ, ಭೈರವೇಶ್ವರ ದೇವಾಲಯಗಳನ್ನು ಕಾಣಬಹುದು.[25]

ಈ ಮೇಲಿನ ಸಮೀಕ್ಷೆಗಳಿಂದ ಗಮನಿಸಬಹುದಾದ ಕೆಲವು ಅಂಶಗಳನ್ನು ಕೆಳ ಕಾಣಿಸಿರುವಂತೆ ವಿವರಿಸಬಹುದಾಗಿದೆ :

1. ಬಾದಾಮಿ, ಪಟ್ಟದಕಲ್ಲು ಮತ್ತು ಮಹಾಕೂಟಗಳ ಎಲ್ಲಾ ದೇವಸ್ಥಾನಗಳಲ್ಲಿ ಶೈವ ಪರಂಪರೆಯ ದೇವಾಲಯವು ಹೆಚ್ಚಾಗಿ ಕಂಡುಬರುತ್ತದೆ. ಜೊತೆಗೆ ಶೈವ ಪ್ರಭೇದಗಳನ್ನು ಗುರುತಿಸಬಹುದು. ಅವುಗಳಲ್ಲಿ ವೈದಿಕ, ಶೈವ, ಪಾಶುಪತ, ಕಾಳಮುಖ, ಕಾಪಾಲಿಕ, ಶಾಕ್ತರು ಅಥವಾ ಶಾಕ್ತ ಕಾಳರೂ, ಕಾಶ್ಮೀರ ಶೈವರು, ಶೈವ ಸಿದ್ಧಾಂತ, ಲಾಕುಳ ಶೈವ, ಹರಿಹರ ಪಂಥ, ನಟರಾಜ ಪಂಥ, ಅರ್ಧನಾರೀಶ್ವರ ಪಂಥ, ಮಹೇಶ್ವರರು ಹಾಗೂ ಇನ್ನಿತರ ಶೈವ ಉಪಪಂಥಗಳನ್ನು ಕರ್ನಾಟಕದಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ.

2. ಶೈವ ಸಂಪ್ರದಾಯ ದೇವಾಲಯಗಳನ್ನು ಕಟ್ಟಿಸಿದವರು ಹೆಚ್ಚಾಗಿ ರಾಜರು, ಸಾಮಂತರು, ಅಧಿಕಾರಿಗಳು, ಕಾಳಮುಖಚಾರ್ಯರು, ರಾಣಿಯರೂ ಮತ್ತು ದಂಡನಾಯಕರೂ ಹಾಗೂ ಶ್ರೀಮಂತ ನಾಗರಿಕರು ತಮ್ಮ ಪಾತ್ರವನ್ನು ಯಶಸ್ವಿಯಾಗಿ ಸಲ್ಲಿಸಿದ್ದಾರೆ. ಕರ್ನಾಟಕದ ಪ್ರಮುಖ ದೇವಸ್ಥಾನಗಳು ವಸ್ತು ಶಾಸ್ತ್ರ ಪ್ರಕಾರ ದ್ರಾವಿಡ, ರೇಖಾ ಮತ್ತು ನಾಗರ ಶೈಲಿಯಲ್ಲಿ ಕಂಡುಬಂದರೂ ಈ ಎಲ್ಲಾ ಶೈಲಿಯನ್ನು ಶೈವ ದೇವಾಲಯ ಅಳವಡಿಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ.

3. ಬಾದಾಮಿ ಚಾಲುಕ್ಯರ ವಾಸ್ತು ಪ್ರಭೇದಗಳಲ್ಲಿ ಅಂದರೆ ಮೂರ್ತಿ ಶಿಲ್ಪಗಳು, ಚಿತ್ರಶಿಲ್ಪಗಳು ಮತ್ತು ಉಬ್ಬು ಚಿತ್ರಗಳು ಹಾಗೂ ಗೋಡೆಯ ಚಿತ್ರಗಳಲ್ಲಿ ಶೈವ ಪಂಥಗಳ ಪರಿಚಯವನ್ನು ಕಾಣಬಹುದು. ಶಿವಲೀಲೆಗಳಾದ ನಟರಾಜ, ಹರಿಹರ, ಅರ್ಧನಾರೀಶ್ವರ, ಅಂಧಕಾಸುರ, ಗಜಸಂಹಾರ, ಶಿವಪಾರ್ವತಿ, ಪಾರ್ವತಿ ಪರಮೇಶ್ವರ, ಕಾಳಿ, ದುರ್ಗಿ, ಪಾರ್ವತಿ, ಮಹಿಷಾಸುರ ಮರ್ಧಿನಿ, ದಕ್ಷಿಣಾಮೂರ್ತಿ, ಗಣಪತಿ, ಲಕುಳೀಶ, ರುದ್ರಶಿವ, ಮಹಾದೇವ, ಇನ್ನಿತರ ಶಿವನ ಅವತಾರಗಳನ್ನು ಸಂಪೂರ್ಣವಾಗಿ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

4. ಶೈವಧರ್ಮವು ಕರ್ನಾಟಕದಲ್ಲಿ ತನ್ನದೆಯಾದ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಇತರ ಧರ್ಮಗಳೊಂದಿಗೆ ಸೌಹಾರ್ದತೆ, ಸಹಕಾರ, ಸಮನ್ವಯ, ಪರಿಪೂರ್ಣತೆಯನ್ನೂ ಪಾಲಿಸಿಕೊಂಡು ಬಂದಿದೆ.

5. ಬಾದಾಮಿ ವಾಸ್ತುಗಳಲ್ಲಿ ಶೈವಪುರಾಣ, ಶೈವ ಆಗಮ ಮತ್ತು ತತ್ವಗಳು ಯಥೇಚ್ಛವಾಗಿ ಹೊರ ಹೊಮ್ಮಿವೆ.

6. ಬಾದಾಮಿ ಚಾಲುಕ್ಯರ ಕಾಲದ ಶೈವ ದೇವಾಲಯಗಳಲ್ಲಿ ಶಾಸ್ತ್ರೀಯವಾಗಿ, ಅಲಂಕಾರಿಕವಾಗಿ, ಸೌಂದರ್ಯಯುತವಾಗಿ, ಶೃಂಗಾರ ರಸಗಳಲ್ಲಿ, ನಾಟ್ಯಶಾಸ್ತ್ರಕ್ಕೆ ಅನುಗುಣವಾಗಿ ಶೈವ ಶಿಲ್ಪಗಳು ಮತ್ತು ಕಲೆಗಳು ಕಂಡುಬರುವುದಾದರೂ, ಪರಿಶೀಲಿಸಿ ಮತ್ತು ಪರೀಕ್ಷಿಸಿ ಶೈವಧರ್ಮದ ಬೆಳವಣಿಗೆಯನ್ನು ಗುರುತಿಸಬೇಕಾಗಿರುತ್ತದೆ.

ಅಡಿ ಟಿಪ್ಪಣಿಗಳು

1. ಇ.ಅ. 7ರಿಂದ 12 ಪುಟಗಳು,
2. ಬಿ. ಎಚ್. ಛಬ್ರ—ಎ ಯುನಿಕ್ ನಟರಾಜ ಸ್ಕಲ್ಪ್ಚರ್ ಬ್ರೂರಿ ಪುಟ 107–108,
3. ಎ.ಎಂ.ಅಣ್ಣಿಗೇರಿ—ಬಾದಾಮಿಯ ಶಿಲ್ಪಕಲೆ, ಪುಟ 12–14,
4. ಆರ್. ಆರ್. ಬ್ಯಾನರ್ಜಿ—ಬಾಸ್ ರಿಲೀಫಸ್ ಆಫ್ ಬಾದಾಮಿ ಚಿತ್ರ 19,
5. ಎ. ಬಿ. ಸಿ. 20. ಎ. ಬಿ. ಸಿ. ಎಚ್, ಜಿಮ್ಮರ್—ದಿ ಆರ್ಟ್ ಆಫ್ ಇಂಡಿಯನ್ ಏಷ್ಯಾ, ನ್ಯೂಯಾರ್ಕ್ 1968. ಚಿತ್ರಗಳು 128–131
6. ಸುಂದರ ರಾಜನ್ ಕೆ. ವಿ.—ಅರ್ಲಿ ಟೆಂಪಲ್ ಆರ್ಕಿಟೆಕ್ಚರ್ ಇನ್ ಕರ್ನಾಟಕ
7. ಅಣ್ಣಿಗೇರಿ ಎ. ಎಂ.—ಬಾದಾಮಿಯ ಶಿಲ್ಪಕಲೆ, ಪುಟ 29
8. ಅದೇ—ಪುಟಗಳು 29–30
9. ಶಿವರಾಮ ಕಾರಂತ—ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪುಟ 29
10. ಕ. ಇ. ಸಂಪುಟ 1 ಭಾಗ 2
11. ಅದೇ—ಸಂಖ್ಯೆ 3
12. ಎ. ಐ. 3ನೇ ನಂ. 1
13. ಡಾ. ಅ. ಸುಂದರ—ಪಟ್ಟದಕಲ್ಲು, ಪುಟ 3
14. ಅಣ್ಣಿಗೇರಿ ಎ. ಎಂ.—ಪಟ್ಟದಕಲ್ಲಿನ ಶಿಲ್ಪ ವೈಭವ, ಪುಟ 3
15. ಡಾ. ಸಿಂದಗಿ ರಾಜಶೇಖರ—ಕರ್ನಾಟಕ ವಾಸ್ತು ಮತ್ತು ಚಿತ್ರಕಲೆ, ಪುಟ 46
16. ಡಾ. ಅ. ಸುಂದರ—ಪಟ್ಟದ ಕಲ್ಲು, ಪುಟ 24–30
17. ಅದೇ—ಪುಟ 31–34
18. ಅದೇ—ಪುಟ 35
19. ಕಸನ್ ಹೆಚ್.—“ದಿ ಎನ್ಸಿಯೆಂಟ್ ಟೆಂಪಲ್ ಆಫ್ ಐಹೊಳೆ ಅಂಡ್ ಪಟ್ಟದಕಲ್ಲು” ಎ.ಎಸ್.ಐ.—ಎ.ಆರ್.ಸಿ.—1907–1908
20. ಡಾ. ಅ. ಸುಂದರ—ಪಟ್ಟದ ಕಲ್ಲು, ಪುಟ 38–39

21. ಟಿ. ಎ. ಗೋಪಿನಾಥರಾವ್—ಹಿಂದೂ ಐಕೊನೋಗ್ರಾಫಿ
22. ಕೆ. ಕೆ. ರಾವ್—ಕರ್ನಾಟಕದಲ್ಲಿ ಲಾಕುಳ ಶೈವರು
23. ಮಾರ್ಗ್—ಪ್ರೈಸ್ ಆಫ್ ಐಹೊಳೆ, ಬಾದಾಮಿ, ಮಹಾಕೂಟ ಅಂಡ್ ಪಟ್ಟದ ಕಲ್ಲು, ಬಾಂಬೆ 1970
24. ಅಣ್ಣಿಗೇರಿ ಎ. ಎಂ.—ಪಟ್ಟದ ಕಲ್ಲಿನ ಶಿಲ್ಪ ವೈಭವ, ಪುಟ 8
25. ಅಣ್ಣಿಗೇರಿ ಎ. ಎಂ.—ಬಾದಾಮಿಯ ಶಿಲ್ಪ ಕಲೆ ಪುಟ 45–46

ಆತ್ಮ ಮತ್ತು ಪ್ರೇಮದ ಶಕ್ತಿಯು ನಿರಂತರ ಕೆಲಸಕ್ಕೆ ಆಗಾಗ ಆಗುವ ತಡೆಗಳ ದಾಖಲೆಯೆ ಚರಿತ್ರೆ.

—ಸಿ. ಎಫ್. ಆಂಡ್ರೂಸ್

ಸಂಪತ್ತು ಒಳ್ಳೆಯ ದಾಸಿ, ಹಾಗೆಯೇ ಕೆಟ್ಟ ಯಜಮಾನಿ.

—ಫ್ರಾನ್ಸಿಸ್ ಬೇಕನ್

ಕೆಲಸ ಮಾಡುವುದರಲ್ಲಿ ಆಸಕ್ತಿ ಇಲ್ಲದವರು ಉದ್ದೇಶವನ್ನೆ, ದೊಡ್ಡದು ಮಾಡುತ್ತಾರೆ.

—ರವೀಂದ್ರನಾಥ ಠಾಗೂರ್

ತನಗಿಂತ ಮೇಲಿರುವವರನ್ನು ಸಹಿಸದವನು ತಾನಾಗಿಯೇ ಕುಂದುತ್ತಾನೆ.

—ಹಿತೋಪದೇಶ

ಅನೇಕ ವಿಷಯಗಳನ್ನು ಅರ್ಧಂಬರ್ಧ ಕಲಿಸುವುದಕ್ಕಿಂತ ಕೆಲವೇ ವಿಷಯಗಳನ್ನು ಚೆನ್ನಾಗಿ ಕಲಿಸುವುದು ಒಳ್ಳೆಯದು.

—ಆಂದ್ರೆ ಮೊರೋಯಿಸ್

ಮೂಲ : **ಪಾರ್-ಲಾಜರ್‌ಕ್ವಿಸ್ಟ್**
ಅನು : **ಹೆಚ್. ಎಸ್. ರಾಜಗೋಪಾಲ್**

ತಮುಡಿ (Sibyl)

ಡೆಲ್ಫಿಯ ಮೇಲ್ಗಡೆಯ ಬೆಟ್ಟಗಳ ತಪ್ಪಲಿನ ಇಳಿಜಾರುಗಳಲ್ಲಿನ ಸಣ್ಣ ಮನೆಯೊಂದರಲ್ಲಿ ಒಬ್ಬ ಮುದುಕಿಯು ತನ್ನ ಮಂಕುಮಗನೊಡನೆ ವಾಸಿಸುತ್ತಿದ್ದಳು. ಆ ಮನೆ ಎಲ್ಲಾ ಒಂದೇ ಕೊಠಡಿಯಾಗಿತ್ತು. ಆದರ ಒಂದು ಗೋಡೆ ಬೆಟ್ಟದ ಅಂಚಾಗಿ ಸದಾ ತೇವದಿಂದ ಜಿನುಗುತ್ತಿತ್ತು. ಸರಿಯಾಗಿ ನೋಡಿದರೆ ಅದು ಮನೆಯೇ ಅಲ್ಲ. ಬರೆ ಮುರುಕಲು ಗುಡಿಸಿಲೆನ್ನಬಹುದು; ಅದನ್ನು ಒಕ್ಕಲವರು ತಮಗಾಗಿ ಕಟ್ಟಿಸಿಕೊಂಡಿದ್ದರು. ಆ ಪರ್ವತ ತಪ್ಪಲಿನ ನಿಬಿಡೀಕೃತ ಕಾಡಿನಲ್ಲಿ, ಏಕಾಕಿಯಾಗಿ ಕಂಡುಬರುತ್ತಿತ್ತು. ದೇವಾಲಯದ ಪವಿತ್ರ ಆವರಣದಲ್ಲಿ ಸಮೀಪದ ಊರಿನ ಮನೆಗಳ ಮೇಲ್ಗಡೆ ಎದ್ದು ನಿಂತಂತೆಯೇ ಕಂಡುಬರುತ್ತಿತ್ತು. ಆ ಹೆಂಗಸು ಮನೆ ಬಿಟ್ಟು ಹೊರಗೆ ಹೋಗುವುದು ಅತಿವಿರಳ. ಅವಳ ಮಗನಂತೂ ಎಂದೂ ಹೋದವನೇ ಅಲ್ಲ. ಮನೆಯೊಳಗೇ ಅರ್ಧ ಬೆಳಕಿನಲ್ಲಿ ಯಾವಾಗಲೂ ತನ್ನೊಳಗೆ ತಾನೇ ನಗುತ್ತಾ ಇರುತ್ತಿದ್ದ. ಅವನು ಈಗ ಮಧ್ಯವಯಸ್ಸನ್ನು ತಲುಪಿದ್ದ; ಅವನ ತಲೆ ಕೂದಲು ನೆರೆಯಲು ಪ್ರಾರಂಭಿಸಿತ್ತು. ಆದರೆ ಅವನ ಮುಖ ಮಾತ್ರ ನಿರ್ಲಿಪ್ತವಾಗೇ ಇತ್ತು, ಎಂದೂ ಇದ್ದಂತೆಯೇ ಹೀಗೇ ಇತ್ತು. ನೈಜವಾದ ಲಕ್ಷಣಗಳು ಏನೂ ಇಲ್ಲದೆ ಗಡ್ಡ ಮೀಸೆಗಳಿಲ್ಲದೆ, ಎಳೆತನವನ್ನು ಪ್ರದರ್ಶಿಸುತ್ತಾ ಅದೊಂದು ರೀತಿಯ ನಿರಂತರ ನಗುವಿನೊಡನೆ ಕೂಡಿತ್ತು. ಆ ಮುದುಕಿಯ ಮುಖ ಎಲೆಗಳಿಂದ ಆವೃತವಾಗಿದ್ದರೂ, ವಿಲಕ್ಷಣ ನಿರ್ಮಲಕಾಂತಿಯಿಂದ ಕಪ್ಪು ಜಿಡ್ಡಿನಿಂದ ಕೂಡಿ ಯಾವಾಗಲೂ ಬೆಂಕಿಯಿಂದ ಸುಟ್ಟಂತೆಯೂ ಕಣ್ಣುಗಳ ದೃಷ್ಟಿ ದೈವಿಕವಾದಂತೆ ಕಾಣುತ್ತಿತ್ತು.

ಈ ಇಬ್ಬರೂ ತಾವೇತಾವಾಗಿ ಆರಾಮ ಇರುತ್ತಿದ್ದರು, ಇವರನ್ನು ಯಾರೊಬ್ಬರೂ ಬಂದು ಕಾಣುತ್ತಿರಲಿಲ್ಲ. ಇವರೊಡನೆ ಯಾವಸಂಬಂಧವೂ ಇರಲಿಲ್ಲ. ಎರಡು ಆಡುಗಳು ಮಾತ್ರ ಇವರಿಗೆ ಹಾಲನ್ನು ಕೊಡುತ್ತಿದ್ದವು. ಮುದುಕಿ ಅಲ್ಲಲ್ಲಿ ಬೆಟ್ಟದ ತಪ್ಪಲಲ್ಲಿ ಓಡಾಡಿ ಗೆಡ್ಡೆ ಸೊಪ್ಪುಗಳನ್ನು ಶೇಖರಿಸುತ್ತಿದ್ದಳು. ಇದೇ ಆಹಾರವಾಗಿ ಜೀವಿಸಬೇಕಾಗಿತ್ತು. ಇತರರಿಂದ ಎಂದಿಗೂ ಯಾವುದೂ ದೊರೆಯು

ತ್ತಿರಲಿಲ್ಲ. ಏಕೆಂದರೆ ಇವರೊಂದಿಗೆ ಯಾರೊಬ್ಬರೂ ಏನೊಂದು ವ್ಯವಹಾರವನ್ನೂ ನಡೆಸುತ್ತಿರಲಿಲ್ಲ.

ಬೆಟ್ಟದ ಕಣಿವೆಗೆ ಎದುರಾಗಿಯೇ ಮನೆ ಇದ್ದುದು. ಮುದುಕಿ ಎಷ್ಟೋ ವೇಳೆ ಅಲ್ಲಿ ಮಬ್ಬುಗತ್ತಲಲ್ಲಿ ತಾನು ಹಿಂದೆಯೇ ವಿಸರ್ಜಿಸಿದ್ದ ಜಗತ್ತನ್ನು ಇಳಿಮುಖ ಮಾಡಿಕೊಂಡು ನೋಡುತ್ತಿದ್ದಳು. ಯಾವುದೂ ಕಾಣದೆ ಇರಲಿಲ್ಲ. ಎಲ್ಲವೂ ಅವಳ ಮುಂದೆಯೇ ಹರಡಿದಂತೆಯೇ ಇತ್ತು. ಸಮೀಪದ ಊರು, ಅದರೊಳಗೆ ಅಲ್ಲಿಂದಿಲ್ಲಿಗೆ ಓಡಾಡುವ ಜನರು, ತಮ್ಮ ತಮ್ಮ ಮನೆಗಳಿಗೆ ಹೋಗಿಬರುವ ತಮ್ಮ ತಮ್ಮ ವಿಷಯ ಗಳಲ್ಲೇ ಮುಳುಗಿಯೂ ದೇವಾಲಯದ ಸಮೀಪಕ್ಕೆ ಹೋಗುವ ಆ ಪವಿತ್ರವಾದ ದಾರಿಯಲ್ಲಿ ಯಾತ್ರಿಕರು ಗಂಭೀರವಾಗಿ ನಡೆದು ಹೋಗುತ್ತಿದ್ದುದೂ, ದೇವರ ಗುಡಿಯ ಮುಂದೆ ಅರ್ಪಿಸುತ್ತಿದ್ದ ನೈವೇದ್ಯಗಳೂ ಎಲ್ಲವೂ ಅವಳ ಮುಂದೆಯೇ ಹರಡಿದಂತೆ ಇತ್ತು. ಎಲ್ಲವೂ ಅವಳಿಗೆ ಚೆನ್ನಾಗಿಯೇ ತಿಳಿದಿತ್ತು. ಅಲ್ಲಿ ದೂರದಲ್ಲಿ ಕೆಲವು ದಿವಸ ಬೆಳಗ್ಗೆಹೊತ್ತು ತುಂಬಾಮುಂಚೆ, ನಡೆಯುತ್ತಿದ್ದ ಒಂದೊಂದು ವಿಚಾರ ಅವಳಿಗೆ ಅತಿ ಚೆನ್ನಾಗಿಯೇ ಗೊತ್ತಿತ್ತು. ಆಗಿನ ಸಮಯದಲ್ಲಿ ದೇವಾಲಯದ ಅಂಗಳ ನಿರ್ಜನವಾಗಿದ್ದುದೂ, ಒಬ್ಬ ಯುವಕ ಅಂಗಳವನ್ನೂ ದೇವಾಲಯದ ಹೆಬ್ಬಾಗಿಲಿನ ಪ್ರದೇಶವನ್ನೂ ತೋಪನ್ನು ಗುಡಿಸಿ ಶುದ್ಧಮಾಡುತ್ತಿದ್ದುದೂ ತಿಳಿದಿತ್ತು. ಸೂರ್ಯನು ಆಗತಾನೇ ಪೂರ್ವದ ಬೆಟ್ಟಗಳ ಮೇಲಿಂದ ಉದಿಸುತ್ತಿದ್ದು ಆ ಪ್ರಾಂತ್ಯವೆಲ್ಲವೂ ಹೊಸ ಬೆಳಕಿನಿಂದ ತುಂಬಿಕೊಂಡಿತ್ತು. ಇಬ್ಬರು ಪೂಜಾರಿಗಳೊಡನೆ ಒಬ್ಬ ಯುವತಿಯು ಆಗತಾನೇ ಅಲ್ಲೇ ಸಮೀಪದಲ್ಲಿ ಕಲ್ಲುಬಂಡೆಗಳ ಮಧ್ಯ ಇದ್ದ ಕೊಳದಲ್ಲಿ ಸ್ನಾನಮಾಡಿ ನಿಧಾನವಾಗಿ ಅದೇ ಮಾರ್ಗದಲ್ಲಿ ಬರುತ್ತಿದ್ದಳು. ಅವಳ ಮುಖದಲ್ಲಿ ಭಕ್ತಿಮೂಡಿತ್ತು ನೋಟವೆಲ್ಲಾ ತಾನು ಹೋಗುತ್ತಿದ್ದ ಪವಿತ್ರ ಸ್ಥಳದ ಕಡೆಯೇ ಇತ್ತು. ಮದುವಣಗಿತ್ತಿ ಯಂತೆ ಉಡುಪುಧರಿಸಿದ್ದಳು—ದೇವಕನ್ಯೆಯಂತೆ ಹೆಬ್ಬಾಗಿಲಿನ ಯುವಕನು ತನ್ನ ಕೈಲಿ ಚೆಂಬೊಂದನ್ನು ಹಿಡಿದು ಮಡಿನೀರನ್ನು ಅವಳ ಮೇಲೆ ಸಿಂಪಡಿಸಿ ಅವಳನ್ನು ಶುದ್ಧಮಾಡಿದನು. ಅವಳು ನೇರವಾಗಿ ಗರ್ಭಗುಡಿಯಲ್ಲಿ ನೆಲಸಿರುವ ದೇವರ ಸಮೀಪಕ್ಕೆ ದೈವ ಸಂಪತ್ತನ್ನು ತುಂಬಿಕೊಳ್ಳಲು ಕಾತುರವಾಗಿ ನಡೆದಳು. ಈಗ ಹಾಗೆ ನಡೆದಿತ್ತು, ಹಿಂದೆ ಪುರಾಣಕಾಲದಿಂದಲೂ ನಡೆದುಬಂದಿತ್ತು. ಆ ಮುದುಕಿಯು ತನ್ನ ಮನೆಯ ಹೊರಗಿನ ಹೊಸ್ತಿಲಿಂದಾಚೆಗೆ ಕುಳಿತು ತನ್ನ ಮುದಿ ಕಣ್ಣುಗಳಿಂದ ನೋಡುತ್ತಿದ್ದಳು.

ಅವಳ ಹಿಂದೆ, ಅರ್ಧ ಬೆಳಕಿನಲ್ಲಿ ಅವಳ ಮಗ ತನಗೆತಾನೇ ನಗುತ್ತ ಕುಳಿತಿದ್ದ—ಹಸುಳೆಯ ಮುಖಮಾಡಿಕೊಂಡು—ಒಂದು ದಿನ ಸೂರ್ಯಾಸ್ತಕ್ಕೆ ಮೊದಲು ಒಬ್ಬ ಮನುಷ್ಯ ಡೆಲ್ಫಿಯ ರಸ್ತೆಯಲ್ಲಿ ಹತ್ತಿಬಂದ. ಪರ್ವತದ ತಪ್ಪಲಿನ ಕಾವಾಲಿನಲ್ಲಿ ಮೇಯುವ ದನಕರುಗಳನ್ನು ನೋಡಲು ಜನರು ಬರುತ್ತಿದ್ದುದು ಸಾಮಾನ್ಯವಾಗಿಯೇ ಇತ್ತು. ಆಶ್ಚರ್ಯವೇನೂ ಇರಲಿಲ್ಲ. ಅವಳ ಮನೆಯಿಂದ ಕಲ್ಲು ತೂರಿದ ದೂರದಲ್ಲಿ ಕಣಿವೆ

ಕೆಳಗಡೆ ಆ ದಾರಿ ಹೋಗುತ್ತಿತ್ತು. ಆದರೆ ಈ ಆವರ್ತಿ ಸ್ವಲ್ಪ ವಿಶೇಷ ನಡೆದುದರಿಂದ ಅವಳಿಗೆ ಚಕಿತಗೊಳಿಸಿತು. ಆ ಮನುಷ್ಯ ದಾರಿಯೇ ಸರಿಇಲ್ಲದ ಕಡಿದಾದ ಸ್ಥಳದಲ್ಲಿ ಹತ್ತಲು ಪ್ರಾರಂಭಮಾಡಿದ್ದ. ಈ ರೀತಿಯ ಸಾಹಸ ಎಂದೂ ನಡೆದಿರಲಿಲ್ಲ. ಇಲ್ಲಿಗೆ ಬರಲು ಯಾರೂ ಕ್ರಮವಾಗಿದ್ದ ದಾರಿಯನ್ನು ತ್ಯಜಿಸಿದವರಲ್ಲ. ಯಾರಿಗೆ ಬೇಕಿತ್ತು ಸಾಹಸ ? ಕಡಿದಾಗಿದ್ದ ಆ ಪ್ರದೇಶ ಭದ್ರವಿರದ ಕಲ್ಲುಗಳ ಮಧ್ಯೆ ನಡೆದು ಬರಲು ಅವನಿಗೆ ಆಯಾಸವಾಗಿತ್ತು. ಪ್ರಾಯಶಃ ಈ ಪ್ರಾಂತ್ಯ ಸಂಚರಿಸಲು ಅವನಿಗೆ ರೂಢಿ ಸಾಲದಿರಬಹುದು ಅವಳು ತನ್ನ ಗೂಡಿನಿಂದ ಅವನನ್ನು ಮುದಿಕಣ್ಣುಗಳಿಂದ ನೋಡುತ್ತಲೇ ಇದ್ದಳು.

ಅವನು ಸಮೀಪಕ್ಕೆ ಬಂದನಂತರ ಅವನ ಮುಖವನ್ನು ನೋಡಲು ಸಾಧ್ಯ ವಾಯಿತು. ಅವಳಿಗೆ ಅವನು ಪರಿಚಯಸ್ಥನೇ ಅಲ್ಲ. ಆದರೆ ಅವಳಿಗೆ ಅವನು ತಿಳಿದವನಲ್ಲ. ಅವಳನ್ನು ತಿಳಿದವರೇ ಈಗ ಇರಲಿಲ್ಲವೆನ್ನಬಹುದು. ಅವನು ನೀಳವಾಗಿ ಮಣ್ಣುಬಣ್ಣದ ಗಡ್ಡವುಳ್ಳವನಾಗಿ ಈ ಪ್ರಾಂತ್ಯದ ಪದ್ಧತಿಯಂತೆ ಇರಲಿಲ್ಲ. ಅವನ ಕೆನ್ನೆಗಳು ಬಿಳುಪುಗೊಂಡಿದ್ದವು, ಕಾಂತಿಯೇ ಇರಲಿಲ್ಲ. ಸ್ವಲ್ಪ ಶ್ರಮದಿಂದಲೇ ಮುಕ್ಕರಿಸಿಕೊಂಡು ಕಮರಿಯನ್ನು ಹತ್ತಿದ್ದ. ಮನುಷ್ಯ ಒಮ್ಮೆ ಮಧ್ಯಪ್ರಾಯ ದಲ್ಲಿದ್ದವನಾಗಿ ಕಂಡಿತು.

ಅವನು ಸಮೀಪಕ್ಕೆ ಬರುತ್ತಲೇ ಅವಳಿಗೆ ವಂದನೆಗಳನ್ನು ಮಾಡಿದ ಆದರೆ ಈ ದೇಶದ ವಾಡಿಕೆಯಂತೆ ಅಲ್ಲ. ಅಲ್ಲೇ ಮನೆಯ ಮುಂದಿದ್ದ ಕಲ್ಲುಬೆಂಚಿನಮೇಲೆ ಕುಳಿತವನೇ ಮಾತನಾಡಲು ತೊಡಗಿದ. ಅವನಿಗೆ ಸುಲಭವಾದ ಮಾತುಗಳು ಬಾರದೆ ಮೊದಲು ಸ್ವಲ್ಪ ಶ್ರಮವಾಯಿತು. ಆದರೆ ಅವಳಿಗೆ ಇವನು ಬಹಳ ದೂರದಿಂದ ಬಂದಿದ್ದ ಪರದೇಶೀಯನೆಂದು ತಿಳಿಯಲು ತಡವಾಗಲಿಲ್ಲ. ಅವನು ಇನ್ನೂ ಯೌವನಸ್ಥನೇ ಇದ್ದರೂ ಅವನ ಮಾತು ಭಾರವಾಗಿ ನಿಧಾನವಾಗಿ ಹಿಂದಿನ ಯುಗ ದಂತೆ ಇತ್ತು. ಆದರೆ, ಅದು ಅವನ ದೃಷ್ಟಿಯ ಲಕ್ಷಣವೇ ವಿನಾ ಅವನ ಕುಲದವರದಲ್ಲ.

ತನಗೆ ಬಹಳ ಗಹನವಾದಂತಹ ವಿಷಯಗಳನ್ನು ಕೇಳಿ ಹೋಗಲು ತಾನು ಡೆಲ್ಫಿಗೆ ಬಂದವನೆಂದು ಹೇಳಿಕೊಂಡ. ಆದರೆ ಅವನು ಕೇಳುವುದಕ್ಕೂ ಬಿಡದೆ ಅವನನ್ನು ಅಟ್ಟಿಬಿಟ್ಟಿದ್ದರು. ಅವನನ್ನು ಪ್ರಶ್ನೆ ಕೇಳುವವರೆಲ್ಲಾ ಬಂದು ಸೇರಿದ ಅಂಗಳಕ್ಕೇ ಬಿಡದೆ ಅಟ್ಟಿದ್ದರು.

ಕುರುಡನಿದ್ದ ಸ್ಥಳದಲ್ಲಿ ಎಲ್ಲರೂ ದರಿದ್ರರೇ ಇರುವ ಸ್ಥಳ ಭಿಕ್ಷೆ ಏನು ಹುಟ್ಟೀತು. ತಾನು ಪೂರ್ವದಲ್ಲಿ ದೇವಾಲಯದ ಪಕ್ಕದ ಪವಿತ್ರ ಅಂಗಳದಲ್ಲಿ ನಿಂತು ಭಿಕ್ಷೆಬೇಡು ತ್ತಿದ್ದನೆಂದೂ ಈಗ ಅಲ್ಲಿಗೆ ಹೋಗಲಾಗದವನೆಂದೂ ಹೇಳಿದ. ನಾವು ಹೀಗೆ ಸಂಭಾಷಿಸು ತ್ತಿದ್ದಾಗ ನಾನು ನನ್ನ ಸಂಕಟಗಳನ್ನು ಹೇಳಿಕೊಳ್ಳಲು ಇಷ್ಟುದೂರ ವ್ಯರ್ಥವಾಗಿ ದಣಿದು ಬಂದುದಾಗಿಯೂ ನನ್ನ ಕಷ್ಟಗಳಿಗೆ ಸರಿಯಾದ ಸಮಾಧಾನವಾಗುವ ಉತ್ತರಗಳು ದೊರೆಯಲು ಸಾಧ್ಯವಾಗಲಿಲ್ಲವೆಂದೂ ತಿಳಿಸಿದ. ಕನಿಕರ ಮನಸ್ಸಿನಿಂದ

ಆ ಕುರುಡನು ಹೇಳಿದುದನ್ನೆಲ್ಲವನ್ನೂ ಕೇಳಿ ಅವನು ಕೇಳಿದ್ದ ಪ್ರಶ್ನೆಗೆ ಉತ್ತರವೇ ಇರಲಿಲ್ಲವೆಂದು ಅವರು ಹೇಳಿದ್ದರು! ಯಾವ ದೇವರೂ ಅವನ ಪ್ರಶ್ನೆಗೆ ಉತ್ತರಿಸಲಾರರೆಂದೇ ಅವರೆಲ್ಲಾ ತಿಳಿಸಿದ್ದರು.

ಅಂಗಳವನ್ನು ಬಿಟ್ಟು ವಿಮುಖನಾಗಿ, ಆ ಊರಿನಲ್ಲೆಲ್ಲಾ ದಿನವಿಡೀ ಅಲೆದಾಡಿದ. ಅನೇಕಸಲ ಆ ಡೆಲ್ಫಿ ಊರನ್ನು ಬಿಟ್ಟು ಮುಂದಕ್ಕೆ ಎಲ್ಲೋ ಎಲ್ಲಿಗಾದರೂ ಹೋಗೋಣವೆಂದು ಚಿಂತಿಸಿದ್ದ. ಇಲ್ಲಿ ಅವನಿಗೆ ಇನ್ನೇನೂ ಕೆಲಸವಿರಲಿಲ್ಲ. ಹಾಗೇ ಚಿಂತಿಸುತ್ತಾ ಊರಲ್ಲಿ ಬರುತ್ತಿರಲು ಊರಿನ ಮೂಲೆಯೊಂದರಲ್ಲಿ ದರಿದ್ರರು ಇರುವ ಸ್ಥಳದಲ್ಲಿ ಕುಳಿತು ಕೈಯನ್ನು ಚಾಚಿ ಯಾರಾದರೂ ಏನಾದರೊಂದು ದಾನ ಮಾಡುವರೆಂದು ಆಶಿಸುತ್ತ ಕುಳಿತಿದ್ದ ಕುರುಡ ಭಿಕ್ಷುಕನೊಬ್ಬನೊಡನೆ ಮಾತನಾಡಲಾರಂಭಿಸಿದ. ಅಲ್ಲಿ ಎಲ್ಲರೂ ಸಾಮಾನ್ಯವಾಗಿ ಬಡವರೇ ಇರುವ ಸ್ಥಳ, ಭಿಕ್ಷೆ ಏನು ಬಂದೀತು? ತಾನು ಮೊದಲು ದೇವಾಲಯದ ಪವಿತ್ರ ಅಂಗಳದಲ್ಲಿ ಜೀಡುತ್ತಾ ಇದ್ದವನೆಂದೂ ಈಗ ಅಲ್ಲಿಗೆ ಹೋಗಲಾರದವನೆಂದೂ ಹೇಳಿಕೊಂಡ. ಈ ವಿಷಯವಾಗಿ ಮಾತನಾಡಲು ಪ್ರಾರಂಭಿಸಿದಾಗ ನಾನು ನನ್ನ ಸಂಕಟಗಳನ್ನು ವ್ಯರ್ಥವಾಗಿ ಇಷ್ಟು ದೂರ ದಣಿದು ಡೆಲ್ಫಿಗೆ ಬಂದರೂ. ಇಲ್ಲಿನ ದೇವರು ನನ್ನ ಕಷ್ಟನಷ್ಟಗಳಿಗೆ ಸರಿಯಾದ ಉತ್ತರ ಸಮಾಧಾನವನ್ನು ಕೊಡಲು ಸಾಧ್ಯವಿರಲಿಲ್ಲವೆಂದೂ ತಿಳಿಸಿದೆ. ಕನಿಕರ ಮನಸ್ಸಿನಿಂದ ಕುರುಡನು ನನ್ನ ಕಥೆಯನ್ನು ಕೇಳಿ, ಸರಿಯಾಗಿಯೇ ಎಲ್ಲವನ್ನೂ ಅರ್ಥಮಾಡಿಕೊಂಡು ಡೆಲ್ಫಿಯಲ್ಲಿ ಸಮಾಧಾನಕರವಾದ ಉತ್ತರಗಳು ದೊರೆಯುದ ಸಂಭವವೇ ಇಲ್ಲವೆಂದು ಆಶ್ಚರ್ಯಚಕಿತನಾಗಿ "ನೀನೆಲ್ಲೋ ಬಹಳ ಕಠಿಣವಾದ ಪ್ರಶ್ನೆಗಳನ್ನು ಕೇಳಿರಬೇಕು" ಎಂದ.

"ವಿಸ್ಮಿತನಾಗಿ ಸ್ವಲ್ಪಹೊತ್ತಾದನಂತರ ಪುನಃ ಚಿಂತಿಸಿ ಹೇಳಿದ ಇರಬಹುದು" ಮನುಷ್ಯನೊಬ್ಬನು ಕೇಳಬಯುಸುವದಕ್ಕೆಲ್ಲಾ ಉತ್ತರ ಹೇಳುವವನೇ ಇರಬಹುದು." ಅಂತಹವನು ನಿಮಗೆ ಸಹಾಯಮಾಡಲೂಬಹುದು. "ಮನುಷ್ಯನಾದವನೊಬ್ಬ ಕೇಳಬಲ್ಲ ಪ್ರಶ್ನೆಗಳಿಗೆಲ್ಲಾ ಉತ್ತರಿಸುವವನೂ ಇರಬಹುದು". ಮುಂದುವರೆಸಿ ಹೇಳಿದ ಪರ್ವತಗಳ ಮೇಲೆ ಮುಪ್ಪಿನ ಪೂಜಾರಿಯೊಬ್ಬಳು ಅಪರಾಧಿಯಾಗಿ ಶಾಪಗ್ರಸ್ತಳಾಗಿ, ಎಲ್ಲರಿಂದಲೂ ತಿರಸ್ಕೃತಳಾಗಿ ವಾಸಿಸುತ್ತಿರುವಳೆಂದೂ, ಅವಳು ದೇವರಿಗೂ, ದೇವಾಲಯಕ್ಕೂ ಎಲ್ಲಾ ಪವಿತ್ರ ವಿಷಯಗಳಿಗೂ ಅಪರಾಧಿಯಾಗಿದ್ದರೂ ಸಹ ಅವಳು ಮಹಾಶಕ್ತಿಯುಕ್ತ ತಮದಿ ಎಂದೂ ಪ್ರೀತಿ ವಿಶ್ವಾಸಗಳಿಂದ ಅವಳಂತೆ ಮಹಾ ತಮಡಿ ಎನಿಸಿಕೊಂಡ ಪೂಜಾರಿಗಳಾದ ಮೇಲೂ ದೇವರು ಅಷ್ಟೊಂದು ವಿಶ್ವಾಸದಿಂದ ಕಾಣಿಸಿಕೊಳ್ಳುತ್ತಿರಲಿಲ್ಲವೆಂದೂ ಹೇಳಿದ. ಅವಳಲ್ಲಿ ದೇವರು ಆವಿರ್ಭವಿಸಿದಾಗ, ಪೂರ್ಣವಾಗಿ ತನ್ನ ಬಾಯನ್ನೆಲ್ಲಾ ಬಿಚ್ಚಿತೆರೆದು ಅವಳು ಭವಿಷ್ಯವನ್ನು ನುಡಿಯುತ್ತಿದ್ದಾಗ ಯಾರೊಬ್ಬರೂ ಅವಳ ನೋಟವನ್ನು ನೋಡಿ ಸಹಿಸಲು ಆಗುತ್ತಿರಲಿಲ್ಲ. ದೇವರು ಅವಳ ಬಾಯಿಂದ ಪ್ರಕಟಿಸುತ್ತಿದ್ದ ಮಾತುಗಳು ಸಿಡಿಸಿ ಜ್ವಾಲೆಗಳಂತೆ

ಭಯಂಕರವಾಗಿರುತ್ತಿದ್ದವು. ದೇವರು ಅವಳನ್ನು ಅಷ್ಟೊಂದು ಪ್ರೀತಿಸುತ್ತಿದ್ದನೆಂದೂ ಹೇಳಿಕೊಳ್ಳುತ್ತಿದ್ದರು. ಅವಳನ್ನು ಬಿಟ್ಟು ದೇವರು ಮತ್ತೊಬ್ಬರ ಮೂಲಕ ಮಾತನಾಡಲು ನಿರಾಕರಿಸಿ ಬಹಳ ವರ್ಷಗಳ ಕಾಲ ಹಾಗೇ ನಡೆದುಕೊಳ್ಳುತ್ತಿದ್ದನಂತೆ.

ಅವಳು ದೇವ ಮಾನವರಿಬ್ಬರಿಗೂ ಅಪರಾಧಮಾಡಿ, ಅದಃಪತನಳಾಗಿ ದುಸ್ಸಾಧ್ಯ ದೋಷಕ್ಕೊಳಗಾಗಿದ್ದಳು ಕಲ್ಲುಕೋಲುಗಳ ತೂರಾಟಕ್ಕೆ ಸಿಕ್ಕ ಎಲ್ಲರಿಂದಲೂ ಶಪಿತಳಾಗಿದ್ದಳು. ತಾನು ಯಾವ ದೇವರಿಗೆ ದ್ರೋಹಮಾಡಿದಳೋ ಆ ದೇವರೂ ಅವಳನ್ನು ದೂರಮಾಡಿದ್ದನು. ಇದು ನನ್ನ ಬಾಲ್ಯ ದಿನಗಳಲ್ಲಿ ನಡೆದಿದ್ದು, ಆದರೂ ಯಾರೂ ಅವಳ ವಿಷಯವಾಗಿ ಒಂದು ಚಕಾರವನ್ನು ಆಡದಿದ್ದರೂ ಅವಳನ್ನು ಪರ್ವತ ಪ್ರಾಂತ್ಯಕ್ಕೆ ಎಲ್ಲಿಗೆ ಓಡಿಸಿದ್ದರೋ ಅಲ್ಲಿ ಜೀವಂತವಾಗಿರುವುದಾಗಿ ಹೇಳುವರು. ನನಗೆ ಅದರ ಸತ್ಯದಲ್ಲಿ ಸಂದೇಹವೇ ಇಲ್ಲ ಅಂತಹ ಅಲೌಕಿಕ ಶಕ್ತಿಯೊಡನೆ ಸಂಬಂಧವಿದ್ದವರು ಆ ದೈವಶಕ್ತಿ ಇನ್ನು ಅವರಲ್ಲಿ ಇರುವಾಗ ಅವರು ಸಾಯುವುದಿಲ್ಲ. ಒಬ್ಬರಲ್ಲಿ ಒಂದಾವರ್ತಿ ಪ್ರಕಟವಾದನಂತರ ಅಂತಹವರನ್ನು ದೇವರು ತ್ಯಜಿಸುವುದಿಲ್ಲ. ಶಾಪರೂಪದಲ್ಲೇ ಅವರಲ್ಲೇ ಇರುತ್ತಾನೆ. “ಹುಡುಕಿ ನೋಡಿ ಪತ್ತೆಹಚ್ಚಿದರೆ ಅವಳಿಂದ ನಿನ್ನ ಪ್ರಶ್ನೆಗಳಿಗೆ ನಿಜವಾಗಿ ಉತ್ತರಗಳು ಬರಬಹುದು. ನಿನಗೆ ಅಹಿತವಾದರೂ. ಎನ್ನುತ್ತಾ ಕುರುಡನಾದರೂ ಆ ಪರ್ವತದ ಕಡೆಗೆ ನನ್ನ ತೋರು ಬೆರಳನ್ನು ಸರಿಯಾಗಿಯೇ ತೋರಿಸಿದ ಅವನು ಮಾತನಾಡುತ್ತಿದ್ದ ಆ ಮುದುಕಿ ಅಲ್ಲಾಡದೆ ಕುಳಿತಿದ್ದು ಇವನ ಕಥೆಯನ್ನೆಲ್ಲಾ ಹಾಗೇ ಕೇಳಿದ್ದಳು ಅವಳ ಅಂತರಂಗದಲ್ಲಿ ಏನು ವಿಪ್ಲವವು ನಡೆದಿತ್ತೊ ಅದು ಅವಳ ಮುಖದಲ್ಲಿ ಕಂಡುಬರುತ್ತಿರಲಿಲ್ಲ. ತೀಕ್ಷ್ಣವಾಗಿ ಹುಡುಕುತ್ತಾ ಸ್ವಲ್ಪ ವಿಸ್ಮಯದಿಂದ ಅವಳ ಕಪ್ಪಾದ ಹೆಪ್ಪುಗಟ್ಟಿದ ಮುಖವನ್ನು ನೋಡುತ್ತಾ ಆ ಮುಖ ಪುಸ್ತಕದ ವೃದ್ಧಹಣೆಯಲ್ಲಿ ಸರಳವಾಗಿದ್ದ ಬರಹವನ್ನು ಅರಿಯಲು ತುಂಬಾ ಕಷ್ಟವಾಗಿಯೇ ಇತ್ತು. ಈಗ ಬಳಕೆಯಲ್ಲಿಲ್ಲದ ಪುರಾತನ ಭಾಷೆಯಲ್ಲಿ ಬರೆದಿದ್ದಂತೆ ಕ್ಲಿಷ್ಟವಾಗಿತ್ತು ಚಿರಕಾಲ ಅವಳು ಹಾಗೇ ಮೌನದಿಂದಲೇ ಕುಳಿತಿದ್ದು ತನ್ನೊಳಗೇ ತಾನು ಊರ್ಣನಾಭಿಯಂತೆ ಅಂತರ್ಗತವಾಗಿದ್ದಳು. ಕಡೆಗೆ ತನ್ನ ಅಂತರ್ಗತ ಮನಸ್ಸಿನಿಂದ ಬಹಿರಂಗವಾಗಿ ನೀನು ದೇವರಲ್ಲಿ ಕೇಳಿದ ಪ್ರಶ್ನೆಯಾದರೂ ಏನು ? ಎಂದಳು ನನ್ನ ಅದೃಷ್ಟ ವಿಚಾರವಾಗಿ ಕೇಳಿದೆ ಎಂದ. ನಿನ್ನ ಅದೃಷ್ಟ? ಹೌದು, ನನ್ನ ಅದೃಷ್ಟದ ವಿಷಯ, ನನ್ನ ಜೀವನ, ಅದು ಹೇಗಿರಬಹುದು. ನನಗೆ ಏನು ಕಾದುಕೊಂಡಿದೆ ಎಂಬುದನ್ನು ಬಹಳ ಜನರು ಕೇಳುವುದೆಲ್ಲಾ ಅಷ್ಟೆ ಅವರಿಗೆಲ್ಲಾ ಅಷ್ಟರಲ್ಲೇ ಕುತೂಹಲ. ನಿನ್ನ ಅದೃಷ್ಟವಿಧಿಯಲ್ಲಿ ವಿಶೇಷವಾದರೂ ಏನು ? ಅದು ಏನಾದರೂ ಅಸಮಾನ್ಯವೇ ? ಹೌದು, ಹಾಗಿದೆ ಅದು. ಎಂದವನೇ ಮುಂದುವರೆಸಿದ: ಕೇಳಿ, ಒಂದಾನೊಂದು ಸಂಗತಿ ನಡೆಯಿತು, ಅದು ಅಷ್ಟು ಅದಮ್ಯವಾಗಿ ಆಳವಾಗಿ ನನ್ನ ಮನಸ್ಸನ್ನು ಹೆದರಿಸುತ್ತಾ ಅಲ್ಲಕಲ್ಲೋಲಮಾಡಿ ನಾನು ಇನ್ನೇನನ್ನು ಚಿಂತಿಸಲು ಆಗದಂತೆ ಮಾಡಿರುವ ವಿಚಿತ್ರಸಂಗತಿ. ಇದರಿಂದ ನನ್ನ

ಆತ್ಮಕ್ಕೆ ಶಾಂತಿ ಇಲ್ಲವಾಗಿದೆ. ಆದ್ದರಿಂದಲೇ ನಾನು ಡೆಲ್ಫಿಗೆ ಬರಲು ಕಾರಣವಾಗಿ ಈಗ ಇಲ್ಲಿಗೆ ನಿಮ್ಮಲ್ಲಿಗೆ ಬಂದಿರುವುದು. ಸ್ವಲ್ಪವಾದರೂ ಶಾಂತಿಬೇಕೆಂದೂ ಮನಸ್ಸಿಗೆ ಪ್ರಚೋದನೆಯಾಗಬೇಕೆಂದೂ ಬಯಸಿದ್ದೇನೆ.

ನಾನು ನನ್ನ ಚಿಕ್ಕಹೆಂಡ್ತಿಯ ಮತ್ತು ಸಣ್ಣ ಮಗನೊಂದಿಗೆ ಸುಖವಾಗಿದ್ದೆ ನಾನು ಹುಟ್ಟಿದ ಊರನ್ನು ಬಿಡಲು ನನಗೆ ಆಸೆಯಿರಲಿಲ್ಲ. ನನಗೆ ಅಲ್ಲಿ ಜೀವನಮಾರ್ಗವೂ ಇತ್ತು, ನಮ್ಮ ತಂದೆಯು ಬಿಟ್ಟು ಹೋಗಿದ್ದ ಮನೆಯೂ ಇತ್ತು, ನಾನು ಧನಿಕನಾಗಿರಲಿಲ್ಲವಾದರೂ ತಕ್ಕಷ್ಟು ಅನುಕೂಲಸ್ಥನೇ. ನನ್ನ ಜೀವನವು ಭದ್ರವಾಗಿಯೂ ಚಿಂತಾರಹಿತವಾಗಿಯೂ ಇದ್ದು ಎಲ್ಲಾ ಭಾಗದಲ್ಲೂ ಅಭಿವೃದ್ಧಿ ಸೂಚಿಸುತ್ತಿತ್ತು.

ಒಂದು ದಿವಸ ನಮ್ಮ ಮನೆ ಬಾಗಿಲಲ್ಲಿ ನಿಂತಿದ್ದೆ ಆಗ ಯಾರೋ ಗೊತ್ತಿಲ್ಲದ ಮನುಷ್ಯನೊಬ್ಬ ತನ್ನ ಶಿಲುಬೆಯನ್ನು ಎಳೆದುಕೊಂಡು ಬರುತ್ತಿದ್ದ, ನೋಡಿದೆ. ಇದರಲ್ಲೇನೂ ಅತಿಶಯವಿರಲಿಲ್ಲ ಏನು ಅಸಂಗತವೂ ಅಲ್ಲ, ಶಿಲುಬೆಗೆ ಗುರಿಯಾದವರನು ಸೈನಿಕರು ಕರೆದೊಯ್ಯುತ್ತಿದ್ದ ದಾರಿಯಲ್ಲೇ ನಮ್ಮ ಮನೆ ಇದ್ದರೂ ಅನೇಕವೇಳೆ ಹೀಗಾಗುತ್ತಿತ್ತು ಮತ್ತು ಆ ಮನುಷ್ಯನೂ ಸಹ ಏನೂ ವಿಚಿತ್ರನಾದವನೂ ಅಲ್ಲ ಎಂದು ನನ್ನ ನಂಬಿಕೆ. ನೋಡಿದೆ ಅವನು ಸ್ವಲ್ಪ ಶಾಂತಿಯಿಲ್ಲದೆ ಬಳಲಿದ್ದ, ಆಯಾಸಗೊಂಡಿದ್ದಂತೆ ತೋರಿತು. ಸಂದೇಹವೇಇಲ್ಲ, ನಾನು ನಿಂತಿದ್ದ ಸ್ಥಳದಿಂದ ಕೊಂಚ ದೂರದಲ್ಲಿ ನಮ್ಮ ಮನೆಯ ಗೋಡೆಯ ಮೇಲೆ ಅವನು ಆತುಕೊಂಡು ಒರಗಿದ. ನನಗೇಕೋ ಅದು ಹಿಡಿಸಲಿಲ್ಲ ಏತಕ್ಕಾಗಿ ಅವನು ಹಾಗೆ ನಮ್ಮ ಗೋಡೆಯ ಮೇಲೆ ಒರಗಿಕೊಳ್ಳುವುದು ? ಎಂದು ಯೋಚಿಸಿದೆ. ಒಬ್ಬ ಅಪರಾಧಿಯಾದವನು, ಅಷ್ಟೆ ಅಸುಖಿಯಾದವನು ನಮ್ಮ ಗೋಡೆಯಮೇಲೆ ಆಧರಿಸಿದರೆ ನಮಗೆ ಏನಾದರೂ ಅನಿಷ್ಟ ಸಂಭವಿಸಬಹುದೆಂದು ಅವನಿಗೆ ಮುಂದೆ ಹೋಗು ನೀನು ಅಲ್ಲಿ ನಿಂತಿರುವುದು ಬೇಡ ಎಂದೆ. ಆಗ ಅವನು ನನ್ನ ಕಡೆ ನೋಡಿದ. ನಾನೂ ಅವನ ಮುಖದ ಕಡೆ ನೋಡಲಾಗಿ ಅವನು ಏನೂ ಸಾಮಾನ್ಯ ಮನುಷ್ಯನಲ್ಲವೆಂದೂ ಅವನಲ್ಲಿ ಏನೋ ವಿಶೇಷವಿರಬೇಕೆಂದೂ ಅನ್ನಿಸಿತು. ನನಗೆ ಹಾಗೆ ಯೋಚಿಸಲು ಏನು ಕಾರಣವಿತ್ತೊ ತಿಳಿಯದು. ಅವನ ಮುಖದ ಮೇಲಿನ ದೃಷ್ಟಿ ಆಗ್ರಹಗೊಂಡಿರಲಿಲ್ಲವೆಂದು ನಂಬಿಕೆ. ಸಾಧುವಾಗಿಯೂ ವಿಧೇಯಕರವಾಗಿಯೂ ಇದ್ದ ದೃಷ್ಟಿ ಈಗ ಮಾತ್ರ ಭಯಂಕರವಾಗಿಯೂ ಶಕ್ತಿಪೂರ್ಣವಾಗಿಯೂ ಇದ್ದು, ಎಂದಿಗೂ ಮರೆಯಲಾಗದಂತೆ ಇತ್ತು.

ನಾನು ನನ್ನ ತಲೆಯನ್ನು ನಿಮ್ಮ ಮನೆ ಗೋಡೆಯ ಮೇಲೆ ಒರಗಿಸಲು ಆಗದುದರಿಂದ ನೀನು ಎಂದೆಂದಿಗೂ ಪುಣ್ಯರಹಿತನಾಗುವೆ ಎಂದನು.

ನನಗೆ ಭ್ರಮೆಯಿಂದ ಕಷ್ಟವಾಯಿತು ಅವನ ನುಡಿ ಏನೋ ವಿಶಾದವಾದುದೆಂದು ತಿಳಿದೆ. ಸೈನಿಕರು ನಗುತ್ತಾ ಮಂದ ಮುಂದಕ್ಕೆ ಅವನನ್ನು ಅಟ್ಟಿದರು. ಅವನು ಅಲ್ಲಿ ನಿಂತಿರಲು ಅವರಿಗೂ ಸಹ ಬೇಡವಾಗಿತ್ತು. ಬಲಾತ್ಕಾರದಿಂದ

ಅಟ್ಟುತ್ತಿದ್ದರು ಆದರೆ ಅವನು ಹೊರಟುಹೋಗಲು ಮೊದಲು ನಿಂತು ಹಿಂತಿರುಗಿ ಪುನಃ ಕ್ರೂರ ದೃಷ್ಟಿಯಿಂದ ನೋಡುತ್ತಾ ಹೇಳಿದ ‘‘ನೀನು ನನಗೆ ಹೀಗೆ ಅದು ಇಲ್ಲದಂತೆ ಮಾಡಿದೆಯಾದ ಕಾರಣ ನಾನು ಅನುಭವಿಸುತ್ತಿರುವುದಕ್ಕಿಂತಲೂ ಹೆಚ್ಚು ಶಿಕ್ಷೆಯನ್ನು ಅನುಭವಿಸು ನೀನು ಎಂದಿಗೂ ಸಾಯಲೇಬೇಡ, ಈ ಪ್ರಪಂಚದಲ್ಲಿ ನೀನು ಅಲೆದಾಡುತ್ತಾ ಅನಂತ ಕಾಲದವರೆಗೂ ಶಾಂತಿಯಿಲ್ಲದವನಾಗು’’ ಎಂದನು.

ಅವನು ತನ್ನ ಶಿಲುಬೆಯನ್ನು ಪುನಃ ತನ್ನ ಭುಜದ ಮೇಲೆ ಧರಿಸಿದವನಾಗಿ ತಡವರಿಸುತ್ತಾ ಊರ ಬಾಗಿಲಿನ ಆಚೆಗೆ ಹೋಗಿ ಅದೃಶ್ಯನಾಗಿದ್ದ. ನಾನು ನಿಂತಲ್ಲಿಯೇ ನಿಂತಿದ್ದೆ. ನನ್ನಲ್ಲಿ ಒಂದು ವಿಧವಾದ ವಿಕಲ್ಪ ಸಂಚಲನೆಯಾಗಿತ್ತು. ಏನೋ ನನ್ನಲ್ಲಿ ನಡೆದುಹೋಗಿತ್ತು ಅದರ ಅಂತರಾರ್ಥ ನನಗೆ ತಿಳಿದುಬರಲಿಲ್ಲ. ನಾನದನ್ನು ಯಾರಲ್ಲೂ ವಿವರಿಸಲು ಆಗಲಿಲ್ಲ. ಅಂತಹ ಸ್ಥಿತಿ ಬಂದಿತ್ತು. ಆ ಮನುಷ್ಯ ಹೇಳಿದ್ದನ್ನು ಕೇಳಿದ್ದ ನೆರೆಹೊರೆಯವರು ನಾನು ನಿಂತಿದ್ದ ವಿಚಿತ್ರ ಭಂಗಿಯನ್ನು ಗಮನಿಸಿ ಅವನಂತಹ ಅಪರಾಧಿ ಶಿಕ್ಷೆಗೊಳಗಾಗಿದ್ದವನು ಹೇಳಿರುವ ಮಾತಿಗೆ ಗಮನಕೊಡಬಾರದೆಂದೂ ಅದಕ್ಕೆ ಚಿಂತಿಸಬಾರದೆಂದೂ ನನಗೆ ಹೇಳಿದರು. ಅಂತಹ ಅಪರಾಧಿಗಳು ತಮ್ಮ ಪ್ರಾಣವನ್ನು ಬಿಡಲು ಮೊದಲು ಹೀಗೆಲ್ಲಾ ಅತಿಭಯಂಕರವಾದ ಮಾತುಗಳನ್ನಾಡಿ, ಜನರನ್ನು ಹೆದರಿಸಿ, ಶಪಿಸುತ್ತಿದ್ದುದು ನನಗೆ ಗೊತ್ತಿದ್ದ ವಿಷಯ. ಅವರು ಅಂತಹ ಸಂಕಟದಲ್ಲಿ ಏನೇನು ಬೇಕಾದರೂ ಕೂಗಾಡುವುದು ಸಹಜವೆಂದೂ ಗೊತ್ತಿತ್ತು. ಅವರು ಆ ಕಾಲದಲ್ಲಿ ಬಾಯಿಗೆ ಬಂದಂತೆ ಹುಚ್ಚಾಪಟ್ಟೆ ಕೂಗಾಡುವುದು ಸಹಜ ಅದಕ್ಕೆ ನೀವು ಖಿನ್ನಮನಸ್ಕರಾಗಬಾರದು ಎಂದರು.

ಹೀಗೆ ಹೇಳಿದವರು ಸರಿಯಾಗಿಯೇ ಹೇಳುತ್ತಾರೆಂದು ನನಗೆ ಗೊತ್ತಿಲ್ಲವೆ? ಅಪರಾಧಿಯ ಹುಚ್ಚುಮಾತುಗಳಿಗೆ ನೆರೆಯುವರು ನಕ್ಕು, ಭುಜಗಳನ್ನಾಡಿಸಿ ನನಗೆ ನೆರವು ನೀಡಿದ್ದರು. ಅವರೊಡನೆ ನಾನು ಕೆಲವುಕಾಲ ಮಾತನಾಡಿದ ನಂತರ, ನಾನು ಸಹ ನಕ್ಕುಬಿಟ್ಟ ಆ ಸ್ಥಳವನ್ನು ಬಿಟ್ಟು ನನ್ನ ಕೆಲಸಕ್ಕೆ ಹೊರಟು ಹೋದೆ, ತಿರುಗಿ ಚಿಂತಿಸದೆ.

ಆದರೂ ನಾನು ಅದನ್ನು ಪೂರ್ತಿಮರೆಯಲಾಗಲಿಲ್ಲ. ಆಗಾಗ್ಗೆ ಅದು ನೆನಪಿಗೆ ಬರುತ್ತಿದ್ದರೂ ನಾನು ಅದನ್ನು ಮನಸ್ಸಿಗೆ ಅಂಟಿಸಿಕೊಳ್ಳದೆ ತಿರಸ್ಕರಿಸಲು ಪ್ರಯತ್ನಿಸಿದೆ. ದಿನಕಳೆಯಿತು, ನನ್ನ ಕೆಲಸದಲ್ಲಿ ನಾನು ನಿರತನಾದೆ, ಎಂದಿನಂತೆ ಎಂದು ನನ್ನ ಭಾವನೆ. ಆದರೆ ಅವನು ಆಡಿದ್ದ ಮಾತುಗಳು ನನ್ನಲ್ಲಿ ಉಳಿದುಕೊಂಡಿದ್ದವು. ಆಗಾಗ್ಗೆ ಆ ಮಾತುಗಳು ನನ್ನ ಅಂತರ್ಯದೊಳಗೆ ಆಳದೊಳಗೆ ಪುನರುಚ್ಚರಿಸುತ್ತಿತ್ತು. ಯಾರಿಂದ? ನನ್ನಿಂದಲೇ? ನನಗೆ ತಿಳಿಯಲಿಲ್ಲ ಆದರೆ ಕೇಳಿಬರುತ್ತಿತ್ತು, ಸ್ಪಷ್ಟವಾಗಿಯೇ ಕೇಳಿಸುತ್ತಿತ್ತು. ಅದನ್ನು ನಾನು ಏಕೆ ಕರೆದುಕೊಳ್ಳಬೇಕೋ ನನಗೆ ಅರ್ಥವಾಗಲಿಲ್ಲ. ಆ ಮಾತುಗಳಿಗೆ ಅರ್ಥವಿಲ್ಲವೆಂದು ನನಗೆ ತಿಳಿದಿತ್ತು. ಅರ್ಥವಿಲ್ಲದ್ದು ನನ್ನ ಮನೆಯ ಗೋಡೆಯಮೇಲೆ ತನ್ನ ತಲೆಯನ್ನು ಒರಗಿಸಿ

ಕೊಳ್ಳಲು ಅವನಿಗೆ ಅವಕಾಶ ದೊರೆಯಲಿಲ್ಲವಾದ್ದರಿಂದ ಯಾರೋ ಒಬ್ಬ ಅಪರಾಧಿ ಆಡಿದ್ದ ಮಾತುಗಳವು ಅಷ್ಟಕ್ಕಿಂತ ಆ ಮಾತುಗಳಿಗೆ ಏನೂ ಅರ್ಥವಿರಲಿಲ್ಲ ; ಅವನು ಆಡಿದ್ದ ಮಾತುಗಳಿಗೆ ಅಷ್ಟಕ್ಕಿಂತ ಹೆಚ್ಚು ಗಮನವನ್ನು ಕೊಡುವುದು ಹುಚ್ಚುತನ. ನಾನೇಕೆವಮಾಡಿದೆ ?

ಮಾರನೆಯ ದಿನದ ವೇಳೆಗೆ ನಾನು ಅದನ್ನು ಒದರಿಬಿಟ್ಟಿರುವುದಾಗಿ ಯೋಚಿಸಿದ್ದೆ. ಆದರೆ ಮರುದಿನ ಪ್ರಾತಃಕಾಲದಲ್ಲಿ ನನಗೆ ಎಚ್ಚರವಾದಾಗ ಏನೋ ಪ್ರಾಪ್ತವಾಗಿದ್ದಂತೆ, ಬುದ್ಧಿಯಿಂದ ಹಾಗೇ ತೂಕಡಿಸುತ್ತ ಇದ್ದಾಗ ಆ ಮಾತುಗಳೇ ನಿಧಾನವಾಗಿ, ನನ್ನೊಳಗೇ ಉಚ್ಚರಿಸಿದ್ದುವು. ನನ್ನ ಮೇಲೆ ಆಡಿದ ವಾಕ್ಯವೇ ಮೃದುವಾಗಿ ಪಿಸುಗುಟ್ಟುತಿತ್ತು ? ಯಾರಿಂದ ? ಎದ್ದನಂತರ ನಾನು ಮೊದಲಿನಂತೆಯೇ ಆದೆ. ನನ್ನ ಕೆಲಸಕಾರ್ಯಗಳಲ್ಲಿ ನಿರತನಾದೆ ಎಂದಿನಂತೆ. ಆದರೆ ಅದರಲ್ಲಿ ನನಗ ನಿಜವಾದ ಶ್ರದ್ಧೆಯಿರಲಿಲ್ಲ. ಸಾಮಾನ್ಯವಾಗಿ ನಾನು ಶ್ರದ್ಧೆಯಿಂದಲೇ ಇದ್ದು ಕೆಲಸಗಳಲ್ಲಿ ಸಂತೋಷದಿಂದಲೂ ಇರುತ್ತಿದ್ದವನು ಸ್ವಲ್ಪ ಕಾಲಾನಂತರ ಸುಮ್ಮನೆ ಕುಳಿತಿರಲು ಅಶಾಂತನಾದೆ. ಸೋಮಾರಿಯಂತೆ ಏನೂ ಮಾಡದೆ ಅಲೆದಾಡಿದೆ. ಏನನ್ನಾದರೂ ಮಾಡಲು ಆಶೆಯೂ ಇರಲಿಲ್ಲ. ಇದು ನನ್ನ ಸಹಜ ಸ್ವಭಾವವೇ ಅಲ್ಲ ಹೀಗೆ ನಡೆದು ಬಂದಿತು. ದಿನದಿನಕ್ಕೂ ಒಂದು ರೀತಿಯಲ್ಲಿ ನೋಡಿದಾಗ ನಾನು ಬದಲಿಸಿಕೊಂಡಿದ್ದೆ ನನಗೆನಾನೇ ಎಂದು ಗುರುತಿಸಲಾರದಾದೆ.

ಎಷ್ಟು ಕಾಲ ಹೀಗೆ ನಡೆಯಿತೋ ನೆನಪಿಲ್ಲ. ಆದರೆ ಆ ಅಪರಾಧಿಯನ್ನು ಶಿಲುಬೆಗೆ ಏರಿಸಲು ನಮ್ಮ ಬೀದಿಯಲ್ಲೇ ಎಳೆದುಕೊಂಡುಹೋಗಿದ್ದ ಆ ಮನುಷ್ಯ ದೇವರ ಮಗನೆಂಬ ಆಶ್ಚರ್ಯಕರವಾದ ಸುದ್ದಿ ನನಗೆ ಕೇಳಿಬಂತು. ಬಹಿರಂಗವಾಗಿ ಆ ಮಾತು ಆಡಿರಲಿಲ್ಲ. ಜನರಲ್ಲಿ ಒಬ್ಬರಿಂದೊಬ್ಬರು ಪಿಸುಗುಟ್ಟುತ್ತಾ ರಹಸ್ಯವಾಗಿಯೇ ಮಾತನಾಡಿಕೊಳ್ಳುತ್ತಿದ್ದರು. ಯಾರು ನಿಜವಾಗಿ ವಾಸ್ತವವನ್ನು ಅರಿತಿರ ಬೇಕಾಗಿದ್ದಿತೋ—ಯಾರು ಅವನಲ್ಲಿ ನಂಬಿಕಸ್ಥರೋ—ಅವರು ಗುಟ್ಟಾಗಿ ಮುಚ್ಚಿ ಮರೆಮಾಚುತ್ತಾ ಇರುವಂತೆ ಕಂಡಿತೇ ವಿನಾ ಅವನ ಪರವಾಗಿ ಬಹಿರಂಗವಾಗಿ ರುಜುವಾತು ಮಾಡಲು ಬಂದವರೇ ಅಲ್ಲ. ಇನ್ನು ಇಲ್ಲಾ ಅಂತಹವರು ತುಂಬಾ ಜನರಿರಲಿಲ್ಲವೆನ್ನಬಹುದು. ಊರಿನ ಬಹಳ ಮಂದಿ ಅದನ್ನು ನಂಬಿದವರೇ ಅಲ್ಲ. ಅದೆಲ್ಲೋ ಹುಡುಗಾಟದ ಕಟ್ಟುಕತೆಯೆಂದರು. ಅವನನ್ನು ಶಿಲುಬೆಗೆ ಏರಿಸಿದವರು ಅದೆಲ್ಲಾ ದೇವರಮೇಲಿನ ದೋಷಾರೋಪ ಇತ್ಯರ್ಥ ಮಾಡಿದರು.

ದೇವರ ಮಗ–ಅವನಂತೂ ಎಲ್ಲ ಎಂದು ಹೇಳಿಕೊಂಡೆ. ಆ ಮಾತು ಹಾಸ್ಯಾಸ್ಪದ. ಶುದ್ಧ ಅವಿವೇಕ. ದೇವರ ಮಗ ? ಆ ವದಂತಿಯ ವಿಷಯವಾಗಿ ನಾನು ಪ್ರಶ್ನಿಸಿದೆ. ಹೇಗೆ ಈ ಸುದ್ದಿ ಆರಂಭವಾಯಿತು. ಯಾರು ಅದನ್ನು ಹರಡುತ್ತಾರೆ. ನೈಜವಾಗಿ ಯಾರು ಅವನನ್ನು ನಂಬಿದರೋ, ಅವರು ಗುಪ್ತವಾಗಿದ್ದವರು. ವಿಚಿತ್ರ ಪವಾಡ ವೊಂದು ನಡೆದಿರುವಂತೆ ಸ್ಥಿರಪಡಿಸಿದರು. ಎಷ್ಟೋ ಪವಾಡಗಳು ನಡೆದಿರುವಂತೆ

ಇದನ್ನು ಅವರವರ ನಂಬಿಕೆಗೆ ತಕ್ಕಂತೆ ನಿಜವಾದುದೆಂದು ದೃಢಮಾಡಿದರು. ಅರಸು ನಿಜವಾಗಿ ದೇವರ ಮಗನೆಂಬುದನ್ನು ತಮ್ಮ ತಮ್ಮ ಅನುಭವಗಳಿಂದ ದೃಢಪಡಿಸಿದರು ಅವರಿಗೆಲ್ಲಾ ಇದು ಅತ್ಯದ್ಭುತವಾದ ಮುಖ್ಯವಾದ ಪವಾಡವೆಂದರು. ಅವರೆಲ್ಲಾ ನಂಬಿಕೆಗೆ ಅರ್ಹರಾದವರೇ ಅಲ್ಲ, ಅವರು ಹೇಳಿದುದಂತೂ ಯೋಗ್ಯವಾದುದೇ ಗಣ್ಯವಾದುದೇ ಅಲ್ಲ.

ಅಕ್ಕಪಕ್ಕದವರಲ್ಲಿ ನಾನು ಚರ್ಚೆಮಾಡಿದೆ, ಅವರ ಅಭಿಮತವನ್ನೂ ಕೇಳಿದೆ ; ಅವರಿಗೆ ನೆನೆಪಿನಲ್ಲಿದ್ದರೆ, ಆ ಅಪರಾಧಿ ಶಿಲುಬೆಯನ್ನು ಹಿಡಿದುಕೊಂಡು ಹೀಗೇ ದಾರಿಯಲ್ಲಿ ಎಳೆದುಕೊಂಡು ಹೋಗಿದ್ದವನ ಕಥೆಯ ವಿಷಯವಾಗಿ ಅವನು ದೇವರ ಮಗನೇ ಎಂದು ಕೇಳಿದೆ. ಗಮನಾರ್ಹವೇ ? ಅವರೂ ವಿಷಯವನ್ನು ಕಿವಿಯಲ್ಲಿ ಕೇಳಿದ್ದವರೇ. ಅದೆಲ್ಲಾ ಶುದ್ಧಾಂಗ ಬುದ್ಧಿ ಹೀನವಾದ ಅಜ್ಞಾನ

ಆದರೆ ಅನೇಕ ಮಂದಿ ನಂಬಲೂಬಹುದು ಅದನ್ನು ಎಂದೆ. ಅವರು ನಕ್ಕುಬಿಟ್ಟು ಹುಚ್ಚರ ವಿಷಯ ಮಾತನಾಡಿದರು ನೀನು ಇನ್ನು ಅವನ ಹೇಳಿದ್ದ ಮಾತುಗಳನ್ನೆ ಮೆಲುಕು ಹಾಕುತ್ತಿರುವೆಯಾ ಎಂದು ವಿನೋದದಿಂದ ನಕ್ಕರು.

ಸ್ವಲ್ಪವೂ ಇಲ್ಲ, ನೀವೇನು ಹುಚ್ಚರೇ ? ಅಂತಹ ವಿಷಯದಲ್ಲಿ ನಾನು ಏನೂ ಲಕ್ಷ್ಯಮಾಡುವುದೇ ಇಲ್ಲವಲ್ಲಾವೆಂದು ತಿಳಿಯದೇ ಎಂದು ನಗುತ್ತಲೇ ಉತ್ತರಿಸಿದ್ದೆ.

ಆದರೆ ಉತ್ತರಿಸಿದ್ದು ನಿಜವೇ ? ನಾನು ನಿಜವಾಗಿಯೂ ಅದರ ವಿಷಯವಾಗಿ ಲಕ್ಷ್ಯಮಾಡಿಲ್ಲವೆ ? ಹಾಗೆ ಹೇಳಿಬಿಡುವುದು ಸುಲಭವಾಗಿಯೇ ಇತ್ತು ಆದರೆ ನಾನೇಕೆ ಇಷ್ಟು ಬದಲಾಯಿಸಿದವನಂತೆ ಭಾವಿಸಿದ್ದು ? ಸುಖವಿಲ್ಲದೆ, ಅಧೋಮುಖವಾಗಿ ಎಲ್ಲವನ್ನು ಅರ್ಥಹೀನವಾದಂತೆ ಕಂಡದ್ದು ? ಏಕೆ ಅದು ಹಾಗೆ ಆಗಿದ್ದದು ? ಸುತ್ತ ಮುತ್ತ ಸಕಲವೂ ಸತ್ವಹೀನವಾಗಿ ಏಕೆ ನಿನ್ನಿರವಾಯಿತು ? ಒಳಗೂ ನನ್ನ ಹೊರಗೂ ಸಹ ಹೀಗೆ ನನಗೆಂದೂ ಅನುಭವವಾಗಿಲಿಲ್ಲ ಇದು ಯಾವ ರೀತಿಯ ಬದಲಾವಣೆ ? ನನಗೇಕೆ ಈ ರೀತಿ ಭಾವನೆ ?

ಒಂದು ದಿವಸ ಊರ ಹೊರಗಿನ ಫಲವತ್ತಾದ ಪ್ರದೇಶದಲ್ಲಿ ನಾನು ಓಡಾಡುತ್ತಿದ್ದುದು ನೆನಪಿದೆ. ಆ ಪ್ರದೇಶವೆಲ್ಲಾ ನನಗೆ ಚೆನ್ನಾಗಿ ಪರಿಚಯವಾದುದೇ. ದ್ರಾಕ್ಷಿ ತೋಟಗಳೂ ಹೊಲ ಗದ್ದೆಗಳೂ ಆಲೀವ್ ಮತ್ತು ಅಂಜೂರ ಹಣ್ಣಿನ ಗಿಡಗಳೂ ಎಲ್ಲವೂ. ಏಕೆ ಅವೆಲ್ಲವೂ ಎಷ್ಟು ಶುಷ್ಕವಾಗಿಯೂ ನಿರಾಶಾದಾಯಕವಾಗಿಯೂ ಕಾಣುತ್ತಿದ್ದದು ನನಗೇ ವಿಚಿತ್ರವೆನಿಸಿತ್ತು. ಏಕೆಂದರೆ ಅವೆಲ್ಲಾ ಎಂದೂ ಹಾಗೆ ಇದ್ದವುಗಳೇ ಅಲ್ಲಾ (ತದ್ವಿರುದ್ಧವಾಗಿಯೇ ಇದ್ದವು). ಆಗ ಮಧ್ಯಾಹ್ನ ಕಾಲ ಸಂಜೆಯ ಹೊತ್ತಿನಂತೆ ಕಂಡುಬಂದಿತ್ತು ಆ ನೋಟದಿಂದ ನನಗೆ ಭಾರವಾಗಿತ್ತು 'ಬಿಕೋ' ಎನ್ನುತ್ತಿತ್ತು ಇದಕ್ಕೆಲ್ಲಾ ಏನು ಅರ್ಥ ? ನನ್ನಗತಿ ಏಕೆ ಹೀಗಾಗಿತ್ತು ?

ಇದು ನನ್ನ ಪ್ರಪಂಚವೇ ? ಈ ಪ್ರಪಂಚದಲ್ಲಿ ನಾನು ಜೀವಿಸಬೇಕಾಗಿತ್ತೆ ?

ಆಗ ನಾನೆಷ್ಟು ಭಾರದಿಂದ ವ್ಯಥೆಯಿಂದ ಊರುಕಡೆಗೆ ತಿರುಗಿ ಮನೆಗೆ ಬಂದೆ !

ಇಷ್ಟಾದರೂ ನಾನು ನನ್ನ ಹೆಂಡತಿಯಲ್ಲಿ ಏನೊಂದೂ ಹೇಳಲಿಲ್ಲ. ಬೇಕಾಗಿರಲಿಲ್ಲ ಆದರೆ ಅವಳು ಅದನ್ನೆಲ್ಲಾ ಗಮನಿಸಿರಬೇಕು. ಲಕ್ಷ್ಯಮಾಡಬಾರದೇ? ಆ ಹೊತ್ತನ್ನು ಸಾಮಾನ್ಯವಾಗಿ ಅವಳು ಇರುತ್ತಿದ್ದ ಕೊಠಡಿಯೊಳಕ್ಕೆ ಇದನ್ನೆಲ್ಲಾ ಹೇಳಲು ಹೋದೆ. ಅದೆಲ್ಲಾ ಏನಿದ್ದರಬಹುದು? ಹಾಸಿದ್ದ ಚಾಪೆಯೊಂದರ ಮೇಲೆ ಅವಳು ಮಲಗಿ ಮಗುವಿನೊಡನೆ ಆಟವಾಡುತ್ತಿದ್ದಳು. ಆ ತಾಯಿಮಕ್ಕಳ ಆಟವನ್ನು ನಾನು ಭಂಗಮಾಡಿದ್ದೆ. ನನಗೆ ಸಾಧ್ಯವಿದ್ದಷ್ಟು ಸ್ಪಷ್ಟವಾಗಿ ನನ್ನ ಸ್ಥಿತಿಯನ್ನು ವಿವರಿಸಿದೆ. ಶಾಪಭಾರದಿಂದ ಬಂಧಿತನಾಗಿರುವೆನೆಂದು ಹೇಳಿದೆ ಮಗುವನ್ನು ಆಡಿಸುತ್ತಾ ತನ್ನ ಎರಡು ತೋಳುಗಳನ್ನೂ ಮೇಲಕ್ಕೆತ್ತಿ ಮಗುವನ್ನು ಮೇಲಿಂದ ಕುಲುಕುತ್ತಾ ನನ್ನನ್ನು ನೋಡಿ ನಕ್ಕುಬಿಟ್ಟಳು. ಮಗುವೂ ಸಹ ಮುಗುಳ ಭಾವದಿಂದ ನಗುತ್ತಲೇ ಇತ್ತು.

ನಿಜ ನೀನೆಲ್ಲೋ ಹಾಗಾಗಿರಬೇಕು ಎಷ್ಟು ದಿನಗಳಾದುವು ಪ್ರೀತಿಯಿಂದ ಮುದ್ದಿಸಿ? ಎಂದಳು.

ತಾಯಿ ಮಕ್ಕಳನ್ನು ನೋಡುತ್ತಾ ನಗಲು ಯತ್ನಿಸುತ್ತಾ ಈ ಪರಿಯ ಸೊಗಸು ನಿಜವಾಗಿಯೂ ಎಷ್ಟು ರಮಣೀಯವೂ ಪ್ರೇಮ ಪುನೀತವೂ ಆಗಿರುವುದೆಂದು ಚಿಂತಿಸುತ್ತಾ ನಿಂತೆ ಇಷ್ಟಾದರೂ ಒಂದು ರೀತಿಯ ಬೂದಿ ಅವರ ಮೇಲೆಲ್ಲಾ ಕವಿದುಕೊಂಡಿರುವಂತೆ ಎಲ್ಲೆಲ್ಲೂ ಕವಿದುಕೊಂಡಿದ್ದುದು ಕಾಣಿಸಿತು ಅಲ್ಲಿ ನಿಂತಿದ್ದರೂ ಅವರನ್ನು ಯಾರೂ ಅಡ್ಡಿಮಾಡದಂತೆ ಕಾಯುವ ಹೊರಗಿನವನೆಂಬಂತೆ ಭಾಸವಾಗಿತ್ತು. ನಾನು ಹೊರಗೆ ಹೊರಟು ಬಂದಾಗ ಅವರು ತಮ್ಮ ಆಟದಲ್ಲಿ ಮಗ್ನರಾಗಿದ್ದರು.

ಹೀಗೆ ನಾನು ಅನುದಿನವೂ ಅವರ ಆಟದಲ್ಲಿ ಮಗ್ನನಾಗಿ ನಿತ್ಯವೂ ಆನಂದದಿಂದ ಜೀವನದಲ್ಲಿ ಉತ್ಸಾಹಿತನಾಗುತಿದ್ದೆ.

ಪ್ರತಿದಿನವೂ ಹೀಗೆಯೇ? ಅವನು ಹೇಳಿದ್ದು ನಾನು ಎಂದೆಂದಿಗೂ ಜೀವಿಸಿಯೇ ಇರಬೇಕೆಂದೂ ಸಾಯಲೇಬಾರದೆಂದೂ ಹೇಳಿದ್ದ ಮಾತು ಅತಿ ವಿಚಿತ್ರವಾಗಿ ತೋರಿತು. ಅದನ್ನೆಲ್ಲಾ ಈಗ ನಾನೇಕೆ ಚಿಂತಿಸಲಿ? ಎಂದಿಗೂ ನಾನು ಸಾಯದೇನೆ ಬದುಕಿರಬೇಕೆಂಬುದು ನನಗೆ ಪರಮ ಇಷ್ಟವಾಗಿರಲಿಲ್ಲವೇ. ಎಂದಿಗೂ ಸಾಯಬಾರದೆಂದು? ಹಾಗಾದರೆ ಈಗೇಕೆ ನಾನು ಸಂತಸಗೊಳ್ಳುತಿಲ್ಲ? ಏಕೆ ನನಗೆ ಸಂತಸವಿಲ್ಲ?

ಕಟ್ಟಕಡೆಯವರೆಗೂ, ಅನಂತದವರೆಗೂ ಪ್ರಳಯಕಾಲದ ಅಂತ್ಯದವರೆಗೂ ಶಾಂತಿರಹಿತನಾಗಿ....ಆ!

ನಾನೆಂದೂ ಹಿಂದೆ ಇದನ್ನೆಲ್ಲಾ ಚಿಂತಿಸಿರಲಿಲ್ಲ ಆದರೆ ಆ ಪ್ರಳಯಾಂತ್ಯವೆನ್ನುವುದರ ಅರ್ಥ ಈಗ ಅಲ್ಪವಾಗಿ ಬೆಳೆದುಬರುತ್ತಿದೆ. ಇದು ನನ್ನ ಜೀವನವನ್ನು ಕಸಿದುಕೊಳ್ಳುವುದು, ಅದೇ ಅದರ ದೋಷಪೂರ್ಣ ದಯಾರಹಿತ ನೀತಿತತ್ವ ಅದೇ ನನ್ನ ಆತ್ಮನನ್ನು ಬರಿದುಮಾಡುವುದು! ಅನಂತ ಎನ್ನುವುದು ನಿಜವಾಗಿ ಜೀವನದೊಡನೆ ಏನೂ ಸಂಬಂಧವಿಲ್ಲದ್ದು. ನಿಜವಾದ ಜೀವನಕ್ಕೆಲ್ಲಾ ಶತ್ರು ರೂಪರಾದ್ದು ಅದಕ್ಕೆ ಕೊನೆಮೊದಲಿಲ್ಲ.

ಅದೊಂದು ದುರ್ಮ್ರಣದ ಭಯಂಕರ ಆವರಣ. ಇದರಲ್ಲೇ ನಾನು ಜೀವಿಸಿರಬೇಕಾದ್ದು? ಇದಕ್ಕಾಗಿಯೇ ನನಗೆ ದತ್ತವಾಗಿರುವುದು ಜೀವ? ಅನಂತಕ್ಕೆ! ಅದೇ ನನ್ನ ಮರಣದಂಡನೆ? ಇದಕ್ಕಿಂತ ಕ್ರೂರವಾದುದು ಏನು ಇಲ್ಲ

ಈ ದೇವರು ನನ್ನ ಜೀವನದ ಸಕಲ ಸಂತೋಷವನ್ನು ಹೀಗೆ ಕಸಿದು ಕೊಳ್ಳುವುದೇ? ನನಗೆ ನಾನೇ ಆಲೋಚಿಸಿದೆ.

ಈ ರೀತಿಯ ಬರಡು ಜೀವನ ಸ್ಥಿತಿಯನ್ನು ನಾನು ಮೊಟ್ಟಮೊದಲು ಈಗ ಅನುಭವಿಸಿದೆ. ಕಷ್ಟವಾಗಿ ಕಣ್ಣು ತೆರೆದೆ ಶಾಪದ ಶಕ್ತಿಯ ವಿಷಯದಲ್ಲಿ ಮೊಟ್ಟಮೊದಲು ನನಗೆ ಖಚಿತವಾಯಿತು. ಈ ಸಂಶಯಾತ್ಮಕ ದೇವರು ತನ್ನ ಇಚ್ಛೆಯನ್ನು ಬಿಡದೆ ಈಡೇರಿಸಿಕೊಳ್ಳುವನೆಂದೂ ನನ್ನ ಆತ್ಮವು ಅವನು ಹೇಳಿ ಹೋದಂತೆಯೇ ಆಗುವುದೆಂದೂ ಅವನು ಹೇಳಿದ್ದಲ್ಲವೂ ಸಾಂಗವಾಗಿ ನೆರವೇರುವುದೆಂದೂ ನಂಬಿದೆ. ನಿಜ, ಎಲ್ಲಾ ಸಾಂಗವಾಗಿ ನೆರವೇರುವುದು! ನನ್ನಲ್ಲಿ ನಡೆದು ಬರುತ್ತಿದ್ದ ಬದಲಾವಣೆಗಳನ್ನು ನಾನು ಎಳ್ಳಷ್ಟು ತಡೆಯಲು ಅಶಕ್ತನಾದೆ ನನಗೆ ಏನು ಶಕ್ತಿ ಇತ್ತು? ನಾನು ಏನು ಮಾಡಬಲ್ಲವನಾಗಿದ್ದ? ಹೇಗೆ ನಡೆಯಬೇಕು ಅದೆಲ್ಲಾ ನಡೆಯುದಿದ್ದಂತೆ ತಡೆಯಲು? ನನಗೆ ಸಾಮರ್ಥ್ಯವಿರಲಿಲ್ಲ ಪುರಂಸತ್ವವಿರಲಿಲ್ಲ.

ಏಕೆಂದರೆ ನನ್ನ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ನಾನು ನಿಶ್ಚೇಶನದಿಂದ ಅಸಹಾಯಕನಾದೆ. ನನಗೆ ನಾನೇ ಬದಲಾಗುತ್ತಿದ್ದ ಸರ್ವಚೈತನ್ಯವೂ ಆಗಿ ನನ್ನೊಳಗೆಲ್ಲಾ ಹರಡಿಕೊಂಡು ಸತ್ವಹೀನನಾದೆ.

ಒಂದು ದಿವಸ, ನನ್ನ ದುಸ್ಥಿತಿಯನ್ನು ಹೆಚ್ಚು ಮಾಡಿಕೊಳ್ಳುವಂತೆ ಆಲಸಿಕೆಯಿಂದ ಒಂದು ಕೆಲಸ ಮಾಡಿದೆ. ಹಾಸಿಗೆಯ ಮೇಲೆ ದೇಹಾಂಗಗಳನ್ನು ಚಾಚಿ ಬಿದ್ದುಕೊಂಡೆ. ಆಗ ಮಧ್ಯಾಹ್ನ ಸಮಯ ನನ್ನ ಚಿಂತೆಗಳಿಂದ ಪೀಡಿತನಾಗಿ, ನನ್ನ ಅಂತರಾತ್ಮ ಕಲುಷಿತವಾಗಿದ್ದಮೇಲೆ. ನನ್ನ ಮನಸ್ಸಿನ ಮೇಲೆ ನನಗೇನೂ ಹತೋಟಿಯೇ ಇರಲಿಲ್ಲ ಇದ್ದಕ್ಕಿದ್ದಂತೆ ದಿಢೀರನೆ, ನನ್ನ ದುರ್ದೈದದ ವಿಷಯವಾಗಿಯೂ ಭವಿಷ್ಯದವಿಷಯವಾಗಿಯೂ ಕ್ರೋಧಾವೇಶದಿಂದಕೂಡಿದೆ. ಅದನ್ನೆಲ್ಲಾ ನಾನು ಏಕೆ ಅಧೀನನಾಗಿ ಒಪ್ಪಬೇಕು? ಈ ಹುಚ್ಚುತನವನ್ನು? ನನ್ನೊಳಗಿನ ಶಕ್ತಿಯ ಮೇಲೆ ನಾನೇಕೆ ದಂಗೆ ನಡೆಸಲಿಲ್ಲ? "ಆಗೊಲ್ಲ" ನಾನು ಒಪ್ಪಿಲ್ಲ." ನಾನು ಸುಖವಾಗಿಯೇ ಜೀವಿಸುವೆ, ಎಲ್ಲರಂತೆಯೇ ನಾನೂ ಜೀವಿಸುವೆ ಹೀಗಿರುವಂತೆಯೇ ಇದ್ದುಬಿಡುವೆ. ಎಲ್ಲರಂತೆಯೇ ನಾನು ಇದ್ದುಕೊಂಡು ಜೀವಿಸುವೆ ಎಂದು ಏಕೆ ಹೇಳದೆ ಹೋದೆ?!!

ಹೀಗೆ ನಾನು ಹೇಳಿಕೊಂಡಾದನಂತರ ಗಟ್ಟಿಯಾಗಿಯೇ. ಜೋರಾಗಿಯೇ ಹೇಳಿದ್ದೆ ನನ್ನ ಮೈಮೇಲಿನ ಬಾರದ ಬಟ್ಟೆ ಜಾರಿಬಿದ್ದಂತೆ ಶಾಪವು ಕಳಚಿಹೋದಂತೆ ಆಯಿತು.

ಸ್ವಲ್ಪ ಹಗುರವಾಯಿತು, ನೆಮ್ಮದಿಯಾಯಿತು. ಈವರೆಗೂ ನಡೆದಿದ್ದ ಯಾರ ಹಿಂದೆಯೂ ಇಲ್ಲದ ಬಿಡುಗಡೆ ಅದು. ಎರಡನೇ ಹೆಂಡತಿ ಮಕ್ಕಳು ಇದ್ದ ಕೊಠಡಿಗೆ ಹೋದೆ. ಚಿರಕಾಲ ಅವರು ತಮ್ಮೊಳಗೆ ಆಟದಲ್ಲಿ ಲೀನವಾಗಿದ್ದುದನ್ನು ನೋಡುತ್ತಿದ್ದೆ, ಅಲ್ಲಿಂದ ನಿಧಾನವಾಗಿ ಹೋಗಿ ತಾಯಿಯನ್ನು ಮಗುವಿಂದ ಬೇರೆ ಮಾಡಿ ಮುದ್ದು ಮಾಡಿದೆ. ಅವಳು ತನ್ನ ಚಿತ್ತಾಲಿ ತೋಳುಗಳನ್ನು ಬೀಸಿ ನನ್ನನ್ನು ಆಲಂಗಿಸಿದಳು ಆಗ ನಾವಿಬ್ಬರು ನನ್ನ ಕೊಠಡಿಗೆ ಹೋದೆವು. ಬಟ್ಟೆಗಳನ್ನು ಕಳಚಿದ ತರುವಾಯ ಅವಳ ಹಾಸಿಗೆ ಮೇಲೆ ಮಲಗಿದ್ದೆ. ಚಿರಪರಿಚಿತವಾದ ಅವಳ ಮುಗುಳುನಗೆ ಮುಖದ ಮೇಲೆ ಹಾಸಮಾಡಿತ್ತು ಆದರೆ ನನ್ನ ಮನಸ್ಸಿಗೆ ಪೀತಿತವಾಗಿತ್ತು ಅವಳು ಆಕಾಂಕ್ಷೆಯಿಂದ ತನ್ನ ಸಮಾಪಕ್ಕೆ ಬರುವಂತೆ ಲಾಸ್ಯಮಾಡುತ್ತಿದ್ದಳು ನಾವು ಪರಸ್ಪರ ಪ್ರೇಮಿಸಿದಾಗ ಎಲ್ಲವೂ ಮೊದಲಿನಂತೆಯೇ ನಡೆದಿತ್ತು. ನಾನು ಗೆದ್ದಿರುವೆ ನೆಂದೇ ಭಾವಿಸಿದೆ ಸುಖಿಯಾದೆನೆಂದು ತಿಳಿದೆ.

ಆದರೆ ಏನೂ ಮಾಡದವನಾದೆ ಎಂದಿಗಿಂತಲೂ ಅವಳು ತುಂಬಾ ಆಕರ್ಷಣೀಯ ವಾದ ಸೌಂದರ್ಯ ಮಂದಹಾಸಗಳಿಂದಲೇ ಕೂಡಿದ್ದಳು ನನಗೆ ತಿಳಿದಿತ್ತು ಏಕೆಂದರೆ ಎಷ್ಟೋ ಕಾಲವಾಗಿ ಹೋಗಿದ್ದ ವಿಷಯ ಆದರೂ ನನಗೆ ಆಶೆ ಮುಂದೆ ಬರಲಿಲ್ಲ. ಅವಳ ತೃಷ್ಣೆಯ ಕಾವೇರಿದ ಉಸಿರು ನನ್ನ ಮುಖದ ಮೇಲೆ ಅಪ್ಪಳಿಸುತ್ತಿತ್ತು ಆದರೂ ನಾನು ದುರ್ಬಲನಾಗಿಯೇ ಇದ್ದೆ ಕಡೆಗೆ ಹಿಡಿದು ಬಿಕ್ಕಿಬಿಕ್ಕಿ ನಿರಾಶೆಯಿಂದ ಅವಳ ಮಹಾಗಂಭೀರ ಚೆಚ್ಚನೆಯ ಮೈಮೇಲೆ ಬಿದ್ದು ಅತ್ತುಬಿಟ್ಟೆ.

ಅವಳು ತನ್ನ ತಲೆಕೂದಲನ್ನೂ ಕೆನ್ನೆಗಳನ್ನು ಮೃದುವಾದ ಹಸ್ತಗಳಿಂದ ತಟ್ಟಿದಳು. ಆಮೇಲೆ ತನ್ನೆರಡು ಬಿಚ್ಚಿದ ಕೈಗಳೊಳಗೆ ನನ್ನ ಮುಖವನ್ನು ಬಾಚಿ ಕೊಳ್ಳುತ್ತಾ ಅತಿಸಮಾಪದಲ್ಲಿ ನನ್ನನ್ನು ಹುಡುಕುವಂತೆ ನೋಡಿದಳು ಹೀಗೆಲ್ಲಾ ಮಾಡಿ ಬಹುಕಾಲವೇ ಆಗಿಹೋಗಿತ್ತು.

ನಿಮ್ಮ ಕಣ್ಣುಗಳು ಎಷ್ಟು ಕಾಂತಿಹೀನವಾಗಿ ಹೋಗಿದೆ ಅಂದಳು ಈ ಮಾತು ಕೇಳುತ್ತಲೇ ನನ್ನ ಅಸುಖವೆಲ್ಲಾ ಪೂರ್ಣಗೊಂಡಿತ್ತು ನನ್ನನ್ನು ಬುಡವಿಲ್ಲದ ಬಾವಿ ಯೊಂದರಲ್ಲಿ ಬಿಟ್ಟಂತಾಗಿತ್ತು ಈಗ ಅದೂ ಇಲ್ಲದಂತಾಯಿತು ಆದರೆ ಇದೆಲ್ಲಾ ಅಷ್ಟೊಂದು ಆಶ್ಚರ್ಯವೇ? ಜೀವನದ ಮಹಾ ಆನಂದವಲ್ಲವೆ? ಅದನ್ನು ನನ್ನಿಂದ ಕಸಿದುಕೊಳ್ಳುವುದೇನು ಆಶ್ಚರ್ಯವೇ? ಪುನಃ ನನಗೆಂದಿಗೂ ಇಲ್ಲದಂತೆ ಆಗುವುದು ಹೇಗೊ ನಾನು ದಯಾಹೀನನೆ ಅಲ್ಲವೆ? ಅನಂತ ಕಾಲದವರೆಗೂ ಹೀಗೆ ದಯಾರಹಿತ ನಾಗಿರುವುದಕ್ಕೆ ಒಳಗಾದವನಲ್ಲವೆ? ಇದಾದನಂತರ ಇತರರೂ ಸಹ ನನ್ನಲ್ಲಿ ವುಂಟಾಗಿದ್ದ ವ್ಯತ್ಯಾಸವನ್ನು ಗಮನಿಸಿದರೆಂದು ಕಂಡುಬಂದಿತ್ತು ಜನರು ನನ್ನನ್ನು ದೂಷಮಾಡಿದ್ದರು ನನ್ನಿಂದ ಹಿಂಜರಿದಿದ್ದರು ಎಂದಾದರೂ ಮಾತನಾಡಬೇಕಾಗಿ ಬಂದರೂ ಸಹ ಏನೋ ವಿಚಿತ್ರವಾಗಿಯೇ ನಡೆದುಕೊಳ್ಳುತ್ತಿದ್ದರು ನನ್ನನ್ನು ಕಂಡು ಅಕ್ಕಪಕ್ಕದವರೂ ಸಹ ಮೌನಧರಿಸಿದರು. ನನಗೆ ಏನೋ ಒಂದು ಸಂಭವಿಸಿರ

ಬೇಕೆಂದೂ ಅದು ಆಶಿಚಿಗೆ ಏರಿಸಲು ಎಳೆದುಕೊಂಡು ಹೋಗುತ್ತಿದ್ದವನಿಂದ ನಾನು ನನ್ನ ಗೋಡೆಯ ಮೇಲೆ ಅವನು ನೆಲೆಯೂರುವುದನ್ನು ನಿವೇದಿಸಿದ್ದರ ಸಂಬಂಧಿಸಿತ್ತೆಂದೂ ಖಚಿತವಾಯಿತು ಇದರ ವಿಷಯವಾಗಿ ಅವರು ನನ್ನಲ್ಲಿ ಎಂದೂ ಮಾತನಾಡಲಿಲ್ಲ ನಾನು ಹೇಳಿದಂತೆಯೇ ನನ್ನನ್ನು ದೂಗಣಿಸಿ ನನ್ನಲ್ಲಿಂತಾಗಿದ್ದ ಬದಲಾವಣೆಗಳನ್ನು ಗಮನಿಸಿ, ಅಪರೂಪವಾಗಿ ನನ್ನನ್ನು ನೋಡುತ್ತಾ ಗುಸಗುಸ ಮಾತನಾಡಿಕೊಳ್ಳುತ್ತಾ ನನ್ನ ಮೇಲೆ ಕನಿಕರದಿಂದಲೇ ಅವರು ನಿಮ್ಮ ಕಣ್ಣುಗಳು ಎಷ್ಟೊಂದು ಕಾಂತಿಹೀನವಾಗಿ ಹೋಗಿದೆ ಎಂದು ಇರುವುದನ್ನು ಹೇಳದೆ ಸುಮ್ಮನಿರುತಿದ್ದರು.

ನನ್ನ ಹೆಂಡತಿ ನನ್ನನ್ನು ಕಂಡು ಹೆಚ್ಚುಹೆಚ್ಚಾಗಿ ಲಜ್ಜೆಗೊಳಗಾದಳು. ನನ್ನಲ್ಲಿ ಏನೋ ಕಂಡು ಬೆದರಿದ್ದಳು. ನನ್ನ ಕಣ್ಣುಗಳನ್ನು ಕಂಡೇ ಪ್ರಾಯಶಃ ಅವಳಿಗೆ ನಾನು ಹೇಳಿದ ಮಾತುಗಳು ನನ್ನ ಮೇಲೆ ಶಾಪ ಪ್ರಾಪ್ತಿಯಾಗಿದೆ" ಎಂದ ಮಾತುಗಳು ನೆನಪಿಗೆ ಬಂದಿರಲು ಸಾಧ್ಯ. ನನಗೆ ತಿಳಿಯದು, ನಾವು ಅದರ ವಿಷಯವಾಗಿ ಮಾತನಾಡಿಯೇ ಇರಲು ನಮ್ಮನಮ್ಮಲ್ಲಿ ಏನು ಬಂದಿತ್ತೊ ಅದರ ವಿಷಯವಾಗಿ ಒಂದು ಚಕಾರವನ್ನೂ ಸೂಚಿಸಿರಲಿಲ್ಲ. ಅವರು ಅದನ್ನೆಲ್ಲಾ ಈಗ ನೋಡ ಬಯಸುವುದಿಲ್ಲವೆಂದು ಅಂದುಕೊಂಡೆ.

ನನಗೆ ಪ್ರಾಪ್ತವಾಗಿದ್ದ ಬದಲಾವಣೆಯಿಂದ ನನಗೆಷ್ಟು ಸಂಕಟವಾಗಿತ್ತೋ ಅಷ್ಟೇ ಕಷ್ಟವಾಗಿತ್ತು ಅವಳಿಗೂ ಸಂದೇಹವಿಲ್ಲ, ನನಗೆ ತಿಳಿಯಲಿಲ್ಲ ಎಂತಹ ಭಾರ ಬಂದಿತ್ತು, ನಮ್ಮ ಮನಸ್ಸುಗಳಿಗೆ ಎಂಬುದನ್ನು ನಾವಿಬ್ಬರೂ ಪರಸ್ಪರ ಚಿಂತಿಸಲೇ ಇಲ್ಲ. ನಾನು ಹೇಳಿದ್ದ ಕಾಲದಿಂದ ಈಚೆಗೆ ನಮ್ಮ ಕಣ್ಣುಗಳು ಪರಸ್ಪರ ಸೇರಿಯೇ ಇರಲಿಲ್ಲ ಅವಳ ಆಲೋಚನೆಗಳ ವಿಷಯವಾಗಿ ನಾನು ಎಂದೂ ಆಸಕ್ತಿವಹಿಸಲೇ ಇಲ್ಲ. ಯಾವ ರೀತಿಯಲ್ಲಿ ನೋಡಿದರೂ ಅವಳು ಮಗುವಿನಂತೆಯೇ ಇದ್ದಳು ಅವಳೊಂದಿಗೆ ಮಾತನಾಡಿ ನಾನೇನೂ ಅರ್ಜಿಸಿಯೇ ಇರಲಿಲ್ಲ. ನನಗೆ ಮೊದಲು ತಿಳಿಯದೆ ಹೋದರೂ ಅವಳ ಎಳೆತನದ ಮಾತುಗಳಲ್ಲಿ ನಾನು ತೃಪ್ತಿಯಾಗಿದ್ದವನು, ಈಗ ಅವಳೊಂದಿಗೆ ಮಾತನಾಡುವುದೇ ಆಗಲೀ ಅಪ್ರಯೋಜನವೆಂದು ತಿಳಿಯಿತು— ಆದ್ದರಿಂದ ನಾನು ಮುಂದೆ ಹಾಗೆ ಮಾಡಲಿಲ್ಲ. ಅವಳು ಎದುರಿಗಿರುವುದೇ ನನ್ನನ್ನು ನಿಸ್ಸಾರ ಮಾಡುತ್ತಿತ್ತು. ಅವಳು ಇಲ್ಲೇ ಎಲ್ಲೋ ಇರುವಳೆಂಬ ನೆನಪೂ ಅವಳ ಧ್ವನಿಯೂ ಅಥವಾ ಅವಳ ನಗುವ ಶಬ್ದವೂ ಸಹ ನನಗೆ ಜಿಗುಪ್ಸೆ ತಂದಿತು ಆದರೆ ಈಗ ಹಿಂದಿನಂತೆ ಅವಳು ವಿಶೇಷ ನಗುತ್ತಿರಲಿಲ್ಲ. ದಿನದಲ್ಲಿ ಬಹಳ ಹೊತ್ತೆಲ್ಲಾ ಮಗುವಿನ ಸಂಗಡಲೇ ಇರುತ್ತಿದ್ದಳು ತಾಯಿ ಮಕ್ಕಳು ಕೂಡಿ ಆಟವಾಡುತ್ತಿದ್ದರೆಂದೇ ಊಹಿಸಿದೆ. ಆದರೆ ಹೆಚ್ಚು ಗಲಾಟೆಯಿಲ್ಲದೆ ಮೊದಲಿಗಿಂತಲೂ ಶಾಂತವಾಗಿ ಆಡುತ್ತಿದ್ದರೆಂದು. ಅವರ ಧ್ವನಿಯೇ ಹೆಚ್ಚಾಗಿ ಕೇಳಿಬರುತ್ತಿರಲಿಲ್ಲ ಈ ರೀತಿ ಮನೆಯಲ್ಲಿ ಪ್ರತಿಯೊಂದೂ ತುಂಬಾ ಬದಲಾಯಿಸಿತ್ತು.

ಅವಳ ಅಂತರಂಗವನ್ನೆಲ್ಲಾ ತಿಳಿಯಲು ನನಗೆ ಸಾಧ್ಯವಿರಲಿಲ್ಲ. ಅವಳ ಮೇಲೆ ನಾನು ಅಸಮಾಧಾನ ಪಡಲೇಬೇಕಾಯಿತು. ಅದಕ್ಕಾಗಿ ಅವಳ ಮೇಲೆ ನಾನು ಪ್ರತೀಕಾರವನ್ನು ಮಾಡಬೇಕಾಯಿತು ಈಗ ಹಾಗೇ ಮಾಡಿದ್ದೆ. ಅವಳನ್ನು ನೋಡುತ್ತಿರಲಿಲ್ಲ ಅವಳನ್ನೇ ಆಗಲಿ ಅವಳ ಮಗುವನ್ನೇ ಆಗಲಿ ಇಬ್ಬರನ್ನು ಅವರು ಅಲ್ಲಿ ಇರಲೇ ಇಲ್ಲವೆಂಬಂತೆ ನಡೆದುಕೊಂಡಿದ್ದೆ ನನ್ನ ಮಗನಲ್ಲಿ ನಾನು ಏನೊಂದೂ ಹೆಚ್ಚಿನ ಸಂಬಂಧವನ್ನು ಬೆಳಸಿಯೇ ಇರಲಿಲ್ಲ. ಬೆಳೆಸಿದ್ದೆನೆ? ಅವಳು ಮಾತ್ರ ತುಂಬಾ ಹೆಚ್ಚಾಗಿ ಒದ್ದಾಡುತ್ತಿದ್ದಾಳೆಂದು ನಾನು ತಿಳಿದೆ. ಏಕೆಂದರೆ ಅವಳೇ ಮಗುವಿನಂತೆ ಇದ್ದವಳು ಅದರಲ್ಲಿ ಸಂದೇಹವಿರಲಿಲ್ಲ ಮಗುವಿನ ಮೇಲೆ ನನಗಿದ್ದ ರಹಸ್ಯ ವಿರೋಧ ಅವಳಿಂದ ನಾನು ಪೂರ್ತಿ ದೂರವಾಗುತ್ತಲೆ ಕಿತ್ತುಹೋಗಿತ್ತು. ಅವಳಿಗೆ ಏತರಿಂದ ಹೆಚ್ಚು ತೊಂದರೆ ಆಗುತ್ತಿತ್ತೋ ನನಗೆ ಗೊತ್ತಿತ್ತು. ಏನು ಸಂಭವಿಸಿತ್ತೋ ಅದು ಸ್ವಲ್ಪಸ್ವಲ್ಪವಾಗಿ ಹೆಚ್ಚುತ್ತಾ ಮಗುವನ್ನೂ ಆವರಿಸಿದ್ದರಿಂದ ಅವಳು ಅಳುತ್ತಲೇ ಇದ್ದಳು. ಅವಳ ಮುಖ ನೋಡುವುದನ್ನು ನಾನು ಬಿಟ್ಟಿದ್ದೆನಾದರೂ ಇದನ್ನು ಗಮನಿಸಿದ್ದೆ.

ಅಸುಖ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡುವುದಿಲ್ಲ ನಾನು ಅನುಭವಿಸಿದರೆ ಇನ್ನೊಬ್ಬ ಏಕೆ ಅನುಭವಿಸಬಾರದು.

ಇಷ್ಟಾದರೂ ನಾನು ಅವಳ ವಿಷಯದಲ್ಲಿ ದಯಾರಹಿತನಾಗಿ ಏನೊಂದು ಹೇಳಿದವನಲ್ಲ. ಅದಕ್ಕಾಗಿ ಅವಳು ನನ್ನನ್ನು ದೂಷಿಸಬೇಕಾಗಿರಲಿಲ್ಲ. ನನ್ನ ಅಸಮಾಧಾನವನ್ನೆಲ್ಲಾ ನಾನೇ ನುಂಗಿ ವಿಷಮವಾದ ಮಾತುಗಳನ್ನಾಡದೆ ನಿಗ್ರಹಿಸಿಕೊಂಡೆ ಆದರೂ ಸಹ ನನ್ನೊಳಗೆ ನಡೆಯುತ್ತಿದ್ದ ವಿದ್ಯಮಾನವನ್ನು ಅವಳು ಅನುಭವಿಸಬೇಕು. ಅಸಂತುಷ್ಟಿ ಎನ್ನುವುದು ಪ್ರೇಮದಂತೆಯೇ ಹೆಚ್ಚು ಮಾತುಗಳನ್ನು ಅಪೇಕ್ಷಿಸುವುದಿಲ್ಲ.

ಮನೆಯೆಲ್ಲಾ ಸಂಪೂರ್ಣವಾಗಿ ಬಿಕೋ ಎನ್ನಿಸಿತು. ನಿಶ್ಶಬ್ದದಿಂದ ಕಳಾಹೀನವಾಯಿತು. ನನ್ನ ಹೆಂಡತಿ ದುಃಖದಿಂದ ಸುಳಿದಾಡಿದಳು, ಮಗು ನಾನು ಸಮೀಪಕ್ಕೆ ಹೋದಾಗ ಹಿಂಜರಿಸುತ್ತಿತ್ತು.

ಹೀಗಾದುದಕ್ಕೆ ನನಗೆ ಸಂತೋಷವೇ ಇರಲಿಲ್ಲ. ನನ್ನ ಇಚ್ಛೆಯಂತೆಯೇ ನನ್ನ ಆತ್ಮಕ್ಕೆ ದುಃಖ ಬೆಳೆದು ಬಂದಿತ್ತು ದಯಾರಹಿತವಾಗಿತ್ತು ತನ್ನೊಳಗೆ ತಾನು ಖೈದಿಯಾದವನಂತೆ ಶುಷ್ಕ ದೃಷ್ಟಿಯಿಂದ ನೋಡಿಕೊಳ್ಳುತ್ತಾ ಕಿಟಕಿಯ ಹೊರಗೆ ದುರುಗುಟ್ಟುತ್ತ ಏನನ್ನೂ ಕಾಣದೆ, ನಿಜವಾಗಿ ನಾನಲ್ಲಿರುವುದನ್ನೂ ಮರೆತು ಹೋಗಿದ್ದೆ ಅಥವಾ ಶಾಂತಿರಹಿತನಾಗಿ ಬೂದಿಮುಚ್ಚಿದ ಬೆಟ್ಟಗಳ ಹೊರಭಾಗದಲ್ಲೂ ಹೊಲಗದ್ದೆಗಳ ಪ್ರಾಂತ್ಯದಲ್ಲಿ ಅಲೆದಾಟ ನಡೆಸಿದ್ದೆ. ಹೀಗೆ ನಡೆಯುತ್ತಿತ್ತು. ಎಷ್ಟು ದಿನಗಳ ಕಾಲ ಹೀಗೆ ನಡೆಯಿತೋ ನನಗೆ ತಿಳಿಯಲಿಲ್ಲ.

ಒಂದು ದಿವಸ ಅವಳು ಎಲ್ಲೋ ಹೊರಟು ಹೋಗಿದ್ದಳು! ಅವಳೂ ಮಗುವೂ ಸಹ. ನನಗೇ ಆಶ್ಚರ್ಯವಾಗುವಂತೆ ನಾನು ಮನೆಯೆಲ್ಲಾ ಹುಡುಕಾಡಿದೆ. ಅವರಿಗಾಗಿ ಎಷ್ಟು ವೇಳೆ ಹುಡುಕಾಡಿದೆನೋ ತಿಳಿಯದೆ ಒಂದು ಸಲ ಅವರಿಬ್ಬರೂ ಆಟವಾಡುತ್ತಿದ್ದ ಕೊಠಡಿಯೊಳಕ್ಕೆ ನುಗ್ಗಿ ಹೋದೆ. ಅಲ್ಲಿ ಮೊದಲು ಅವರ ನಗುವ ಶಬ್ದ ಕೇಳಿಸುತ್ತಿದ್ದು ಈಗ ಒಳಗೆ ಹೋದಾಗ ಅವರು ಯಾರೂ ಇಲ್ಲದಿರುವುದನ್ನು ಮುಂದೆ ಇನ್ನಾವಾಗಲು ಇರುವುದಿಲ್ಲವೆನ್ನುವುದನ್ನೂ ಅರಿತು ಧಡೀರನೆ ಕುಸಿದು ಕುಳಿತುಬಿಟ್ಟೆ.

ಚಾಪೆಯ ಮೇಲೆ ಅವಳು ಮಲಗಿ ತನ್ನ ಚಿತ್ತಲೆ ತೋಳುಗಳಿಂದ ತನ್ನ ಕಂದನನ್ನೆತ್ತಿ ಆಡಿಸುತ್ತಿದ್ದ ಆ ಸ್ಥಳದಲ್ಲಿ ಈಗ ಚೂರಿಯೊಂದು ನನ್ನೆದೆಯನ್ನು ತಿವಿದು ರಕ್ತಸೋರುತ್ತಾ ಬಿದ್ದಿರುವವನಂತೆ ತೋರಿತು. ಎಷ್ಟು ಹೊತ್ತು ಹಾಗೇ ಬಿದ್ದಿದ್ದೆನೋ ನೆನಪಿಗೆ ಬಾರದು. ಆದರೆ ಆಗ ನಾನು ಎದ್ದು ಕೂತಿರಬೇಕೆಂಬ ಹೆಚ್ಚು ಸ್ಪಷ್ಟವಾದ ಧ್ವನಿಯೊಂದು ನನ್ನೊಳಗೇ ಕೇಳಿಬಂತು ಎದ್ದು ಕುಳ್ಳಿರಬೇಕಾಯಿತು. ನನ್ನ ಮುಂದೆ ನೋಡುತ್ತಾ ಕುಳಿತೆ ಮೇಲಿಂದ ಮೇಲೆ, ಗಟ್ಟಿಗಟ್ಟಿಯಾಗಿಯೇ ಧ್ವನಿ ಭಯಂಕರ ಕೇಳಿಬಂತು ಅವನು ಹೇಳಿ ಹೋಗಿದ್ದ ಮಾತುಗಳೇ ಕೇಳಿಬಂತು ನನ್ನ ಒಳಗೆಲ್ಲಾ ಆದೇ ಮಾತುಗಳು ತುಂಬಿಹೋಗಿ ಪ್ರತಿಧ್ವನಿಸುತ್ತಿತ್ತು. ವಿಸರ್ಜಿತವಾಗಿ ನಿರ್ಜನವಾದ ಮನೆಯ ನಾಲ್ಕು ಗೋಡೆಗಳ ಆವರಣದೊಳಗೆ ಆ ಅನಿಷ್ಟಕರವಾದ ನನ್ನ ಮುಂದಿನ ಅದೃಷ್ಟ ವಿಧಿ ಏನಿದೆಯೋ ಆದು ಧ್ವನಿಸುತ್ತಿತ್ತು. ಅವನ ಶಾಪ ನನ್ನೊಳಗೆ ಪ್ರತಿಧ್ವನಿ ಮಾಡುತಿತ್ತು.

ಆದೇ ದಿನ ಯಾರಿಗೂ ತಿಳಿಯದಂತೆ ನನ್ನ ಹುಟ್ಟೂರನ್ನ ಬಿಟ್ಟು ಅನಿರ್ದಿಷ್ಟ ಅಲೆದಾಟವಾಡಲು ಕತ್ತಲೆಗೆ ನುಗ್ಗಿ ಹೋದೆ. ರಾತ್ರಿಯ ಏಕಾಂತನಾದ ನನ್ನ ದುರದೃಷ್ಟ ಭವಿಷ್ಯಕ್ಕೆ ಮೊದಲ ಹೆಜ್ಜೆ ಇಟ್ಟೆ, ಅಂದಿನಿಂದ, ಎಲ್ಲೂ ನಿಲ್ಲದೆ, ವಿಶ್ರಾಂತಿಯೂ ಇಲ್ಲದೆ ಅವನಂತೆ ತಲೆಯೂರಲು ಸ್ಥಳವಿಲ್ಲದೆ, ನಡೆಯಲೇಬೇಕಾಗಿದ್ದ ವಿಧಿಗೊಳಗಾಗಿದ್ದಂತೆ ಅಲೆದಾಡಿರುವೆನು ಬೂದಿ ತುಂಬಿದ್ದ ಜಗತ್ತಿನಲ್ಲಿ. ಮಾಸಲು ಬಣ್ಣದ ಬೂದಿ ತುಂಬಿದ ನನ್ನ ಜಗತ್ತಿನಲ್ಲಿ ಅಲೆದಾಡಿದ್ದೇನೆ, ಎಲ್ಲಾ ಮಾನವ ಹೀನತುಚ್ಛ ಆಶೆಗಳನ್ನು ನೋಡಿದ್ದೇನೆ ಮನೆಮಕ್ಕಳಿಲ್ಲದ ದೈವಕೃತ ದಯಾರಹಿತರ ಬರಡು ಜೀವದ ಪ್ರಪಂಚದಲ್ಲಿ ಶಾಶ್ವತವಾಗಿ ಬಿದ್ದುಕೊಂಡಿರಬೇಕಾಗಿದೆ.

ನನ್ನನ್ನು ಶಪಿಸಿದ್ದ ಮನುಷ್ಯನಲ್ಲಿ ನಂಬಿಕೆ ಇದ್ದವರನ್ನು ನಾನು ಆಗಾಗ್ಗೆ ಕಂಡಿದ್ದೇನೆ. ಪದೇ ಪದೇ ಇದು ನಡೆದು ಬಂದಿದೆ ಈ ಉಪದೇಶವು ಎಲ್ಲೆಲ್ಲಾ ಹರಡಿಕೊಂಡಿದೆ, ಆ ಜನರೆಲ್ಲಾ ಸುಖವಾಗಿಯೇ ಇದ್ದಾರೆಂದು ತೋರಿದೆ ಅವರ ಸರಳ ಮನೋಲ್ಲಾಸದಿಂದಲೋ ಅಥವಾ ಬೇರೆ ಕಾರಣಗಳಿಂದಲೋ ಸುಖವಾಗಿದ್ದಾರೆ. ಪ್ರಾಯಶಃ ಅವರ ಶ್ರದ್ಧೆ ನಂಬಿಕೆಗಳಿಂದ ಇರಬಹುದು ಅದನ್ನೇ ಅವರು ಹೇಳಿಕೊಳ್ಳುವುದು, ಅದು ವಾಸ್ತವಿಕದಲ್ಲೂ ಸಾಧ್ಯ. ಅವರುಗಳಿಗೆ ಆದೇವರು ಅನುಗ್ರಹವನ್ನೂ ಮಾಡಿರಬೇಕು ನನಗೆ ಮಾತ್ರ ಇಂತಹ ಘೋರಶಾಪವನ್ನು ವಿಧಿಸುತ್ತು ತಂದಿದು

(ದೇವರು) ಒಳ್ಳೆಯವನೆಂದೂ ಪ್ರೀತಿ ವಿಶ್ವಾಸವುಳ್ಳವನೆಂದೂ ಅವರು ಹೇಳುತ್ತಾರೆ. ಅವನ ಮಾತುಗಳನ್ನು ಶ್ರದ್ಧೆ ನಂಬಿಕೆಗಳನ್ನಿಟ್ಟು ಲಕ್ಷಿಸಿದವರಿಗೆ ಅವನು ಪ್ರೇಮ ರೂಪಿಯೆಂದೇ ಹೇಳುತ್ತಾರೆ ಇರಬಹುದು ಅದು ನನಗೆ ಸಂಬಂಧವಿಲ್ಲದ್ದು. ನನಗೆ ನನ್ನ ಭಾಗಕ್ಕೆ ಅವನು ದುಷ್ಟಶಕ್ತಿಯಿಂದ ಕೂಡಿದ ನನ್ನನ್ನು ಶಾಪ ಬಂಧನದಿಂದ ಬಿಡಿಸಲಾರದವನು ನನಗೆ ಶಾಂತಿ ಕೊಡದವನು.

ನಮ್ಮ ಬೀದಿಯಲ್ಲಿ ನಮ್ಮ ಮನೆಯ ಮುಂದೆಯೇ ಎಳೆದೊಯ್ದು ಶಿಲುಬೆಗೆ ಹಾಕಲಾಗಿದ್ದ ಆ ಮನುಷ್ಯ ನಿಜವಾಗಿಯೂ ದೇವರ ಮಗ, ಅವನು ನಿಜವಾಗಿ ದೇವರಾಗಿದ್ದಾನೆ ಇದರಲ್ಲಿ ಅವರಿಗೆ ಸಂದೇಹವಿರಲಿಲ್ಲ. ಅವರಿಗೆ ಎಷ್ಟೋ ನಿದರ್ಶನ ಗಳಿದ್ದುವೆಂದು ಹೇಳುತ್ತಾರೆ. ಅವನು ಮೃತರಾದವರ ಮಧ್ಯದಿಂದ ಎದ್ದು ಬಂದು ಸ್ವರ್ಗಕ್ಕೆ ಏರಿದವನೆಂದೂ ಮೋಡದೊಳಗೆ ತೇಲಿಹೋಗಿದ್ದನೆಂದೂ ಅನೇಕ ಆಧಾರ ಗಳನ್ನು ಆದರೆ ಅವುಗಳಲ್ಲೆಲ್ಲಾ ನನಗೇನೂ ಸಂಬಂಧವಿಲ್ಲದ್ದು ಅವರ ನಂಬಿಕೆ ಅವರ ಉಪದೇಶ ಅವರ ಸರ್ವದೃಷ್ಟಾಂತಗಳೂ, ವಿಚಿತ್ರಗಳೂ ಇವು ಯಾವುವೂ ನನಗೆ ಸಂಬಂಧವಿಲ್ಲದ್ದು.

ನನಗೆ ನನ್ನ ಆತ್ಮವು ಅನಂತ ಅಶಾಂತಿಯಲ್ಲಿ ಸಿಕ್ಕಿಕೊಂಡಿರುವುದೇ ಸಾಕ್ಷಿ ನಿಜ ಅವನು ತನ್ನ ತಲೆಯನ್ನು ನಮ್ಮ ಮನೆಯ ಗೋಡೆಯ ಮೇಲೆ ಇಡುವುದಕ್ಕೆ ನಾನು ಸಮ್ಮತಿಸಬೇಕಾಗಿತ್ತು ಆದರೆ ಅವನು ನನಗೇನೂ ದೇವರಂತೆ ಕಂಡುಬರಲಿಲ್ಲ, ಬರೇ ಅಪರಾಧಿಯಂತೆ ತೋರಿತ್ತು ಅವನ ಹಾಗೇ ಬೀದಿಯಲ್ಲಿ ಎಳೆದೊಯ್ಯಿದ್ದ ಅಸಂಖ್ಯಾತ ಜನರಲ್ಲಿ ಅವನೂ ಒಬ್ಬನಾಗಿದ್ದ ಅಷ್ಟೆ. ಅಂತಹವರೊಡನೆ ಯಾರು ವ್ಯವಹರಿಸುತ್ತಿರಲಿಲ್ಲ. ಕನಿಕರವೇ? ಮಾನವವಿಶ್ವಾಸವೇ? ಇರಬಹುದು ಆದರೆ ನಾನು ವಿಶ್ವಾಸ ತೋರುವವನಲ್ಲ. ಹಾಗೆ ಎಂದೂ ತೋರಿಸಿದವನೇ ಅಲ್ಲ. ಸಾಮಾನ್ಯ ಮನುಷ್ಯ ನಾನು ಎಲ್ಲರಂತೆ ಅತಿ ಸಾಮಾನ್ಯನಾದವನು, ಅದು ನಡೆದಾಗ ನಾನು ಸುಖವಾಗಿದ್ದವನು. ಮನಸ್ಸಿನಲ್ಲಿ ಏನೂ ಭಾರವಿಲ್ಲ ಜೀವನದಲ್ಲಿ ನಿಶ್ಚಿಂತೆಯ ನಿದಾರ್ಕ್ಷಿಣ್ಯಹ ನೆಲಸಿರುವುದು ಸಭಾಪತಿ ದುಷ್ಟನಾಗಿದ್ದಿರಬಹುದು ಆದರೆ ಇತರರ ದುಷ್ಟತನಕ್ಕೆ ಹೆಚ್ಚೇನೂ ಅಲ್ಲ ಈ ಮಾನವರ ವಿಶ್ವಾಸ ಸೂತ್ರದ ವಿಷಯದಲ್ಲಿ ನನಗೇ ತಿಳಿದಿದ್ದು ಅಲ್ಪ. ಆ ಸೂತ್ರ ನನಗಲ್ಲ ಎಂದು ದೃಢವಾಗಿರುವಷ್ಟು ಮಾತ್ರ ಇಷ್ಟಲ್ಲದೆ ಅವನು ತಾನೇ ಏನು ಮಹಾ ವಿಶ್ವಾಸವುಳ್ಳವನೇ? ಯಾರು ಅವನನ್ನು ಪ್ರೀತಿಸುವರೋ ಅವರಿಗೆ ಶಾಂತಿ ನೀಡುವನು ಮತ್ತೆ ಅವನ ಸ್ವರ್ಗಕ್ಕೆ ಅಂತಹವರನ್ನೂ ಏರಿಸುವನು ಎಂದು ಹೇಳುತ್ತಾರೆ. ಅವನಲ್ಲಿ ನಂಬಿಕೆ ಇಲ್ಲದವರನ್ನು ನರಕಕೂಪಕ್ಕೆ ತಳ್ಳುತ್ತಾನೆಂದೂ ಹೇಳುತ್ತಾರೆ. ಇದು ಸತ್ಯವಾದರೆ, ಅವನು ನಮ್ಮಂತೆಯೇ ಇರತಕ್ಕವನು ನಮ್ಮಷ್ಟೇ ಒಳ್ಳೆಯವನು ನಮ್ಮಷ್ಟೇ ದುಷ್ಟನು ನಮ್ಮನ್ನು ಪ್ರೀತಿಸುವವರನ್ನು ನಾವು ಸಂಯಾಗಿಯೇ ಕಾಣುತ್ತೇವೆ. ಇತರರಿಗೆ ಎಲ್ಲಾ ಕೆಡುಕೂ ಬರಲೆಂದೇ ಆಶಿಸುತ್ತೇನೆ. ಅವನಿಗೆ ಇರುವ ಶಕ್ತಿಸಾಮರ್ಥ್ಯ ನನಗಿದ್ದಿದ್ದರೆ ಸಾವೂ ಸಹ ಅವನನ್ನೂ ಶಾಶ್ವತ

ದೋಷಕೂಪಕ್ಕೆ ತಳ್ಳಿಬಿಡುತ್ತಿದ್ದೆವು. ದೇವರ ಘೋರತ್ವವು ಮಾತ್ರ ಅತಿಶಯವಿಲ್ಲ, ಹೆಚ್ಚಿನದು ಇರಬಹುದು.

ಅಲ್ಲಲ್ಲಿ ಅಂತಹವರನ್ನು ನಾನು ನೋಡಿದ್ದೇನೆ ಜಗತ್ತಿನಲ್ಲಿ, ಆದರೆ ಅವರನ್ನು ಸರಿಯಾಗಿ ತಿಳಿದಿಲ್ಲ ಯಾರೊಬ್ಬರ ಸಾಮಿಪ್ಯದಲ್ಲೆಲ್ಲಾ ನಾನು ಹೋಗುವುದಿಲ್ಲ ಏಕೆಂದರೆ ಅವರು ನನ್ನಿಂದ ದೂರವಾಗೇ ಇರುತ್ತಾರೆ ಅವರಿಗೆ ಸ್ವಲ್ಪ ಭ್ರಮೆ ನನ್ನಲ್ಲಿ ಏನೋ ಒಂದು ಕಲ್ಪವನ್ನು ಅವರು ಕಾಣುತ್ತಾರೆ ಅದೇ ಅವರನ್ನು ಭಯಪಡಿಸುತ್ತದೆ. ನನ್ನ ಕಣ್ಣುಗಳು ಅವರನ್ನು ಭಯಗೊಳಿಸುವುದು. ನನ್ನ ಕಣ್ಣುಗಳನ್ನು ಅವರು ದೃಷ್ಟಿಸುತ್ತಲೇ ಬೇರೆ ಕಡೆ ತಿರುಗಿಹೋಗುವುದನ್ನು ನಾನು ಗಮನಿಸಿದ್ದೇನೆ. ನನ್ನ ಕಣ್ಣುಗಳನ್ನು ಸರಿಯಾಗಿ ನೋಡಲು ಅವರಿಗೆ ಧೈರ್ಯವಿಲ್ಲ. ಈ ನಿರ್ಜಲ ಕೂಪ ಗಳಂತಿರುವ ನನ್ನ ಕಣ್ಣುಗಳನ್ನು ನೋಡಲು ಅಷ್ಟು ಆಳ ಅವರಲ್ಲಿಲ್ಲ. ಅಂತಹ ವನ್ನು ಕಂಡರೆ ಯಾರಿಗೆ ಭಯವಿಲ್ಲ? ಭಯಪಡುವುದು ಸ್ವಭಾವಿಕವೇ.

ಅವಳಿದ್ದಂತೆ

ಅವಳಂತೆ ಇಷ್ಟುವೇಳೆಗೆ ಅವರು ಸುಕುಮಾರ ಕಣ್ಣುಗಳಿದ್ದ ಜನರನ್ನು ನೋಡಿರಲು ಸಾಧ್ಯವೆಂದು ನಾನು ಏಕಾಂಗಿಯಾಗಿ ಅಲೆದಾಡಿದಾಗ ಆಲೋಚಿಸುತ್ತಿದ್ದೆ. ನನ್ನ ಹೃದಯವು ನಡುಗುತ್ತಿತ್ತು. ನನ್ನ ಕಣ್ಣಿನ ಮೇಲೆ ಕೈಇಟ್ಟು ಕಣ್ಣನ್ನು ಮರೆ ಮಾಡುತ್ತಿದ್ದೆ ಅಲ್ಲಿ ಆಗ ಮರೆಮಾಡಬೇಕಾದಂತಹ ಅಗತ್ಯವಿಲ್ಲದಿದ್ದರೂ ಯಾರೊ ಬ್ಬರೂ ಇಲ್ಲವಿದ್ದರೂ ಸಹಾ ಅವರೇಕೆ ಹಾಗೆ ಮಾಡಬಾರದು ? ಹಾಗೇ ಇದ್ದಿರಬೇಕು ನನಗೆ ಸುಕುಮಾರ ನೇತ್ರಗಳಿದ್ದಾಗ ಅವಳು ನನ್ನನ್ನು ಪ್ರೀತಿಸಿದ್ದರೂ ಪ್ರೀತಿಸಿದ್ದಳೇ?

ಹೀಗೆ ನನ್ನೊಳಗೆ ಚಿಂತಿಸಿದೆ. ಒಂದುಸಲ ನಾನು ಬಹಳ ದೂರ ದೇಶದಲ್ಲಿದ್ದಾಗ ನನ್ನ ಹುಟ್ಟೂರಿನವನೊಬ್ಬನನ್ನು ಕಂಡೆ. ಅವನು ಹೇಳಿದ್ದ ತಾಯಿಯ ಮನೆಯಲ್ಲಿ ನನ್ನ ಹೆಂಡತಿ ಕಿರಿದಾಗಿ ತಿಳುವಳಿಕೆ ಪಡೆದು, ಸೌಂದರ್ಯರಹಿತಳಾಗಿ ಸತ್ತಳೆಂದೂ ಅದಕ್ಕೂ ಮೊದಲೇ ಪ್ಲೇಗ್ ಉಪದ್ರವದಿಂದ ನನ್ನ ಮಗನೂ ಸತ್ತನೆಂದೂ ಹೇಳಿದ. ಹೀಗೆ ಅವರು ನಿರ್ಗಮಿಸಿದ್ದರು ಇಬ್ಬರೂ; ಸುಖವಾಗಿ ಕಲೆತು ನಗುತ್ತಿದ್ದವರು.

ಎಷ್ಟು ಕಾಲದ ಹಿಂದೆ ಅದು? ಹೇಳಲಾರೆ ಏಕೆನ್ನುವಿರೋ ಕಾಲವೆನ್ನುವುದು ನನ್ನ ಭಾಗಕ್ಕೆ ಇಲ್ಲವೇ ಇಲ್ಲ. ಏಕಿರಬೇಕು? ತುಂಬಾ ಕಾಲವಾಗಿರಬೇಕೆನ್ನಿಸುತ್ತದೆ.

ಹೌದು ಅವರೆಲ್ಲಾ ಸಾಯುವರು. ಜನಾಂಗವಾದ ಮೇಲೆ ಇನ್ನೊಂದು ಜನಾಂಗ ಅವರವರ ಕಷ್ಟಕಾರ್ಪಣ್ಯಗಳ ಅಪರಾಧಗಳಾಧಾರದಿಂದ ಒಬ್ಬರನ್ನೊಬ್ಬರು ಹಿಂಸಿ ಸುತ್ತಾ ಸಾಯುವರು. ಆದರೆ ನಾನು ಸಾಯುವುದಿಲ್ಲಾ ಎಲ್ಲಿಯತನಕ ಈ ಪ್ರಾಣಿಗಳು ಜೀವಿಸುವರೋ—ಬಹಳ ಜನ ಅವರಲ್ಲಿ ದುಷ್ಟರೇ—ನಾನೂ ಜೀವಿಸುವೆನು ದುಷ್ಟ ವಾಗಿಯೋ. ಅವರ ವಿಧಿಯೇ ನನ್ನ ವಿಧಿ ಈ ಕಾರಣದಿಂದಲೇ ನಾನು ನನ್ನ ಭವಿಷ್ಯದ ವಿಷಯವಾಗಿ ಅದರಲ್ಲಿ ನೋಡಿ ತಿಳಿಯಲು ಕೇಳಿದ್ದು ಅದನ್ನು ತಿಳಿಯಲು ನನಗೆ

ಭಯವಾಗುತ್ತದೆ. ಆದರೂ ಆ ತೆರೆಯನ್ನು ಕಿತ್ತುಬಿಸುಟು ಅಲ್ಲಿ ಎಂತಹ ಭಯಂಕರ ವಿದ್ದರೂ ನೋಡಬೇಕೆಂದು ಆಸೆ ಇದೆ ಎಂದವನು ಸುಮ್ಮನಾದ.

ಇಷ್ಟಕ್ಕೆ ತುಂಬಾ ಮೊದಲೇ ಕತ್ತಲೆ ಕವಿಯುತ್ತಿತ್ತು. ಯಾರೊಡನೆ ಅವನು ಇಷ್ಟು ಮಾತನಾಡಿದ್ದನೋ ಅವಳಿಂದ ಏನೊಂದೂ ಉತ್ತರಬರಲಿಲ್ಲ ಒಬ್ಬನೇ ಇನ್ನು ಸ್ವಲ್ಪ ಹೊತ್ತಾದಮೇಲೆ ಪುನಃ ಹೇಳಿದ “ನೀನು ನೋಡಿರುವಂತೆಯೇ ನಾನೂ ದೇವರನ್ನು ನೋಡಿದ್ದೇನೆ” ನಾನವನನ್ನು ಭೇಟಿಮಾಡಿದ್ದೇನೆ. ಭೇಟಿಯಾದಾಗ ನನ್ನ ಜೀವವೆಲ್ಲಾ ಭಯದಿಂದ ತುಂಬಿಹೋಗಿದೆ ಎಂದ. ಕತ್ತಲಲ್ಲಿ ಮುದುಕಿಯು ಕಣ್ಣಿಗೆ ಬೀಳದೆ ಮರೆಯಾಗಿದ್ದಳು. ಧ್ವನಿಯೇ ಕೇಳಿಸದಂತೆ ದೇವರನ್ನು ನೋಡುವುದೇನೂ ಸಂತಸವಿಲ್ಲ ಎಂದು ಉಸುರಿದಳು.

ಛಳಿಯಿಂದ ಹಿಡಿತಳಾದಂತೆ ತನ್ನ ಮೇಲಿನ ಹೊದಿಕೆಯನ್ನು ಸರಿಪಡಿಸಿಕೊಳ್ಳುತ್ತಾ ಮೇಲೆದ್ದಳು. ಸೂರ್ಯಾಸ್ತವಾದ ಅನಂತರ ನಿಜವಾಗಿ ಅಲ್ಲೆಲ್ಲಾ ಛಳಿ ಆವರಿಸಿತ್ತು. ಅವನಿಗೂ ಸಹ ಛಳಿ ನಡುಗಿಸಿತು. ಅವನು ಅವಳನ್ನು ಹಿಂಬಾಲಿಸಿ ಬಾಗಿಲೇ ಇಲ್ಲದ ಮನೆಯೊಳಗೆ ಬಗ್ಗಿ ಬಂದು ಅವಳ ಕರೆಯನ್ನು ಕೇಳಿ ಒಳಗೆ ಹೋದ. ಹಿಂದೆಂದೂ ಅವನು ಅಷ್ಟು ಕಿರಿದಾದ ಮನೆಯೊಳಗೆ ಹೋದವನೇ ಅಲ್ಲ ತಲೆ ಎತ್ತಿ ನಿಲ್ಲಲು ಆಗುತ್ತಿರಲಿಲ್ಲ. ಅವನು ಇದ್ದ ಪ್ರದೇಶದಿಂದ ಆ ಮನೆಯ ಗೋಡೆಗಳನ್ನೆಲ್ಲಾ ಕೈಯಿಂದ ಸವರಿಸಬಹುದಾಗಿತ್ತು. ಆ ಪರ್ವತದ ಕಡೆಗಿದ್ದ ಗೋಡೆಯಿಂದ ಶೈತ್ಯಕ್ಕೆ ನೀರು ಜಿನುಗುತ್ತಲೇ ಇತ್ತು.

ಒಣಗಿದ್ದ ಜೇಲಿ ಪೊದರುಗಳ ಪುಳ್ಳೆಬೇರುಗಳನ್ನು ಇಟ್ಟು ಬೆಂಕಿಹೊತ್ತಿಸಿದಳು. ಮನೆಯ ನೆಲದಮೇಲಿದ್ದ ಒಂದು ಕಲ್ಲೇ ಒಲೆಯಾಗಿತ್ತು ಹೊಗೆಮಾತ್ರ ಅಲ್ಲೊಂದು ರಂಧ್ರದಿಂದ ಚಿಟ್ಟದ ಗೋಡೆಯಿಂದ ಹೊರಗೆ ಹೋಗುತ್ತಿತ್ತು. ಬೆಂಕಿಹೊತ್ತಿಕೊಂಡು ಸ್ವಲ್ಪ ಬೆಳಕು ಬಂದಾಗ ನೋಡುತ್ತಾರೆ ಆ ವಿಚಿತ್ರ ಮನೆಯಲ್ಲಿದ್ದುದು ಅವರಿಬ್ಬರು ಮಾತ್ರ ಅಲ್ಲ. ಸ್ವಲ್ಪ ದೂರದಲ್ಲಿ ಮೂಲೆಯೊಂದರಲ್ಲಿ, ನೆರೆತಕೂದಲಿನ ಮನುಷ್ಯನೊಬ್ಬ ಕುಳಿತಿದ್ದುದು—ಹುಡುಗನೋ ದೊಡ್ಡವನೋ ಖಚಿತವಾಗಿ ಅವನಿಗೆ ತಿಳಿಯಲಿಲ್ಲ. ಸ್ಪಷ್ಟವಾಗಿ ತಿಳಿಯಲಾಗಲಿಲ್ಲ ಈ ಅನಿಶ್ಚಿತವು ಅವನನ್ನು ಹೇಳಲಾರದ ಬೆದರಿಸುವ ಸ್ಥಿತಿಯನ್ನುಂಟುಮಾಡಿತೂ ಏಕೆ ಹೀಗಾಯಿತು ಎಂದು ಅವನು ಚಿಂತಿಸಲಾರದವನಾದ. ಮುಖ ಚಿಕ್ಕ ಮಕ್ಕಳದಂತೆ ಇತ್ತು. ಮುಂದಹಾಸದಿಂದ ಕೂಡಿತ್ತು. ಆ ಕತ್ತಲಲ್ಲಿ ಅದು ವಿಚಿತ್ರಕರವಾಗಿಯೇ ಒಟಾಗಿತ್ತು ಅವನಿಗೆ ಅದರ ಕಾರ್ಯಾಕಾರಣಗಳೊಂದೂ ಬೀಳಲಿಲ್ಲ ಅದು ಒಳ್ಳೆಯದಾಗಲಿ ದುಷ್ಟರಿಂದಾಗಲೀ ಎಂದೂ ತಿಳಿಯಲಿಲ್ಲ ಆ ಕಿರುನಗು ಸ್ವಲ್ಪವೂ ಬದಲಾಯಿಸದೆ ಒಂದೇ ರೀತಿ ಇದ್ದುದೇ ಪ್ರಾಯಶಃ ಒಗಟಾಗಿ ಕಂಡುಬಂದದ್ದು. ಆದ್ದರಿಂದಲೇ ಅದು ಅಲೌಕಿಕವಾಗಿ ತೋರಿತು. ಆ ಮುಖದಲ್ಲಿನ ಕಣ್ಣುಗಳು ಮಿಣಿಮಿಣಿಸುತ್ತಾ ಪ್ರತಿಯೊಂದು ಚಲನೆಗೂ ತಲೆಯು ಮುಂದಕ್ಕೆ ಹಿಂದಕ್ಕೆ ಅಲ್ಲಾಡುತಿತ್ತು. ಇದು ಬಹಳ ವಿಚಿತ್ರ

ವೆಂದುಕೊಂಡ ಒಂದು ಕ್ಷಣದಲ್ಲಿ ಅವನ ಮನಸ್ಸೊಳಗೆ ಏನೋ ಸುಳಿದಂತಾಗಿತ್ತು. ಏನಿರಬಹುದು? ಆ ನಗುವಿನ ಕಾರಣದಿಂದ ಮನಸ್ಸು ಅಲ್ಲ ಕಲ್ಲೋಲವಾಗಿತ್ತೆ? ಅಲ್ಲ. ಅದನ್ನು ಅವನು ಗ್ರಹಿಸಲಾಗಲಿಲ್ಲ. ಅದನ್ನು ಸ್ಪಷ್ಟಮಾಡಲಾಗದೆಹೋಯಿತು. ಆದರೆ ಈ ನೆರತಕೂದಲಿನ ಮಗು ಅರ್ಥಕತ್ತಲೆಯಲ್ಲಿ, ಬದಲಾವಣೆಯೇ ಇಲ್ಲದ ಇದ್ದ ಆ ಮುಖದ ಮೇಲಿನ ಕಿರುನಗು ವಿಚಿತ್ರತರವಾದ ದಿಗಿಲನ್ನುಂಟುಮಾಡುವಂತೆ ಕಾಣಿಸಿತು. ಅವನು ತನ್ನ ಕಣ್ಣುಗಳನ್ನು ನನ್ನ ಆ ಮಗುವಿನಿಂದ ಬೇರೆ ಮಾಡಲು ಅಶಕ್ತನಾಗಿದ್ದ ಅದು ಎಂತಹ ವಿಚಿತ್ರ? ಎಂತಹ ರಹಸ್ಯ? ಮನುಷ್ಯನಾದವನು ವಾಸಮಾಡಲು ಸಾಧ್ಯವಿಲ್ಲದ ಇಂತಹ ದೇಗುಲದಲ್ಲಿ?

ಅವನು ನನ್ನ ಮಗ, ಮುದುಕಿ ಹೇಳಿದಳು. ಅವನೆದುರಿಗೆ ನೀನು ನಿಶ್ಯಂಕೆಯಿಂದ ಮಾತನಾಡಬಹುದು ಅವನಿಗೇನು ಅರ್ಥವಾಗುವುದಿಲ್ಲ ಎಂದಳು.

ಆದರೆ ಆತ ಮಾತನಾಡಲು ಧೈರ್ಯಮಾಡಲಾರದೆ ಹೋದ ಆ ಮಗುವಿನ ಮನಸ್ಸೊಳಗೆ ಏನು ವ್ಯಾಪಾರ ನಡೆದಿದೆ ಎಂದು ಕೇಳಲು ಅಸಮರ್ಥನಾದ. ಅವಳ ಮಗ ಆ ಮೂಲೆಯಲ್ಲಿ ಕೂತು ಪಿಳಿಪಿಳಿ ನಗುತ್ತಾ ಇವರು ಮಾತನಾಡುವುದೇನನ್ನೂ ಅರ್ಥಮಾಡಿಕೊಳ್ಳದೆ ಕೇಳುತ್ತಿದ್ದ!

ಆ ಮುದುಕಿಯೇ ಆಗ ಕಡೆಗೆ ನಿಶ್ಶಬ್ದವನ್ನು ಮುರಿದು "ನೀನು ನೋಡಿದ ದೇವರು ತುಂಬಾ ವಿಚಿತ್ರತರದ್ದು ಅದನ್ನು ಶಿಲುಬೆಗೆ ಏರಿಸಿದರೇನು"?

ಹೌದು ಏರಿಸಿದರು

ಬಹಳ ವಿಚಿತ್ರ ಅವನು ದೇವರ ಮಗನಾಗಿದ್ದರೆ ಏಕೆ ಹೀಗೆ ಆಯಿತು?

ನನಗೆ ತಿಳಿಯದು. ಅದು ಎಂತಹ ಸುಖವನ್ನುಂಟುಮಾಡುವುದಕ್ಕೆ ಚಿಂತಿಸಿತ್ತೋ ನನಗೆ ತಿಳಿಯದು ಅವನು ಅನುಸರಿಸಬೇಕಾಗಿದ್ದುದರ ಕಾರಣದಿಂದ ಎಂದು ಜನರು ಹೇಳಿದ್ದನ್ನು ಕೇಳಿದ್ದೇನೆ. ಅವನ ತಂದೆಯೇ ಅವನು ಅನುಭವಿಸಬೇಕೆಂದು ಅಪೇಕ್ಷಿಸಿದ್ದಂತೆ, ಆದರೆ ಅದೆಲ್ಲಾ ಹುಚ್ಚಾಟ; ನಾನು ವಿವರಿಸಲಾರೆ; ನಿನಗಾಗಲೀ ನನಗೇ ಆಗಲಿ.

ತುಂಬಾ ಕ್ರೂರನಾದ ದೇವರು

ನಿಜ, ಸತ್ಯವಾಗಿ. ಆದರೆ ಆ ಮಾತು ಹೇಳಿಕೆಯಮಾತು ಅಷ್ಟೆ. ಮಾನವನೊಬ್ಬನನ್ನು ಅನುಭವಿಸಲು ಗುರಿಮಾಡುವುದು. ಏನು ಒಳ್ಳೆಯದಾಗುವುದು ಅದರಿಂದ?

ದೇವರನ್ನು ನಾನು ಗುರುತಿಸಬಲ್ಲೆನೆಂದು ತೋರುತ್ತೆ ಎಂದು ತನ್ನೊಳಗೇ ಪಿಟುಗುಟ್ಟಿ ಅವಳು ಹಿಂಜರಿದುಕೊಳ್ಳುತ್ತಾ ಸ್ವಲ್ಪಕಾಲದ ನಂತರ ದೇವರ ಮಗನನ್ನು ಹಡೆದವಳ ವಿಷಯವಾಗಿ ನಿನಗೇನಾದರೂ ಗೊತ್ತಿದೆಯೇ? ಎಂದಳು ಇಲ್ಲ ಎಂದೂ ಅಂತಹ ವಿಷಯ ನಾನು ಕೇಳಿಯೇ ಇಲ್ಲ ಅವಳು ಪ್ರಾಯಶಃ ಸಾಮಾನ್ಯ ಹೆಂಗಸೇ ಇರಬೇಕೆನ್ನಿಸುತ್ತೆ ನನಗೆ. ಹೌದು ನಾನೂ ಹಾಗೆಯೇ ಊಹಿಸುತ್ತೇನೆ. ನಿನಗೆ ಏನೂ ಗೊತ್ತಿಲ್ಲ ಅವಳ ವಿಷಯ?

ಇಲ್ಲ ಈ ಮಗನನ್ನು ಪಡೆದು ಅವಳು ದೇವರ ತಾಯಿ ಆದರೆಂದು ಅವರೆಲ್ಲಾ ಹೇಳುತ್ತಿದ್ದರು. ಹೌದು ಆಗಿದ್ದಳು. ನನಗೆ ಅವಳ ವಿಷಯ ಏನೂ ಗೊತ್ತಿಲ್ಲ. ನೀನೇಕೆ ಹೇಳುತ್ತಿಯೋ? ಅವಳು ಹೇಗೆ ಇದ್ದಳೋ ಎಂತಹ ಜೀವನವನ್ನು ನಡೆಸುತ್ತಿದ್ದಳೋ ನಾನು ಚಕಿತನಾಗಿದ್ದೇನೆ ದೇವರು ಅವಳನ್ನು ಪ್ರೀತಿಸಿದಾಗ ಅವಳನ್ನೂ ಹೇಗೆ ಕಾಣು ತ್ತಿದ್ದನೋ ಆ ಮೇಲೆ ಅವಳನ್ನು ಪ್ರೀತಿಸುವುದು ನಿಂತ ಮೇಲೆ ಹೇಗೆ ಕಾಣು ತ್ತಿದ್ದಾನೋ, ಅವಳು ಸುಖಿಯಾದ ಹೆಂಗಸೋ ? ದೇವರ ಮಗನನ್ನು ಹಡೆಯುವುದು ಅವಳಿಗೆ ಸಂತೋಷ ತಂದಿತೋ ಅಥವಾ ಅವಳನ್ನೂ ಶಿಲುಬೆಗೆ ಏರಿಸುವಂತೆಯೋ ಆಯಿತೋ ?

ಇಲ್ಲ ಇಲ್ಲ ಅವನು ಹಾಗೆ ಮಾಡಲಿಲ್ಲ. ನಿಜವಾಗಿ ಇಲ್ಲ. ಹೇಗಾದರೂ ಅವಳು ಹೆಂಗಸು ತಾನೇ ?

ಹಾದು ಹೆಂಗಸು.

ಅವಳು ಮೌನದಿಂದ ಸ್ವಲ್ಪ ಹೊತ್ತು ಇದ್ದು ಕೇಳಿದಳು : ಈ ಮಗ ನೀನು ಹೇಳಿದಂತೆ ಪ್ರೇಮದ ಮಗುವೇ ? ಹೌದು, ಹಾಗೆ ನೀನು ಕರೆಯಬಹುದು. ಅವನು ಮನುಷ್ಯವರ್ಗಕ್ಕೆ ಪ್ರೇಮವನ್ನು ಉಪದೇಶ ಮಾಡಿದನು. ಎಲ್ಲರೂ ಪರಸ್ಪರ ಪ್ರೀತಿಸ ಬೇಕೆಂದು ಸಾರಿದನು. ನಾನು ಸರಿಯಾಗಿ ಅರ್ಥಮಾಡಿಕೊಂಡಿರುವುದಾದರ. ಅದನ್ನೇ ಅವನು ಹೇಳಿದ್ದು.

ಎಂತಹ ವಿಚಿತ್ರ ಉಪದೇಶವರದು ? ಅವನು ಅಸಾಧಾರಣ ದೇವರೇ ಆಗಿರ ಬೇಕು.

ಹಾಗೂ ಇದ್ದಿರಬಹುದು.

ಕೆ.ಸಂ. ೨೭೯—ಎಂ.ಯು.ಪಿ.ಎಂ.—೪೨೫ ಪ್ರತಿಗಳು—೧೨-೮-೧೯೬೨

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬